Digitization by eGangotri and Sarayu Trust. Funding by MoE-IKS

ಶಿವಪ್ರಸಾದ



033mN
K9

೧೯೬೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS





033mN 8793
K9
Inchal, S D, ed.
Shivaprasad.

ೂತನ ಪ್ರಸಾದನಿಲಯದ ಭೋಜನಾಲಯ

ಂಭದ ಕಾಲಕ್ಕೆ ಶಹಾಪೂರದಲ್ಲಿಯ ಪ್ರಸಾದನಿಲಯ.

CC0. In Public Domain. Jangamwadi Math Collection, Varanasi

033m N
K9

Digitization by eGangotri and Sarayu Trust. Funding by MoE-IKS

8793

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

❁❁❁❁❁

Please return this volume on or before the date last stamped
Overdue volume will be charged 1/- per day.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌರವ ಪ್ರತಿ
ಶ್ರೀ ನಾಗನೂರ ರುದ್ರಾಕ್ಷಿಮಠ
ಬೆಳಗಾವಿ

ಓಂ

'ಶಿವಪ್ರಸಾದ'

ನಾಗನೂರ ಶ್ರೀ ಶಿವಬಸವಸ್ವಾಮೀಜಿ ಎಜ್ಯುಕೇಶನ್ ಟ್ರಸ್ಟ, ಬೆಳಗಾಂವಿ

ಅವರ

ನೂತನ ಪ್ರಸಾದ ನಿಲಯದ ಉದ್ಘಾಟನಾ ಸಮಾರಂಭದ

LIBRARY
Jangamwadi Math, Varanasi
ACC No. ....

ಸ್ಮೃತಿಗ್ರಂಥ

ಎಸ್. ಡಿ. ಇಂಚಲ
ಸಂಪಾದಕರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎನ್. ಎಸ್. ಎಸ್. ಎಜ್ಯುಕೇಶನ್ ಟ್ರಸ್ಟ ಬೆಳಗಾಂವಿ ಅವರ
ನೂತನ ಪ್ರಸಾದ ನಿಲಯದ ಉದ್ಘಾಟನಾ ಸಮಾರಂಭದ ಉತ್ಸವ ಸಮಿತಿ

ಶ್ರೀಮಾನ್ ಎಸ್. ಆಯ್. ಗುತ್ತಿಗೋಳಿ ಬಿ. ಎ., ಎಲ್ಎಲ್. ಬಿ. — ಅಧ್ಯಕ್ಷರು
,, ಸಿ. ಎಲ್. ಪಟ್ಟಣಶೆಟ್ಟಿ ಬಿ. ಎ., ಎಮ್. ಎಲ್. ಎ. — ಉಪಾಧ್ಯಕ್ಷರು
,, ಬಿ. ಕೆ. ಕಾಡಣ್ಣವರ — ಕಾರ್ಯದರ್ಶಿಗಳು
,, ಜಿ. ಕೆ. ಟಕ್ಕೇದ ಬಿ. ಎ., ಎಲ್ಎಲ್. ಬಿ. — ಕಾರ್ಯದರ್ಶಿಗಳು

ಸದಸ್ಯರು

,, ವ್ಹಿ. ಸಿ. ಹೆದ್ದೂರಶೆಟ್ಟಿ ಬಿ. ಎ., ಎಲ್ಎಲ್. ಬಿ.
,, ಟಿ. ಎನ್. ಸಾಣಿಕೊಪ್ಪ ಬಿ. ಎ., ಎಲ್ಎಲ್. ಬಿ.
,, ಆರ್. ವ್ಹಿ. ಮೂಲಿಮನಿ ಬಿ. ಎ.
,, ಎಸ್. ಡಿ. ಇಂಚಲ ಬಿ. ಎ., ಬಿ. ಟಿ.
,, ಎಸ್. ವ್ಹಿ. ಬಾಗಿ
,, ಎಸ್. ಎಸ್. ಕತ್ತಿಶೆಟ್ಟಿ
,, ಎಮ್. ಸಿ. ಕಿತ್ತೂರ
,, ಜಿ. ಎಸ್. ಗಿರಿಗೌಡರ
,, ಬಿ. ಸಿ. ಹಿಡದುಗ್ಗಿ
,, ಎಸ್. ಎಮ್. ಬಾಗಿ
,, ಆರ್. ಪಿ. ಅಲ್ಲಯ್ಯನವರಮಠ
,, ಚೆನ್ನಪ್ಪ ಮುದನೂರ
,, ಬಿ. ಬಿ. ಕಗ್ಗಣಗಿ
,, ಅಡಿವೆಪ್ಪ ಉಪ್ಪಿನ
,, ಮಹಾದೇವಪ್ಪ ಕೋಟಗಿ
,, ಎಸ್. ಜಿ. ಪಾಟೀಲ

033m N
K9
SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8793

ಸ್ಮೃತಿಗ್ರಂಥದ ಸಲಹಾಮಂಡಳ

ಶ್ರೀಮಾನ್ ಎಸ್. ಆಯ್. ಗುತ್ತಿಗೋಳಿ ಬಿ. ಎ., ಎಲ್ಎಲ್. ಬಿ.
,, ಸಿ. ಎಲ್. ಪಟ್ಟಣಶೆಟ್ಟಿ ಬಿ. ಎ., ಎಮ್. ಎಲ್. ಎ.
,, ಜಿ. ಕೆ. ಟಕ್ಕೇದ ಬಿ. ಎ., ಎಲ್ಎಲ್. ಬಿ.
,, ಆರ್. ವ್ಹಿ. ಮೂಲಿಮನಿ ಬಿ. ಎ.

ಸಂಪಾದಕರು :

ಎಸ್. ಡಿ. ಇಂಚಲ, ಬಿ. ಎ., ಬಿ. ಟಿ.

ಚಿತ್ರಕಲೆ :

ವ್ಹಿ. ಸಿ. ಮೂಲಗತ್ತಿ

ಈ ಪುಸ್ತಕದ ಭಾಗ ೧, ೨ ಮತ್ತು ೩ ಹಾಗೂ ಜಾಹೀರಾತು ಇವುಗಳನ್ನು ಶ್ರೀ. ಕೆ. ಜಿ. ಜೋಶಿ ಅವರು ಭುವನೇಶ್ವರಿ ಪ್ರೆಸ್ಸಿನಲ್ಲಿ ಮುದ್ರಿಸಿದರು. ಭಾಗ ೪ ಹಾಗೂ ಬ್ಲಾಕುಗಳನ್ನು ಶ್ರೀ. ವ್ಹಿ. ಎಸ್. ದೇಶಪಾಂಡೆ ಅವರು ಸ್ವಸಿಕ ಪ್ರೆಸ್ಸಿನಲ್ಲಿ ಮುದ್ರಿಸಿದರು. ಈ ಸ್ಮೃತಿಗ್ರಂಥವನ್ನು ಎನ್. ಎಸ್. ಎಸ್. ಎಸ್. ಎ. ಟ್ರಸ್ಟ ಉತ್ಸವ ಸಮಿತಿಯವರು ವಿದ್ಯಾರ್ಥಿ ಪ್ರಸಾದ ನಿಲಯದಲ್ಲಿ ಪ್ರಸಿದ್ಧಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂ. ಶ್ರೀ ಮ. ನಿ. ಪ್ರ. ಸ್ವ. ಕುಮಾರ ಶಿವಯೋಗಿಗಳು, ಹಾನಗಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂ. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರ
ಮಹಾಸ್ವಾಮಿಗಳು ಮೂರುಸಾವಿರಮಠ, ಹುಬ್ಬಳ್ಳಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ
ಮಹಾಸ್ವಾಮಿಗಳು, ಮೂರುಸಾವಿರಮಠ, ಹುಬ್ಬಳ್ಳಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ಮ. ನಿ. ಪ್ರ. ಸ್ವ. ಹಾನಗಲ್ಲ ಸದಾಶಿವಸ್ವಾಮಿಗಳೊಂದಿಗೆ ನಾಗನೂರ ಶ್ರೀಗಳವರು



ಶ್ರೀ. ಮ. ನಿ. ಪ್ರ. ಸ್ವ. ಶಿವಬಸವ ಸ್ವಾಮಿಗಳೊಂದಿಗೆ ಶ್ರೀ ಜಯಚಾಮರಾಜೇಂದ್ರ ಒಡೆಯರ
ಮೈಸೂರ ಮಹಾರಾಜರು.

CC0. In Public Domain. Jangamwadi Math Collection, Varanasi

ಆಶೀರ್ವಚನ

ಇಂದ

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರುಸಾವಿರಮಠ ಹುಬ್ಬಳ್ಳಿ ಇವರ ಶುಭಸಂದೇಶ.

ಶಿಕ್ಷಣ ಪ್ರಪಂಚದಲ್ಲಿ ಮಹತ್ಕ್ರಾಂತಿಯನ್ನೆಸಗಿದ ಹುಬ್ಬಳ್ಳಿ ಮೂರುಸಾವಿರಮಠದ ಲಿಂ. ಶ್ರೀ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳವರ ಸತ್ಪ್ರೇರಣೆ, ಹಾಗು ಕರ್ಮಯೋಗಿ ನಾಗನೂರು ಶ್ರೀ ಶಿವಬಸವ ಸ್ವಾಮಿಗಳವರ ಸತ್ಸಂಕಲ್ಪ, ಇದೀಗ ಸಫಲವಾಗಿ, ಬೃಹತ್ಪ್ರಮಾಣದ ವಿದ್ಯಾರ್ಥಿನಿಲಯವು ಭವ್ಯರೂಪ ತಾಳಿನಿಂತಿದ್ದು, ನಮಗಷ್ಟೇ ಅಲ್ಲ, ನಾಡಿನವರೆಲ್ಲರಿಗೂ ಸಂತಸದ ಸಂಗತಿ.

ಮಠಾಧಿಪತಿಗಳು ಶ್ರಮವಹಿಸಿ ವಿದ್ಯಾರ್ಥಿ ಪ್ರಸಾದನಿಲಯಗಳನ್ನು ಸ್ಥಾಪಿಸಿದಂದಿನಿಂದ ನಾಡಿನಲ್ಲಿ ಹೆಚ್ಚಾಗಿ ಪದವೀಧರರು, ಸಾಹಿತಿಗಳು, ವಿಜ್ಞಾನಿ ಕಾಣುತ್ತಿದ್ದಾರೆ. ಶಿಕ್ಷಣರಂಗದಲ್ಲಿಯೂ ಮತ್ತು ರಾಜಕೀಯರಂಗದಲ್ಲಿಯೂ ಬೆಳಗುತ್ತಿದ್ದಾರೆ. ಮಠಾಧಿಪತಿಗಳ ಈ ಪವಿತ್ರಕಾರ್ಯದಲ್ಲಿ ಕರ್ನಾಟಕವು ಭಾರತದಲ್ಲಿ ಅಗ್ರಸ್ಥಾನ ಪಡೆದಿದೆ ಎಂದು ಹೇಳುವದು ಅತಿಶಯೋಕ್ತಿಯಾಗಲಿಕ್ಕಿಲ್ಲ.

ಶ್ರೀ ಮದ್ವೀರಶೈವ ಶಿವಯೋಗಮಂದಿರದಲ್ಲಿ ಅಧ್ಯಯನ ಮಾಡಿ, ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳವರ ಅನುಗ್ರಹಕ್ಕೆ ಪಾತ್ರರಾಗಿ, ಕುಮಾರ ಶಿವಯೋಗಿಗಳವರ ಪುಣ್ಯಸ್ಮರಣೆ ನಿರಂತರ ಉಳಿಯುವಂತೆ "ಕಾಯಕವೇ ಕೈಲಾಸ"ವೆಂದು ಬಗೆದು ಕಾಯಕವೆಸಗುತ್ತಿರುವ ಕಾಯಕಯೋಗಿ ನಾಗನೂರ ಶಿವಬಸವ ಸ್ವಾಮಿಗಳವರ ಸಾಹಸ ಅಭೂತಪೂರ್ವವಾದುದು. ಆದರ್ಶಪ್ರಾಯವಾದುದು. ಇದಕ್ಕೆ ಅವರು ಹೊಸದಾಗಿ ಕಟ್ಟಿಸಿರುವ ವಿದ್ಯಾರ್ಥಿನಿಲಯವೇ ಸಾಕ್ಷಿ.

ನಾಡಿನ ಗಡಿಸೀಮೆಯಲ್ಲಿರುವ ಬಡವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣಕ್ಕೆ ಅವರು ಒಂದು ಶಕ್ತಿಯಾಗಿ ಒಡಮೂಡಿದ್ದಾರೆ. ನಿರುತ್ಸಾಹದ ನಿಟ್ಟುಸಿರಿನಲ್ಲಿದ್ದವರಿಗೆ ಚೈತನ್ಯವನ್ನೀಯುತ್ತಿದ್ದಾರೆ. ಉತ್ಸಾಹಿಗಳಾದ ನಾಗನೂರು ಶ್ರೀಗಳವರ ಕಾರ್ಯಕ್ಷೇತ್ರವು ಇನ್ನೂ ಹೆಚ್ಚು ಹೆಚ್ಚಾಗಿ ಹುಲುಸಾಗಿ ಬೆಳೆದು ಬರಲೆಂದು ಹಾರೈಸೋಣವಾಗಿದೆ.

ಇತ್ಯಾಶಿಷಃ

ಮುಕ್ಕಾಂ, ಹುಬ್ಬಳ್ಳಿ.

28.1-1969

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ನಿ. ಪ್ರ. ಸ್ವ. ಅನ್ನದಾನೀಶ್ವರ ಸ್ವಾಮಿಗಳು, ಹಾಲಕೆರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ. ಮ. ನಿ. ಪ್ರ. ಸ್ವ. ಶ್ರೀಸಿದ್ಧಲಿಂಗ ಸ್ವಾಮಿಗಳು ವಿರಕ್ತಮಠ,
ದೇಶನೂರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ನಿ. ಪ್ರ. ಸ್ವ ಮಹಾಂತ ಶಿವಯೋಗಿಗಳು, ಮುರಗೋಡ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ. ಮ. ನಿ. ಪ್ರ. ಸ್ವ.. ತಪೋನಿಧಿ ಕುಮಾರಸ್ವಾಮಿಗಳು
ಸವಕಲ್ಯಾಣಮಠ, ಧಾರವಾಡ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ. ಮ. ನಿ. ಪ್ರ. ಸ್ವ. ಶ್ರೀ ಶಿವಬಸವ ಸ್ವಾಮಿಗಳು, ನಾಗನೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೂತನ ಪ್ರಸಾದ ನಿಲಯದ ಉದ್ಘಾಟಕರು



ಕರ್ನಾಟಕ ಶಿಲ್ಪಿ
ಜನನಾಯಕ ಶ್ರೀಮಾನ್ ಎಸ್. ನಿಜಲಿಂಗಪ್ಪನವರು
ಅ. ಭಾ. ಕಾಂಗ್ರೆಸ್ ಅಧ್ಯಕ್ಷರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಮಾನ್ಯ ಶ್ರೀ. ವೀರೇಂದ್ರ ಪಾಟೀಲರು
ಮೈಸೂರ ರಾಜ್ಯದ ಮುಖ್ಯ ಮಂತ್ರಿಗಳು.



ಮಾನ್ಯ ಶ್ರೀ. ಎಚ್. ವ್ಹಿ. ಕೌಜಲಗಿ
ಕಂದಾಯ ಮಂತ್ರಿಗಳು ಮೈಸೂರ ರಾಜ್ಯ



ಮಾನ್ಯ ಶ್ರೀ. ಎಸ್. ಡಿ. ಕೋಠಾವಳೆ
ವಿಧಾನ ಸಭಾಪತಿಗಳು,
ಮೈಸೂರು ರಾಜ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನ್ಯ ಶ್ರೀ. ವ್ಹಿ. ಎಲ್. ಪಾಟೀಲ
ಸಮಾಜ ಕಲ್ಯಾಣ ಮಂತ್ರಿಗಳು.
ಮೈಸೂರು ರಾಜ್ಯ.



ಮಾನ್ಯ ಶ್ರೀ. ಪಿ. ಎಮ್. ನಾಡಗೌಡ
ಸಹಕಾರಿ ಮಂತ್ರಿಗಳು ಮೈಸೂರ ರಾಜ್ಯ.



ಶ್ರೀಮಾನ್ ಎಸ್. ಆಯ್. ಗುತ್ತಿಗೋಳಿ
ವಕೀಲರು
ಅಧ್ಯಕ್ಷರು ಉತ್ಸವ ಸಮಿತಿ.



ಶ್ರೀಮಾನ್ ಸಿ. ಎಲ್. ಪಟ್ಟಣಶೆಟ್ಟಿ
ಉಪಾಧ್ಯಕ್ಷರು ಉತ್ಸವ ಸಮಿತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾನ್ಯ ಶ್ರೀ ವಾಯ್. ಬಿ. ಚವ್ಹಾಣ
ಕೇಂದ್ರ ಗೃಹಮಂತ್ರಿಗಳು



ನೂತನ ಪ್ರಸಾದನಿಲಯದ ಶಂಕುಸ್ಥಾಪನೆ ೧೦-೫-೧೯೬೩
ಮಾನ್ಯ ಸಂರಕ್ಷಣಮಂತ್ರಿ ಶ್ರೀ. ವಾಯ್. ಬಿ. ಚವ್ಹಾಣರವರಿಂದ

CC0. In Public Domain. Jangamwadi Math Collection, Varanasi

ನೂತನ ಪ್ರಸಾದ ನಿಲಯದ ಉದ್ಘಾಟನಾ ಸಮಿತಿಯ ಸದಸ್ಯರು.



ಕುಳಿತವರು ಎಡದಿಂದ ಬಲಕ್ಕೆ:—ಶ್ರೀ. ಬಿ. ಕೆ. ಕಾಡಣ್ಣವರ ಕಾರ್ಯದರ್ಶಿಗಳು. ಶ್ರೀ. ಮಹಾದೇವಪ್ಪ ಕೋಟಗಿ, ಶ್ರೀ .ಆರ್. ವ್ಹಿ. ಮೂಲಿಮನೆ, ಶ್ರೀ. ಸಿ. ಎಲ್. ಪಟ್ಟಣಶೆಟ್ಟಿ, ಉಪಾಧ್ಯಕ್ಷರು, ಶ್ರೀ. ಎಸ್. ಆಯ್. ಗುತ್ತಿಗೋಳಿ ಅಧ್ಯಕ್ಷರು, ಶ್ರೀ. ಶಂಕರೆಪ್ಪ ಬಾಗಿ, ಶ್ರೀ. ಹೆದ್ದೂರಶೆಟ್ಟಿ ವಕೀಲರು, ಶ್ರೀ. ಜಿ. ಎಸ್. ಗಿರಿಗೌಡ, ಶ್ರೀ. ಜಿ. ಕೆ. ಟಕ್ಕೇದ, ಕಾರ್ಯದರ್ಶಿಗಳು.

ನಿಂತವರು ಎಡದಿಂದ ಬಲಕ್ಕೆ:—ಶ್ರೀ. ಬಿ. ಸಿ. ಹಿಡದುಗ್ಗಿ. ಶ್ರೀ. ಬಿ. ಬಿ. ಕಗ್ಗಣಗಿ, ಶ್ರೀ ಎಸ್. ಎಮ್. ಬಾಗಿ, ಶ್ರೀ. ಜಿ. ಸಿ. ಮುದ್ದಾಪೂರ,ಶ್ರೀ. ಅಡಿವೆಪ್ಪ ಉಪ್ಪಿನ

Digitization by eGangotri and Sarayu Trust. Funding by MoE-IKS

ಭಾಗ ಒಂದು

ಸಾಗನೂರ ಶ್ರೀಶಿವಬಸವ ಸ್ವಾಮಿಗಳವರ

ಚರಿತಾಮೃತವು

—ಈಶ್ವರ ಮು. ಸಣಕಲ್ಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪಾದಕೀಯ

ನಾಗನೂರ ಶ್ರೀ ಶಿವಬಸವ ಸ್ವಾಮಿಗಳವರು, ತಮ್ಮ ಜೀವನದ ಘನೋದ್ದೇಶವೆಂದು ಬಗೆದು, ಅದರ ಸಿದ್ಧಿಗಾಗಿ ಹಗಲಿರುಳೆನ್ನದೇ ಕಾಯಕ ನಿರತರಾಗಿ, ನಿರ್ಮಿಸಿದ, ಅವರ ಹೊಂಗನಸಿನ ಹೊಸ ಪ್ರಸಾದ ನಿಲಯವು ಇಂದು ಸತ್ಯ ಸೃಷ್ಟಿಯ ಸುಂದರೋಜ್ವಲ ಸೌಧವಾಗಿ ಪೂರ್ತಿಗೊಂಡಿರುವದು ಆತ್ಮಾನಂದದ ಸಂಗತಿಯಾಗಿದೆ. ಭವ್ಯ ಮನೋಹರವಾದ ಈ ನಿಲಯವು ಭಾವೀನಾಡೋಜರ ಪುಣ್ಯಧಾಮವಾಗಿ,ಅವರ ಆತ್ಮ ಚೈತನ್ಯದ ಅಂಕುರವನ್ನು ಪೋಷಿಸುವ ಪ್ರಸಾದ ವಿತರಣೆಯ ದಿವ್ಯ ಕೇಂದ್ರ ವಾಗಿ, ಸುಭದ್ರವಾದ ಸುಂದರವಾದ, ಸಂಪದ್ಭರಿತವಾದ ನವ ಭಾರತವನ್ನು ನಿರ್ಮಿಸುವ ಮಹಾಕಾರ್ಯದಲ್ಲಿ ಪಾಲುಗೊಳ್ಳುವ ಪವಿತ್ರವಾದ ಕರ್ತವ್ಯವನ್ನು ನಿರ್ವಹಿಸುವ ಕುರಿತು ಸನ್ನದ್ಧವಾಗಿ ನಿಂತಿರುವಂತೆ ಕಂಗೊಳಿಸುತ್ತಿರುವದು. ಜನತೆಯ ಕಲ್ಯಾಣವೇ ಆತ್ಮ ಕಲ್ಯಾಣವೆಂದು ಬಗೆದ ನಾಗನೂರ ಶ್ರೀಗಳವರ ಉನ್ನತಾದರ್ಶಕ್ಕೆ ಎತ್ತಿ ಹಿಡಿದ ನಿಲುಗನ್ನಡಿಯಾಗಿದೆ ಈ ಪ್ರಸಾದ ನಿಲಯ. ಜನಸಾಮಾನ್ಯರ ಉದ್ಧಾರಕ್ಕಾಗಿ ತನುಮನ ಧನಗಳನ್ನು ಸೂರೆಗೈದು ಸರ್ವಾರ್ಪಣಭಾವದಿಂದ ಸೇವಾ ನಿರತರಾದ ಶ್ರೀಗಳು ಸಮಾಜಕ್ಕೆ ಸಲ್ಲಿಸುತ್ತಿರುವ ಈ ಭವ್ಯ ಕಾಣಿಕೆಯು ನಮ್ಮ ನಾಡಿನ ಸಮಾಜ ಕಲ್ಯಾಣದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿ ನಿಲ್ಲುವದೆಂದು ಹೇಳಿದರೆ ಅದೇನು ಅತಿಶಯೋಕ್ತಿಯಲ್ಲ.

ಆರ್ಥಿಕವಾಗಿ ಹಿಂದುಳಿದ ಸಮಾಜದ ಅಸಹಾಯರಾದ ಬಡ ತಬ್ಬಲಿಗಳನ್ನು ಅಪ್ಪಿಕೊಂಡು, ಹಾಲುಣಿಸಿ ಕಾಪಾಡುವ ಮಹಾಮಾತೆಯಂತೆ ಪೋಷಿಸುತ್ತಿರುವ ಶ್ರೀಗಳ ಅಂತಃಕರಣದ ಸಾಕಾರ ಸ್ವರೂಪವಾಗಿ, ಮಾನವತೆಯ ಕುರುಹಾಗಿ, ಗುರು ಕಾರುಣ್ಯದ ಕೊಡುಗೆಯಾಗಿ ಮೈದಾಳಿ ನಿಂತಿದೆ ಭವ್ಯಾಕಾರದ ಈ ಮಹಾಮನೆಯು. ಈ ನಿಲಯದ ಒಂದೊಂದು ಶಿಲೆಯೂ ಶಿವಭಾವದಿಂದ ಗಟ್ಟಿಗೊಂಡಿದೆ; ಒಂದೊಂದು ಕೋಣೆಯೂ ಮಾನವೀಯ ಮೌಲ್ಯವನ್ನು ಮೈಗೂಡಿಸಿಕೊಂಡಿದೆ. ಒಟ್ಟಾರೆ, ಈ ಭವ್ಯ ಪ್ರಸಾದ ನಿಲಯವು ಶಿವಪ್ರಕಾಶವನ್ನು ಸುತ್ತಲೂ ಬಿತ್ತರಿಸುತ್ತಿದೆ. ಶಿವಪ್ರಸಾದವನ್ನು ದೇಶದ ಅಂತಃಶ್ಯಕ್ತಿಯಾದ ಶಿಶುವೃಂದಕ್ಕೆ ನೀಡಲು ಕೈಚಾಚಿದೆ. ಇದೊಂದು ಕಾಯಕ ನೀತಿಯ ಕರ್ಮಭೂಮಿಯಾಗಿ ಶಿವಭಾವ ಸೂಚಿಸುವ ಶಾಂತಿ ಭವನವಾಗಿ, ಸಮಾಜೋದ್ಧಾರಕ್ಕಾಗಿ ಸನ್ನದ್ಧವಾದ ಜಾಗ್ರುತ ಚೈತನ್ಯಕ್ಕೆ ಸಾಕ್ಷಿಯಾಗಿದೆ. ಜ್ಞಾನಾರ್ಜನೆಗಾಗಿ ದಶದಿಕ್ಕುಗಳಿಂದ ಆಶ್ರಯಕ್ಕಾಗಿ ಹಸಿದು ಹಾರಿ ಬಂದ ಮರಿ ಹಕ್ಕಿಗಳ ಬಳಗಕ್ಕೆ ನೀರು ನೆಳಲುಗಳನ್ನು ನೀಡುವ ನಲ್‌ಗೂಡಾಗಿದೆ. ಜೇನು ಹುಟ್ಟಿನಂತೆ ಜೀವತುಂಬಿ ಕಳಕಳಿಸುತ್ತದೆ.

ಇಷ್ಟೊಂದು ಭವ್ಯವೂ ಸುಂದರವೂ ಆದ ನಿಲಯವನ್ನು ಕಟ್ಟಿಸಿದ ಶ್ರೀಗಳ ಕರ್ತೃಶಕ್ತಿಗೆ ನಾವು ಬೆರಗಾಗುತ್ತೇವೆ; ಬಾಗುತ್ತೇವೆ. ಇಂಥ ಘನವಾದ ಕಾರ್ಯದಹಿಂದೆ ಅದೆಂಥ ಉತ್ಸಾಹವಿದೆ; ತಪೋಬಲವಿದೆ; ಕಾಯಕ ನಿಷ್ಠೆಯಿದೆ; ಕಳಕಳಿಯ ಕಕ್ಕುಲತೆಯಿದೆ; ತ್ಯಾಗ ಸೇವೆಗಳ ಫಲವಿದೆ, ಆಶಾವಾದದ ಬಲವಿದೆಯೆಂಬಂಶಗಳನ್ನು ಹಿಕ್ಕಿ ನೋಡುವುದೆಂದರೆ ಹುಚ್ಚು ಸಾಹಸವೇ ಸರಿ. ಕೈಯ್ಯಲ್ಲಿ ಕಾಸಿಲ್ಲದೆ, ಕೇವಲ ಕಾಯಕನಿಷ್ಠೆಯನ್ನೇ ಅವಲಂಬಿಸಿ, ಅಸದೃಶವಾದ ಮನೋಧೈರ್ಯದಿಂದ, ಅಖಂಡ ವಿಶ್ವಾಸದಿಂದ ಶ್ರೀಗಳು ಈ ಅಸಾಧ್ಯವಾದ ಕಾರ್ಯಕ್ಕೆ ಕೈಹಾಕಿದರು. ಮೋಳಿಗೆಯ ಮಾರಯ್ಯಗಳಂತೆ ಜೋಳಿಗೆ ಹಾಕುವ ಕಾಯಕವನ್ನೇ ಎತ್ತಿಕೊಂಡರು. ನಾಡಿನ ಕಾಡು ಬೀಡುಗಳನ್ನು ಎಡೆಯಿಲ್ಲದೆ ಸುತ್ತಿದರು. ತನು ಮನ ಬಳಸಿ ಹಸಿವೆನ್ನದೆ, ಬಿಸಿಲೆನ್ನದೆ, ಬೇಡಿ ಬೇಡಿ, ಕೂಡಿ ಕೂಡಿಸಿ ಕಾಣಿಕೆಗಳನ್ನು ತಂದರು. ಇದೇನು ಆಶ್ಚರ್ಯ! "ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್‌ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು" ಎಂಬ ಶರಣರ ಖಚಿತೋಕ್ತಿಯಂತೆ, ಹೋದ ಹೋದಲ್ಲಿ ಅವರ ಜೋಳಿಗೆ ತುಂಬಿ ಹೊರಚೆಲ್ಲಿತು. ಹನಿಹನಿ ಕೂಡಿ ಹಳ್ಳವಾಯಿತು; ತೆನಿಗೆತೆನಿ ಕೂಡಿ ರಾಶಿಯಾಯಿತು. ಹೆಚ್ಚೇನು, ಭಕ್ತವೃಂದದ ತ್ಯಾಗದಾಗಸದಿಂದ ಹೊನ್ನಿನ ಮಳೆ ಸುರಿಯಿತು. ನಿಲಯದ ನಿರ್ಮಾಣ ಕಾರ್ಯ ಭರದಿಂದ ಸಾಗಿತು. ಅನುವರಿತು ನಿಲಯವು ಅಲ್ಪಾವಧಿಯಲ್ಲಿಯೇ ಬಯಲನ್ನೇ ತುಂಬಿ ಬೆಳಗುತ್ತ ಮೇಲೆ-ಮೇಲಕ್ಕೆದ್ದಿತು. ಭಕ್ತಿಗೆ ಗೆಲುವಾಯಿತು; ಬೆಳಕು ಹರಿಯಿತು! ಈ ಎಲ್ಲದರ ಹಿಂದೆ ನಿತ್ಯ ಕರ್ಮಯೋಗಿಗಳಾದ ಶಿವಬಸವ ಶಿವಯೋಗಿಗಳ ಕಳಕಳಿಯ ಕಸುವು ಎಂಥದೆಂಬ ಅರಿವು ನಮಗಾಗದಿರದು.

ಹೀಗೆ ಕಾಯಕ ತತ್ವದ ಮೇಲೆ ನಿಂತಿರುವ ಈ ಭವ್ಯ ನಿಲಯವು ತಮ್ಮ ಸದ್ಗುರು ಶ್ರೀಕುಮಾರೇಶನ ಪ್ರೇರಣೆಯ ಅಮೃತಫಲವೆಂದು ಶ್ರೀಗಳು ಹರ್ಷಪುಲಕಿತರಾಗಿ ಹೇಳುತ್ತಾರೆ. "ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ, ವಿಚಾರವೆಂಬ ಎಲೆಯಾಯಿತ್ತು, ಆಚಾರವೆಂಬ ಕಾಯಾಗಿತ್ತು; ನಿಷ್ಪತ್ತಿಯೆಂಬ ಹಣ್ಣಾಯಿತ್ತು, ಆ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ" ಎಂಬ ಅಣ್ಣನವರ ಅಮೃತವಾಣಿಗೆ ಇಲ್ಲಿ ಒಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಪೂರ್ವ ಉದಾಹರಣೆ ಸಿಗುವಂತಾಗಿದೆ. ಶ್ರೀಗುರು ಕುಮಾರೇಶನ ಭಕ್ತಿಯ ಕಣ್ಣರಿಕೆಯಲ್ಲಿಯೇ ಈ ಹಂಬಲ ಹಣ್ಣ
ಯೆಂಬ ಅರಿವು ಶ್ರೀಗಳ ಅಂತರಾಳದಲ್ಲಿ ಬೇರೂರಿದೆ. ಅಂತೆಯೇ ಅವರು ಎಷ್ಟು ದಾರಿ ನಡೆದರೂ ನಿಂತಿಲ್ಲ; ಎಷ್ಟು ದುಡಿ
ದಣಿದಿಲ್ಲ. ಗುರುಸೇವೆಯೇ ಶಿವಪೂಜೆಯೆಂದೂ, ಗುರು ಪ್ರೇರಣೆಯೇ ಧಾರಣಶಕ್ತಿಯೆಂದೂ ನಂಬಿ ನಡೆಯುತ್ತಿರುವ
ನಂಬಿಗೆಯಲ್ಲಿಯೇ ಅವರ ನಿತಾಂತ ಬಲವಿದೆಯೆಂದು ಹೇಳಬಹುದು. ಅದಕ್ಕಾಗಿಯೇ ಈ ನಿಲಯಕ್ಕೆ 'ಕುಮಾರೇಶ್ವರ ಪ್ರಸಾ
ನಿಲಯವೆಂದು ಹೆಸರಿಡಲು ಶ್ರೀಗಳು ಸೂಚಿಸಿ, ತಮ್ಮ ಸರ್ವಾರ್ಪಣ ಭಾವವನ್ನು ಮೆರೆದಿದ್ದಾರೆ. ಇದೆಂಥ ಗುರುಕಾಣಿಕೆ!

ಅಂತೂ ಕುಮಾರೇಶ್ವರನ ಕೃಪೆಯಿಂದ ಕಟ್ಟುವ ಕೆಲಸ ಪೂರ್ತಿಯಾಯಿತು. ಅದನ್ನು ಈ ರೀತಿ ಪೂರ್ತಿಗೊಳಿ
ನಾನಾ ಬಗೆಯಾಗಿ ಕೈನೀಡಿ ತನುಮನಧನಗಳಿಂದ ನೆರವಾದ ಎಲ್ಲ ಭಕ್ತರನ್ನೂ ಜನಸಾಮಾನ್ಯರನ್ನೂ ಒಮ್ಮೆ ಬರಮ
ಕೊಂಡು, ಅವರೆಲ್ಲರ ಅಂತಃಕರಣದ ಆನಂದದ ಆವರಣದಲ್ಲಿ ಈ ನಿಲಯವನ್ನು ಉದ್ಘಾಟಿಸಲೆಂದು ಹಾರೈಸಿದರು. ಅವರ
ಹಾರೈಕೆ ಇಂದು ಹಣ್ಣಿಸುತ್ತಿರುವದು ಒಂದು ಪುಣ್ಯ ವಿಶೇಷವೆಂದೇ ಹೇಳಬೇಕು. ನಾಡಿನ ಅನೇಕ ನಾಯಕ ಮಣಿಗ
ಮಂತ್ರಿಮಾನ್ಯರೂ, ಗಣ್ಯ ನಾಗರಿಕರೂ, ಜನಸಾಮಾನ್ಯರೂ ಒಂದೆಡೆ ಸೇರಿ ಇಂದು ಈ ನಿಲಯದ ಉದ್ಘಾಟನಾ ಸಮಾರ
ದಲ್ಲಿ ಆನಂದದಿಂದ ಭಾಗ ವಹಿಸುತ್ತಿರುವದನ್ನು ನೋಡಿದರೆ ಶ್ರೀಗಳ ಶ್ರಮ ಸಾರ್ಥಕವಾದಂತೆಯೇ ಸರಿ.

ಈ ಕಟ್ಟಡದ ಉದ್ಘಾಟನೆಯು ಬೆಳಗಾಂವಿ ನಗರದ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆಯೇ ಹೌದು. ಈ ಅ
ರ್ವವಾದ ಶುಭಗಳಿಗೆಯಲ್ಲಿ ಹಿಗ್ಗಿನ ಹೊಳೆಯಾಗಿ ಉಬ್ಬಿ ಹರಿಯುತ್ತಿರುವ ಆನಂದವಲೆಗಳನ್ನು ಅಚ್ಚೊತ್ತಿದಂತೆ ಹಿಡಿದಿಡ
ಉದ್ದೇಶದಿಂದ ಉತ್ಸವ ಸಮಿತಿಯವರು ಈ ಸಮಯಕ್ಕೆ ಸಲ್ಲುವಂತೆ ಒಂದು ಸುಂದರವಾದ ಸ್ಮೃತಿಗ್ರಂಥವನ್ನು ಪ್ರಕಟಿಸ
ಯೋಜನೆಯನ್ನು ಕೈಕೊಂಡರು. ಈ ಯೋಜನೆಯ ಪರಿಣಾಮವಾಗಿ 'ಶಿವಪ್ರಸಾದ'ವೆಂಬ ಈ ಸ್ಮೃತಿ ಗ್ರಂಥ ಈ ಶುಭ
ಗೆಯ ಸವಿನೆನಹಿಗಾಗಿ ಬೆಳಕು ಕಾಣುತ್ತಿದೆ. ಗುಡಿಯೆದುರು ಕೈಮುಗಿವ ಭಕ್ತನಂತೆ ಈ ಸ್ಮೃತಿಗ್ರಂಥವನ್ನು ಜನತೆಯ ಎದು
ಡಲು ತಂಬಾ ಸಂತೋಷವೆನಿಸುತ್ತದೆ.

ಅವಧಿ ತೀರ ಕಡಿಮೆಯಿದ್ದರೂ, ನಮ್ಮ ಅವಸರದ ವಿನಂತಿಯನ್ನು ಮನ್ನಿಸಿ ಮಾನ್ಯ ಹಿರಿಯ ಲೇಖಕ
ವಿದ್ವಾಂಸರೂ, ಕವಿಗಳೂ ಇನ್ನುಳಿದ ಗೆಳೆಯ ಬರಹಗಾರರೂ ತಮ್ಮ ಅಮೂಲ್ಯ ಲೇಖನಗಳನ್ನು ಕಳಿಸಿ ಈ ಪವಿತ್ರ ಕಾರ್ಯ
ಸಕ್ರಿಯವಾಗಿ ಸಹಕರಿಸಿದ್ದಾರೆ. ಈ ಎಲ್ಲ ಹಿರಿಕಿರಿಯ ಲೇಖಕರಿಗೆ ನಾವು ತುಂಬು ಹೃದಯದಿಂದ ಕೃತಜ್ಞತೆಗಳ
ಸಲ್ಲಿಸಬಯಸುತ್ತೇವೆ.

ಇನ್ನು ಈ ಶುಭಗಳಿಗೆಯಲ್ಲಿ ಇನ್ನೊಂದು ಅತಿ ಮಹತ್ವದ ಕಾರ್ಯವನ್ನು ಮಾಡಬೇಕಾಗಿದೆ. ಈ ಕಟ್ಟಡದ ನಿ
ನಮ್ಮ ನಾಡಿನ ಅನೇಕ ಕೊಡುಗೈ ದೊರೆಗಳು ಅಂತಃಕರಣಪೂರ್ವಕವಾಗಿ ಜಮೀನುಗಳನ್ನೂ ಧನಧಾನ್ಯಗಳನ್ನೂ ಆವಶ್ಯ
ಸಹಾಯ ಸೌಕರ್ಯಗಳನ್ನೂ ಸಕಾಲಕ್ಕೆ ಮುಕ್ತಮನಸ್ಸಿನಿಂದ ಒದಗಿಸಿಕೊಟ್ಟು ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿ
ದ್ದಾರೆ. ಅವರೆಲ್ಲರಿಗೂ ನಾವು ನಿಲಯದ ಪರವಾಗಿ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಶ್ರೀಗ
ವರ ಈ ಕಾರ್ಯಕ್ಕೆ ಬಡವ ಬಲ್ಲಿದರೆನ್ನದೆ ಕಾರ್ಮಿಕ ಕೋವಿದರೆನ್ನದೆ ಅನೇಕಾನೇಕ ಅಭಿಮಾನಿಗಳು ಪತ್ಯಕ್ಷವಾಗಿ, ಪರೋ
ವಾಗಿ ಸಹಾಯ ಸಹಾನುಭೂತಿಗಳನ್ನೂ ಸೇವೆ-ಸಹಕಾರಗಳನ್ನೂ ಸಲ್ಲಿಸಿ ಪುಣ್ಯಭಾಗಿಗಳಾಗಿದ್ದಾರೆ. ಅವರೆಲ್ಲರಿಗೂ ನಮ
ಆತ್ಮೀಯ ಕೃತಜ್ಞತೆಗಳು ಸಲ್ಲಬೇಕು.

ಈ ಕಟ್ಟಡದ ರೂಪರೇಷೆಗಳನ್ನೂ ಅಂದಚೆಂದಗಳನ್ನೂ ಒಳಗೊಂಡ ನಕ್ಷೆಯನ್ನು ತೆಗೆದುಕೊಟ್ಟು ಕಣ್ಣಿನ ಮುರಿಗ
ಮಂದಿರವನ್ನು ಕಣ್ಣೆದುರು ಹಿಡಿಯುವಂತೆ ಯೋಜನೆಯನ್ನು ಸಿದ್ಧಗೊಳಿಸಿಕೊಟ್ಟವರು ಕೊಲ್ಹಾಪೂರದ ಶ್ರೀ. ಪರ್ವತೀಕ
ಎಂಜನೀಯರರು. ಅಲ್ಲದೆ ಅವರು ಕಾಲಕಾಲಕ್ಕೆ ಬೆಳಗಾಂವಿಗೆ ಆಗಮಿಸಿ ಕಟ್ಟಡದ ನಿರ್ಮಾಣದಲ್ಲಿ ಮಾರ್ಗದರ್ಶನ ನೀಡಿದರು
ಈ ಕಾರ್ಯದಲ್ಲಿ ಅವರು ವಹಿಸಿದ ಪಾತ್ರ, ನೀಡಿದ ಸಹಾಯ, ತೋರಿಸಿದ ವಿಶ್ವಾಸಗಳು ಅವರ್ಣನೀಯ; ಅನುಪಮ. ಅವರ
ನಮ್ಮ ನೆನಕೆಗಳು. ಇದಲ್ಲದೆ, ಯೋಜನೆಯಂತೆ ಈ ಭವ್ಯ ಕಟ್ಟಡವನ್ನು ಪೂರ್ತಿಗೊಳಿಸುವ ಎಲ್ಲ ಹೊಣೆಯನ್ನು ಸರಾಗವಾ
ನಿರ್ವಹಿಸಿದ ಕಂಟ್ರಾಕ್ಟರುಗಳಾದ ಶ್ರೀ. ಕಮನೂರಿ ಬಂಧುಗಳಿಗೂ ಹಾಗೂ ಶ್ರೀ. ಬಸವಣ್ಣೆಪ್ಪನವರು ತಿಗಡಿ ಅವರಿಗೂ ನಮ
ಹಾರ್ದಿಕ ಕೃತಜ್ಞತೆಗಳು ಸಲ್ಲಲೇಬೇಕು.

ಇದೇ ಸಂದರ್ಭದಲ್ಲಿ "ಕ್ಯಾಥೋಲಿಕ್ ರಿಲೀಫ್ ಸರ್ವಿಸಿಸ್ ಯುನಾಯಿಟೆಡ್ ಸ್ಟೇಟ್ಸ ಕ್ಯಾಥೋಲಿಕ್ ಕಾನಫರನ್ಸ್"
ರವರು 'ಡಿಸೋಜಿನ್ ಡಾಯರೆಕ್ಟರ ಬಿಶಫ್ ಬೆಳಗಾಂವಿ ಇವರ ಮುಖಾಂತರ ಪ್ರತಿ ವರುಷವೂ ಕಾಲಕಾಲಕ್ಕೆ ಗೋದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೋದಿಯರವಾ, ವೈದಾ ಹಾಲಿನಪುಡಿ, ಎಣ್ಣೆ ಮುಂತಾದ ಆಹಾರ ಸಾಮಗ್ರಿಗಳನ್ನು ಈ ಸಂಸ್ಥೆಗೆ ಸಲ್ಲಿಸುತ್ತಿರುವದು ನಿಜವಾಗಿಯೂ ಸ್ತುತ್ಯವಾದುದು. ಅವರ ಈ ಅಂತಃಕರಣದ ಕೊಡುಗೆಯು ನಮ್ಮನ್ನು ಉಪಕೃತರನ್ನಾಗಿಮಾಡಿದೆ. ಮಾನವೀಯ ಧ್ಯೇಯದ ಈ ಸಂಸ್ಥೆಗೆ ನಮ್ಮ ಅನಂತ ವಂದನೆಗಳು.

ದಿನಾಂಕ ೧೦--೫-೧೯೭೩ ರಂದು ಈ ಪ್ರಸಾದ ನಿಲಯದ ಅಡಿಗಲ್ಲನ್ನಿಡುವ ಸಮಾರಂಭವನ್ನು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಲಾಯಿತು. ಈ ಮಹತ್ವದ ಮೊದಲ ಸಮಾರಂಭಕ್ಕೆ ಅಂದಿನ ಕೇಂದ್ರ ಸಂರಕ್ಷಣಾ ಮಂತ್ರಿಗಳಾಗಿದ್ದ ಮಾನ್ಯ ಶ್ರೀ. ವಾಯ್. ಬಿ. ಚವ್ಹಾಣ ಅವರು ಅತ್ಯಂತ ಉತ್ಸಾಹದಿಂದ ಆಗಮಿಸಿ ಈ ಕಾರ್ಯವನ್ನು ನಡೆಸಿಕೊಟ್ಟರು. ಅವರಿಗೆ ನಿಲಯವು ಚಿರಋಣಿಯಾಗಿದೆ. ಇಂಥ ಗಣ್ಯರನ್ನು ಬರಮಾಡಿಕೊಳ್ಳಲು ತುಂಬಾ ಪ್ರಯತ್ನಿಸಿ, ನಿಲಯದ ಎಲ್ಲ ಕಾರ್ಯಗಳಲ್ಲಿಯೂ ಸಲಹೆ ಸೂಚನೆಗಳನ್ನು ನೀಡಿ ಅಂದಿನಿಂದ ಇಂದಿನವರೆಗೂ ನೆರವಾಗುತ್ತ ಬಂದಿರುವ ಶ್ರೀ. ಎಸ್. ಬಿ. ಹುಬ್ಬಳ್ಳಿ ಆಯ್. ಎ. ಎಸ್. ನಿವೃತ್ತ ಕಲೆಕ್ಟರರು ಬೆಳಗಾಂವಿ ಅವರಿಗೂ ನಾವು ತುಂಬಾ ಕೃತಜ್ಞರು.

ಈ ಸ್ಮೃತಿಗ್ರಂಥದ ಪ್ರಕಟನೆಯಲ್ಲಿ ಹಲವಾರು ಮಾನ್ಯ ಹಿರಿಯರೂ, ಮಿತ್ರರೂ, ಲೇಖಕರೂ, ಚಿತ್ರಗ್ರಾಹಕರೂ, ಅಚ್ಚುಕೂಟದವರೂ, ಕರಡು ತಿದ್ದುವವರೂ, ಇನ್ನುಳಿದ ಅನೇಕರೂ ಆಸ್ಥೆಯಿಂದ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಉತ್ಸವ ಸಮಿತಿಯ ಅಧ್ಯಕ್ಷರೂ, ಕಾರ್ಯದರ್ಶಿಗಳೂ, ಸದಸ್ಯರೂ ಸೂಕ್ತ ಸೂಚನೆಗಳನ್ನು ನೀಡಿ ಅದು ಸಕಾಲದಲ್ಲಿ ಹೊರಬರುವಂತೆ ಪ್ರಯತ್ನಿಸಿದ್ದಾರೆ. ಅವರಿಗೆ ನಾವು ಋಣಿ. ಅದರಂತೆ ಅಚ್ಚುಕೂಟದವರಾದ ಶ್ರೀಭುವನೇಶ್ವರಿ ಪ್ರಿಂಟಿಂಗ ಪ್ರೆಸ್ಸಿನ ಒಡೆಯರಾದ ಶ್ರೀ. ಕೆ. ಜಿ. ಜೋಶಿಯವರೂ, ಸ್ವಸ್ತಿಕ ಪ್ರಿಂಟಿಂಗ ಪ್ರೆಸ್ಸಿನ ಒಡೆಯರಾದ ಶ್ರೀ. ವ್ಹಿ. ಎಸ್ ದೇಶಪಾಂಡೆಯವರೂ ತುಂಬಾ ಶ್ರಮವಹಿಸಿ ಕಾರ್ಯ ನಿರ್ವಹಿಸಿಕೊಟ್ಟಿದ್ದಾರೆ. ಅವರೆಲ್ಲರಿಗೂ ನಾವು ಕೃತಜ್ಞರು. ಹಾಗೆಯೇ ಸಮಯಾನುಸಾರ ತಮ್ಮ ಅಮೂಲ್ಯ ಜಾಹಿರಾತುಗಳನ್ನು ಪ್ರಕಟನೆಗಾಗಿ ಕೊಟ್ಟು ಸಹಕರಿಸಿದ ಎಲ್ಲ ಮಹನೀಯರಿಗೂ, ಈ ಸಮಾರಂಭಕ್ಕೆ ಸಂಬಂಧಿಸಿದ ಎಲ್ಲ ಪ್ರಕಟನೆಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ ಮಾನ್ಯ ಸಂಪಾದಕ ಮಹಾಶಯರಿಗೂ, ಪತ್ರಿಕಾ ಪ್ರತಿನಿಧಿಗಳಿಗೂ ನಿಲಯವು ಹಾರ್ದಿಕವಾದ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಇನ್ನು ಈ ಸ್ಮೃತಿಗ್ರಂಥದ ಪ್ರಕಟನೆಯು ಹಾಗೂ ಸಂಪಾದನೆಯ ದೊಡ್ಡ ಹೊಣೆಯನ್ನು ನನ್ನ ಸಣ್ಣ ಹೆಗಲ ಮೇಲೆ ಹೊರಿಸಿ ಉತ್ಸವ ಸಮಿತಿಯವರು ನನ್ನನ್ನೂ ಕಾರ್ಯರಂಗಕ್ಕೆ ಎಳೆದಿದ್ದಾರೆ. ಶ್ರೀ ನಾಗನೂರ ಶ್ರೀಗಳವರ ಮೇಲಿನ ಅನನ್ಯ ಭಕ್ತಿಯಿಂದ ತಲೆಬಾಗಿ ಈ ಕಾರ್ಯವನ್ನು ನಿರ್ವಹಿಸಲು ಯತ್ನಿಸಿದ್ದೇನೆ. ಆದರಲ್ಲಿ ಏನಾದರೂ ತುಸು ಯಶದೊರಕಿದ್ದರೆ ಅದು ಶ್ರೀಗಳವರ ಆಶೀರ್ವಾದವೆಂಬ ಆನಂದ ನನಗಾಗಿದೆ. ಅವರ ಅಂತಃಕರಣದ ಶಕ್ತಿಯೇ ನನಗೆ ಪ್ರೇರಕಶಕ್ತಿ. ಅವರ ಅನುಗ್ರಹದ ಒಲವೇ ನನ್ನ ಸಮಗ್ರ ಬಲ. ಅವರ ಅಡಿಗಳ ಸೇವಾಸಕ್ತಿಯೇ ನನಗೆ ಸ್ಫೂರ್ತಿಯ ಕೇಂದ್ರವೆಂದು ಬಗೆದಿದ್ದೇನೆ. ಇದೇ ಬಗೆಯಾಗಿ ಶ್ರೀಗಳವರ ಸೇವೆ ಸದಾ ಕಾಲವೂ ನಮಗೆ ದೊರಕಲೆಂದೂ, ಅವರ ಅಂತಃಕರಣ ಚಿರಂತನವಾಗಿ ನಮ್ಮ ಮೇಲಿರಲೆಂದೂ ಅವರ ಶ್ರೀಪಾದಗಳಿಗೆ ಹಣೆಮುಟ್ಟಿ ಮಣಿದು ಈ ನಾಲ್ಕು ನಲ್ನುಡಿಗಳನ್ನು ಅವರಡಿಗಳಿಗೆ ಅರ್ಪಿಸುತ್ತೇನೆ.

ಭದ್ರಂ ಶುಭಂ ಮಂಗಲಂ

---ಎಸ್. ಡಿ. ಇಂಚಲ, ಬೆಳಗಾಂವಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಲಯಕ್ಕೆ ಸ್ವಾಗತ !

ಬನ್ನಿರಿ ಮಾನ್ಯರೆ ನಯ ಸಂಪನ್ನರೆ ಶಿವನೊಲುಮೆಯ ಗುಡಿಗೆ,
ಸಾನಂದದಲಿ ಸಡಗರದಿಂದಲಿ
ಸ್ವಾಗತ ವಾಳ್ಪೆವು ಬಗೆಯರಳಿ
ಮನ್ನಿಸಿ ಕರುಣೆಯ ಕೋರಿದ ತೋರಿದ ಗುರುವಿನ ಸಿರಿಯಡಿಗೆ..........

ನಾಡಿನ ಚೇತನ ಶಾಂತಿನಿಕೇತನ
ಬಡವರ ಭಾಗ್ಯಕೆ ಇದು ಸಂಸ್ಥಾಪನ
ತೆರೆದಿಹ ಅರುವಿನ ಅರವಟ್ಟಿಗೆಯನೆ ಶಾರದೆಯರ ಮನೆಗೆ........

ಚೆಲುವಿನ ಕೇತನ ಕಲೆಯ ನಿಕೇತನ
ಒಲವಿನ ಎಲೆವನೆ ನೆನಹದು ತನನನ
ತೇಲಿಸಿ ತರುತಿದೆ ನಿತ್ಯ ನಿರಂತರ ಹಸುಮಕ್ಕಳ ತುಡಿಗೆ..........

ತಬ್ಬಲಿಗಳಿಗಿದು ತಾಯಾಗಿದೆ ಸರಿ
ಹಬ್ಬಿದೆ ನಾಡಿನ ಹಂದರವೇರಿ
ತಾಯ್ಬೇರಿಗೆ ನೀರೆರೆದರೆ ಅಸುದಿನ ಬೆಳೆಯದೆ ಬಾಂದಳಕೆ ?..........

ಸಾವಿರ ಕಂಗಳು ನೀಡಿದ ತ್ಯಾಗದ
ಭಾವಿಸೆ ಶ್ರೀಗಳ ಕಾಯಕ ಯೋಗದ
ಅಮೃತ ಫಲವಿದು ಅಕ್ಷಯ ನಿಧಿಯಿದು ಗುರು ನೀಡಿದ ಕೊಡುಗೆ.....

ಕುಮಾರ ಕರುಣೆಯು ಅರಳಿದ ರೀತಿ
ಗುರುಬೋಧೆಗೆ ಇದು ಕಿಂಕರ ಪ್ರೀತಿ
ಮಾನವತೆಯು ಮೈದಾಳಿದೆ ವಸುಧೆಗೆ ವರದಾನವು ನಮಗೆ..........

ವರಗುರುವಿನ ನಿಜ ಅರುವಿನ ಬೀಜ
ಶಿವಬಸವೇಶನ ಸೇವೆಯ ತೇಜ !
ಬೀರುತ ಬೆಳಕನು ಸಾಗಿದೆ ಮುಂದಕೆ ಸರ್ವೋದಯದೆಡೆಗೆ............

ಜನಸಾಮಾನ್ಯರ ಗರಡಿಯ ರಂಗ
ನೀತಿಯೆ ಜಾತಿಗೆ ಮೂಲ ತರಂಗ
ನಿಮ್ಮಯ ಸೊತ್ತು ನಿಮಗೇ ಇತ್ತು ನಡೆವುದೇಲೇಸೆಮಗೆ !..........

ಸನಾತನ ನೂತನ ಸಂಗಮ ಸೃಷ್ಟಿ !
ಶ್ರೀಶಾರದೆಯರ ಕರುಣೆಯ ವೃಷ್ಟಿ !
ಭಕ್ತಿಯ ಬೆಳೆಯಿದು ಮುಕ್ತಿಯ ಮಂದಿರ ಮೆರೆದಿದೆದೆಸೆದೆಸೆಗೆ............

ಎಸ್. ಡಿ. ಇಂಚಲ
ಬೆಳಗಾಂವಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

|| ಓಂ ||

ನಾಗನೂರ ಶ್ರೀ. ನಿ. ಪ್ರ. ಸ್ವ. ಶಿವಬಸವ ಮಹಾಸ್ವಾಮಿಗಳ

ಚರಿತಾಮೃತವು

ಅನಾದ್ಯನಂತವಾಗಿ ಹಬ್ಬಿರುವ ಆಕಾಶದಗಲದ ಮಹಾಮೌನದಲ್ಲಿ ಅಖಂಡ ತೇಜಃಪುಂಜವಾದ, ಅವಿರತ ಜ್ಯೋತಿರ್ಮಯವಾದ, ಅಪ್ರತಿಮ ಪ್ರಕಾಶಪೂರ್ಣವಾದ ಅಸಂಖ್ಯ ಕೋಟಿ ಗ್ರಹ ನಕ್ಷತ್ರಗಳು ಮೂಡಿ, ಲೀಲೆಯಲ್ಲಿ ಆಡಿ, ವೇಗದಲ್ಲಿ ಪರಿಭ್ರಮಿಸುತೋಡಿ, ನಿರ್ದಿಷ್ಟ ದೇಹದಲ್ಲಿ ತೀಡಿ, ತಮ್ಮ ಆಯುವನ್ನು ದೂಡಿ, ವೈದೋರಿ ವೈಗರೆವ ಮಹಾಸ್ವಪ್ನದಂತೆ, ಪರಿಯಾಗುತ್ತವೆ. ಅದೇ ಆಕಾಶದ ಅದೇ ಮೌನದಲ್ಲಿ ಈ ಜ್ಯೋತಿಷ್ಪ್ರಪಂಚದ ಆಚೆ ಆಚೆ, ಮೇಲೆ ಮೇಲೆ, ನಿಬಿಡತಮ ನೀಹಾರಿಕಾವಲಯವು ಮೇರೆ ಮೀರಿ ಹಬ್ಬಿ ಹಿಂಜಿದರಳೆಯ ರಾಶಿಯಂತೆ ರಂಜಿಸಿ, ಮತ್ತೆ, ಮೈದಳೆದ ಭಾವ ಮೈಯಳಿದು ಹೋಗುವಂತೆ, ಕರಗಿ ಹೋಗುತ್ತದೆ. ಅದೇ ಮುಗಿಲಗಲ ಅದೇ ಮೌನಸಾಮ್ರಾಜ್ಯದಲ್ಲಿ ಹಗಲಿರುಳು ಕಣ್ಣುಮುಚ್ಚಾಟ, ಮಳೆಗಾಲದ ಗುಡುಗು ಸಿಡಿಲು ಮಿಂಚು ಮಳೆಗಳ ಹುಚ್ಚಾಟ, ಕಟಗುಡುವ ಚಳಿಗಾಲದ ಕುಳಿರ್ಗಾಳಿಯ ತೀಟದಲ್ಲಿ ತುಟಿಯ ಕಚ್ಚಾಟ, ಹಿಗ್ಗಿನ ಸುಗ್ಗಿಯ ಕಂಪಿನ, ಇಂಪಿನ, ಜೊಂಪಿನ, ಪೆಂಪಿನ, ಬುಗ್ಗೆಯಲ್ಲಿ ಚಿಮ್ಮಿದ ಕಾಮನ ಬಿಲ್ಲಿನ ಸೊಲ್ಲಿನ ಮೆಚ್ಚಾಟ; ಬಲ್ಬೇಸಗೆಯ ಬಿಡುಬಿಸಿಲ ಬೇಗೆಯ ಕಿಚ್ಚಾಟ—ಇಂತು ಕ್ಷಣ, ದಿನ—ಮಾಸ—ಋತು—ವರ್ಷ—ಯುಗ ಕಲ್ಪಗಳ ಲೀಲಾತಲ್ಪದಲ್ಲಿ, ಕಲ್ಪನೆಯ ವಿವಿಧ ಭಂಗಿಯಲ್ಲಿ, ವಿವಿಧ ವರ್ಣವಿನ್ಯಾಸದಲ್ಲಿ ಲಾಸ್ಯವಾಡಿ, ಹೃನ್ಮಂದಿರದಲ್ಲಿ ಸ್ಮೃತಿಯ ಮುದ್ರೆಯೊತ್ತಿ, ಮತ್ತೆ ಸರಿದು ಹೋಗುವಳು. ಇಂತು ವಿಶ್ವದ ಮಹಾ ಪ್ರಪಂಚದ, ಮಾಯಾ ಪ್ರಪಂಚದ, ದ್ವಂದ್ವ ಪ್ರಪಂಚದ ಅಸಂಖ್ಯ ಮುಖಲೀಲೆಗೆ ತನ್ನಲ್ಲಿ ಅವಕಾಶವನ್ನಿತ್ತಿದ್ದರೂ ಅವರಿಂದ ಆ ಆಕಾಶದ ಮಹಾಮೌನವು ಅತೀತ ! ನಿರ್ಲಿಪ್ತ !

ಅಂತೆ ಶ್ರೀ. ಶ್ರೀ. ಶ್ರೀಮನ್ನಿರಂಜನ ಪ್ರಣವಸ್ವರೂಪಿ ಶ್ರೀ ನಾಗನೂರ ರುದ್ರಾಕ್ಷಿಮಠದ ಶ್ರೀ ಶಿವಬಸವ ಮಹಾಸ್ವಾಮಿಗಳು ! ಇವರಲ್ಲಿ ಕಲ್ಯಾಣ ದೃಷ್ಟಿಯ ಶಿವನೂ ಕಾಯಕ-ನಿಷ್ಠೆಯ ಬಸವನೂ ಸಂಗಮಿಸಿ, ಸಂಯಮಿಸಿ ಇವರು ಶ್ರೀ ಶಿವಬಸವ ಮಹಾಸ್ವಾಮಿಗಳಾಗಿಹರು ! ಇವರ ದೇಹವು ಎಪ್ಪತ್ತರಾಚೆಗೆ ಸರಿದರೂ, ಇವರ ಉತ್ಸಾಹವು ಇನ್ನೂ ಇಪ್ಪತ್ತರ ಈಚೆಗೇನೇ ಉಳಿದಿದೆ ! ಉರುಳುತಿರುವ ಸಂವತ್ಸರಗಳು ಇವರ ಮುಪ್ಪು ಸಾವುಗಳ ಲೆಕ್ಕಹಾಕುತ್ತಿದ್ದರೆ, ಅರಳುತ್ತಿರುವ ಅಂತಸ್ಸ್ವಪಶ್ಚೈತನ್ಯವು ಇವರ ಪ್ರಾಯದ ಒಪ್ಪು—ಕಾವುಗಳ ಎಣಿಕೆ ಹಾಕುತ್ತಿದೆ. ಇಂತಹ ಇಳಿವಯಸ್ಸಿನಲ್ಲಿಯೂ ಬಾಗದ ಇವರ ನಡು ಇವರ ಪರಿಶುದ್ಧ ಚರಿತ್ರಕ್ಕೆ ಸಾಕ್ಷಿಯಾಗಿದೆ ! ಎತ್ತರದ ನಿಲವು ! ಭವ್ಯ ವ್ಯಕ್ತಿತ್ವ ! ಮಾತುಗಾರಿಕೆಯಿರಬಹುದು; ಆದರೆ ಮಾತು ತುಟಿ ಮೀರಿ ಬಂದುದೇ ವಿರಳ ! ಜೀವನದ ಬಹುಭಾಗವೆಲ್ಲ ಮೌನ ! ಮಹಾಮೌನ ! ಆ ಮೌನದ ಸಂದು ಸಂದುಗಳಲ್ಲಿ, ಕೀಲು ಕೀಲುಗಳಲ್ಲಿ ಕೃತಿಯ ಸ್ಪಂದನ ! ಸತ್ಕೃತಿಯ ಸಂಸ್ಕೃತಿಯ ನಂದನ ! ಶಿವಾಕೃತಿಯ ಚಂದನ !

ಸೇವಾಧರ್ಮವೇ ಇವರ ಜೀವನ ಮರ್ಮವು. "ಮಾನವನ ಹೃದಯದಲ್ಲಿ ಗುಪ್ತವಾಗಿ ಹುದುಗಿರುವ ಪರಿಪೂರ್ಣತೆಯ ಆವಿಷ್ಕಾರವೇ ಶಿಕ್ಷಣವೆಂದು ಬಗೆದು," ಅಂತಹ ಶಿಕ್ಷಣವನ್ನು ಪಡೆದು ಲೋಕವೆಲ್ಲಾ ಪರಿಪೂರ್ಣತೆಯ ಎಡೆಗೆ ಸಾಗಲೆಂದು ಯೋಚಿಸಿದವರು, ಆ ಯೋಚನೆಗೆ ತಕ್ಕ ಯೋಜನೆ ಆವುದೆಂದು ತರ್ಕಿಸಿದವರು, ಹೊಟ್ಟೆಗೆ ಗತಿಯಿಲ್ಲದೆ, ಶಿಕ್ಷಣ ಪಡೆಯಲು ತಕ್ಕ ಸೌಕರ್ಯವಿಲ್ಲದೆ, ಅಸಂಖ್ಯ ಅಸಹಾಯ ಪರಿಸ್ಥಿತಿಯಲ್ಲಿ ತೆವಳಿ ತೊಳಲಾಡುತ್ತಿರುವ ಬಡ ವಿದ್ಯಾರ್ಥಿ-ಲೋಕದ ವಿದ್ಯಾರ್ಜನೆಗೆ, ಅಧ್ಯಯನ-ಅಭ್ಯಾಸಗಳಿಗೆ, ವಿವಿಧ ಬಗೆಯ ಶಿಕ್ಷಣ ಸಂಸ್ಥೆಗಳ ಕೇಂದ್ರವಾದ ಬೆಳಗಾವಿಯಂತಹ ಪಟ್ಟಣದಲ್ಲಿ ಪ್ರಸಾದ-ನಿಲಯ-ಸ್ಥಾಪನೆಯೇ ಪರಮ ಸಾಧನವೆಂದು ನಿಶ್ಚಯಿಸಿದರು.

ಆ ನಿಶ್ಚಯದ ನಿರ್ಣಯವೇ ಇಂದು ಭವ್ಯ ಪ್ರಸಾದ ನಿಲಯವಾಗಿ ರೂಪುಗೊಂಡಿದೆ ! ಇಂತು ಪ್ರಸಾದ ನಿಲಯದ ಮುಖಾಂತರವಾಗಿ ಅವರು ಕೈಕೊಂಡ ವಿದ್ಯಾರ್ಥಿಲೋಕಸೇವಾಧರ್ಮವೇ ಅವರಿಗೆ ಶಿವನ ಮರ್ಮವನ್ನು ಬಿತ್ತರಿಸಿತು ! ಈ ಪ್ರಸಾದ ನಿಲಯವ ಯೋಜನೆಯು, ಅವರ ತಪದ ಮಹಾಮೌನವು ಮಥಿಸಿ ತಂದ ದಿವ್ಯ ನವನೀತ ! ಇದನ್ನು ಆಶ್ರಯಿಸಿದವರು, ಸೇವಿಸಿದವರು, ವಿದ್ಯಾ-ಪಾತ್ರರಾದರು ! ಮಾನವರಾದರು; ಮಾನವತೆಯಲ್ಲಿ ಪರಿಪೂರ್ಣರಾದರು ! ಅಮೃತಪುತ್ರರಾದರು !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಮೊದಲು ಹೇಳಿದಂತೆ, ಆಕಾಶದ ಮಹಾ ಮೌನವು ವಿಶ್ವದ ಅನಂತ ನಿರಂತರ-ವಿವಿಧ-ಲೀಲೆಗಳನ್ನು ಒಳಗೊ ಅವುಗಳಿಂದ ಅತೀತವೂ, ನಿರ್ಲಿಪ್ತವೂ ಆಗಿರುವಂತೆ, ಈ ಮಹಾಸ್ವಾಮಿಗಳ ಮೌನಾಕಾಶವು ಲೋಕಕಲ್ಯಾಣದ ಇಚ್ಛೆ ಯೋಚನೆ, ಯೋಜನೆ, ಸತ್ಕೃತಿಗಳನ್ನು ಒಳಗೊಂಡಿದ್ದರೂ ಅವೆಲ್ಲವುಗಳಿಂದ ಅವರು ಅತೀತರು; ನಿರ್ಲಿಪ್ತರು !

ಈ ನಿಸ್ವಾರ್ಥಸೇವೆ, ನಿರ್ಲಿಪ್ತತೆ ಒಂದೇ ದಿನದ ಅನಾಯಾಸದ ಗೆಲುವಲ್ಲ ! ಜನ್ಮಜನ್ಮಗಳ ತಪದ ಸಾಧನೆ ಬಲವು; ಜೊತೆಗೆ ಮಹಾ ಗುರುವಿನ ಮಹಾಕೃಪೆಯ, ಮಹಾನುಗ್ರಹದ ಬಲವು ! ಸತ್ ಶರಣರ, ಸಜ್ಜನರ, ಸತ್-ಸಂ ಸಹವಾಸದ ಫಲವು; ಸತ್ಕೃತಿಗಾಗಿ, ಪರಹಿತ ಕಲ್ಯಾಣಕ್ಕಾಗಿ ಮೈದಳೆದ ಉತ್ಕಟ ಸತ್-ಸಂಕಲ್ಪ ಶಕ್ತಿಯ ಫಲವು ! ಲೋ ಹೊಗಳಿಕೆ-ತೆಗಳಿಕೆ, ಹಿಗ್ಗು-ಕುಗ್ಗು, ಸೋಲು–ಗೆಲವು, ಸುಖ–ದು:ಖ, ಮಾನ-ಅಪಮಾನ ಈ ಮೊದಲಾದ ದ್ವಂದ್ವಪ್ರಂ ವನ್ನು ಮೀರಿ ನಿಂತ ಸುಸ್ಥಿರ-ಸ್ಪಷ್ಟ-ಸಹಜ ಸಮತೆಯ ನಿಲುವು ! ಆನುವಂಶಿಕ ಸಂಸ್ಕಾರದಲ್ಲಿ ಬೆಳಗಿದ ಬೆಳಕಿನ ಹೊ ದಾಸೋಹಂಭಾವದಲ್ಲಿ ಸೋಹಂಭಾವವಲಯಿಸಿ ವಿನಯವೇ ಮೂರ್ತಿವೆತ್ತಂತಿರುವ ಕೈಂಕರ್ಯದ ಸುಳುವು ! ಇವೆಲ್ಲ ಸಮನಿಸಿ ನಾಗನೂರ ಶ್ರೀ ಶಕ್ತಿಯಾಯಿತು ! ಶಿವಬಸವ ನಿರಂಜನ ವ್ಯಕ್ತಿಯಾಯಿತು !!

ನಾಗನೂರು

ಈ ದಿವ್ಯ ಶ್ರೀಶಕ್ತಿಯನ್ನು ಪಡೆದ ನಾಗನೂರು ಬೆಳಗಾಂವ ಜಿಲ್ಹೆಯ ಬೈಲಹೊಂಗಲ ತಾಲೂಕಿನ ಒಂದು ಹಳ್ಳಿ. ಬೈಲಹೊಂಗಲದಿಂದ ಪಶ್ಚಿಮಕ್ಕೆ ಐದು ಮೈಲುಗಳ ಅಂತರದ ಮೇಲಿದೆ. ಇಲ್ಲಿಯ ಜನತೆಯ ಮುಖ್ಯ ಉದ್ಯೋ ಒಕ್ಕಲುತನ. ಸುತ್ತಲೂ ಹರಡಿ ಹಬ್ಬಿರುವ ಹೊಲಗಳ ಜೊತೆಗೆ, ಹನ್ನೆರಡು ತಿಂಗಳು ಹಸಿರು ಮುರಿವ ತೋಟ-ಪಟ್ಟಿಗ ಇಲ್ಲಿ ಸಾಕಷ್ಟಿವೆ. ಊರನ್ನು ಬಳಸಿ ಹರಿವ ಎಂಟು-ಹತ್ತು ಹಳ್ಳಗಳುಂಟು. ಈ ಊರಿಗೆ ಯಾವ ದಿಕ್ಕಿನಿಂದ ಬಂದರೂ ಒ ಲ್ಲೊಂದು ಹಳ್ಳವನ್ನು ದಾಟಲೇ ಬೇಕು. ಇಲ್ಲಿಯ ಜನರು ಉದ್ಯೋಗಶೀಲರು. ಬಹುಸಂಖ್ಯಾಕರು ವೀರಶೈವರು(ಲಿಂಗಾಯತ ಇತರ ಧರ್ಮದವರೂ ಇಲ್ಲವೆಂದಲ್ಲ ! ಇದ್ದ ಎಲ್ಲರೂ ಪರಸ್ಪರರಲ್ಲಿ ಸಹಕರಿಸಿ, ಸಮರಸರಾಗಿ ಒಂದೇ ಕುಟುಂಬದ ಜನ ವರ್ತಿಸುವರು. ಒಟ್ಟು ಜನರ ಸಂಖ್ಯೆ ಮೂರು ಸಾವಿರಕ್ಕೂ ಮಿಕ್ಕಿದೆ.

ಬೈಲಹೊಂಗಲ ತಾಲೂಕು ವೀರಶ್ರೀಗೆ ಹೆಸರಾದುದು. ಐತಿಹಾಸಿಕ ದೃಷ್ಟಿಯಿಂದ ಪ್ರಸಿದ್ಧವಾದುದು. ಅದರಲ್ಲಿ ಈ ತಾಲೂಕಿನಲ್ಲಿ ತಲೆಯೆತ್ತಿ, ಒಮ್ಮೆ ಮೆರೆದ ಕಿತ್ತೂರ ವೀರಶ್ರೀಯೂ ಐತಿಹಾಸಿಕ ವೈಶಿಷ್ಟ್ಯವೂ ಕನ್ನಡ ಜನತೆಯ ಮಾತಾಗಿದೆ. ಹದಿನೈದುನೂರಾ ಎಂಬತ್ತೈದರಿಂದ ಹದಿನೆಂಟುನೂರಾ ಇಪ್ಪತ್ತನಾಲ್ಕರ (೧೫೮೫ ರಿಂದ ೧೮೨೪) ವ ಹನ್ನೆರಡು ಜನ ದೊರೆಗಳು ಆಗ ಸಂಸ್ಥಾನವಾಗಿದ್ದ ಈ ಕಿತ್ತೂರನ್ನು ಆಳಿದರು. ಸುಮಾರು ಇನ್ನೂರು ಐವತ್ತು ವರ್ಷ ವರೆಗೆ ತನ್ನ ಮೇಲೆ ಏರಿಬರುವ ಪ್ರಬಲ ವೈರಿಗಳನ್ನೂ , ಪ್ರಚಂಡ ದಾಳಿಗಳನ್ನೂ ಧೈರ್ಯ-ಶೌರ್ಯಗಳಿಂದ ಎದುರಿಸಿ, ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದ ಈ ಕಿತ್ತೂರು ಸಂಸ್ಥಾನದ ಕಥೆಯು ತುಂಬಾ ಕುತೂಹಲಕಾರಿಯಾಗಿದೆ. ೧೭ ರಿಂದ ೧೮೧೬ ರ ವರೆಗೆ ಮಹಾವೈಭವದಿಂದ ಈ ಕಿತ್ತೂರ ರಾಜ್ಯದ ಹೊಣೆಯನ್ನು ನಿರ್ವಹಿಸಿದ "ಮಲ್ಲಸರ್ಜ ದೊರೆಯು" ಮ ಪರಾಕ್ರಮಶಾಲಿಯೂ, ಪ್ರಖ್ಯಾತನೂ, ಪ್ರಜಾವತ್ಸಲನೂ, ರಾಜಕಾರಣ ಪಟುವೂ, ಸದಾಚಾರಿಯೂ, ಸುಶೀಲನೂ ಆಗಿದ್ದ ಆಂಗ್ಲ ಸರಕಾರದ ಆಕ್ರಮಣ ನೀತಿಯನ್ನು ನಿರ್ಭಯದಿಂದ ಎದುರಿಸಿ, ಲೋಕ ವಿಖ್ಯಾತೆಯಾದ ಚನ್ನಮ್ಮರಾಣಿಯು ಈ ಮ ಸರ್ಜ ದೊರೆಯ ಆದರ್ಶ ಸತಿ. ಆಂಗ್ಲ ಸರಕಾರದ ಆಕ್ರಮಣ ನೀತಿಯ ವಿರೋಧವಾಗಿ ಅಂದು ಈ ವೀರಸತಿ ಚನ್ನಮ್ಮ ನಡೆಯಿಸಿದ ಹೋರಾಟವೇ ಭಾರತದ ಸ್ವಾತಂತ್ರ್ಯಯುದ್ಧಕ್ಕೆ ಪೀಠಿಕೆಯಾಯಿತು ! ಭಾರತದ ಸ್ವರಾಜ್ಯಕ್ಕೆ ನಾಂದಿಯಾಯಿ

ಅದರಂತೆಯೇ ಬೆಳವಡಿಯ ಕೆಚ್ಚೆದೆಯ ಸತಿ-ಮಲ್ಲಮ್ಮರಾಣಿಯೂ ಮಹಾರಾಷ್ಟ್ರ ರಾಜ್ಯ ಸ್ಥಾಪಕನಾದ ಶಿವಾ ಮಹಾರಾಜನನ್ನು ದಿಟ್ಟತನದಿಂದ ಎದುರಿಸಿದ ಧೀರ ವೀರೆ ! ಅಲ್ಲದೆ ಕಿತ್ತೂರ ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ಮಡಿದ ವೀ ಸಂಗೊಳ್ಳಿ ರಾಯಣ್ಣ ಇವರೆಲ್ಲ ವೀರಶ್ರೀಯ ಶಕ್ತಿಗಳು ! ಚಿರಸ್ಮರಣೀಯರು !!

ಇಂತಹ ಸಂಧರ್ಭದಲ್ಲಿ ನಾಗನೂರ ಬಿಲ್ಲನವರ ಮನೆತನವು ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಿದೆಯೆಂದು ತಿಳಿ ಬರುತ್ತದೆ.

ನಮ್ಮ ನಾಡಿನಲ್ಲಿ ವೀರಶ್ರೀಯ ತೇಜಸ್ಸಿನ ಜೊತೆಗೆ, ಅವರ ಸರಿಯಾದ ಮಾರ್ಗದರ್ಶನಕ್ಕಾಗಿ, ಆಧ್ಯಾತ್ಮಿಕ ತಪಸ್ಸಿ ಓಜಸ್ಸೂ ಮುಂದೆ ಬಂದು ಸಹಕರಿಸಿದ ಒಂದು ವೈಶಿಷ್ಟ್ಯವನ್ನು ಕಾಣುತ್ತೇವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಜಯನಗರ ರಾಜ್ಯ ಸ್ಥಾಪನೆಗಾಗಿ ಹುಕ್ಕಬುಕ್ಕರ ವೀರ ತೇಜಸ್ಸಿನ ಜೊತೆಗೆ ವಿದ್ಯಾರಣ್ಯರ ತಪಸ್ಸಿನ ಓಜಸ್ಸೂ ನೆರವೊಳಗಿಸಿತು. ಮಹಾರಾಷ್ಟ್ರದ ರಾಜ್ಯ ಸ್ಥಾಪನೆಗಾಗಿ ಶಿವಾಜಿಯ ವೀರ ತೇಜದ ಜೊತೆಗೆ ರಾಮದಾಸಸ್ವಾಮಿಯ ತಪದ ಓಜವೂ ಸಂಗಮಿಸಿತು. ಕಿತ್ತೂರ ದೊರೆಗಳ ವೀರ ತೇಜದೊಡನೆ ಕಲ್ಲುಮಠದ ಪ್ರಭುಸ್ವಾಮಿಗಳ ತಪದ ಓಜವೂ ಸಹಕರಿಸಿತು. ಅಂತೆಯೇ ನಾಗನೂರ ಸರ್ವಮುಖಶ್ರೀಯಮಾರ್ಗದರ್ಶನಕ್ಕೆ ಆದಕ್ಕೆ ಬೆಂಬಲವಾಗಿ ಅಲ್ಲಿಯ, ರುದ್ರಾಕ್ಷಿಮಠದ ತಪವು ಮುಂಬಂದಿದೆ.

ರುದ್ರಾಕ್ಷಿಮಠವು

ಈ ಊರಲ್ಲಿಯ ಏಳು ಮಠಗಳಲ್ಲಿ ಐದು ಪಟ್ಟಚರಮೂರ್ತಿ ಮಠಗಳು. ಎರಡು ವಿರಕ್ತಮಠಗಳು, ಅವುಗಳಲ್ಲಿ ಶ್ರೀರುದ್ರಾಕ್ಷಿಮಠವೂ ಒಂದು. ಇಲ್ಲಿ ರುದ್ರಾಕ್ಷಿರಚಿತ ಕಿರೀಟವೊಂದಿದೆ. ಪ್ರತಿ ವರ್ಷ ಶ್ರಾವಣಮಾಸದ ಕೊನೆಯ ಉತ್ಸವದಲ್ಲಿ ಪಾದಪೂಜೆಗೆಂದು ಬಂದ ಮೂರ್ತಿಗಳು ಇದನ್ನು ಶಿರೋಭೂಷಣದಂತೆ ಧರಿಸುವ ಸಾಂಪ್ರದಾಯವಿದೆ. ಇದೇ ಕಾರಣದಿಂದ ಇದಕ್ಕೆ ರುದ್ರಾಕ್ಷಿಮಠವೆಂದು ಹೆಸರು ಬಂದಿರಬೇಕು.

ಅವಿಚಲ ಬ್ರಹ್ಮಚರ್ಯನಿಷ್ಠರೂ, ಅನುಪಮ ವಿರಕ್ತರೂ, ಅಪ್ರತಿಮ ಪವಾಡಪುರುಷರೂ, ಅಪಮಲೀಲಾ ಮೂರ್ತಿಗಳೂ, ಅದ್ವಿತೀಯ ಸಿದ್ಧಿಪುರುಷರೂ ಆದ ಗರಗದ ಶ್ರೀ ಮಡಿವಾಳ ಮಹಾಸ್ವಾಮಿಗಳೂ ಸರ್ವಸುಪರಿಚಿತರು. ಶ್ರೀ ಅಲ್ಲಮಪ್ರಭು ಸ್ವಾಮಿಗಳೂ ಶ್ರೀ ಸಿದ್ಧರಾಮಸ್ವಾಮಿಗಳೂ ಎಂಬ ಈರ್ವರೂ ಗರಗದ ಶ್ರೀ ಮಡಿವಾಳಸ್ವಾಮಿಗಳ ಸಹಪಾಠಿಗಳು. ಇವರೀರ್ವರೂ ವಿಜಾಪೂರ ಜಿಲ್ಹೆಯ ಯಾವದೋ ಒಂದು ಹಳ್ಳಿಯಿಂದ ಇಲ್ಲಿಗೆ ಬಂದರೆಂದು ಜನರು ಹೇಳುತ್ತಾರೆ. ಒಮ್ಮೆ ಕಿತ್ತೂರ ದೊರೆ ಶಿವಲಿಂಗರುದ್ರಸರ್ಜನೂ ಇಂತಹ ಸ್ವಾಮಿ ಸಮೂಹದ ಅಚಲ ಬ್ರಹ್ಮಚರ್ಯ ಪರೀಕ್ಷೆಯನ್ನು ರೂಪವತಿ ಸ್ತ್ರೀಯರ ಮುಖಾಂತರ ಏರ್ಪಡಿಸಿದನು. ಆ ಪರೀಕ್ಷೆಯಲ್ಲಿ ಈ ಮೂವರೂ ಸ್ವಾಮಿಗಳನ್ನುಳಿದು ಎಲ್ಲರೂ ಸ್ಖಲಿತವೀರ್ಯರಾಗಿದ್ದರು. ಸ್ವತಃ ಗರಗದ ಶ್ರೀಮಡಿವಾಳ ಮಹಾಸ್ವಾಮಿಗಳೇ ಈ ಶ್ರೀಅಲ್ಲಮಪ್ರಭು ಸಿದ್ಧರಾಮ ಸ್ವಾಮಿಗಳ ಸುಸ್ಥಿರ ಬ್ರಹ್ಮಚರ್ಯ ನಿಷ್ಠೆಯನ್ನೂ ಅವಿಚಲ ಮನಸ್ಸನ್ನೂ ಮನಸಾರೆ ಪ್ರಶಂಸಿಸಿದರು. ನಂತರ ಈ ಉಭಯತರು ಕಿತ್ತೂರಿಂದ ನಾಗನೂರಿಗೆ ದಯಮಾಡಿಸಿದರು. ಈಗ ಅಸ್ತಿತ್ವದಲ್ಲಿರುವ ಈ ರುದ್ರಾಕ್ಷಿಮಠವು ಆಗ ಇರಲಿಲ್ಲ. ನಾಗನೂರಿಗೆ ದಯಮಾಡಿಸಿದ ಈ ಉಭಯ ಮಹಾನುಭಾವರು ಅಲ್ಲಿಯ ಭಕ್ತಾದಿಗಳ ಪ್ರಾರ್ಥನೆಯ ಮೇರೆಗೆ ಊರ ಹೊರಗಿರುವ ಚೌಕಿಯೆಂಬಲ್ಲಿ ಒಂದು ಚಿಕ್ಕ ಪರ್ಣಕುಟಿಯನ್ನು ನಿರ್ಮಿಸಿಕೊಂಡು, ಅಲ್ಲಿಯೇ ಇರಹತ್ತಿದರು. ಊರ ಭಕ್ತಾದಿಗಳು ಊರೊಳಗೊಂದು ಮಠವನ್ನು ಕಟ್ಟಿಸಿ, ಅಲ್ಲಿ ಆ ಉಭಯ ಸ್ವಾಮಿಗಳಿಗೆ ವಸತಿಯ ಸೌಕರ್ಯವನ್ನು ಒದಗಿಸಿ ಕೊಟ್ಟಮೇಲೆ ಅವರು ಅಲ್ಲಿಯೇ ಇರಹತ್ತಿದರು. ಆಗ ಅವರು ತಮ್ಮ ಲಿಂಗಪೂಜೆಯ ಪರಿಶುದ್ಧ ಜಲಕ್ಕಾಗಿ ತೋಡಿದ ಒಂದು ಸಣ್ಣ ಗುಂಡಿಯೇ ಈಗ ಉತ್ತಮ ಜಲಾಶಯವಾಗಿದೆ. ಈ ರೀತಿ ನಾಗನೂರ ಬಯಲಿನಲ್ಲಿ ಹೊಸದಾಗಿ ನಿರ್ಮಿತವಾದ ಮಠಕ್ಕೆ ಈ ಉಭಯ ಸ್ವಾಮಿಗಳೇ ಮೂಲ ಪುರುಷರಾದರು. ಇದುವೇ ರುದ್ರಾಕ್ಷಿ ಮಠವು !

ರುದ್ರಾಕ್ಷಿಮಠದ ಮೂಲ ಪುರುಷರು

ಈ ರುದ್ರಾಕ್ಷಿಮಠದ ಸ್ಥಾಪನೆಗೆ ಕಾರಣೀಭೂತರಾದ, ಇದರ ಮೂಲ ಪುರುಷರಾದ ಶ್ರೀ ಅಲ್ಲಮಪ್ರಭು ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳಿಬ್ಬರೂ ಉಗ್ರ ತಪಸ್ವಿಗಳೂ ಉಜ್ವಲ ತೇಜಸ್ವಿಗಳೂ ಆಗಿದ್ದರು. ಇವರು ಪ್ರತಿ ನಿತ್ಯವೂ ಪೂಜೆಗೆ ಕುಳಿತಾಗ ಒಂದು ಸರ್ಪವು ಮೈಮೇಲೆ ಏರಿಹೋಗಿ ಹೆಡೆತೆಗೆದು ತೂಗಾಡಿ ಆಡುತ್ತಿತ್ತೆಂದು ಜನರು ಹೇಳುತ್ತಾರೆ. ಮಹಾನುಭಾವರೆನಿಸಿದ ಪ್ರತಿಯೊಬ್ಬ ಸಾಧು, ಸಂತ, ಸ್ವಾಮಿ, ಶರಣ, ತಪಸ್ವಿ, ಮುನಿ, ಋಷಿ, ಯತಿ ಈ ಮೊದಲಾದವರು ಅನುಷ್ಠಾನಕ್ಕೋ, ಉಪಾಸನೆಗೋ, ತಪಶ್ಚರ್ಯಕ್ಕೋ, ಕುಳಿತು ಕಣ್ಣುಮುಚ್ಚಿ ಅಂತಮುಖಿಯಾದಾಗ, ಧ್ಯಾನಸ್ಥರಾದಾಗ, ಪ್ರಾಣಾಯಾಮಪೂರ್ವಕವಾಗಿ ಪ್ರಾಣವನ್ನು ನಿಯಂತ್ರಿಸಿ ಸಮಾಧಿಸ್ಥರಾದಾಗ, ಅವರ ಮುಂದೆ ಇಂತಹ ಒಂದು ಪವಾಡವು ನಡೆಯುವದೆಂದು, ನಡೆದಿದ್ದಿತೆಂದು ಸರ್ವಸಾಮಾನ್ಯವಾಗಿ ಜನರು ಹೇಳುತ್ತಿರುವರು. ಆಧಾರ ಚಕ್ರದಲ್ಲಿ ಗಾಢವಾದ ನಿದ್ರಾವಸ್ಥೆಯಲ್ಲಿ ಅಧೋಮುಖಿಯಾಗಿ ಬಿದ್ದಿರುವ ಸರ್ಪಾಕಾರದ ಕುಂಡಲಿನೀ ಶಕ್ತಿಯು ಯೋಗಸ್ಥಿತಿಯಲ್ಲಿ ಪ್ರಾಣಾಯಾಮದ ಪ್ರಭಾವದಿಂದ ಊರ್ಧ್ವಕ್ಕೇರಿ ಹೆಡೆತೆಗೆದು ತೂಗಾಡುವ ಹಾವಿನಂತೆ ತೋರುವ ಲೀಲೆಗೆ ಸಾಂಕೇತಿಕವಾಗಿ ಜನರು ಇಂಥ ಒಂದು ಪವಾಡವನ್ನು ಆರೋಪಿಸುತ್ತಿರುವರೋ ಏನೋ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಉಭಯತರೂ ಶಿವಾಧೀನರಾದ ಮೇಲೆ ಈ ಮಠದ ಅಧಿಕಾರಕ್ಕೆ ಮೂರನೆಯವರಾಗಿ ಮತ್ತೆ ಸಿದ್ಧರಾಮೇಶ್ವರ ಸ್ವಾಮಿಗಳು ದಯಮಾಡಿಸಿದರು. ಇವರು ಲಿಂಗಪೂಜಾಪರಾಯಣರು ! ವ್ರತನಿಷ್ಠರು ! ಒಂದು ಕ ಹೊದೆಯಲು ಒಂದು ಶಲ್ಲೆ, ತಲೆಯಮೇಲೆ ಒಂದು ಕಿವಿಟೊಪ್ಪಿಗೆ, ಕೈಯಲ್ಲಿ ಒಂದು ಬೆತ್ತ, ಕಾಲಲ್ಲಿ ಆವಿಗೆಗಳು, ಸ್ವಾಮಿಗಳ ನಿತ್ಯದ ಉಡಿಗೆ ತೊಡಿಗೆಗಳು. ಪ್ರತಿನಿತ್ಯ ಸ್ನಾನ ಲಿಂಗ-ಪೂಜೆಗಳನ್ನು ಮುಗಿಸಿಕೊಂಡು ಕೈಯಲ್ಲಿ ಬೆತ್ತ ಬುಟ್ಟಿ ಹಿಡಿದುಕೊಂಡು ಊರಲ್ಲಿ ಕಜ್ಜಾಯ ಭಿಕ್ಷೆಮಾಡುತ್ತಿದ್ದರಂತೆ. ಹೀಗೆ ಭಿಕ್ಷೆಯಿಂದ ಎತ್ತಿದ ಕಜ್ಜಾಯದಲ್ಲಿ ಶಿವನಿಗೆ ಎಡೆ ಮಠಕ್ಕೆ ಬಂದ ಅತಿಥಿಗಳನ್ನು ಸತ್ಕರಿಸಿ, ತಾವು ಪ್ರಸಾದ ಸೇವಿಸಿ ತೃಪ್ತರಾಗುತ್ತಿದ್ದರು. ಅವರ ಜೀವಿತಾವಧಿಯಲ್ಲಿ ಈ ಮಠ ನಡೆದುಕೊಳ್ಳುವ ಭಕ್ತರ ಸಂಖ್ಯೆ ದಿನದಿನಕ್ಕೂ ಬೆಳೆಯತೊಡಗಿತು. ಸ್ವಾಮಿಗಳ ಘನತೆಯ ಮಹಿಮೆಯ ಕೀರ್ತಿಯೋ ಅಥ ಭಕ್ತರ ಬೇಡಿಕೆಯ ಪೂರ್ತಿಯೋ, ಸಾಲುಹಿಡಿದು, ಸರತಿಹಿಡಿದು ಭಕ್ತರು ಗುಂಪುಗುಂಪಾಗಿ ಇವರ ಪಾದದೆಡೆಗೆ ನುಗ್ಗುತ್ತಿ ಅಂಥವರಲ್ಲಿ ತಿಗಡಿಯ ಜಕಾತಿ (ಸೊಲಬಣ್ಣವರ) ಎಂಬವರೂ ಒಬ್ಬರು.

ಇವರ ಮನೆಯಲ್ಲಿ ಭೂಗತ ಅಪಾರ ನಿಧಿಯ ಮೇಲೆ ಪಿಶಾಚಿಯೊಂದು ಅನೇಕ ದಿನಗಳಿಂದ ಕಾ ಮಾಡುತ್ತಿತ್ತಂತೆ. ಇದರಿಂದ ಆ ಆಸ್ತಿಯು ಮನೆಯವರ ಕೈವಶವಾಗುವದು ದುಸ್ತರವಾಗಿತ್ತು ! ಸಾರ್ವಜನಿಕ ಕಾರ್ಯ ಪರೋಪಕಾರಕ್ಕೂ ಆ ನಿಧಿಯನ್ನು ವಿನಿಯೋಗಿಸಬೇಕೆಂದು ಮನೆಯವರ ಬಯಕೆಯಿದ್ದರೂ ಈ ಪಿಶಾಚಿಯ ಕಾವಲ ಮನೆ ಅವರ ಬಯಕೆ ಈಡೇರಲಿಲ್ಲ. ಪಿಶಾಚಿಯನ್ನು ತಳಬಿಡಿಸಿ ಓಡಿಸಬೇಕಾದರೆ, ಆ ಸ್ಥಳದಲ್ಲಿ ಆಚಾರಶೀಲ ನಿಸ್ವಾರ್ಥಿ ತಪ್ಪ ಶಿವಯೋಗಿಗಳಿಂದ ಶಿವಪೂಜಾನುಷ್ಠಾನವು ಅಗತ್ಯವೆಂದು ಯಾರೋ ಒಬ್ಬರು ಅಭಿಪ್ರಾಯಪಟ್ಟಿದ್ದರಂತೆ. ಶ್ರೀ ಜಕಾತಿಯ ನಾಗನೂರ ಶ್ರೀ ರುದ್ರಾಕ್ಷಿಮಠಕ್ಕೆ ಮೂರನೆಯವರಾಗಿ ಅಧಿಕಾರಕ್ಕೆ ಬಂದ ಈ ಎರಡನೆಯ ಶ್ರೀ ಸಿದ್ಧರಾಮೇಶ್ವರ ಮಹಾಸ್ವಾ ಗಳೇ ಈ ಕಾರ್ಯಕ್ಕೆ ಸಮರ್ಥರೆಂದೂ ಅರ್ಹರೆಂದೂ ತೋಚಿತು. ಆದರಂತೆಯೇ ಅವರು ಈ ಮಹಾಸ್ವಾಮಿಗಳನ್ನು ಪ್ರಾ ದರು. ಭಕ್ತನ ಪ್ರಾರ್ಥನೆಯನ್ನು ಅಲ್ಲಗಳೆಯಲಾರದೆ ಅವರು ಅನುಷ್ಠಾನದ ಈ ಕಾರ್ಯಕ್ಕೆ ಒಪ್ಪಿಕೊಂಡರು. ಈ ಭಕ್ತನು ತಮ್ಮ ಮನೆಯಲ್ಲಿ ಪಿಶಾಚಿಯು, ನಿಧಿಯಮೇಲೆ ಕಾವಲುಮಾಡುವ ವಿಷಯವನ್ನು ತಿಳಿಸಿರಲಿಲ್ಲ. ಆದರೆ ಸ್ವಾಮಿ ಸ್ನಾನದಿಂದ ಶುಚಿರ್ಭೂತರಾಗಿ, ಶಿವಧ್ಯಾನದಿಂದ ಅಂತರ್ಬಾಹ್ಯ ಪರಿಶುದ್ಧರಾಗಿ ಆ ಸ್ಥಳದಲ್ಲಿ ಶಿವಪೂಜಾನುಷ್ಠಾ ಕುಳಿತರು. ಅವರ ಬಾಯಿಂದ ಬರುವ ಶಿವಸ್ತೋತ್ರ, ಶಿವಗೀತೆ, ಶಿವಪಂಚಾಕ್ಷರಿ, ಷಡಕ್ಷರಿ ಮಂತ್ರೋಚ್ಚಾರಗಳ ಪ್ರ ದಿಂದ ಆ ಪಿಶಾಚಿಯು ತಳಬಿಟ್ಟಿದ್ದು ಸ್ವಾಮಿಗಳ ಅಡಿಗಳಿಗೆರಗಿ ಅಲ್ಲಿಂದ ಬಿಟ್ಟು ಹೋಗುವ ವಚನವಿತ್ತು ಹೋಗಿಯೇ ಬಿಟ್ಟಿ ಮುಂದೆ ಸ್ವಾಮಿಗಳು ತಿಗಡಿಯಿಂದ ಮರಳಿ ನಾಗನೂರಿಗೆ ಬರುವ ಕಾಲಕ್ಕೆ ಸ್ವಲ್ಪ ಕಾಯಿಲೆಯಾಯಿತು. ಈ ಕಾಯಿಲೆಯ ಸಹ ಅವರು ತಮ್ಮ ಅನುಷ್ಠಾನದ ಬಲದಿಂದಲೇ ಕಡಿಮೆಮಾಡಿಕೊಂಡು ನಾಗನೂರಿಗೆ ಮರಳಿದರು. ಇವರು ಲಿಂಗಪ ಮಗ್ನರಾಗಿರುವಾಗ ಒಂದು ನಾಗರಹಾವು ಇವರ ಮುಂದೆ ಹರಿದುಬಂದು ಹೆಡೆತೆಗೆದು ಆಡುತ್ತಿತ್ತು. ಇಂದಿಗೂ ಸಹ ಇಲ್ಲ ಲಿಂಗಪೂಜೆಗೆ ಕೂಡ್ರುವ ಸ್ಥಳದಲ್ಲಿ ಆ ಸರ್ಪವೂ ಆಗಾಗ ಕಾಣಿಸಿಕೊಳ್ಳುತ್ತಿದೆ. ಶ್ರೀ ಸಿದ್ಧರಾಮೇಶ್ವರಸ್ವಾಮಿಗಳ ನಾಗನೂರ ಜನತೆಗೆ ಅಪಾರವಾದ ಭಯಭಕ್ತಿ, ವಿಶ್ವಾಸ, ನಿಷ್ಠೆ. ಈಗಲೂ ನಾಗನೂರವರು ಅದೇ ಭಯಭಕ್ತಿ ವಿಶ್ವಾಸಗಳಿಂ ಈ ಮಠಕ್ಕೆ ನಡೆದುಕೊಳ್ಳುವರು. ತಮ್ಮ ತೋಟಪಟ್ಟಿ ಹೊಲಗಳಲ್ಲಿ ಹೊಸದಾಗಿ ಬಂದ ಬೆಳೆಯು ಏನೇ ಇರಲಿ, ಯಾವ ಇರಲಿ, ಅದನ್ನು ಮೊಟ್ಟಮೊದಲು ಮಠಕ್ಕೆ ಮುಟ್ಟಿಸಿ ನಿವೇದಿಸದೆ, ಮನೆಯಲ್ಲಿ ಸೇವಿಸುವದಿಲ್ಲ ! ಹೊರಗೂ ಕ ಮಾರುವದಿಲ್ಲ. ಈ ಭಕ್ತಾದಿಗಳು ತಮ್ಮ ಭಕ್ತಿಯ ಆಧಿಕ್ಯದಿಂದ ತನಗೆ ಬಂದ ಬೆಳೆಯನ್ನು ಅಥವಾ ಪೈರನ್ನು ಈ ಮಠ ಹೆಚ್ಚು ಹೆಚ್ಚಾಗಿ ನಿವೇದಿಸಿದಷ್ಟು ಮರುವರ್ಷ ಹೆಚ್ಚು ಹೆಚ್ಚು ಹುಲುಸಾಗಿ ಆ ಪೈರು ಬೆಳೆದು, ಬೆಳೆಯುತ್ತಲೇ ಹೋಗುವ ಇಲ್ಲಿ ಶ್ರೀ ಸರ್ವಜ್ಞ ಕವಿ ಹೇಳಿದಂತೆ, ಈ ಮಠಕ್ಕೆ ನೀಡಿ ನಿವೇದಿಸಿದ್ದೇ ತನ್ನದಾಗುವದು. ಇಷ್ಟೇ ಅಲ್ಲ, ಈ ನಿವೇದನೆ ನೂರ್ಮಡಿ, ಸಾಸಿರ್ಮಡಿ ತನ್ನದಾಗುವುದು. ಸ್ವಾರ್ಥದಿಂದ ಬಚ್ಚಿ ಮುಚ್ಚಿಟ್ಟದ್ದೆಲ್ಲವೂ ಅನ್ಯರದಾಗುವುದು. ಇಲ್ಲದಿ ಮಣ್ಣಾಗುವುದು.

ಈ ಶ್ರೀಸಿದ್ಧರಾಮೇಶ್ವರರ ತರುವಾಯ ನಾಲ್ಕನೆಯವರಾಗಿ ಶ್ರೀ ಗುರುಸಿದ್ಧ ಸ್ವಾಮಿಗಳೂ, ಐದನೆಯವರಾ ಶ್ರೀ ಗುರುಲಿಂಗಸ್ವಾಮಿಗಳೂ ಆರನೆಯವರಾಗಿ ಶ್ರೀ ವೀರಭದ್ರಸ್ವಾಮಿಗಳೂ ಈ ರುದ್ರಾಕ್ಷಿಮಠಕ್ಕೆ ಉತ್ತರಾಧಿಕಾರಿಗಳಾ ಬಂದರು. ಇವರು ಮೂಲ ಪುರುಷರ ಪರಂಪರೆಯನ್ನು ಎಳ್ಳಷ್ಟೂ ಚ್ಯುತಿಬರದಂತೆ ನಡೆಯಿಸಿಕೊಂಡು ಬಂದರು. ಇವರ ನಂ ಏಳನೆಯವರಾಗಿ ಈಗಿರುವ ಶ್ರೀ ಶಿವಬಸವ ಮಹಾಸ್ವಾಮಿಗಳು ಅಧಿಕಾರಕ್ಕೆ ಬಂದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚೌಕಿ ಮಠವು

ಈ ಚೌಕಿಮಠವು ರುದ್ರಾಕ್ಷಿಮಠದಿಂದ ಉತ್ತರದಿಕ್ಕಿನಲ್ಲಿ ಸುಮಾರು ಎರಡು-ಎರಡುವರೆ ಫರ್ಲಾಂಗಿನ ಮೇಲಿದೆ. ಸುತ್ತಲೂ ಪಟ್ಟನಾಗಿ ಬೆಳೆದ ಹಚ್ಚ ಹಸಿರು ಮುರಿವ ಮಾವಿನ ತೋಪು ಇದೆ. ಇದು ಪ್ರಶಾಂತವಾದ ತಪೋಯೋಗ್ಯವಾದ ಅಂತರ್ಮುಖತೆಯ ಮೌನ ಸಮಾಧಿಗಿಳಿಯುವ ಏಕಾಂತ ಸ್ಥಳವು. ಸಮೀಪದಲ್ಲಿ ತಿಳಿನೀರಿನ ಝುರಿಯು ಹರಿಯುತ್ತಿರುವದು. ಬದಿಯಲ್ಲಿಯೇ ಪೂರ್ವಾಭಿಮುಖವಾಗಿ ಪರಿಪೂರ್ಣ ಶಿಲಾನಿರ್ಮಿತ ಭಿತ್ತಿಪರಿಶೋಭಿತ ಮಠವು ಕಂಗೊಳಿಸುತ್ತಿರುವದು. ಎಡಬಲದಲ್ಲಿ ಎತ್ತರವಾಗಿ ಬೆಳೆದ ತೆಂಗುಗಳೂ, ಬಿಲ್ವ ವೃಕ್ಷಗಳೂ ರಾರಾಜಿಸುತ್ತಿವೆ. ಮಠದ ಬಲಬದಿಯ ಮುಂಭಾಗದಲ್ಲಿ ಒಂದು ಭಾವಿಯಿದೆ. ಅದು ಮೊದಲು ಚೌಕಾಗಿ ನಿರ್ಮಿತವಾಗಿದ್ದಿತ್ತಲ್ಲದೇ ಹೊಕ್ಕು ತುಂಬುವ ಭಾವಿಯೂ ಆಗಿದ್ದಿತು. ಈಗಿನ ಶ್ರೀ ಶಿವಬಸವಸ್ವಾಮಿಗಳು ಅದನ್ನು ದುಂಡಗೆ ಕಲ್ಲಿನಿಂದ ಕಟ್ಟಿಸಿ, ನೀರನ್ನು ಸೇದಲು ಒಂದು ಗಡೆಯನ್ನು ಹಚ್ಚಿಸಿ, ನೀರಡಿಸಿ ಬಂದ ದಾರಿಕಾರರಿಗೆ ನೀರ್ಗುಡಿಯುವ ಏರ್ಪಾಡು ಮಾಡಿರುವರು.

ರುದ್ರಾಕ್ಷಿ ಮಠವು ಮೂಲ ಮಹಾನಿರಂಜನ ಮೂರ್ತಿಗಳಾದ ಶ್ರೀ ಅಲ್ಲಮಪ್ರಭು ಮತ್ತು ಶ್ರೀ ಸಿದ್ಧರಾಮೇಶ್ವರರ ಜೀವನದ ಲೀಲಾಭೂಮಿಯಾಗಿದ್ದರೆ, ಶ್ರೀ ಚೌಕಿಮಠವು ಅವರ ಚಿರಂತನ ಸಮಾಧಿಯ ಮಹಾಮೌನದ ಸೀಮೆಯಾಗಿದೆ. ಒಳಭಾಗದಲ್ಲಿ ಈ ಮಹಾಸ್ವಾಮಿಗಳ ಕರ್ತೃಗದ್ದುಗೆಗಳಿವೆ. ಈ ಗದ್ದುಗೆಗಳ ಪೂಜೆಯು ಪ್ರತಿನಿತ್ಯ ತಪ್ಪದೇ ನಡೆಯುತ್ತದೆ. ಈ ಏಕಾಂತ ಪ್ರಶಾಂತವಾದ ಸ್ಥಳಕ್ಕೆ ನಾಗನೂರನವರು ತಮ್ಮತಮ್ಮ ಅನುಕೂಲತೆಯ ಪ್ರಕಾರ ಆಹಾರ ವಿಹಾರಕ್ಕೆಂದು, ಹೋಗುತ್ತಿರುತ್ತಾರೆ. ಬಿಡುವಿನ ದಿನಗಳಲ್ಲಿ ಶಾಲಾ ಬಾಲಕರು ತಮ್ಮ ಬುತ್ತಿಯೊಡನೆ ಇಲ್ಲಿಗೆ ಬಂದು, ಉಂಡು, ತಿಂದು, ಆಡಿ, ಹಾಡಿ, ನಲಿದು-ಕೆಲೆದು, ತಣಿದು-ದಣಿದು ಮರಳುತ್ತಾರೆ. ಈ ಗದ್ದುಗೆಗಳನ್ನು ಬಳಸಿ, ಹೆಡೆದೆಗೆದು ಆಡುವ ಸರ್ಪವೊಂದನ್ನು ಅನೇಕರು ನೋಡಿರುವರು. ಇದುವರೆಗೆ ಯಾರೂ ಅದಕ್ಕೆ ಧಕ್ಕೆ ಹಚ್ಚಿಲ್ಲ ! ಯಾರನ್ನೂ ಆ ಸರ್ಪವು ಕಚ್ಚಿ ಅಪಾಯಗೊಳಿಸಿಲ್ಲ! ಈ ರೀತಿ ನಾಗನೂರ ಶ್ರೀ ರುದ್ರಾಕ್ಷಿಮಠಕ್ಕೂ ಚೌಕಿಮಠಕ್ಕೂ ಒಂದು ಆಂತರಿಕ ನಿಕಟ ಸಂಬಂಧವಿದೆ.

ಶ್ರೀಗಳವರ ಮೂಲಪುರುಷರು

ನಮ್ಮ ಚರಿತ್ರಯೋಗಿ ಶ್ರೀ ಶಿವಬಸವ ಮಹಾಸ್ವಾಮಿಗಳ ಅಜ್ಜಂದಿರೂ ಇದೇ ನಾಗನೂರ ಶೀಲಯ್ಯನವರ ಮಠದ ಶ್ರೀ ಶಿವಬಸವಸ್ವಾಮಿಗಳೇ ಸರಿ ! ಹೆಸರಿಗೆ ತಕ್ಕಂತೆ ಶಾಂತರೂ, ಸದಾಚಾರಿಗಳೂ, ಶಿವದೃಷ್ಟಿಯುಳ್ಳವರೂ, ಕ್ರಿಯಾ ಶೀಲ ಪ್ರಸಾದಿಕ ಮೂರ್ತಿಗಳೂ ಆಗಿದ್ದರು. ಇವರ ಧರ್ಮಪತ್ನಿ ರಾಮದುರ್ಗ ತಾಲೂಕಿನಲ್ಲಿಯ ಹಿರೇಕೊಪ್ಪ ಗ್ರಾಮದ ಹಿರೇಮಠದ ಬಾಳಯ್ಯನವರ ಮಗಳು, ಬಸವಮ್ಮನವರು. ಇವರಾದರೂ ಪತಿಯಂತೆ ಆಚಾರ ಸಂಪನ್ನೆ, ಸುಶೀಲೆ, ಕ್ರಿಯಾನಿಷ್ಠೆ ! " ಮನೆ ನೋಡಾ, ಬಡವರು ! ಮನ ನೋಡಾ, ಘನ ಮನಸಂಪನ್ನರು " ಎಂಬಂತೆ ತಮ್ಮ ಬಡತನದಲ್ಲಿಯೂ ನೀತಿವಿಡಿದು ಕಾಯಕ ನಿಷ್ಠರಾಗಿ ಒಳಹೊರಗೂ ಒಂದಾದ ಪ್ರಾಮಾಣಿಕ ಆದರ್ಶಜೀವನವನ್ನು ಸಾಗಿಸುತ್ತಿದ್ದರು. ಅವರ ಆದರ್ಶ ದಾಂಪತ್ಯವು ಆದರ್ಶ ಜೀವನದಲ್ಲಿ ಸಮರಸವಾಗಿದ್ದಿತು. ಬಸವಮ್ಮನವರು ಪತಿಯೊಡನೆ ನಾಗನೂರಲ್ಲಿದ್ದಂತೆಯೇ ಪತಿಯಿಚ್ಛೆಯಂತೆ ಪತಿಯ ಅಪ್ಪಣೆಯಂತೆ, ಪತಿಯನ್ನು ಕೂಡಿಕೊಂಡು ತವರ ಸುಖಕ್ಕೆ ತವರಾದ, ಹುಟ್ಟೂರಾದ ಹಿರೇಕೊಪ್ಪಕ್ಕೂ ಮೇಲಿಂದ ಮೇಲೆ ಹೋಗಿ ಬರುತ್ತಿದ್ದರು. ಹೀಗಾಗಿ ಅವರ ಪತಿ ಶ್ರೀ ಶಿವಬಸವಸ್ವಾಮಿಗಳಿಗೆ ಹಿರೇಕೊಪ್ಪ ಗ್ರಾಮದ ಪರಿಚಯವೂ ಬೆಳೆಯಿತು. ಆ ಊರವರ ಸಂಪರ್ಕವೂ ಹೆಚ್ಚಿತು

ಈ ಹಿರೇಕೊಪ್ಪದಲ್ಲಿಯೇ ಶ್ರೀ ಸಂಗನಬಸವಪ್ಪ ಕರ್ಕಿ ಎಂಬವರು ಪ್ರಾಸಾದಿಕ ಶರಣರಾಗಿದ್ದರು. ಇವರು ಪ್ರತಿ ನಿತ್ಯ ಹಿರೇಕೊಪ್ಪದ ಒಂದು ಭಾಗದಂತಿರುವ ಚಿಕ್ಕೊಪ್ಪದ ಶ್ರೀ ಪಟ್ಟದ ದೇವರಿಂದ ಕರಣಪ್ರಸಾದ ಸ್ವೀಕರಿಸಿ, ಪ್ರಸಾದ ತೆಗೆದುಕೊಳ್ಳುವ ಪರಿಪಾಠವನ್ನಿಟ್ಟುಕೊಂಡಿದ್ದರು.

ಹೀಗೆಯೇ ಈ ಪ್ರಸಾದ ಸೇವನೆಯ ನಿಷ್ಠೆಯಲ್ಲಿ ಕಾಲವು ಗತಿಸುತ್ತಿರಲು ಚಿಕ್ಕೊಪ್ಪದ ಶ್ರೀ ಪಟ್ಟದದೇವರು ಶಿವಾಧೀನರಾದರು. ಇದರಿಂದ ಶ್ರೀ ಸಂಗನ ಬಸವಪ್ಪ ಕರ್ಕಿ ಅವರಿಗೆ ಕರಣ ಪ್ರಸಾದವನ್ನು ಅನುಗ್ರಹಿಸಿ ಅವರ ಪ್ರಸಾದ ಸ್ವೀಕಾರಕ್ಕೆ ಅವಕಾಶವನ್ನು ಕಲ್ಪಿಸಿಕೊಡುವ ಮಹಾಸ್ವಾಮಿಗಳು ಇಲ್ಲವಾದರು. ಶ್ರೀ ಸಂಗನಬಸವಪ್ಪನವರಿಗೆ ಅಂತಹ ಕ್ರಿಯಾ ಮೂರ್ತಿಗಳ ಆವಶ್ಯಕತೆಯು ತೀವ್ರವಾಗಿ ಭಾಸವಾಗತೊಡಗಿತು. ಆಗ ಸಂಗನ ಬಸವಪ್ಪನವರು ಶೀಲಯ್ಯನವರ ಮಠದ ಶ್ರೀ ಶಿವಬಸವ ಸ್ವಾಮಿಗಳ ಧರ್ಮಪತ್ನಿ ಶ್ರೀಮತಿ ಬಸವಮ್ಮನವರಿಗೆ ತಮ್ಮ ಪರಿಸ್ಥಿತಿಯನ್ನು ತಿಳಿಸಿ ಪತಿಸಹಿತವಾಗಿ ತಾವು ಹಿರೇಕೊಪ್ಪಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬರಬೇಕೆಂದು ಬಿನ್ನವಿಸಿ, ಬಂನರೆ ಅಲ್ಲಿ ಅವರ ವಸತಿ ಸೌಕರ್ಯವನ್ನೂ ಮತ್ತಿತರ ಅನುಕೂಲತೆಗಳನ್ನೂ ಒದಗಿಸಿಕೊ ಭರವಸೆಯಿತ್ತು ಆ ಉಭಯತರನ್ನು ನಾಗನೂರಿಂದ ಹಿರೇಕೊಪ್ಪಕ್ಕೆ ಬರಮಾಡಿಕೊಂಡರು.

ಶ್ರೀಮತಿ ಬಸವಮ್ಮನವರು ಕರ್ಕಿಮನೆತನಕ್ಕೆ ಬಹಳ ದೂರದವರಲ್ಲ ! ಒಂದು ಬಗೆಯ ನಿಕಟ ಸಂಬಂಧಿ ಶ್ರೀಮತಿ ಬಸವಮ್ಮನವರ ಅಜ್ಜಿಯೇ ಕರ್ಕಿಮನೆತನದ ಹೆಣ್ಣುಮಗಳು.

ಅಂತೂ ಶ್ರೀ ಸಂಗನಬಸವಪ್ಪನವರ ಸಂಕಲ್ಪಕ್ಕೆ ಅನುಗುಣವಾಗಿ ದಂಪತಿಗಳಿರ್ವರೂ ಹಿರೇಕೊಪ್ಪದಲ್ಲಿ ನೆಲಸಿ ಶ್ರೀ ಶಿವಬಸವಸ್ವಾಮಿಗಳು ಸಂಗನ ಬಸವಪ್ಪನವರಿಗೆ ನಿತ್ಯವೂ ಕರಣ ಪ್ರಸಾದವನ್ನು ಅನುಗ್ರಹಿಸಿ ತಮ್ಮ ಜೀವನವನ್ನು ವಾಗಿ ಸಾಗಿಸಹತ್ತಿದರು.

ಹೀಗೆಯೇ ನೆಮ್ಮದಿಯಲ್ಲಿ ಆ ದಂಪತಿಗಳ ಬಾಳು ಸಾಗುತ್ತಿರಲು, ಕಾಲಾನುಕ್ರಮದಲ್ಲಿ ಅವರಿಗೆ ಅಡಿವೆ ಚನ್ನಯ್ಯ, ಬಸವಯ್ಯ ಎಂಬ ಮೂವರು ಗಂಡುಮಕ್ಕಳೂ, ಬಸವಲಿಂಗಮ್ಮ, ಸಂಗಮ್ಮ ಎಂಬ ಇಬ್ಬರು ಹೆಣ್ಣುಮಕ್ಕ ಜನಿಸಿದರು. ಈ ಐವರಲ್ಲಿ ಹಿರಿಯವನಾದ ಶ್ರೀ ಅಡಿವೆಯ್ಯನವರೇ ನಮ್ಮ ಚರಿತ್ರಯೋಗಿ ಶ್ರೀ ಶಿವಬಸವ ಮಹಾಸ್ವಾಮಿ ತಂದೆಯವರು. ಈ ಶ್ರೀ ಅಡಿವೆಯ್ಯಸ್ವಾಮಿಗಳು ಲಿಂಗಪೂಜಾನಿಷ್ಠರೂ, ಶಿವಭಕ್ತಿಪರಾಯಣರೂ ಆಗಿದ್ದರು. ಸತ್ಯ ಚಾರ, ನೀತಿ, ಧರ್ಮಗಳನ್ನು ಪಾಲಿಸುವಲ್ಲಿ ಸದಾ ದಕ್ಷತೆಯುಳ್ಳವರಾಗಿದ್ದರು. ಇವರ ಧರ್ಮಪತ್ನಿ ರುದ್ರಮ್ಮನವರು ದಾಪೂರದ ಶ್ರೀ ನಂದೀಮಠದವರು. ಪತಿಗೆ ಅನುರೂಪಿಯಾಗಿ, ಅನುಗುಣೆಯಾಗಿ, ಅನುಕೂಲೆಯಾಗಿ ನಡೆಯುವ ಆಚಾರ, ವಿಚಾರ, ವ್ಯವಹಾರ,–ಎಲ್ಲ ವಿಷಯದಲ್ಲಿಯೂ ಪತಿಯ ಇಚ್ಛೆಯೇ ತನ್ನ ಇಚ್ಛೆಯೆಂದು ಬಗೆದ ಸಾಧ್ವಿಯು ! ಯೊಡನೆ ಸಹಕರಿಸಿ ತನ್ನ ವ್ಯಕ್ತಿತ್ವವನ್ನೇ ಆತನಲ್ಲಿ ಸಮರಸಗೊಳಿಸಿ, ಧನ್ಯತೆಯ ಬಾಳನ್ನು ಬಾಳಿದರು ರುದ್ರಮ್ಮನವರು.

ಶ್ರೀ ಶಿವಬಸವ ಮಹಾಸ್ವಾಮಿಗಳ ಜನನ ಮತ್ತು ಬಾಲ್ಯ

ಶ್ರೀ ಅಡಿವೆಯ್ಯನವರ ಪವಿತ್ರ ಜೀವನದ ಜೊತೆಗೆ ಶ್ರೀಮತಿ ರುದ್ರಮ್ಮನವರ ಧನ್ಯತೆಯ ಬಾಳು ಸಮರಸಗೊ ಅವರೀರ್ವರ ತಪದ ಫಲವೆಂಬಂತೆ ಗದಿಗೆಮ್ಮ, ಬಸವಲಿಂಗಯ್ಯ, ನೀಲಮ್ಮ, ಎಂಬ ಮೂವರು ಮಕ್ಕಳ ನಂತರ ಕೊನೆ ವರಾಗಿ ನಮ್ಮ ಈ ಪ್ರಸಾದ ಮೂರ್ತಿ ಶ್ರೀ ಶಿವಬಸವ ಮಹಾಸ್ವಾಮಿಗಳು ದಿನಾಂಕ ೮-೧೨-೧೯೦೬ ನೆಯ ಸೂರ್ಯೋದಯ ಸೂರ್ಯಪ್ರಕಾಶವನ್ನು ಅಂತರ್ಬಾಹ್ಯದಲ್ಲಿ ಮೈಗೂಡಿಸಿಕೊಂಡು ಮನಗೂಡಿಸಿಕೊಂಡು ಜನ್ಮವೆತ್ತಿದರು. ಅಕ್ಕರೆಯೇ ಮಗುವಾಗಿ ಲೀಲೆಯಾಡಿದಂತೆ ಆರೇಳು ತಿಂಗಳು ಕಳೆಯುತ್ತಿರಲು, ಇವರ ತಂದೆ ಶ್ರೀ ಅಡಿವೆಯ್ಯನವರು ಈಶ್ವರೀ ಸಂಕಲ್ಪ ನುಗುಣವಾಗಿ ಶಿವಾಧೀನರಾದರು. ಮಕ್ಕಳೆಲ್ಲರ ಲಾಲನೆ, ಪಾಲನೆ, ಪೋಷಣೆಯ ಭಾರವೆಲ್ಲ ತಾಯಿ ರುದ್ರಮ್ಮನ ಮೇಲೆಯೇ ಬಿದ್ದಿತು.

ಇಂತು ಕೆಲಕಾಲ ಕಳೆಯುತ್ತಿರಲು, ಶ್ರೀಮದಥಣೀ ಮುರಘೇಂದ್ರ ಶಿವಯೋಗಿಗಳು ಒಂದು ಕಾರ್ಯ ನಿಮಿತ್ತ ಒಮ್ಮೆ ಸವದತ್ತಿಗೆ ಬರಬೇಕಾಗಿತ್ತು. ದಾರಿಯಲ್ಲಿ ಹತ್ತುವ ಊರುಗಳ ಭಕ್ತರ ಬಿನ್ನಹವನ್ನು ಮನ್ನಿಸುತ್ತ ಅವರ ಮನೆಗಳ ತಮ್ಮ ಪಾದಸ್ಪರ್ಶದಿಂದ ಪವಿತ್ರಗೊಳಿಸುತ್ತ, ಅವರನ್ನು ದರ್ಶನ ಪ್ರಸಾದಾಶೀರ್ವಾದಗಳಿಂದ ಪುನೀತಗೊಳಿಸಿ ಅನುಗ್ರಹಿಸು ಸವದತ್ತಿಯೆಡೆಗೆ ಮಾರ್ಗವನ್ನು ಕ್ರಮಿಸುತ್ತಿದ್ದರು. ಶ್ರೀ ಶಿವಯೋಗಿಗಳು ಸವದತ್ತಿಗೆ ಹೊರಟ ಮಾರ್ಗದಲ್ಲಿಯೇ ಶಿವನ ಗನುಸರಿಸಿ, ಶ್ರೀ ಶಿವಬಸವಮಹಾಸ್ವಾಮಿಗಳ ಶಿಶುಲೀಲೆಗೆ ರಂಗಭೂಮಿಯಾದ ಹಿರೇಕೊಪ್ಪವೂ ಹತ್ತಿತು.

ಅಲ್ಲಿ ಸದ್ಧರ್ಮಿಯೂ, ಸದಾಚಾರಿಯೂ, ಶಿವಲಿಂಗ ಪೂಜಾನಿಷ್ಠನೂ, ಗುರುಜಂಗಮ ಭಕ್ತಿಪರಾಯಣನೂ ಶ್ರೀ ತೋಡಕರ ಬಾಳಪ್ಪನೆಂಬ ಭಕ್ತನೋರ್ವನು, ಶ್ರೀಮದಥಣಿ ಶಿವಯೋಗಿಗಳು ತಮ್ಮಲ್ಲಿಗೆ ದಯಮಾಡಿಸಿದೊಡನೆ ಅವರಿದ್ದೆಡೆಗೆ ಧಾವಿಸಿ, ಅವರ ಅಡಿಗಳಿಗೆರಗಿ, ತಮ್ಮ ಮನೆಗೆ ದಯಮಾಡಿಸಬೇಕೆಂದೂ, ತಮಗೂ, ತಮ್ಮ ಮನೆಯವರಿ ರಿಗೂ ದರ್ಶನ ಪ್ರಸಾದಾಶೀರ್ವಾದಗಳನ್ನು ಕರುಣಿಸಿ, ತಮ್ಮೆಲ್ಲರನ್ನು ಉದ್ಧರಿಸಬೇಕೆಂದೂ ಬಿನ್ನವಿಸಿಕೊಂಡ ಅದರಂತೆಯೇ ತನ್ನ ಹಳ್ಳಿಗೆ ನೆರೆಹೊರೆ ಹಳ್ಳಿಗಳಾದ ಚಿಕ್ಕೊಪ್ಪ, ಬಾಗೋಜಿಕೊಪ್ಪಗಳಲ್ಲಿಯ, ಅದರಂತೆಯೇ ತನ್ನ ಹಿರೇಕೊಪ್ಪದಲ್ಲಿಯ ಎಲ್ಲ ಜಂಗಮ ಮೂರ್ತಿಗಳಿಗೂ, ಸ್ವಾಮಿಗಳಿಗೂ, ಬಿನ್ನಹವನ್ನು ಮಾಡಿಕೊಂಡನು. ಪರಿಣಾಮವ ಶಿವಯೋಗಿಭಕ್ತಿಪರಾಯಣೆಯಾದ ರುದ್ರಮ್ಮನವರೂ ಶ್ರೀ ತೋಡಕರ ಬಾಳಪ್ಪನವರ ಮನೆಗೆ ತಮ್ಮ ಶಿಶು ಶಿವಬಸವನ ಎತ್ತಿಕೊಂಡು ಈ ಸಂದರ್ಭದಲ್ಲಿ ಬಂದಿದ್ದರು. ಆಗ ಅಲ್ಲಿ ಕೂಡಿದ ಜಂಗಮ ಮೂರ್ತಿಗಳೆಲ್ಲರೂ ತುತ್ತಿಗೊಮ್ಮೆ ಶಿವಶರಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಬೇಕೆಂಬ ತತ್ವದಂತೆ ಹರನಾಮದ ಸಂಭ್ರಮಘೋಷದೊಡನೆ, ಆದ್ಯರ ವಚನಗಳ ಅಮೃತ ನುಡಿಗಳೊಡನೆ ಪ್ರಸಾದವನ್ನು ಸೇವಿಸುತ್ತಿದ್ದರು. ಶ್ರೀ ಮುರಗೇಂದ್ರ ಶಿವಯೋಗಿಗಳು ಲಿಂಗಪ್ರಾಣವೋ ಪ್ರಾಣಲಿಂಗವೋ ಎಂಬ ಅಭೇದ ಅನುಸಂಧಾನದಲ್ಲಿ, ಲಿಂಗಾಂಗ ಸಾಮರಸ್ಯದಲ್ಲಿ ಅಂತರ್ಮುಖಿಗಳಾಗಿ ಶಿವಯೋಗ ಸಮಾಧಿಗೆ ಸಂದಿದ್ದರು. ರುದ್ರಮ್ಮನವರು ಪ್ರಸಾದ ಪರಿಪಾಕ ಸಿದ್ಧತೆಯಲ್ಲಿ ತೊಡಗಿದ್ದರು. ಅತ್ತ ಅಡಿಗೆಯ ವ್ಯವಸ್ಥೆಯಲ್ಲಿ ರುದ್ರಮ್ಮನವರ ಲಕ್ಷ್ಯವು ವೇಧಿಸಿರಲು, ಇತ್ತ ಬಗಲೊಳಗಿನ ಮಗುವು ಅವಳರಿಯದಂತೆ ಮೆಲ್ಲನೇ ಕೆಳಗಿಳಿದು ಅಡ್ಡಾಡುತ್ತ ಅತ್ತಿತ್ತ ಟಕಮಕ ನೋಡುತ್ತ ಅಂಬೇಗಾಲಿಕ್ಕಿ ಹರಿದಾಡುತ್ತ ಶ್ರೀ ಶಿವಯೋಗಿಗಳು ಶಿವಪೂಜಾಮಗ್ನರಾಗಿ ಕುಳಿತು ಏಕಾಂತ ಪ್ರಶಾಂತವಾದ ಆ ಶಿವಪೂಜಾ ನಿಲಯವನ್ನು ಮೆಲ್ಲನೆ ಪ್ರವೇಶಿಸಿತು. ತಮ್ಮ ತಮ್ಮ ಕಾರ್ಯಗಳ ಹೊಣೆಗಳನ್ನು ನಿರ್ವಹಿಸುವಲ್ಲಿ ಮಗ್ನರಾದವರಲ್ಲಿ ಯಾರ ದೃಷ್ಟಿಯೂ ಈ ಕೂಸಿನ ಕಡೆಗೆ ಹರಿದಿರಲಿಲ್ಲ. ಶ್ರೀ ಶಿವಯೋಗಿಗಳ ಮುಂದಿದ್ದ ಲಿಂಗಮಜ್ಜನ ಪಾತ್ರೆ, ತಂಬಿಗೆ, ಮಿಳ್ಳಿ, ವಿಭೂತಿ, ಗಂಧ, ಧೂಪ, ದೀಪ, ಆರತಿ, ಧೂಪಾರತಿ, ಬಿಲ್ವದಳ, ಅಕ್ಷತೆ, ಗಂಟೆ ಮೊದಲಾದ ಪೂಜೋಪಕರಣಗಳ ಕಡೆಗೆ ಕುತೂಹಲಪೂರಿತ ದೃಷ್ಟಿಯಿಂದ ಹರಿಯಿಸಿ, ಇವುಗಳ ಒಂದೊಂದರ ಪ್ರಯೋಗ ಪರೀಕ್ಷೆಗಳ ನಿಮಿತ್ತವಾಗಿ ಮೊದಲು ಗಂಟೆಯ ಕಡೆಗೆ ಕೈ ಚಾಚಿತು. ಆ ಗಂಟೆಯ ಟಂಟಣಿಯ ನಾದಕ್ಕೆ ಮೋಹಿತವಾಗಿ ಮಗುವು ಅದನ್ನು ಕೈಯಿಂದೆತ್ತಿ ಅಲುಗಾಡಿಸಿತು. ಪರಿಣಾಮವಾಗಿ ಅದರ ನಾದವು ಹೆಚ್ಚು ಹೆಚ್ಚಾಗಿ ಸುತ್ತಲೂ ಹರಡಲು, ಅದನ್ನು ಕೇಳಿದ ಸೇವಕರು ಧಾವಿಸಿ ಬಂದರು. ಅಂತರ್ಮುಖಿಗಳಾಗಿ ಶಿವಧ್ಯಾನ ಯೋಗಸಮಾಧಿಗೆ ಸಂದಿದ್ದ ಶ್ರೀ ಶಿವಯೋಗಿಗಳು, ತಮ್ಮ ಪೂಜಾಸಮಾಪ್ತಿಯ ನಂತರ ಈ ಗಂಟೆಯ ಸದ್ದಿನಿಂದ ಬಹಿರ್ಮುಖರಾಗಿ, ಮೆಲ್ಲನೆ ಕಣ್ದೆರೆದು, ಕೈಯಲ್ಲಿದ್ದ ಗಂಟೆಯನ್ನು ಅಲುಗಿಸುತ್ತ ಆಡುತ್ತ ಮುಂದೆಯೇ ಕುಳಿತಿದ್ದ ಈ ಮಗುವನ್ನು, ಕರುಣಾಮಯ ಕೃಪಾಪೂರ್ಣಸ್ನಿಗ್ಧದೃಷ್ಟಿಯಿಂದ ನೋಡಿದರು. ಅತ್ತಿತ್ತ ದೃಷ್ಟಿ ಹರಿಯಿಸಿ " ಈ ಮಗು ಯಾರದೆಂದು ಅದೇ ಸ್ನಿಗ್ಧಮುಗ್ಧಭಾವದಿಂದ ಕೇಳಿದರು. "

ಲಿಂಗಪೂಜಾಗೃಹದಿಂದ ಹೊರಬರುವ ಗಂಟೆಯ ಧ್ವನಿಕೇಳಿ ಉಳಿದವರಂತೆ ತಾನು ಪೂಜಾಗೃಹದ್ವಾರದತ್ತ ಧಾವಿಸಿ ಬಂದ ರುದ್ರಮ್ಮನವರು, ಬಾಗಿಲ ಸಂದಿಯೊಳಗಿಂದ ಒಳಗೆ ದೃಷ್ಟಿ ಹರಿಯಿಸಿದರು. ಈ ಮಗು ಯಾರದೆಂಬ ಶ್ರೀಶಿವಯೋಗಿಗಳ ಪ್ರಶ್ನೆಗೆ ಭಯಚಕಿತರಾದರು. ಅಷ್ಟರಲ್ಲಿ ಆಮಂತ್ರಣಕ್ಕೆ ಪ್ರಾರ್ಥಿಸಿಕೊಂಡಿದ್ದ ಮನೆಯೊಡೆಯ ಶ್ರೀ. ತೋಡಕರ ಬಾಳಪ್ಪನವರನ್ನು ಕರೆದುಕೊಂಡು ಬರಬೇಕೆಂದು ಬಳಿಯಲ್ಲಿ ನಿಂತವರಿಗೆ ಶ್ರೀ ಶಿವಯೋಗಿಗಳು ತಿಳಿಸಲು, ಅವರು ಬಂದು ಇದು " ರುದ್ರಮ್ಮನವರ ಮಗು " ಎಂದು ಅವರ ಬಗೆಗೆ ಎಲ್ಲವನ್ನು ಅರಿಕೆಮಾಡಿಕೊಂಡರು. ಭಯಚಕಿತಕೊಂಡು ಎದೆಗುದಿಯಿಂದ ಮೊದಲೇ ಕಂಪಿಸುತ್ತಿದ್ದ ರುದ್ರಮ್ಮನವರು,"ಶ್ರೀ ಶಿವಯೋಗಿಗಳು ತಮ್ಮ ಪೂಜಾ ಸಮಯದಲ್ಲಿ ಈ ಮಗುವು ಗಂಟೆ ಬಾರಿಸಿ ತಮ್ಮ ಧ್ಯಾನ ಸಮಾಧಿಗೆ ಭಂಗತಂದನೆಂಬ ಭಾವನೆಯಿಂದ ಸಿಟ್ಟಾಗಿರಬೇಕೆಂದು ಭಾವಿಸಿ, ಇನ್ನೂ ಕಾತರರಾದರು." ಏನೂ ಅರಿಯದ ಈ ಮುಗ್ಧ ಮಗುವು ಮಾಡಿದ ತಪ್ಪನ್ನು ದಯವಿಟ್ಟು ಕ್ಷಮಿಸಬೇಕೆಂದು ಶ್ರೀ ಶಿವಯೋಗಿಗಳ ಪಾದಗಳೆಡೆಯಲ್ಲಿ ವಿನೀತೆಯಾಗಿ ಪ್ರಾರ್ಥಿಸುವದೊಂದೇ ಒಂದು, ಈ ಸಮಸ್ಯೆಗೆ ಪರಿಹಾರವೆಂದು ಭಾವಿಸಿ, ಪೂಜಾಗೃಹವನ್ನು ಪ್ರವೇಶಿಸಿ, ಶ್ರೀ ಶಿವಯೋಗಿಗಳ ಅಡಿಗಳಿಗೆರಗಿ ಮೌನವಾಗಿ ಕಂಪಿಸುತ್ತ ನಿಂತುಕೊಂಡರು. ಅವರ ಮಾತಿಗಿಂತ ಈ ಅವರ ಮೌನವೇ ಸ್ಫುಟವಾಗಿ, ದಿಟವಾಗಿ ಇಲ್ಲಿಯ ವರೆಗೆ ಘಟಿಸಿದ ಎಲ್ಲ ಘಟನೆಗಳಿಗೆ ವ್ಯಾಖ್ಯೆ ಬರೆಯಿತು.

ಶ್ರೀ ಶಿವಯೋಗಿಗಳು ಮುಗುಳುನಗೆ ನಗುತ್ತ, ಮಗುವಿನ ಮೈಮೇಲೆ ಮಮತೆಯಿಂದ ಕೈಯಾಡಿಸುತ್ತ, ತಾವೂ ಕ್ಷಣಹೊತ್ತು ಬಾಲಕರಾಗಿ, ಬಾಲಲೀಲೆಯಲ್ಲಿ ಸಮರಸರಾಗಲು ರುದ್ರಮ್ಮನವರಿಗೆ ನಸು ಧೈರ್ಯ ಬಂದಿತು.

" ಈ ಮಗುವು ಪೂಜಾಪ್ರಸಾದ ಸಮಯದಲ್ಲಿ ಇಲ್ಲಿಗೆ ಬಂದಿರುವದರಿಂದ 'ಪ್ರಸಾದ' ಜೀವನದಲ್ಲಿಯೇ ಯಶೋವಂತ ನಾಗುವನು. ಪ್ರಸಾದಿಸ್ಥಲದಲ್ಲಿ ನಿಂತು, ಕೆಳಗಿನ ಭಕ್ತಮಹೇಶರನ್ನೂ ಮೇಲಣ ಪ್ರಾಣಲಿಂಗಿ ಶರಣರನ್ನೂ ತನ್ನೆಡೆಗೆ ಸೆಳೆದುಕೊಂಡು, ಪ್ರಜ್ಞಾನಬ್ರಹ್ಮನ ಸಾಕ್ಷಾತ್ಕಾರಕ್ಕಾಗಿ ನಿರಂತರವಾಗಿ ತಪಸ್ಸಿನಿಂದ ಸಹಸ್ರ ಸಹಸ್ರ ಜೀವಿಗಳಿಗೆ ಪ್ರಸಾದವನ್ನು ಕರುಣಿಸಿ ಪೂರ್ಣ ಪ್ರಕಾಶದಲ್ಲಿ ಅವರೆಲ್ಲರ ಬಾಳು ತೊಳಗಿ ಬೆಳಗಿ ಸಫಲವಪ್ಪಂತೆ ಮಹಾ ಮಣಿಹವನ್ನು ಈತನು ಪೂರೈಸುವನು. ಆ ಪ್ರಸಾದದ ಪವಿತ್ರ ಪ್ರಸರಣೆ-ವಿತರಣೆಯಲ್ಲಿಯೇ ಪರಮಾತ್ಮನನ್ನು ಕಾಣುವನು. ಈ ಮಗುವನ್ನು ನಮಗೆ ಕೊಡಲು ನಿನಗೆ ಒಪ್ಪಿಗೆಯೇನಮ್ಮಾ? " ಎಂದು ಶ್ರೀ ಶಿವಯೋಗಿಗಳು ರುದ್ರಮ್ಮನವರತ್ತ ನೋಡಿದರು.

"ಶ್ರೀ ಶಿವನ ಸತ್ಯ ಸಂಕಲ್ಪವೇ ಶ್ರೀ ಶಿವಯೋಗಿಯ ಮುಖಾಂತರ ಈ ಬಗೆಯ ಶಿಶುವಿನ ಭವಿಷ್ಯ ಜೀವನದ ಶುಭೋದಯದ ಅಭಯವಾಣಿಯಾಗಿ ಬಂದಿರುವದೆಂದು ನೆರೆನಂಬಿದ ರುದ್ರಮ್ಮನವರು,"ಶ್ರೀ ಶಿವಯೋಗಿಗಳ ಈ ಪ್ರಶ್ನೆಗೆ ಏನೊಂದನ್ನೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಯಾಡದೆ "ಆಗಲಿ ಅಪ್ಪಾ" ಎಂದು ನಿರ್ಧಾರದ ಒಪ್ಪಿಗೆಯಲ್ಲಿ ಅವರಡಿಗಳಿಗೆ ನೆಲಮುಟ್ಟಿ ನಮಸ್ಕರಿಸಿದಳು. ಶ್ರೀ ಶಿವಯೋಗಿಗಳು ಆ ಕಂದನನ್ನು ಕರುಣೆಯಿಂದೆತ್ತಿ, ನಮಸ್ಕರಿಸಿ ನಿಂತಿದ್ದ ತಾಯಿ ರುದ್ರಮ್ಮನವರ ಉಡಿಯಲ್ಲಿ ಹಾಕಿ... ಹೀಗೆ ಆಡಾಡುತ್ತ ಅಂದು ತನ್ನ ಶೈಶವದಲ್ಲಿ ಶ್ರೀ ಶಿವಯೋಗಿಯ ಅಡಿಗಳ ಕಂಡ ಈ ಶಿಶುವಿಗೆ ಅಂದಿನ ಆ ಕರುಣೆಯ... ಕೃಪೆಯೂ, ಅಭಯವಾಣಿಯೂ ಇಂದಿಗೂ ಭದ್ರರಕ್ಷೆಯಾಗಿ ನಿಂತಿವೆ.

ದಿನಗಳೆದಂತೆ ತಾಯಿ ರುದ್ರಮ್ಮನವರ ವಿಚಾರಸರಣಿಯು ಬೇರೆಯೇ ಆಯಿತು. ತಮಗಿರುವ ಇಬ್ಬರು ಗಂ... ಮಕ್ಕಳಲ್ಲಿ ಹಿರಿಯವರಾದ ಬಸವಲಿಂಗಯ್ಯನವರು ಅಶಕ್ತ ಸೂಕ್ಷ್ಮ ಪ್ರಕೃತಿಯವರಾಗಿದ್ದರು. ಕಿರಿಯವರಾದ ನಮ್ಮ ಚರಿತ್ರಯೋಗಿ ಶ್ರೀ ಶಿವಬಸವನು, ಶರೀರ ಸೌಷ್ಠವ, ಸಾಮರ್ಥ್ಯ, ಸದ್ಗುಣತೆಗಳಿಂದ ಜನಮನವನ್ನು ಸೂರೆಗೊಂಡಂತೆ ತಾಯಿ... ಮನದಲ್ಲಿ, ತಮ್ಮ ಮತ್ತು ತಮ್ಮ ಮನೆತನದ ಉಜ್ವಲ ಭವಿಷ್ಯದ ಬಗೆಗೆ ಒಂದು ಭರವಸೆಯನ್ನು ಹುಟ್ಟಿಸಿದ್ದನು. ಇದ... ತಾಯಿ ರುದ್ರಮ್ಮನವರು, ಬಸವಲಿಂಗಯ್ಯನವರು ಹಿರಿಯವರಾಗಿದ್ದರೂ, ಅವರಿಗಿಂತ ಹೆಚ್ಚಾಗಿ ಶ್ರೀ ಶಿವಬಸವ ಮಹಾಸ್ವಾ... ಗಳನ್ನೇ ನೆರೆ ನಂಬಿದ್ದರು. ಆದರೇನು ? ಬರುವ ಕಾಲನು ನಮ್ಮ ಆಶೆ, ಭರವಸೆ, ನಂಬಿಗೆಗಳ ಕಡೆಗೆ ಲಕ್ಷ್ಯ ಪೂರೈಸುವ... ಶ್ರೀ ಶಿವಬಸವ ಮಹಾಸ್ವಾಮಿಗಳು ಆರೇಳು ವರ್ಷದವರಾಗುವ ಹೊತ್ತಿಗೆ ರುದ್ರಮ್ಮನವರು ಶಿವಾಧೀನರಾದರು. ಬಸವಲಿಂ... ಯ್ಯನವರು ಅಶಕ್ತ ಪ್ರಕೃತಿಯವರಿದ್ದುದರಿಂದ ಯಾವದೇ ಕಷ್ಟದ ಹೋರೆ ಮಾಡಲು ಅವರಿಗೆ ಸಾಧ್ಯವಿರಲಿಲ್ಲ. ತಮ್ಮ ಮೇಲೆ ತಮ್ಮ ಮನೆತನದ ಕುಟುಂಬದ ಎಲ್ಲ ಹೊರೆಯನ್ನೂ, ಹೊಣೆಯನ್ನೂ ಹೇರಲು ಒಳಗೊಳಗೇ ಚಡಪಡಿಸಿದರು. ಆದರೇನು ? ಅನಿವಾರ್ಯ ಪರಿಸ್ಥಿತಿಯ ಮೂಲಕ ಸುಮ್ಮನಿರಬೇಕಾಯಿತು. ತಮ್ಮನೋ ಪ್ರಪಂಚದ ಹೊಣೆಯನ್ನು ನಿರ್ವ... ಸುವ ದೃಷ್ಟಿಯಿಂದ

"ಕರದಿ ಕಪ್ಪರವುಂಟು, ಹಿರಿದೊಂದು ನಾಡುಂಟು.
ಹರನೆಂಬ ದೈವನಮಗುಂಟು ತಿರಿವರಿಂ
ಸಿರಿವಂತರಾರಿಲ್ಲ ಸರ್ವಜ್ಞ"

ಎಂಬುದನ್ನು ಸ್ಮರಿಸಿ ಕೈಯಲ್ಲಿ ಭಿಕ್ಷೆಯ ಕಾಯಕಕ್ಕಾಗಿ ಜೋಳಿಗೆ ಹಿಡಿದರು. ಅಂದು ತಮ್ಮ ಕುಟುಂಬದ ಪಾಲನೆ, ಪೋಷ... ರಕ್ಷಣೆಯ ಸಲುವಾಗಿ ಹಿಡಿದ ಆ ಜೋಳಿಗೆಯು, ಜ್ಞಾನ ಪಿಪಾಸುಗಳು, ಜ್ಞಾನೋಪಾಸಕರೂ ಆದ ಸಹಸ್ರ ಸಂಖ್ಯೆಯ ವಿದ್ಯಾ... ರ್ಥಿಗಳ ಉಜ್ವಲ ಭವಿಷ್ಯವನ್ನು ರೂಪಿಸುವಲ್ಲಿ ಕಾರಣೀಭೂತವಾಗಿರುವ ಪ್ರಸಾದ ವ್ಯವಸ್ಥೆಗಾಗಿ, ಪ್ರಸಾದಾನುಗ್ರಹಕ್ಕಾ... ಇನ್ನೂ ಅದರ ಕೈಯಲ್ಲಿ ಜೋತಾಡುತ್ತಿದೆ; ನೇತಾಡುತ್ತಿದೆ. ಹಳ್ಳಿ ಹಳ್ಳಿ, ಹೊಲ ಹೊಲಗಳಲ್ಲಿ ದವಸಧಾನ್ಯ. ಹಣ್ಣು ಹಂ... ಲಾದಿಗಳ ಗರ್ಭದಲ್ಲಿ ವಿರಾಡ್ರೂಪಿಣಿಯಾಗಿ ವ್ಯಾಪಿಸಿ ನಿಂತ ಅನ್ನಪೂರ್ಣೆಯ ಮಹಾ ಕೃಪೆಯನ್ನೇ ನಿತ್ಯ ಪ್ರಸಾದರೂಪದ... ತಮ್ಮ ಜೋಳಿಗೆಯಲ್ಲಿ ಅಳವಡಿಸಿ ತಂದು, ವಸುಧೈವ ಕುಟುಂಬಿಗಳಾದ ತಮ್ಮನ್ನು ಆಶ್ರಯಿಸಿದ ಅಸಂಖ್ಯ ಸಹಸ್ರ ಬಡ ವಿದ್ಯಾ... ರ್ಥಿಗಳಿಗೆ ಇಂದಿಗೂ ಈ ಮಹಾಸ್ವಾಮಿಗಳು ಅನುಗ್ರಹಿಸುತ್ತಿರುವರು. ಆದುದರಿಂದಲೇ ಅಂದು ಬಾಲ್ಯದಲ್ಲಿ ತಮ್ಮ ಕುಟುಂಬ... ಪೋಷಣೆಗಾಗಿ ಹಿಡಿದ ಅವರ ಆ ಜೋಳಿಗೆಯು, ಆ ಭಿಕ್ಷಾಪಾತ್ರೆಯು–ವಿದ್ಯಾರ್ಥಿಗಳ ಪೀಳಿಗೆಯ ಏಳಿಗೆಗಾಗಿ ಪ್ರಸಾದವ... ಅನುಗ್ರಹಿಸುವ ಅಕ್ಷಯ ಪಾತ್ರೆಯಾಗಿದೆಯಿಂದಿಗೂ ಕೂಡ !

ಬಾಲ್ಯದಲ್ಲಿಯ ಅದರ ಅನಿವಾರ್ಯವಾದ ಈ ಭಿಕ್ಷಾ ಕಾರ್ಯವು ತಮ್ಮ ಕುಟುಂಬದ ತಾತ್ಪೂರ್ತಿಕ ಪೋಷಣೆ... ಒಂದು ಸಾಧನವಾಯಿತು. ಪ್ರತಿದಿನ ಪ್ರಾತರ್ವಿಧಿಗಳನ್ನು ಮುಗಿಸಿ, ಸ್ನಾನ ಶಿವಪೂಜಾ ವ್ರತಗಳನ್ನು ಪೂರೈಸಿ, ಸೂರ್ಯೋ... ದಯಕ್ಕೆ ಸರಿಯಾಗಿ ತಮ್ಮ ಜೋಳಿಗೆಯೊಡನೆ ಭಿಕ್ಷಾ ಕಾರ್ಯಕ್ಕಾಗಿ ಹೊರಡುತ್ತಿದ್ದರು. ತಮ್ಮ ಕುಟುಂಬದ ಪೋಷಣೆ... ಅಗತ್ಯವಾಗಿರುವಷ್ಟನ್ನೇ ಭಿಕ್ಷಾಕಾಯಕದಿಂದ ಸಂಗ್ರಹಿಸಿ, ಮರಳಿ ಬರುತ್ತಿದ್ದರು. ಈ ರೀತಿ ಕೆಲ ಕಾಲ ಗತಿಸುತ್ತಿರಲು, ಅವ... ಇಬ್ಬರು ಅಕ್ಕಂದಿರು ದೊಡ್ಡವರಾಗಿ ಮದುವೆಯಾಗಿ ತಮ್ಮ ತಮ್ಮ ಪತಿಗಳ ಗೃಹಕ್ಕೆ ಹೋದರು. ಮನೆಯಲ್ಲಿ ಈರ್ವರೇ ಅಣ್ಣ... ತಮ್ಮಂದಿರು ಉಳಿದರು. ಅಣ್ಣನೋ ಅಶಕ್ತನಿದ್ದುದರಿಂದ ಶಾಲೆಗೆ ಹೋಗಿ ಕಲಿಯಲು ಸಾಧ್ಯವಾಗಲಿಲ್ಲ. ತಮ್ಮನೋ ಕಲಿಯ... ಬೇಕೆಂದು ಮನಸ್ಸಿದ್ದರೂ ತಮ್ಮ ಮನೆತನದ ಪ್ರಪಂಚದ ಹೊಣೆಯ ಹೊರೆಯನ್ನು, ನಿರ್ವಹಿಸುವದರಲ್ಲಿಯೇ ಆತನ ದಿನ... ಬಹುಭಾಗವೂ, ಮನಸ್ಸಿನ ಉತ್ಸಾಹ ಶಕ್ತಿಯ ಬಹು ಪ್ರಮಾಣವೂ ವೆಚ್ಚವಾಗುತ್ತಿದ್ದುದರಿಂದ ಅವನಿಗೂ ಶಾಲೆಗೆ ಹೋಗಿ... ಹೆಚ್ಚಾಗಿ ಶಿಕ್ಷಣ ಪಡೆಯಲು ಸಾಧ್ಯವೇ ಆಗಲಿಲ್ಲ.

ಇದೇ ಕಾಲಕ್ಕೆ ನಾಗನೂರ ರುದ್ರಾಕ್ಷಿಮಠಕ್ಕೆ ಆರನೆಯವರಾಗಿ ಉತ್ತರಾಧಿಕಾರಕ್ಕೆ ಬಂದ ಶ್ರೀ ವೀರಭದ್ರ ಮಹಾ... ಸ್ವಾಮಿಗಳು ತಮ್ಮ ಪವಿತ್ರ ಮಂಗಲ ಜೀವನದ ಶಿವಲೀಲೆಯನ್ನು ಸಫಲವಪ್ಪಂತೆ ಸಾರ್ಥಕವಪ್ಪಂತೆ ನಟಿಸಿ, ಈ ಜಗದ್ರಂಗದಿಂ...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರಿದು ಶಿವೈಕ್ಯರಾಗಿದ್ದರು. ತೆರವಾದ ಈ ಪಟ್ಟಕ್ಕೆ ನಾಗನೂರ ದೈವದವರೆಲ್ಲ ಕೂಡಿ ಓರ್ವ ಯೋಗ್ಯ ಉತ್ತರಾಧಿಕಾರಿಯನ್ನು ಅರಿಸುತ್ತಿದ್ದರು. ಈ ಸಂದರ್ಭದಲ್ಲಿಯೇ, ಸದ್ಯದ ಮಹಾಸ್ವಾಮಿಗಳ ಪೂರ್ವಜರಾದ ನಾಗನೂರಿನ ಗುರುಪಾದಯ್ಯನವರು ಶೀಲಯ್ಯನವರಮಠ (ಅಥವಾ ಮೂಗಡ್ಲಿಮಠ) ಎಂಬುವರು ಕರ್ಮಧರ್ಮಸುಯೋಗದಿಂದ ಹಿರೇಕೊಪ್ಪಕ್ಕೆ ಹೋಗಿದ್ದರು. ತಮ್ಮ ಸಂಬಂಧಿಕರಾಗಿಯೂ, ಸಂಬಂಧವಿಲ್ಲದಂತೆ ಅಸಹಾಯ್ಯ ವಿಷಮ ಪರಿಸ್ಥಿತಿಯಲ್ಲಿ ತಮ್ಮ ಜೀವನವನ್ನು ತಳ್ಳುತ್ತ, ಎಲ್ಲವೂ ಆ ಪರಮಾತ್ಮನ ಪ್ರಸಾದವೆಂದು ಬಗೆದು, ಸಾವಧಾನ ಚಿತ್ತರಾಗಿ, ಸಮಾಧಾನ ಚಿತ್ತರಾಗಿ ಶಿವಯೋಗಾನುಭವಕ್ಕೆ ಪೀಠಿಕೆಯನ್ನು ಹಾಕುತ್ತಿದ್ದ ಆ ಅಣ್ಣತಮ್ಮಂದಿರೀರ್ವರನ್ನು ಗುರುಪಾದಯ್ಯನವರು ಕಂಡರು. " ಮನೆ ನೋಡಾ, ಬಡವರು ಮನ ನೋಡಾ, ಘನಮನಸಂಪನ್ನರು " ಎಂಬ ಶಿವಾನುಭವಕ್ಕೆ ಇವರು ಜೀವಂತ ಸಾಕ್ಷಿಯಾಗಿದ್ದರು. ನಮ್ಮ ಈ ಚರಿತ್ರ ಯೋಗಿಯ ಪರಿಶುದ್ಧ ಆಚಾರ, ಪವಿತ್ರ ಉಚ್ಚ ವಿಚಾರ, ವಕ್ರವಿಲ್ಲದ ಸರಳವಾದ ಸೌಜನ್ಯಪೂರ್ಣವಾದ ನಡೆ, ಒಳಹೊರಗೂ ವಂಚನೆಯಿಲ್ಲದ ತೆರೆಮರೆಯಿಲ್ಲದ ನುಡಿ, ಕಾಯಕನಿಷ್ಠೆ, ಶಿವನಲ್ಲಿ ಅಚಲ ಶ್ರದ್ಧೆ, ಅಂಗ ಸೌಷ್ಠವದ ಜೊತೆಗೆ ಅಂಗಸಾಮರ್ಥ್ಯ, ಬ್ರಹ್ಮಚರ್ಯದ ಉಜ್ವಲ ತೇಜ, ಆಕರ್ಷಕ ಶುಭ ಲಕ್ಷಣ-ಇವೆಲ್ಲವೂ ಶ್ರೀ ಗುರುಪಾದಯ್ಯನವರ ಮನಸ್ಸನ್ನು ಪೂರ್ತಿಯಾಗಿ ಸೆಳೆದವು. ಅಲ್ಲದೆ ಭವಿಷ್ಯವಾದಿಗಳಾದ ಅವರು ಈ ಆರೇಳು ವರುಷದ ಶುಭ ಲಕ್ಷಣಾನ್ವಿತವಾದ ಮರಿಯನ್ನು ತಮ್ಮೂರ ರುದ್ರಾಕ್ಷಿಮಠದ ತೆರವಾದ ಪಟ್ಟಕ್ಕೆ ಉತ್ತರಾಧಿಕಾರಿಯೆಂದು ತರುವ ಏರ್ಪಾಡು ಮಾಡಿದರೆ, ಆ ಮಠದ, ಆದರಂತೆಯೇ ಊರ ಭವಿಷ್ಯವು ಹೇಗಾದೀತೆಂದು ತರ್ಕಿಸಿದರು; ಗುಣಿಸಿದರು; ಲೆಕ್ಕಹಾಕಿದರು. ಹೇಗೆ ನೋಡಿದರೂ, ಎತ್ತ ನೋಡಿದರೂ ಈ ಮರಿಯನ್ನು ಆ ಪಟ್ಟಕ್ಕೆ ತಂದರೆ ಆ ಗುರುಪಾದಯ್ಯನವರ ಭವಿಷ್ಯದೃಷ್ಟಿಗೆ ಜ್ಯೋತಿಶ್ಯಾಸ್ತ್ರದ ಲೆಕ್ಕಕ್ಕೆ ಎಲ್ಲವೂ ಎಲ್ಲೆಲ್ಲಿಯೂ ತುದಿ ಮೊದಲಿಲ್ಲದ ಅಖಂಡ ಪ್ರೋಜ್ಜ್ವಲ ಪ್ರಕಾಶವೇ ಕಾಣತೊಡಗಿತು. ಎಲ್ಲೆಡೆಗೂ ಪ್ರಸಾದದ ರಸ ಪ್ರಭೆಯೇ ಹರಿಯತೊಡಗಿತು. ಅದಕ್ಕಾಗಿ ಇವರಿಗೆ ಹಿರಿಯರಾದ ಅಣ್ಣನನ್ನೂ ಅಕ್ಕಂದಿರನ್ನೂ ಕಂಡು ಅವರಿಗೆ ತಮ್ಮ ಮನೋಗತವನ್ನು ಸ್ಪಷ್ಟಪಡಿಸಿದರು. ಈಶ್ವರೀ ಸಂಕಲ್ಪಕ್ಕೆ ಅನುಗುಣವಾಗಿಯೇ ಈ ಕರೆಯು ಬಂದಿರುವದೆಂದು ಭಾವಿಸಿ, ಆ ಅಣ್ಣನೂ ಅಕ್ಕಂದಿರೂ ತಮ್ಮ ಈ ವಿಶಿಷ್ಟ ವ್ಯಕ್ತಿತ್ವದಿಂದ, ವೈಶಿಷ್ಟ್ಯಪೂರ್ಣ ತೇಜದಿಂದ, ಅನುಪಮ ಆಕರ್ಷಕ ಶಕ್ತಿಯಿಂದ ಎದ್ದು ಕಾಣುವ ತಮ್ಮನನ್ನು-ಮರಿಯನ್ನು ನಾಗನೂರ ರುದ್ರಾಕ್ಷಿಮಠದ ತೆರವಾದ ಪಟ್ಟಕ್ಕೆ ಉತ್ತರಾಧಿಕಾರಿಯನ್ನಾಗಿ ನೀಡಲು ಒಮ್ಮನಸ್ಸಿನಿಂದ ಒಪ್ಪಿಕೊಂಡರು.

ರುದ್ರಾಕ್ಷಿಮಠಕ್ಕೆ ಏಳನೆಯ ಉತ್ತರಾಧಿಕಾರಿ

ತಮ್ಮ ಬಹುದಿನಗಳ ಜಟಿಲ ಸಮಸ್ಯೆಗೆ ವಿದ್ಯುದ್ವೇಗದ ಪ್ರಭಾಪೂರ್ಣ ಪರಿಹಾರವು ದೊರೆತಂತೆ, ಅನೇಕ ಜನರ ತಲೆ ತಿನ್ನುವ ಕುಟಿಲ, ಜಟಿಲ ಪ್ರಶ್ನೆಗೆ ನಿಟಿಲಾಕ್ಷ ಕೃಪಾ ಪ್ರಭೆಯೆ ಉತ್ತರವಾಗಿ ನಿಂತಂತೆ ಚಿಂತಾಭಾರವಳಿದು, ಹಗುರಾದ ಮನಸ್ಸಿನಿಂದ, ಹಿಗ್ಗಿನಿಂದ ಶ್ರೀ ಗುರುಪಾದಯ್ಯನವರು ನಾಗನೂರಿಗೆ ಮರಳಿದರು. ದೈವದವರ ಮುಂದೆ ಎಲ್ಲವನ್ನೂ ಬಿತ್ತರಿಸಿದರು. " ಇದೆಲ್ಲವೂ ಈಶ್ವರೀಸಂಕೇತವೋ; ಸಂಕಲ್ಪವೋ ಆಗಿರಬೇಕು. ಇಲ್ಲದಿದ್ದರೆ ಇಂಥ ಯೋಗವು ಕೂಡಿ ಬರಲು ಸಾಧ್ಯವೇ " ಎಂದು ಭಾವಿಸಿದ ಆ ದೈವದವರು ಶ್ರೀ ಗುರುಪಾದಯ್ಯನವರ ಈ ಯೋಜನೆಗೆ ಒಮ್ಮನದಿಂದ ಒಮ್ಮತದಿಂದ ಸಮ್ಮತಿಯಿತ್ತರು. ಅಲ್ಲದೆ ಶ್ರೀ ಗುರುಪಾದಯ್ಯನವರನ್ನೇ ಮುಂದೆ ಮಾಡಿಕೊಂಡು, ನಾಗನೂರ ದೈವದವರೆಲ್ಲ ಕೂಡಿ, ಅಂದು ಮರಿಯಾಗಿದ್ದ ಈ ಮಹಾಸ್ವಾಮಿಗಳನ್ನು ಔಚಿತ್ಯ ಪೂರ್ಣವಾದ ರೀತಿಯಲ್ಲಿ ಸ್ವಾಗತಿಸಿ, ಸನ್ಮಾನಿಸಿ ನಾಗನೂರಿನ ಶ್ರೀ ರುದ್ರಾಕ್ಷಿಮಠದ ತೆರವಾದ ಪಟ್ಟಕ್ಕೆ, ಕರೆದು ತಂದು, ಏಳನೆಯ ಉತ್ತರಾಧಿಕಾರಿಯನ್ನಾಗಿ ಮಾಡಿದರು. ಆ ಮಾತಿಗೆ ಸುಮಾರು ಅರುವತ್ತು, ಅರುವತ್ತೆರಡು ವರುಷಗಳು ಸಂದಿರಬೇಕು.

ಶಿಕ್ಷಣಾನುಭವ

ನಾಗನೂರ ರುದ್ರಾಕ್ಷಿ ಮಠದ ಹೊಣೆಯನ್ನು ವಹಿಸಿದ ಇವರಿಗೆ ಉಳಿದೆಲ್ಲ ಕಾರ್ಯಗಳಲ್ಲಿ ಕಾಯಕಗಳಲ್ಲಿ ಸ್ನಾನ ಶಿವಪೂಜಾದಿಗಳೇ ಮುಖ್ಯವಾದವು. ಶಿಕ್ಷಣಕ್ಕಾಗಿ ಶಾಲೆಗೆ ಹೋಗುತ್ತಿದ್ದರೂ, ಶಿವಧ್ಯಾನಾಸಕ್ತರಾದ ಇವರಿಗೆ ಅಂತರ್ಮುಖತೆ ಬೆಳೆಯತೊಡಗಿತು. ಪರಿಣಾಮವಾಗಿ ಮಾತು ಕಡಿಮೆಯಾಯಿತು. ಕೃತಿಯು ಹೆಚ್ಚಾಯಿತು. " ನುಡಿಯಂತೆ ನಡೆ, ನುಡಿದಂತೆ ನಡೆ " ಎಂಬುವ ಅವಸ್ಥೆಯು ದಾಟಿ, " ನಡೆಯ ಮುಖಾಂತರ ನುಡಿ, ನಡೆಯೇ ನುಡಿ " ಎಂಬ ಅವಸ್ಥೆಗೆ ತಲುಪಿದರು. ಶಾಲೆಯ ಶಿಕ್ಷಣಕ್ರಮವು ಇವರ ಮನಸ್ಸಿಗೆ ಒಗ್ಗಲಿಲ್ಲವೋ, ಅಥವಾ ಅಂತರ್ಮುಖತೆ ಬೆಳೆದುದರ ಪರಿಣಾಮವೋ, ಬರಬರುತ್ತ ಇವರು ಶಾಲೆಗೂ ಸರಿಯಾಗಿ ಹೋಗದಂತಾದರು. ಇವರಲ್ಲಿ ಅಂತರ್ಜ್ಞಾನವೂ ಲೋಕಾನುಭವವೂ ಬೆಳೆಯುತ್ತಿದ್ದಿತಾದರೂ ಲೌಕಿಕ ದೃಷ್ಟಿಯಿಂದ ಇವರ ಶಾಲೆಯ ವಿದ್ಯಾಭ್ಯಾಸವು ಕುಂಠಿತವಾಗತೊಡಗಿತು. ಇದನ್ನರಿತ ಶ್ರೀ ಹಣಬ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಟ್ಟಿಯ ಪಟ್ಟದ ದೇವರೂ, ನಾಗನೂರ ಭಕ್ತಾದಿಗಳೂ ಇವರ ಮನಕ್ಕೆ ಅನುಗುಣವಾದ ಶಿಕ್ಷಣವು ಶಿವಯೋಗಮಂದಿ ಮಾತ್ರ ಲಭಿಸಬಹುದೆಂದು ಭಾವಿಸಿ, ಅಲ್ಲಿಗೆ ಕಳುಹುವ ಏರ್ಪಾಡು ಮಾಡಿದರು.

ಆದರೆ ನಾಗನೂರ ರುದ್ರಾಕ್ಷಿಮಠದಿಂದ ಹುಬ್ಬಳ್ಳಿಯ ರುದ್ರಾಕ್ಷಿಮಠವು ಈ ಸ್ವಾಮಿಗಳ ಹೃದಯ ಶಕ್ತಿಯನ್ನು ಸೆಳೆಯ ಬೇಕು. ಅಥವಾ ಈ ಎರಡೂ ರುದ್ರಾಕ್ಷಿಮಠಗಳಿಗೆ ಯಾವುದೋ ಒಂದು ಆಂತರಿಕ ಸಂಬಂಧವೋ ಬಂಧವೋ ಇರಬ ಅಥವಾ ಶಿವಯೋಗಮಂದಿರದಲ್ಲಿ ಸಂಪಾದಿಸಬಹುದಾದ ದಿವ್ಯ ಶಿಕ್ಷಣಕ್ಕೆ ಹುಬ್ಬಳ್ಳಿಯ ರುದ್ರಾಕ್ಷಿಮಠದಲ್ಲಿ ಲಭಿಸಬಹ ಶಿಕ್ಷಣವು, ವ್ಯಾಸಂಗವು, ಪೂರ್ವಪೀಠಿಕೆಯೋ, ಪೂರ್ವಸಿದ್ಧತೆಯೋ ಆಗಬೇಕೆಂದು ಶಿವಸಂಕಲ್ಪವಿದ್ದಿರಬೇಕು; ಶಿವ ಮಂದಿರಕ್ಕೆ ಹೊರಡುವ ನಿರ್ಧಾರವಾಗಿದ್ದರೂ, ಅದರ ಪೂರ್ವದಲ್ಲಿ ಶ್ರೀ ಸ್ವಾಮಿಗಳ ಪಾದಗಳು ಹುಬ್ಬಳ್ಳಿಯ ರುದ್ರಾಕ್ಷಿಮ ಸಾಗಿದವು.

ಹುಬ್ಬಳ್ಳಿಯ ರುದ್ರಾಕ್ಷಿಮಠದಲ್ಲಿದ್ದ ಶ್ರೀ ಚೆನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳೂ ಇವರನ್ನು ಆತ್ಮೀಯ ಭಾ ಯಿಂದ ಬರಮಾಡಿಕೊಂಡರು ಅಲ್ಲಿದ್ದ ಸಂಸ್ಕೃತ ಪಾಠಶಾಲೆಯು ಇವರ ಅಧ್ಯಯನ ರಂಗವಾಯಿತು. ಅಲ್ಲಿ ತಾವಿದ್ದ ಒಂ ಒಂದೂವರೆ ವರ್ಷದ ಅವಧಿಯಲ್ಲಿ ಶಕ್ಯವಿದ್ದಷ್ಟು ಸಂಸ್ಕೃತದ ಜ್ಞಾನವನ್ನೂ ರಸವನ್ನೂ ಗ್ರಹಿಸಿಕೊಂಡರು. ಜೊತೆಗೆ ಆಧ್ಯಾ ಭೂಮಿಕೆಯ ಸಿದ್ಧತೆಗಾಗಿ ಶ್ರೀ ಸಿದ್ಧಾರೂಢರ ಮಠವೂ ಅವರನ್ನು ಕೈಮಾಡಿ ಕರೆಯಿತು. ಪರಿಣಾಮವಾಗಿ ಆಗಾಗ ಹೋಗಿ, ಶ್ರೀ ನಿಜಗುಣಶಿವಯೋಗಿಗಳ ಶಾಸ್ತ್ರಾಧ್ಯಯನವನ್ನೂ ಹೃದ್ಗತಮಾಡಿಕೊಂಡರು. ಇದರಿಂದ ದಿನದಿನವೂ ಅವರ ದಂತೆಯೇ ಅವರಲ್ಲಿ ಶಿವಯೋಗಕ್ಕೆ ಭೂಮಿಕೆಯೊಂದು ಸಿದ್ಧವಾಗತೊಡಗಿದ್ದಿತು.

ಶಿವಯೋಗಮಂದಿರದ ಪುಣ್ಯ ಪರಿಸರದಲ್ಲಿ

ದಿನಾಂಕ ೧೨—೧೨—೧೯೧೦ ರಲ್ಲಿ ಶಿವಯೋಗಮಂದಿರಕ್ಕೆ ಹೊರಡುವ ಸನ್ನಾಹಮಾಡಿದರು. ನಾಗನ ಭಕ್ತರೆಲ್ಲಕೂಡಿ, ಅವರನ್ನು ಬಹಳೇ ಹರ್ಷದಿಂದ ಬೀಳ್ಕೊಟ್ಟರು. ಶಿವಯೋಗಮಂದಿರದಲ್ಲಿಯೂ ಅವರ ಮೊದ ಜೀವನಕ್ರಮವೇ ಮುಂದುವರಿಯಿತು. ದಿನವೂ ಬ್ರಾಹ್ಮೀ ಮುಹೂರ್ತದಲ್ಲಿ ಶಿವಸ್ಮರಣೆಯೊಡನೆ ಏಳುವದು, ಪ್ರಾತವಿ ಗಳನ್ನು ಮುಗಿಸುವದು, ಸ್ನಾನ, ಶಿವಪೂಜೆ, ಸಂಸ್ಕೃತ ಪಾಠಶಾಲಾಧ್ಯಯನ ಇವುಗಳಲ್ಲಿಯೇ ಇವರ ಮನಸ್ಸು ತನ್ಮ ವಾಯಿತು; ತಲ್ಲೀನವಾಯಿತು. ಅವಿರಳ-ಜ್ಞಾನಪಥವಾದ ಅಂತರ್ಮುಖತೆ ಇನ್ನೂ ಬೆಳೆಯಿತು. ಶಕ್ಯವಿದ್ದಷ್ಟು ಎ ಸಂಗವನ್ನೂ ಸಂಪರ್ಕವನ್ನೂ ಕಡಿಮೆಮಾಡಿಕೊಂಡು, ಕಡಿದುಕೊಂಡು, ಏಕಾಂತ ಪ್ರಶಾಂತವಾತಾವರಣದಲ್ಲಿ ಅಧ್ಯಯ ಲೀನರಾಗಿ, ಧ್ಯಾನಲೀನರಾಗಿ ಅಂತರ್ಮುಖತೆಯಿಂದ ಅಂತಸ್ಸಮಾಧಿಗೆ ಒಳಗೆ ಒಳಗೆ, ಕೆಳಗೆ ಕೆಳಗೆ ಇಳಿಯ ತೊಡಗಿ ಹೀಗಾಗಿ ಬಾಹ್ಯಪ್ರಪಂಚವು ದೂರವಾಗಿ, ಮರೆಯಾಗಿ ಅಂತಃ ಪ್ರಪಂಚದ ಬಿತ್ತರವೂ, ಎತ್ತರವೂ, ಆಳವೂ ಗೋಚರಿಸತೊ ದವು. ಇದರ ಮುಂದೆ ಬಾಹ್ಯ ಪ್ರಪಂಚವು ಅಲ್ಪವೂ, ಕ್ಷುದ್ರವೂ, ಸಂಕುಚಿತವೂ ಎನಿಸತೊಡಗಿತು. ಲೋಕದ ಸ್ಥಾ ಮಾನ, ಅಧಿಕಾರ, ಕೀರ್ತಿ, ಕಾಂಚನ, ಪ್ರಶಂಸೆ, ನಿಂದೆ ಈ ಎಲ್ಲವುಗಳಿಂದಲೂ ದೂರವಾಗಿ ಲೋಕದ ದ್ವಂದದಿಂದ ಅ ರಾಗಿ ಇರಲು ಯತ್ನಿಸಿದರು. ಈ ಮೇರೆಗೆ ಒಂದು ದಿವ್ಯಾದರ್ಶವು ಶ್ರೀ ಶಿವಯೋಗಮಂದಿರದ ಪ್ರಶಾಂತವಾತಾವರಣ ಇವರ ಬಾಳನ್ನು ಇಂತು ರೂಪಿಸುತ್ತಲಿದ್ದಿತು.

ಇವರ ಪರಿಶುದ್ಧ ಆಚಾರ, ಉಚ್ಚ ವಿಚಾರ, ಪವಿತ್ರ ಚಾರಿತ್ರ್ಯ, ಅನನ್ಯ ಭಕ್ತಿ, ಅಪ್ರತಿಮ ದಾಸೋಹಭಾ ಅನುಪಮ ಸೇವೆ, ಅವಿಚಲ ಕಾಯಕನಿಷ್ಠೆ, ಅಚಲ ಸಂಯಮಶೀಲ, ಸರ್ವಭೂತದಯಾದೃಷ್ಟಿ, ವಿಶ್ವಮಾನ್ಯ ಧರ್ಮದೃ ಇವೆಲ್ಲವುಗಳಿಂದ ಆಕರ್ಷಿತರಾದ, ಶ್ರೀ ಶಿವಯೋಗ ಮಂದಿರ ಸಂಸ್ಥಾಪಕರಾದ ಪೂಜ್ಯ ಶ್ರೀ ಹಾನಗಲ್ಲ ಕುಮಾರ ಸ್ವಾಮಿ ವರ ಕೃಪಾ ದೃಷ್ಟಿಯು ಇವರ ಮೇಲೆ ಬಿದ್ದಿತು. ಪರಿಣಾಮವಾಗಿ ಇವರು ಅವರ ಪ್ರೀತಿಯ ಶಿಷ್ಯರಾಗಿ ಅನನ್ಯಭಾವದಿ ಸೇವೆಸಲ್ಲಿಸತೊಡಗಿದರು. ಇವರ **ದ್ವಾದಶ ವರ್ಷದ** ದೀರ್ಘ ಅವಿರತ ಅವಿಚ್ಛಿನ್ನ ಸೇವೆಗೆ ಮೆಚ್ಚಿ ಪೂಜ್ಯ ಶ್ರೀಕುಮಾ ಸ್ವಾಮಿಗಳು ಇವರನ್ನು ಆಶೀರ್ವದಿಸಿದರು; ಅನುಗ್ರಹಿಸಿದರು. ಇಂತು ಎಲ್ಲರ ಮೆಚ್ಚಿಗೆಗೂ ಪಾತ್ರರಾದರು. ಇವರು ಮಂದಿರ ರುವಾಗ ಬೇರೆ ಬೇರೆ ಊರುಗಳ ಅಪಾರ ಉತ್ಪನ್ನವಿರುವ ಅದೆಷ್ಟೋ ಮಠಗಳ ಅಧಿಕಾರ ಸ್ವೀಕಾರಕ್ಕಾಗಿ ಆಯಾ ಊರವ ಬಂದು ಬಂದು ಇವರನ್ನು ಪ್ರಾರ್ಥಿಸಿಕೊಂಡರು. ಹಾನಗಲ್ಲ ಊರವರೂ ಬಂದು ಬೇಡಿಕೊಂಡರಂತೆ; ಇವರು ಯಾವದ ಆಶಿಸಲಿಲ್ಲ; ಜಗ್ಗಲಿಲ್ಲ; ಯಾರ ಬೇಡಿಕೆಗೂ ಸೊಪ್ಪುಹಾಕಲಿಲ್ಲ; ಸೋಲಲಿಲ್ಲ. " ಉತ್ಪನ್ನವಿಲ್ಲದಿದ್ದರೂ ಅಡ್ಡಿಯಿ ಚಿಕ್ಕದಿದ್ದರೂ ಚಿಂತೆಯಿಲ್ಲ; ನನ್ನ ಈಗಿನ ನಾಗನೂರ ಮಠವೇ ನನಗಿರಲಿ " ಎಂದು ನಿರ್ಧಾರದ ಧ್ವನಿಯಲ್ಲಿ, ಸಂತೃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವದಲ್ಲಿ ಉತ್ತರಿಸಿದರು. ಇದನ್ನು ಕಂಡ ಪೂಜ್ಯ ಶ್ರೀ ಕುಮಾರಸ್ವಾಮಿಗಳವರು "ಚಿಕ್ಕದಾಗಿ ಕಾಣುವ ಚಿಕ್ಕೆ ಕೋಟಿ ಕೋಟಿ ಯೋಜನೆಗಳಾಚೆಯಿಂದ ತನ್ನ ಥಳಥಳಿಸುವ ಬೆಳಕನ್ನು ಹರಡಿ ವಿಶ್ವದ ಅಂಥ ತಮಂಥವನ್ನು ಸೀಳುವದು. ಅಂತೆಯೇ ಬಾಳಾ, ನಿನ್ನ ಮಠವು ಚಿಕ್ಕದಾಗಿದ್ದರೂ ಆ ಮಠದ ಮೂಲದಿಂದ ಅಖಂಡ ಅನಂತ ಪ್ರಕಾಶದ, ಕಣ್ಣು ಕೋರಯಿಸುವ ಲಕ್ಷೋಪಲಕ್ಷ ಉಜ್ವಲ ಅಕ್ಷಯ ದಿಧೀತಿಗಳು ಅಸಂಖ್ಯ ಹೃದಯಗಳನ್ನು ತಟ್ಟಿ ಮುಟ್ಟಿ, ಅಲ್ಲಿಯ ಕಾರ್ಗತ್ತಲೆಯನ್ನು ಮೆಟ್ಟಿ ಪ್ರಜ್ಞಾನ ಬ್ರಹ್ಮವಾಗಿ ತೋಳಗಿ ಬೆಳಗಬಲ್ಲವು. ಆ ದಿವ್ಯ ಪ್ರಕಾಶದ ಪೂತ ಧವಳ ಪುಣ್ಯ ಪ್ರವಾಹದಲ್ಲಿ ನೀನು ಮಿಂದು ಕರಗಿ ಹೋಗುವಿ. ಆ ಬೆಳಕಿನಲ್ಲಿ ಬೆಳಕಾಗಿ ಬೆಳೆದು ಹೋಗುವಿ ! ನಿನ್ನ ಸೇವೆಯಲ್ಲಿಯೇ ಶಿವನ ಸಾಕ್ಷಾತ್ಕಾರವಾಗುವದು. ನಿನ್ನ ಈ ಸೌಜನ್ಯದ ವಿನಯದ ಕೈಂಕರ್ಯದ ಶೀಲದಲ್ಲಿಯೇ ಜಗದೋದ್ಧಾರದ ಶೀಲವು ಕಾಣುವದು. ಎಲ್ಲವನ್ನೂ ಪ್ರಸಾದ ಭಾವನೆಯಿಂದ ಕಾಣುವ ನಿನಗೆ ಆ ಪ್ರಸಾದವೇ ಪರಮ ಧ್ಯೇಯವಾಗುವದು. ಅನುಸನು ಶ್ರೇಯವಾಗುವದು. ನಿತ್ಯ ಪ್ರಕಾಶವಾಗುವದು. ಸತ್ಯ ಪರಮಾತ್ಮವಾಗುವದು. ಇದರಲ್ಲಿಯೇ ನಿನ್ನ ಜೀವನದ ಸುಳುಹೂ ಇದೇ ಹೊಳಹೂ ಇದೇ ನಿನಗೆ ಶುಭವಾಗಲಿ ! ಮಂಗಳವಾಗಲಿ !! ಎಂದು ಹೃದಯ ತುಂಬಿ, ಕಂಠ ತುಂಬಿ, ಬಾಯಿತುಂಬಿ ಆಶೀರ್ವದಿಸಿದರು. ಇಂತು ನೀಡಿದ ಆಶೀರ್ವಾದವು ಗಟ್ಟಿಗೊಳ್ಳುವಂತೆ ಕೊಡಗಲಿ ಗವಿಯಲ್ಲಿ ಶ್ರೀ ಶಿವಬಸವಸ್ವಾಮಿಗಳನ್ನು ಅನುಷ್ಠಾನಕ್ಕೂ ಕೂಡಿಸಿದರು.

ಇಷ್ಟೇ ಅಲ್ಲ ತಾವು ಲಿಂಗೈಕ್ಯವಾಗುವ ಕಾಲವನ್ನು ಅಂತಜ್ಞಾನದಿಂದ ಕಂಡು ಹಿಡಿದ ಪೂಜ್ಯ ಶ್ರೀ ಕುಮಾರ ಸ್ವಾಮಿಗಳು ಅದಕ್ಕಿಂತ ಕೆಲ ದಿನಗಳ ಪೂರ್ವದಲ್ಲಿ ಈ ಶ್ರೀ ಶಿವಬಸವಸ್ವಾಮಿಗಳನ್ನು ಕರೆಯಿಸಿಕೊಂಡು ಇವರಿಗೆ ಶ್ರೀ ಹಾಲ ಕೆರೆ ಅನ್ನದಾನೀಶ್ವರ ಮಹಾಶಿವಯೋಗಿಗಳಿಂದ ಆಶ್ರಮ (ಸ್ಥಳ) ದೀಕ್ಷೆಯನ್ನು ಕೊಡಿಸಿದರು. ಒಂದು ದಿನ ಬಳಿಯಲ್ಲಿ ಕರೆದು "ನೀನು ಲೋಕೋಪಕಾರಿಯಾಗು ! ಲೋಕೋದ್ಧಾರಕನಾಗು !!" ಎಂದು ಆಶೀರ್ವದಿಸುತ್ತ ತಮ್ಮ ಕೊರಳಲ್ಲಿರುವ ರುದ್ರಾಕ್ಷಿ ಮಾಲೆಯನ್ನು ಇವರ ಕೊರಳಿಗೆ ಹಾಕಿದರು. ಮತ್ತು ತಮ್ಮ ಪವಿತ್ರ ವರಪ್ರದ ಹಸ್ತದಿಂದ ಆ ಪೂಜ್ಯ ಹಾನಗಲ್ಲ ಮಹಾ ಸ್ವಾಮಿಗಳು ಇವರಿಗೆ ಕರುಣಿಸಿದ ಭಸ್ಮದ ಘಟ್ಟಿಯೊಂದನ್ನು ಈ ರುದ್ರಾಕ್ಷಿ ಮಾಲೆಯನ್ನು ಈಗಲೂ ಈ ಶ್ರೀಗಳವರು ಗುರು ಶಿಷ್ಯರ ಈ ಅನನ್ಯ ಅಭಿನ್ನ ಸಾಮರಸ್ಯದ ಸ್ಮಾರಕವಾಗಿ, ಗುರುವು ಶಿಷ್ಯನ ಮೇಲೆ ಗೆಯ್ದ ಮಹಾಕೃಪೆಯ ಪ್ರತೀಕವಾಗಿ, ಜತನದಿಂದ ಅಚ್ಚಳಿಯದಂತೆ ಕಾಯ್ದಿಟ್ಟಿರುವರು.

ಈ ಮೇರೆಗೆ ಶಿವಯೋಗಮಂದಿರದಲ್ಲಿ ಹನ್ನೆರಡು ವರ್ಷಗಳ ಹರಿಗಡಿಯದ ತಪಃಪ್ರಭಾವದಿಂದ ತಪಃಪ್ರಭೆಯಿಂದ ಆಂತರಿಕ ವಿಕಾಸವನ್ನೂ ಪ್ರಕಾಶವನ್ನೂ ಅಳವಡಿಸಿಕೊಂಡರು. ಅವರ ಬಾಳು ಕೊನರಿ ಚಿಗುರಿ ಹೂತು, ಕಾತು ಈ ತಪಸ್ತೇಜದಲ್ಲಿ ಪಣ್ತು ಸಾರ್ಥಕತೆಯನ್ನು ಪಡೆಯಿತು. ಧನ್ಯತೆಯನ್ನು ಹೊಂದಿತು. ಶಿವಯೋಗಮಂದಿರದಿಂದ ಇಳಕಲ್ಲಿನತ್ತ ಇವರ ದೃಷ್ಟಿ ಹರಿಯಿತು. ಯಾಕಂದರೆ ಇಳಕಲ್ಲಿನ ವಿಜಯ ಮಹಾಂತೇಶ್ವರಮಠದ ಮಹಾಶಿವಯೋಗಿ ಗುರುಮಹಾಂತಸ್ವಾಮಿಗಳ ಆಂತರಿಕ ಆಕರ್ಷಣೆಯೋ ಆಹ್ವಾನವೋ ಅವರಿಗೇನೇ ಗೊತ್ತು ! ಈ ಶ್ರೀಶಿವಬಸವಮಹಾಸ್ವಾಮಿಗಳು ಅಲ್ಲಿಗೆ ದಯಮಾಡಿಸಿದರು. ಆ ಪವಿತ್ರ ವಾತಾವರಣದ ಪ್ರಶಾಂತ ಮಠದ ವಾಸವೂ ಮಹಾಶಿವಯೋಗಿ ಗುರುಮಹಾಂತೇಶ್ವರ ಸಹವಾಸವೂ ಇವರ ಆಂತರಿಕ ಜೀವನ ವಿಕಾಸಕ್ಕೆ ಇನ್ನೂ ಸಹಾಯಕವಾದವು. ಅಲ್ಲಿ ಕಳೆದ ಕೆಲ ದಿನಗಳ ಅವಧಿಯಲ್ಲಿ ಕೈವಲ್ಯದ ಕೈಲಾಸದ ಪ್ರಕಾಶಹಾಸವು ಸುಳಿದು ಅಲ್ಲಿಗೆ ಇಳಿದು ಬಂದಂತೆ ಇವರಿಗೆ ಭಾಸವಾಯಿತು.

ನಾಗನೂರಿಗೆ ಪುನರಾಗಮನ

೧೯೩೨ ರಲ್ಲಿ ಪೂಜ್ಯ ಹಾನಗಲ್ಲ ಶ್ರೀಕುಮಾರಸ್ವಾಮಿಗಳ ಆಶೀರ್ವಾದ ಪಡೆದು ಕೊಣ್ಣೂರ ಮರಡಿಮಠದ ಶ್ರೀಕೆಂಪಯ್ಯ ಮಹಾಸ್ವಾಮಿಗಳನ್ನೂ (ಇವರೇ ಮುಂದೆ ೧೯೩೫ ರಲ್ಲಿ ಹುಬ್ಬಳ್ಳಿಯ ಶ್ರೀಮೂರುಸಾವಿರಮಠದ ಪಟ್ಟಕ್ಕೆ ಬಂದು ಶ್ರೀಜಗದ್ಗುರು ಶ್ರೀಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳಾದರು) ನವಿಲುಗುಂದ ಶ್ರೀಗವಿಮಠಾಧ್ಯಕ್ಷ ಶ್ರೀಬಸವಲಿಂಗ ಮಹಾಸ್ವಾಮಿಗಳನ್ನೂ ಕೂಡಿಕೊಂಡು, ತ್ರಿಮೂರ್ತಿಗಳಂತೆ ನಾಗನೂರಿಗೆ ದಯಮಾಡಿಸಿದರು. ಗುರುವಿನ ಹನ್ನೆರಡು ವರುಷಗಳ ದೀರ್ಘ ವಿರಹದಿಂದ ಪರಿತಪಿಸಿದ ನಾಗನೂರ ಭಕ್ತರೆಲ್ಲ ಚಂದ್ರಮನನ್ನು ಕಂಡ ಚಕೋರನಂತೆ ಹಿರಿಹಿರಿ ಹಿಗ್ಗಿ, ಉಬ್ಬಿಕೊಬ್ಬಿ ನಲಿನಲಿದಾಡಿ ಆ ತ್ರಿಮೂರ್ತಿಗಳಿಗೆ ಸಂಭ್ರಮದ ಸ್ವಾಗತವನ್ನಿತ್ತರು. ಮತ್ತೊಮ್ಮೆ ನಾಗನೂರ ಶ್ರೀರುದ್ರಾಕ್ಷಿಮಠವು ಜ್ಯೋತಿಸ್ರೋತದಲ್ಲಿ ಮಿಂದು ಪಾವನವಾಯಿತು. ಪ್ರಕಾಶಮಾನವಾಯಿತು.

ಕೊಣ್ಣೂರ ಮರಡೀಮಠದ ಶ್ರೀಕೆಂಪಯ್ಯಮಹಾಸ್ವಾಮಿಗಳೂ ಈ ಶ್ರೀಶಿವಬಸವಮಹಾಸ್ವಾಮಿಗಳೂ 'ದೇಹ ಬೇರೆ, ಜೀವವೊಂದೇ, ಆತ್ಮವೊಂದೇ' ಎಂಬಂತಿದ್ದರು. ಪರಸ್ಪರರ ಆತ್ಮಪ್ರಕೃತಿಯೊಂದೇ ಇದ್ದುದರಿಂದ, ಅವರು ಕೈಕೊಳ್ಳತಕ್ಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃತಿಗಳ ಯೋಚನೆಗಳಲ್ಲಿ, ಆಲೋಚನೆಗಳಲ್ಲಿ, ಯೋಜನೆಗಳಲ್ಲಿ, ಸಾಮ್ಯವೂ, ಸಾದೃಶ್ಯವೂ, ಸಾಮರಸ್ಯವೂ, ಏಕ... ಇರುತ್ತಿದ್ದಿತು. ಹೀಗಾಗಿ ಈ ಉಭಯಮಹಾಸ್ವಾಮಿಗಳೂ ಹೆಚ್ಚಾಗಿ ಇಂಥ ಸಂದರ್ಭಗಳಲ್ಲಿ ಕೂಡುವ ಪ್ರಸಂಗ ಬರುತ್ತಿ... ಶ್ರೀಶಿವಬಸವಮಹಾಸ್ವಾಮಿಗಳು ತಮ್ಮ ನಾಗನೂರ ರುದ್ರಾಕ್ಷಿಮಠದ ಮೇಲ್ವಿಚಾರಣೆಯ ಜೊತೆಗೆ, ಶ್ರೀಕೆಂಪಯ್ಯಮಹಾ... ಗಳ ಸಲುವಾಗಿ ಕೊಣ್ಣೂರ ಮರಡೀಮಠಕ್ಕೆ ಹೋಗಿ, ಅವರ ಜೊತೆಯಲ್ಲಿ ಅಲ್ಲಿಯ ಪಾಠಶಾಲೆ, ಇಂಗ್ಲಿಷ ಶಾಲೆ... ನಿರಾತಂಕವಾಗಿ ನಡೆಯಿಸುವ ಹೊಣೆಯನ್ನು ವಹಿಸುತ್ತಿದ್ದರು.

ಈ ಮೇರೆಗೆ ಮೂರು ವರ್ಷಗಳ ವರೆಗೆ ಅಂದರೆ ೧೯೨೫ ಕ್ಕೆ ಶ್ರೀ ಕೆಂಪಯ್ಯ ಮಹಾಸ್ವಾಮಿಗಳು ಹುಬ್ಬಳ... ಮೂರುಸಾವಿರ ಮಠಕ್ಕೆ ಜಗದ್ಗುರು ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳ ಪಟ್ಟಕ್ಕೆ ಹೋಗುವ ವರೆಗೆ, ... ಜೊತೆಯಲ್ಲಿ ಈ ಶ್ರೀ ಶಿವಬಸವ ಮಹಾಸ್ವಾಮಿಗಳೂ, ಕೊಣ್ಣೂರ ಮರಡೀಮಠ ಅವರ ಮುಖಾಂತರ ನಡೆಯಿಸಲ್ಪ... ಅನ್ನಸತ್ರ, ಪಾಠಶಾಲೆ, ಇಂಗ್ಲಿಷ ಶಾಲೆ ಈ ಮೊದಲಾದವುಗಳ ವ್ಯವಸ್ಥೆಯನ್ನು ನೋಡಿಕೊಂಡರಲ್ಲದೆ, ... ಹುಬ್ಬಳ್ಳಿಗೆ ಹೋದ ಮೇಲೆಯೂ ಮುಂದೆ ನಾಲ್ಕೈದು ವರ್ಷಗಳ ವರೆಗೂ ತಮ್ಮ ನಾಗನೂರ ರುದ್ರಾಕ್ಷಿಮಠದ ವ್ಯವಸ್ಥೆ... ಜೊತೆಗೆ ಇವುಗಳ ವ್ಯವಸ್ಥೆಯ ಹೊಣೆಯನ್ನೂ ಇವರೇ ನಿರ್ವಹಿಸಿದರು. ಮುಂದೆ ಮರಡಿಮಠದ ಉತ್ತರಾಧಿಕಾರಿಗಳು ... ಸ್ಸಿಗೆ ಬಂದ ನಂತರ, ಅದರ ಎಲ್ಲ ವ್ಯವಸ್ಥೆಯ ಹೊಣೆಯನ್ನು ಅವರಿಗೊಪ್ಪಿಸಿ ಮತ್ತೆ ನಾಗನೂರಿಗೆ ದಯಮಾಡಿಸಿದರು.

ನಾಗನೂರ ಗ್ರಾಮದ ಜನತೆಯಲ್ಲಿ, ಅದರಂತೆಯೇ ತಮ್ಮ ಸಂಪರ್ಕದಲ್ಲಿ ಬರುವ ಇತರ ಗ್ರಾಮಪಟ್ಟಣಗಳ ... ಯಲ್ಲಿ ತಾತ್ವಿಕ, ಆಧ್ಯಾತ್ಮಿಕ ವಿಚಾರಗಳನ್ನೂ ಜ್ಞಾನವನ್ನೂ ಹರಡುವ ಮುಖ್ಯ ಉದ್ದೇಶದ ಜೊತೆಗೆ ಹಳ್ಳಿಗರ ಮನೋ... ಗನುಗುಣವಾಗಿ ಅವರಿಗೆ ಮನೋರಂಜನೆಯನ್ನು ಒದಗಿಸಿ, ಆ ಮನರಂಜನೆಯ ಜೊತೆಗೆ ನವಚೈತನ್ಯವನ್ನೂ, ಚೈತ... ಜೊತೆಗೆ ಭಕ್ತಿಯನ್ನೂ, ಭಕ್ತಿಯ ಜೊತೆಗೆ ತಾತ್ವಿಕ, ಸಾತ್ವಿಕ, ಆಧ್ಯಾತ್ಮಿಕ ಪ್ರವೃತ್ತಿಯನ್ನೂ ಧಾರ್ಮಿಕ ಭಾವನೆಯ... ಹುಟ್ಟಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳುವ ಏರ್ಪಾಡನ್ನು ಮಾಡಿದರು.

೧೯೨೪ ರಿಂದ ೧೯೨೯ ರ ವರೆಗೆ ಅಂದರೆ ಐದಾರು ವರ್ಷಗಳ ವರೆಗೆ ನಾಗನೂರಲ್ಲಿ ಶ್ರಾವಣಮಾಸದಲ್ಲಿ ಹೊಸ ... ರಿಯಲ್ಲಿ ಜಾತ್ರೆ (ರಥೋತ್ಸವ) ನೆರವೇರಿಸುವ ವ್ಯವಸ್ಥೆ ಮಾಡಿದರು. ಈ ಜಾತ್ರೆಯಲ್ಲಿ ಹಳ್ಳಿಗರ ಆಕರ್ಷಣೆಗಾಗಿ ... (ಮಲ್ಲಗಾಳಗ) ವಿವಿಧ ಬಗೆಯ ಪಂದ್ಯಾಟ (ಶರ್ಯತ್ತು) ಗಳ ಏರ್ಪಾಡು ಮಾಡಿದರು. ಶ್ರಾವಣಮಾಸದಲ್ಲಿ ಈ ನಿಮಿತ್ತ... ಅಲ್ಲಿ ಬಂದು ಕಲೆತ ಮತ್ತು ಈ ಮೊದಲೇ ಊರಲ್ಲಿದ್ದ ಸಮಸ್ತ ಜನತೆಗಾಗಿ ಪುರಾಣ ಶ್ರವಣದ ಏರ್ಪಾಡನ್ನು ಮಾಡಿ... ಜೊತೆಗೆ ಈ ಮಾಸದಲ್ಲಿ ಸಾಧ್ಯವಿದ್ದ ದಿನಗಳಲ್ಲಿ ಜನತೆಗೆಲ್ಲ ಅನ್ನ (ಪ್ರಸಾದ) ಸಂತರ್ಪಣದ ವ್ಯವಸ್ಥೆಯನ್ನೂ ಮಾಡಿದರು.

ರುದ್ರಾಕ್ಷಿಮಠವು ಅಸ್ತಿತ್ವದಲ್ಲಿ ಬಂದಂದಿನಿಂದಲೂ ಶ್ರಾವಣ ಮಾಸದಲ್ಲಿ ನಡೆಯುತ್ತ ಬಂದ ಮಹಾ ಪಾದಪು... ಪುರಾಣಶ್ರವಣದ ಕಾರ್ಯಕ್ರಮವನ್ನು ಇಂದಿಗೂ ಈ ಮಹಾಸ್ವಾಮಿಗಳು ಮುಂದುವರಿಸಿಕೊಂಡೇ ಬಂದಿರುವರು. ... ಈ ಸಂದರ್ಭದಲ್ಲಿ ದೀಕ್ಷಾಪಾತ್ರ ಭಕ್ತಾದಿಗಳಿಗೆ ದೀಕ್ಷಾ ವಿಧಿಯನ್ನು ಅನುಗ್ರಹಿಸುವ ವ್ಯವಸ್ಥೆಯನ್ನೂ ಮಾಡುವರು.

೧೯೨೮ ರಲ್ಲಿ ನಾಗನೂರಿಗೆ ಸಮೀಪವಾಗಿದ್ದ ಬೈಲವಾಡ ಗ್ರಾಮದ ವರ್ತಿಯ ಸುಕ್ಷೇತ್ರದಲ್ಲಿ ಶಿವಯೋಗ ಮಂದಿ... ಎಲ್ಲ ಮಹಾ ಸ್ವಾಮಿಗಳವರಿಂದ ಏಕಾದಶ ಮಂಟಪಪೂಜಾ ಕ್ರಮವನ್ನೂ ಏರ್ಪಡಿಸಿದರು.

ಈ ರೀತಿ ಹಳ್ಳಿಗರ ಮನೋರಂಜನೆಯ ದೃಷ್ಟಿಯಿಂದ, ಬುದ್ಧಿ ವಿಕಾಸದ ದೃಷ್ಟಿಯಿಂದ, ಉತ್ಸಾಹ–ಉಲ್ಲಾಸ–ಸಂ... ಸಂವರ್ಧನೆಯ ಭಕ್ತಿ–ಜ್ಞಾನ–ಧರ್ಮ–ಜಾಗೃತಿಯ ದೃಷ್ಟಿಯಿಂದ ಏರ್ಪಡಿಸಲ್ಪಟ್ಟ ಪ್ರತಿಯೊಂದು ಕಾರ್ಯಕ್ರಮದಲ್ಲಿ ... ಒಂದಿಲ್ಲೊಂದು ರೀತಿಯಿಂದ ಭಾಗವಹಿಸಿದಂತೆ ತೋರ್ಪಡಿಸಿದರೂ, ಆದರಿಂದ ಅಲಿಪ್ತರೂ ಅತೀತರೂ ಆಗಿರುತ್ತಿದ್ದ... ಸಾಮಾನ್ಯ ಜನತೆ, ಅನ್ನ, ಅರಿವೆ, ಆಶ್ರಯ, ಆರೋಗ್ಯ, ಅರುಹುಗಳ ಅವಶ್ಯಕತೆಗಳನ್ನು ಪೂರೈಸಿಕೊಂಡು ಒಂದಿಲ್ಲೊಂ... ರೀತಿಯಿಂದ ಪ್ರಗತಿಯನ್ನೂ ಊರ್ಧ್ವಗತಿಯನ್ನೂ ಸಾಧಿಸಿ ಪರಿಪೂರ್ಣತೆಯನ್ನೈದಲೆಂಬ ಸದಿಚ್ಛೆಯೊಂದು ಮಾತ್ರ ಹಗಲಿರು... ಅವರ ಹೃದಯವನ್ನು ಮಿಡಿಯುತ್ತಿದ್ದಿತು.

ಪ್ರಸಾದನಿಲಯ ಸ್ಥಾಪನೆಯ ವಿಚಾರ

" ನಮ್ಮ ಸಮಾಜವು, ನಮ್ಮ ನಾಡು, ಸರ್ವಾಂಗಸುಂದರವಾಗಿರಬೇಕು, ಸರ್ವಾಂಗಶಕ್ತಿಪೂರ್ಣವಾಗಬೇ... ಸರ್ವಾಂಗಪ್ರಕಾಶಮಾನವಾಗಬೇಕು, ಸರ್ವಾಂಗಪರಿಪೂರ್ಣವಾಗಬೇಕು " ಎಂಬ ಸತ್‌ಸಂಕಲ್ಪವು ನಾಗನೂರಂತಹ ...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಳ್ಳಿಯ ಸಂಕುಚಿತ ಸೀಮೆಯಲ್ಲಿ ಇವರನ್ನು ಇರಗೊಡಲಿಲ್ಲ. ದೂರ ಹಾರಲಾರದ ಚಿಕ್ಕ ಹಕ್ಕಿಗೆ ಒಂದು ಗಿಡಮರಿಯಾದರೆ ಸಾಕು. ಮಹಾಪಕ್ಷವಿಸ್ಥಾಲಸಂಗ್ಯೆಯು ಗಗನಕ್ಕೆ ನೆಗೆವ ವಜ್ರವೀರ್ಯ ಬಲಿಷ್ಠ ಗರುಡನಿಗೆ ತುದಿಮೊದಲಿಲ್ಲದೆ ಹಬ್ಬಿಹರಡಿರುವ ಮುಗಿಲಲ್ಲದೆ ಬೇರೊಂದು ಸಾಲುವದೇ? ಮಿಣಿಮಿಣಿ ಮಿನುಗುವ ಒಂದು ಸೊಡರಿಗೆ ಒಂದು ಕಿರುಮೂಲೆಯೇ ಸಾಕು; ಆದರೆ ತನ್ನ ಝಗಝಗಿಸುವ ಪ್ರಕಾಶದಿಂದ, ತೇಜದಿಂದ ವಿಶ್ವವನ್ನೇ ತೊಳಗಿ ಬೆಳಗುವ ಮಹಾಸೂರ್ಯಗೋಲಲೀಲೆಗೆ ಅನಂತಾಕಾಶ ವಲ್ಲದೆ ಬೇರೊಂದು ಸ್ಥಲವು ನಡೆದೀತೇ? ಕಿರುದೊರೆಗೆ ಗಾವುದಮುದ್ದ ಭೂಮಿ ಸಾಕಾದೀತು! ಆದರೆ ತ್ರಿಪಥೆಯಾಗಿ ಶಿವನ ಜಡೆಯಿಂದ ನೆಗೆದು ಕೈಲಾಸದಿಂದ ಧುಮ್ಮಿಕ್ಕುವ ಮಹಾಭಾಗೀರಥಿಗೆ ತ್ರಿಲೋಕವಲ್ಲದೆ ಬೇರೊಂದು ಭೂಮಿ ಸಾಕೆನಿಸುವದೇ? ಅಂತೆಯೇ ಶ್ರೀಶಿವಬಸವಮಹಾಸ್ವಾಮಿಗಳ ಮಹಾಸಂಕಲ್ಪಕ್ಕೆ, ಆ ಸಂಕಲ್ಪಕ್ಕನುಗುಣವಾಗಿ ರೂಪುಗೊಳ್ಳ ಮಹಾಯೋಜನೆಗೆ, ಆ ಮಹಾಯೋಜನೋಚಿತ ರೀತಿಯಲ್ಲಿ ಇಳಿದು ಬರುವ ಮಹಾಘನ ಕೃತಿಗೆ ಒಂದು ಸುವಿಶಾಲ ಕ್ಷೇತ್ರವೇ ಬೇಕಾಯಿತು.

ಅಲ್ಲದೆ ನಮ್ಮ ಭಾರತದ ಭೀಕರ ದಾರುಣ ದಾರಿದ್ರ್ಯದಲ್ಲಿ ಬರಿಹೊಟ್ಟೆಯಲ್ಲಿ, ಅರೆಹೊಟ್ಟೆಯಲ್ಲಿ ಉಪವಾಸ ಸಾಯುವ, ಇದ್ದರೂ ಸತ್ತಂತೆ ಬದುಕಿರುವ ಅಸಂಖ್ಯ ಜನತೆಯ ಅಸಹ್ಯ ಅಸಹಾಯ್ಯ ಪರಿಸ್ಥಿತಿಯು ಇವರ ಹೃದಯವನ್ನು ಕೊರೆಯಿತು. ಜೀವನ ಮೂಲಾವಶ್ಯಕವಾದ ಅನ್ನವೇ ಇಲ್ಲದಿರಲು, ಮುಂದಿನ ಅವಶ್ಯಕತೆಗಳ ಮಾತೆಲ್ಲಿ? ಬದುಕುವ ಮಾತಂತೂ ದೂರವೇ ಉಳಿಯಿತು. "ಹಸಿದ ಹೊಟ್ಟೆಗೆ ನಿನ್ನ ವೇದಾಂತ ಬೇಡ, ಉಪದೇಶ ಬೇಡ! ಮೊದಲು ಅನ್ನ ನೀಡು, ಆ ಮೇಲೆ ಉಪದೇಶ" ಎಂದು ವೇದಾಂತಕೇಸರಿ ಸ್ವಾಮಿ ಶ್ರೀ. ವಿವೇಕಾನಂದರು ಗರ್ಜಿಸಿದ ಕಠೋರ ಸತ್ಯವು ಇವರ ಕರ್ಣರಂಧ್ರಗಳಲ್ಲಿ ಗುಡುಗಾಡಿ ಹೃದಯವನ್ನು ಕಲಕಾಡಿತು. "ಅನ್ನಾಭಾವದಿಂದ ಕಣ್ಣುಮುಚ್ಚಿ ಮಣ್ಣೂಡುವ ಅಸಂಖ್ಯಕೋಟಿಯ ಬಡಜನಕ್ಕೆ ಅರುಹು ಕೊಡಬೇಕೆನ್ನುವವನು ಮೊದಲು ಅನ್ನ ಕೊಡಬೇಕು. 'ಅನ್ನದೇವರ ಮುಂದೆ ಇನ್ನುದೇವರು ಉಂಟೇ?" ಅನ್ನಾಭಾವ ದಿಂದ ಕೊರಗಿ ಕೊರಗಿ, ಅರುಹಿನ ಲೋಕವನ್ನೇ ಕಾಣದೆ ಬರಿ ಕತ್ತಲೆಯಲ್ಲಿ ತೆವಳಿ, ತಡವರಿಸಿ, ತತ್ತರಿಸಿ ಸತ್ತುಹೋಗುತ್ತಿರುವ ಬಡವಿದ್ಯಾರ್ಥಿ ಲೋಕಕ್ಕೆ ಮೊದಲು ಪ್ರಸಾದವೇರ್ಪಾಡು (ಅನ್ನದ ವ್ಯವಸ್ಥೆ) ಆಗಲೇಬೇಕು, ನಂತರ ಪ್ರಕಾಶವೇರ್ಪಾಡು ತನ್ನಿಂದ ತಾನೇ ಆಗುವದು! ಅದಕ್ಕಾಗಿ **ಮೊದಲು ಪ್ರಸಾದ-ನಿಲಯದ ಸ್ಥಾಪನೆ! ನಂತರ ಪ್ರಕಾಶನಿಲಯದ ಯೋಜನೆ**".

ಈ ನಿರ್ಧಾರಕ್ಕೆ ತಲುಪಿದಾಗ ಇವರು ಥಿಗ್ಗನೇ ಮೇಲೆದ್ದರು. ನಾಗನೂರಲ್ಲಿಯೇ ನಿಂತು ಬೆಳಗಾವಿಯನ್ನು ನಿಟ್ಟಿಸಿದರು. ಆ ಬೆಳಗಾವಿಯನ್ನೇ ತಮ್ಮ ಪ್ರಯೋಗಾಲಯದ ಕೇಂದ್ರವನ್ನಾಗಿ ಮಾಡಿಕೊಂಡು, ಬಲಗೈಯಲ್ಲಿ ವೇತ್ರದಂಡವನ್ನೂ ಎಡಗೈಯಲ್ಲಿ ಜೋಳಿಗೆಯನ್ನೂ ಹಿಡಿದುಕೊಂಡು ಹಳ್ಳಿಹಳ್ಳಿ ಊರೂರು ಸಂಚರಿಸಿ, ಶಾರದಾ ಉಪಾಸಕರಾದ ವಿದ್ಯಾರ್ಥಿಲೋಕದ ಪ್ರಸಾದಕ್ಕೆ ಆಗತ್ಯವಿರುವ ದವಸ, ಧಾನ್ಯ, ಧನ ಮೊದಲಾದವುಗಳನ್ನು ಸಂಗ್ರಹಿಸಿ, ತಾವು ನಿರ್ಮಿಸಿದ ಪರ್ಣಕುಟಿಯನ್ನೇ ತಮ್ಮ ತಪೋಮಹಿಮೆಯಿಂದ, ಪ್ರಕಾಶಬಲದಿಂದ, ಪ್ರಖರ ಸಂಕಲ್ಪಪ್ರಭಾವದಿಂದ, ಪರಶಿವನಲ್ಲಿರಿಸಿದ ಅವಿಚಲ ನಿಷ್ಠೆಯ ಪವಾಡದಿಂದ ಪ್ರಸಾದಸಮಪ್ರಸಾದ ನಿಲಯಕ್ಕೆ ಪರಿವರ್ತಿಸಿ, ಅಲ್ಲಿ ಅಸಂಖ್ಯ ಬಡ ವಿದ್ಯಾರ್ಥಿಗಳ ಪ್ರಸಾದಕ್ಕೆ ಅನುಕೂಲತೆಯನ್ನು ಕಲ್ಪಿಸಿ ಅವರನ್ನು ಪ್ರಕಾಶಪಥದಲ್ಲಿ ನಡೆಸುತ್ತಿರುವ ಚಿತ್ರವು ಅವರ ಮನಶ್ಚಕ್ಷುವಿನ ಮುಂದೆ ಚಲಚ್ಚಿತ್ರದಂತೆ ಸುಳಿದು, ಸರಿದು ಹೋಯಿತು. 'ಹೌದು, ಇದೇ ನನ್ನ ಕಾರ್ಯ! ಇದೇ ನನ್ನ ಕಾಯಕ' ಎಂದು ಅವರ ಹೃದಯಘೋಷಿಸಿತು. ಅದಕ್ಕೆ ಪರಮಾತ್ಮನ ಸಂಕಲ್ಪವೂ ದನಿಗೂಡಿಸಿತು! ಮಾರ್ದನಿಗೊಟ್ಟಿತು.

"ನಾಗನೂರ ಮಠದಲ್ಲಿ ಸುಮ್ಮನೇ ಕುಳಿತು ಮಾಡುವ ಶಿವಪೂಜೆಗಿಂತ ಇಂಥ ಒಂದು ಸಮಾಜೋದ್ಧಾರದ, ಲೋಕೋದ್ಧಾರದ ವಿಧಾಯಕ ಕಾರ್ಯವನ್ನು ರೂಪಿಸುವಲ್ಲಿ ತನ್ನಷ್ಟಕ್ಕೆ ತಾನೇ ಶಿವಪೂಜೆಯೂ ಘಟಿಸುವದು. ಲೋಕಸೇವೆಯೂ ಘಟಿಸುವದು. ಹೀಗೆನ್ನುವದರಿಂದ ಶಿವಪೂಜೆಯನ್ನು ತ್ಯಜಿಸಬೇಕೆಂದು ಅರ್ಥವಲ್ಲ! ಶಿವಪೂಜೆಯ ಜೊತೆಗೆ, ಲೋಕೋಪಕಾರಕ ಲೋಕೋದ್ಧಾರಕ ವಿಧಾಯಕ ಕಾರ್ಯವು ಘಟಿಸಿದರೆ, ಹೆಚ್ಚು ಪ್ರಯೋಜನಕಾರಿ; ಹೆಚ್ಚು ಫಲಪ್ರದ! ಪ್ರತಿಯೊಂದು ವ್ಯಕ್ತಿಯೂ ಪರಶಿವನ ಜೀವಂತ ಶಕ್ತಿಯು. ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಜ್ಞಾನಬ್ರಹ್ಮನ ಕಿರುಮೂರ್ತಿಯು! ಅವನು ಓದುವ ಪ್ರತಿ ಪುಸ್ತಕವೂ ಸಹ ಸಪ್ತಸ್ವರ್ಗಗಳನ್ನು ಮೀರಿನಿಂತ ಪರಮಾತ್ಮನ ಮಸ್ತಕವು! ಅವನು ಪಠಿಸುವ ಪುಸ್ತಕದ, ಗ್ರಂಥದ ಪ್ರತಿ ಪುಟವೂ ವಿಶ್ವರೂಪಿಯಾಗಿ, ವಿರಾಡ್ರೂಪಿಯಾಗಿ ಬೆಳೆದು ನಿಂತ ಮಹಾದೇವನ ಮಂತ್ರಪೂತ ಪಟವು! ಅವನು ಬರೆಯುವ ಪ್ರತಿ ಅಕ್ಷರವೂ ಅಕ್ಷಯವಾದ ಅಕ್ಷರವಾದ ಅದ್ಭುತ ಮಂತ್ರಬೀಜವು. ಅವನ ತಪೋದ್ಭೂತ ನಿತ್ಯನಂದಾದೀಪದ ಪ್ರಕಾಶದಲ್ಲಿ ಸರಸ್ವತಿಯು ನರ್ತಿಸುವಳು. ಅವನ ಸಾಹಸ ಪೌರುಷ ಪ್ರಯತ್ನ-ಸರೋವರದಲ್ಲಿ ಸೌಭಾಗ್ಯಲಕ್ಷ್ಮಿಯು ವರ್ತಿಸುವಳು. ಅದಕ್ಕಾಗಿ ವಿದ್ಯಾರ್ಥಿಯೆಂದರೆ ತ್ರಿಮೂರ್ತಿಗಳನ್ನು ಅಳವಡಿಸಿಕೊಂಡು, ಒಳಗೊಂಡು ನಿಂತ ತಪೋಮೂರ್ತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ತಪ್ರೋಮೂರ್ತಿಯನ್ನು ಮೊದಲು ಬದುಕಿಸು! ಅದಕ್ಕಾಗಿ ಪ್ರಸಾದ ನಿಲಯವನ್ನು ಸ್ಥಾಪಿಸು" ಎಂದು ನವಯುಗಧ್ವ ಉದ್ಘೋಷಿಸಿತು! ಇದನ್ನು ಈ ಶ್ರೀಗಳವರ ಪ್ರತಿ ರೋಮರಂಧ್ರವೂ ಕರ್ಣರಂಧ್ರವಾಗಿ ಆಲಿಸಿತು.

ಪ್ರಸಾದನಿಲಯದ ಪ್ರಾರಂಭ

ಇಂತು ಪ್ರಸಾದ ನಿಲಯವನ್ನು ಸ್ಥಾಪಿಸುವ ನಿರ್ಧಾರದ ಕೆಚ್ಚು ಶ್ರೀಗಳವರ ನರನರಗಳಲ್ಲಿಯೂ ಮೂಡಿ ತೀ ನಾಗನೂರಿಂದ ಶ್ರೀಗಳವರು ಬೆಳಗಾವಿಗೆ ಧಾವಿಸಿದರು. ಭವಿಷ್ಯದ್ಗರ್ಭದಲ್ಲಿ ಮೂಡಿ ನಿಂತ ಪ್ರಸಾದನಿಲಯವು ಅವ ಕೈಮಾಡಿ ಕರೆಯುತ್ತಲೇ ಇದ್ದಿತು. ಅದಕ್ಕೆ ಉತ್ತರವಾಗಿ ಬೆಳಗಾವಿ ದುರ್ಗದಲ್ಲಿ ಪ್ರಾರಂಭದಲ್ಲಿ ಬರಿ ಇಪ್ಪತ್ತೈದು ವಿದ್ಯಾ ಗಳನ್ನೊಳಗೊಂಡು, ತೀರ ಚಿಕ್ಕ ಪ್ರಮಾಣದಲ್ಲಿ ಒಂದು ವಿದ್ಯಾರ್ಥಿ ಪ್ರಸಾದ ನಿಲಯವು ೧೯೩೨ ನೆಯ ಜೂನ ೬ ನೆ ದಿನಾಂಕಕ್ಕೆ ಸ್ಥಾಪಿಸಲ್ಪಟ್ಟಿತು. ದಿನದಿನಕ್ಕೆ ವರುವರುಷಕ್ಕೆ ಬೆಳೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಇ ಒಂದು ಪ್ರಸಾದ ನಿಲಯದ ಅವಶ್ಯಕತೆಯನ್ನು ಕೈಯೆತ್ತಿ ಸಾರತೊಡಗಿತು. ವಿದ್ಯಾರ್ಥಿಗಳ ಸಂಖ್ಯೆ ಬೆಳೆದಷ್ಟೂ ಶ್ರೀ ಮ ಸ್ವಾಮಿಗಳು ಹೆಚ್ಚಿನ ಸಾಹಸ-ಪೌರುಷಗಳಿಂದ ಆತ್ಮ ಭರವಸೆಯಿಂದ ಪ್ರಯತ್ನಿಸುತ್ತ ಪ್ರಸಾದನಿಲಯದ ಯಶಸ್ಸಿಗಾಗಿ ಮುನ್ನ ಗ್ಗತೊಡಗಿದರು. ಆರಂಭದಲ್ಲಿ ಏಕಾಂಗವೀರರಾಗಿ ಅವರು ಕೈಕೊಂಡಿರುವ ಸಾಹಸ--ಪೌರುಷ ಪ್ರಯತ್ನಗಳನ್ನು ಕಣ್ ಕಂಡು ಸಮಾಜವು ತಾನೂ ಸಾವಿರ ಸಾವಿರ ಕೊಡುಗೈಗಳಿಂದ ಮುಂದೆ ಬಂದಿತು.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಹೆಚ್ಚುತ್ತ ಐವತ್ತಕ್ಕೋ ಅರುವತ್ತಕ್ಕೋ ತಲುಪಿದೊಡನೆ, ಬೆಳಗಾವಿ ದುರ್ಗದಲ್ಲಿ ನಿಲಯವು ಸಾಲದಾಯಿತು. ತೀರ ಕಿರಿದೆನಿಸತೊಡಗಿತು. ಅದಕ್ಕಾಗಿ ಅಲ್ಲಿದ್ದ ಪ್ರಸಾದ ನಿಲಯವನ್ನು ಅದಕ್ಕೂ ಪ್ರಶಸ್ತ ವಿಸ್ತಾರವಾದ ನಿಕೇತನಕ್ಕೆ ಸ್ಥಳಾಂತರಿಸುವ ಅವಶ್ಯಕತೆಯು ಮುಂದೆ ಬಂದಿತು. ಅಂತಹ ಒಂದು ಪ್ರಶಸ್ತವಾದ ಭವ್ಯ ಭವನದ ಶೋಧ ನಡೆದಾಗ ಶಹಾಪೂರದಲ್ಲಿದ್ದ ಶ್ರೀ ಬೋಳಮಲ್ಲರವರ ಮನೆಯು ಕಣ್ಣಿಗೆ ಬಿದ್ದಿತು. ಅದು ಐವತ್ತು ಅರುವ ವಿದ್ಯಾರ್ಥಿಗಳ ವಸತಿ ಸೌಕರ್ಯವನ್ನು ಸಹಜವಾಗಿ ನೀಡಬಲ್ಲುದಾಗಿದ್ದುದರಿಂದ ಅದನ್ನೇ ಪ್ರಸಾದ ನಿಲಯಕ್ಕಾಗಿ ಬಾ ಯಿಂದ ಹಿಡಿಯಲಾಯಿತು. ೧೯೪೦ ರ ವರೆಗೆ ಪ್ರಸಾದನಿಲಯವು ಶ್ರೀ ಶ್ರೀಗಳವರ ಮುಖಾಂತರ ತನ್ನ ವ್ಯವಸ್ಥೆಯನ್ನು ಮ ಕೊಳ್ಳುತ್ತ, ದಿನದಿನಕ್ಕೂ ಪ್ರಗತಿಯನ್ನೈದುತ್ತ ಅಲ್ಲಿಯೇ ಉಳಿಯಿತು.

ವರ್ಷ ವರ್ಷಕ್ಕೂ ಬೆಳೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಶ್ರೀ ಬೋಳಮಲ್ಲರವರ ಮನೆಗಿಂತಲೂ ಹೆಚ್ಚು ಪ್ರ ವಾದ ವಿಸ್ತಾರವಾದ ಭವ್ಯವಾದ ಮತ್ತೊಂದು ಮನೆಯ ಸಮಸ್ಯೆಯನ್ನು ಮುಂದೊಡ್ಡಿತು. ಶ್ರೀ ಸ್ವಾಮಿಗಳು ಅಪ್ರತಿ ಸಾಹಸ, ಅವ್ಯಾಹತ ಪೌರುಷ, ಅವಿರತ ಪ್ರಯತ್ನಗಳಿಂದ ಮುಂದೆ, ಮುಂದೆ ನುಗ್ಗುತ್ತಲೇ ಇದ್ದರು. ಬೆಳಗಾವಿ ಜಿಲ್ಲೆ ಪ್ರತಿಯೊಂದು ಹಳ್ಳಿಯೂ, ಪ್ರತಿಯೊಂದು ಪಟ್ಟಣವೂ, ಪ್ರತಿಯೊಂದು ಮೂಲೆಯೂ ಅವರ ಪಾದಸ್ಪರ್ಶ ಪಾದಸಂಚಾರಗಳ ಸಧನವಾಯಿತು. ಅದರ್ಶಿತ ಜಗತ್ತೂ ಅಪರಿಚಿತ ವ್ಯಕ್ತಿಯೂ ಅವರ ಸಂದರ್ಶನ-ಸಂಪರ್ಕಕ್ಕೆ ಬರತೊಡಗಿದವು. ಅವ ಸಂಪರ್ಕದಲ್ಲಿ ಬಂದ ಪ್ರತಿಯೊಂದು ವ್ಯಕ್ತಿಯೂ, ಅವರ ವ್ಯಕ್ತಿತ್ವದ ಪ್ರಭಾವದಿಂದ ತನ್ನ ಸಂಗ್ರಹದ ಜೊತೆಗೆ ತನ್ನ ಹೃದ ವನ್ನೂ ಅವರಿಗೆ ಅರ್ಪಿಸುತ್ತಿದ್ದಿತು. ಹೀಗಾಗಿ ಪ್ರಸಾದನಿಲಯವು ಯಶಸ್ವಿಯಾಗಿ ನಡೆದರೂ ಅದಕ್ಕೆ ಅಗತ್ಯವಿದ್ದ ವಿಸ್ತ ವಾದ ಇಂಪಾದ ಸ್ಥಳದ ಕೊರತೆಯು ಹೆಚ್ಚು ಹೆಚ್ಚಾಗಿ ಭಾಸವಾಗತೊಡಗಿತು.

ಪ್ರಸಾದನಿಲಯದ ಸ್ವತಂತ್ರ ಕಟ್ಟಡ

ಇಂಥ ಸಂದರ್ಭದಲ್ಲಿ, ಸತ್-ಶುಭ-ಸಂಕಲ್ಪಕ್ಕೆ ಪರಶಿವನ ಸಹಾಯವಿದ್ದೇ ಇರುವದೆಂಬ ಅನುಭವವನ್ನು ಜೀವ ಸಾಕ್ಷಿಯಾಗಿ ತೋರಲಿಕ್ಕೆ ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀ ಮಹಾಸ್ವಾಮಿಗಳವರು ತಮ್ಮ ಉದಾರ ಹೃದಯದಿಂದ ಕೊಡುಗೈಗಳಿಂದ ಮುಂದೆ ಬಂದು ಆಶೀರ್ವದಿಸಿದರು. ಅವರ ಔ ರ್ಯದಿಂದ ಪ್ರೇರಿತರಾದ ಅನೇಕ ಜನ ಭಕ್ತರು ತಮ್ಮ ಶಕ್ತ್ಯನುಸಾರವಾಗಿ, ಏಕೆ? ಶಕ್ತಿಮೀರಿಯೂ ಸಾವಿರ ಕೈಗಳಿಂದ ನೆ ನೀಡಲು ಸಿದ್ಧರಾದರು. ಇದರ ಪರಿಣಾಮವಾಗಿ ಶಹಾಪೂರದಲ್ಲಿಯ ಶ್ರೀ ಬೋಳಮಲ್ಲರವರ ಮನೆಯಿಂದ ಬೆಳಗಾವಿಯ ಹನುಮನ ಬೀದಿಯಲ್ಲಿರುವ ಸದ್ಯದ ಭವ್ಯವಾದ ಕಟ್ಟಡಕ್ಕೆ ಈ ಪ್ರಸಾದನಿಲಯವನ್ನು ೧೯೪೩ ರಲ್ಲಿ ಸ್ಥಳಾಂತರಿಸಲಾಯಿತು.

ಮುಂದೆ ಅದೇ ಸ್ಥಳದಲ್ಲಿ ಎರಡು ಎರಡೂವರೆ ಲಕ್ಷ ಹಣವನ್ನು ವೆಚ್ಚಮಾಡಿ, ವಿದ್ಯಾರ್ಥಿಗಳ ವಾಸಕ್ಕೆ ಎಲ್ಲ ಯಿಂದಲೂ ಅನುಕೂಲವಾಗಿರುವ ಇನ್ನೂ ಭವ್ಯವೂ, ಪ್ರಶಸ್ತವೂ, ವಿಸ್ತೃತವೂ ಆಗಿರುವ ಹೊಸ ಕಟ್ಟಡವನ್ನು ನಿರ್ಮಿಸ ಏರ್ಪಾಡನ್ನು ಮಾಡಲಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಹೊಸ ಕಟ್ಟಡದ ಅಡಿಗಲ್ಲ ಸಮಾರಂಭವನ್ನು ಲಿಂಗೈಕ್ಯ ದಾನಶೂರ ಶ್ರೀ. ಬಸರೀಗಿಡದ ವೀರಪ್ಪನವರು ೧೯೪೪ ರಲ್ಲಿ ನೆರವೇರಿಸಿ ತಮ್ಮ ಉದಾರ ಹೃದಯದ ದಾನಶೌರ್ಯಕ್ಕೆ ಸಾಕ್ಷಿಯಾಗಿ ಐವತ್ತೊಂದುನೂರಾ ಎವತ್ತೈದು ರೂಪಾಯಿಗಳನ್ನು ನೂತನ ಕಟ್ಟಡದ ನಿರ್ಮಾಣಕ್ಕಾಗಿ ಸಮರ್ಪಿಸಿದರು.

ಈ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಅಂದಿನ ಮೈಸೂರ ಸಂಸ್ಥಾನದ ಶ್ರೀಮನ್ಮಹಾರಾಜರವರಾದ ಶ್ರೀ. "ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ," ಜಿ. ಸಿ. ಬಿ; ಜಿ. ಸಿ. ಎಸ್. ಐ. ಅವರು ತಮ್ಮ ಅಮೃತಹಸ್ತದಿಂದ ಸೋಮವಾರ ದಿನಾಂಕ ೧೦--೯--೧೯೫೧ ರಂದು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿದರು.

ಇವರಿಗೂ ಹೊಸ ಕಟ್ಟಡದ ಕೋಣಶಿಲೆಯ ಸಮಾರಂಭವನ್ನು ಜರುಗಿಸಿದ ಲಿಂಗೈಕ್ಯ ದಾನಶೂರ ಶ್ರೀ. ಬಸರೀಗಿಡದ ವೀರಪ್ಪನವರಿಗೂ ಈ ವಿದ್ಯಾರ್ಥಿ ಪ್ರಸಾದ ನಿಲಯದ ವ್ಯವಸ್ಥಾಪಕ ಸಮಿತಿಯು ತನ್ನ ಶುಭಾಶಯ ಬೇಡಿಕೆಗಳೊಡನೆ ಬಿನ್ನವತ್ತಳೆಗಳನ್ನು ಸಮರ್ಪಿಸಿತು. [ವಾಚಕರ ಕುತೂಹಲ ತೃಪ್ತಿಗಾಗಿ ಈ ಎರಡೂ ಬಿನ್ನವತ್ತಳೆಗಳನ್ನು ಕೊನೆಗೆ ಕೊಡಲಾಗಿದೆ.]

ಆಗ ಈ ಪ್ರಸಾದ ನಿಲಯದ ಕೀರ್ತಿಯು ಎಲ್ಲೆಡೆಗೂ ಪಸರಿಸಿತು. ಇದರ ನೂತನ ಕಟ್ಟಡದ ಪೂರ್ವಸಿದ್ಧತೆಯಲ್ಲಿಯೂ ಇನ್ನಿತರ ಕಾರ್ಯಕಲಾಪಗಳಲ್ಲಿಯೂ ಕೆಲವೊಂದು ಕಾಲ ಶ್ರೀಶಿವಬಸವಮಹಾಸ್ವಾಮಿಗಳೊಡನೆ ಸಹಕರಿಸಿ ಅವರ ಭುಜಕ್ಕೆ ಭುಜ ಹಚ್ಚಿ, ಕೈಗೆ ಕೈ ನೀಡಿ, ಮನಃಪೂರ್ವಕವಾಗಿ ಪರಿಶ್ರಮಿಸಿದ ಇನ್ನೊರ್ವ ವ್ಯಕ್ತಿಗಳೆಂದರೆ ಶೇಗುಣಸಿಯ ಲಿಂಗೈಕ್ಯ ಶ್ರೀಮನ್ನಿರಂಜನ ಪ್ರ. ಸ್ವ. ಶ್ರೀಮುರುಘೇಂದ್ರ ಮಹಾಸ್ವಾಮಿಗಳವರು. ಅವರ ಮುಗ್ಧ, ಸ್ನಿಗ್ಧ, ಶಿಶುಸ್ವಭಾವ, ಬಾಲಭಾವ, ನಿಷ್ಕಪಟವರಿಯದ ಸರಳ ಸಚ್ಛೀಲ ಪ್ರಭಾವ ಇವು ಎಂಥವರ ಮನಸ್ಸನ್ನಾದರೂ ಸೂರೆಗೊಳ್ಳುತ್ತಿದ್ದವು. ಇವರು ವಹಿಸಿದ ಪಾತ್ರವು ಅಲ್ಪಾವಧಿಯದಾದರೂ, ಅನರ್ಘ್ಯವಾದುದು ! ಅನುಪಮವಾದುದು !! ಅಮೋಘವಾದುದು !!!

ಮನೆಯಿಂದ ಮನೆಗೆ ಅಲೆಯುವ ಬೆಕ್ಕಿನ ಬಾಳಿನಂತೆ, ಬಾಡಿಗೆಯ ಮನೆಯಿಂದ ಮನೆಗೆ ಸ್ಥಳಾಂತರಿಸಲ್ಪಡುತ್ತಿದ್ದ ಈ ಪ್ರಸಾದ ನಿಲಯವು ಶ್ರೀಮಹಾಸ್ವಾಮಿಗಳ ಶಕ್ತಿಮೀರಿದ ಸಾಹಸ ಪ್ರಯತ್ನಗಳಿಂದ, ವ್ಯವಸ್ಥಾಪಕ ಸಮಿತಿಯ ಸಹಾಯ ಸಹಕಾರ ಸಹಾನುಭೂತಿ ಮೇಲ್ವಿಚಾರಣೆಗಳಿಂದ, ಉದಾರಾಂತಃಕರಣಿಗಳ, ಪ್ರಸಾದ ನಿಲಯದ ಹಿತಚಿಂತಕರ ಅಮೂಲ್ಯವಾದ ಕೊಡುಗೆ ಕಾಣಿಕೆಗಳಿಂದ, ನಿಸ್ವಾರ್ಥಿ ಮುಖಂಡರ, ಹಿರಿಯರ, ಹಿರಿಯ ಅಧಿಕಾರಿಗಳ ಸೂಕ್ತ ಸಲಹೆಗಳಿಂದ, ಈ ಧ್ಯೇಯೋದ್ದೇಶಗಳ ಸಫಲತೆಯಲ್ಲಿ ಆಸಕ್ತಿಯುಳ್ಳ ಕಳಕಳಿಯ ದುಡಿಮೆಗಾರರಿಂದ, ಇದರ ಪರಿಪೂರ್ಣತೆಗೆ ಅಗತ್ಯವಿರುವ ಇನ್ನಿತರ ಅಪರೋಕ್ಷ, ಅಪ್ರತ್ಯಕ್ಷ ವಿವಿಧ ಸೇವೆಯಿಂದ ಅನುಭವಿಕ ಕಾರ್ಯಕರ್ತರ ಸಮರ್ಥ ಮಾರ್ಗದರ್ಶನದಿಂದ, ತನ್ನದೇ ಆದ ಒಂದು ಸ್ವಂತ ಸ್ವತಂತ್ರ ಕಟ್ಟಡವನ್ನು ನಿರ್ಮಿಸಿಕೊಂಡು, **ಮೂರ್ನಾಲ್ಕುನೂರು** ವಿದ್ಯಾರ್ಥಿಗಳ ವಸತಿ ಸೌಕರ್ಯವನ್ನೂ ಪ್ರಸಾದ ಕಾರ್ಯವನ್ನೂ ಅವರ ವಿದ್ಯಾಭ್ಯಾಸಕ್ಕೂ ಜ್ಞಾನಾರ್ಜನೆಗೂ ಪೋಷಕವಾಗುವ ಮತ್ತಿತರ ಸಾಧನ ಸಾಮುಗ್ರಿ ಸೌಲಭ್ಯಗಳನ್ನೂ ಒದಗಿಸಿಕೊಡುವ ಸಾಮರ್ಥ್ಯವನ್ನು ಪಡೆದು ತನ್ನ ಮೊದಲ ಘಟ್ಟವನ್ನೂ ಮಟ್ಟವನ್ನೂ ಮುಟ್ಟಿತು.

ಮೈಸೂರ ಸಂಸ್ಥಾನದ ಶ್ರೀಮನ್ಮಹಾರಾಜರವರಾಗಿದ್ದ "ಶ್ರೀ. ಜಯಚಾಮರಾಜೇಂದ್ರ ಒಡೆಯರ್ ಬಹಾದ್ದೂರ್" ಜಿ. ಸಿ. ಬಿ; ಜಿ. ಸಿ. ಎಸ್. ಐ; ಅವರಿಗೆ ದಿನಾಂಕ ೧೦-೯-೫೧ ರಂದು ಈ ಪ್ರಸಾದ ನಿಲಯದ ಪರವಾಗಿ ವ್ಯವಸ್ಥಾಪಕ ಸಮಿತಿಯು ಸಮರ್ಪಿಸಿದ ಬಿನ್ನವತ್ತಳೆಯಲ್ಲಿ!–

"....ಜಾತಿ-ಮತ ಪಂಥಾತೀತವಾದ ಛಾತ್ರಕುಲವು ಶಿಕ್ಷಣ-ಸಂಸ್ಕೃತಿ ಪದಕೇರುವೊಡೆ, ಎನಿತೆನಿತು ಸಾಧನಗಳೋ ! ಎನಿತೆನಿತು ಯೋಜನೆಗಳೋ ! ವಾಚನಾಲಯಂ ! ಮುದ್ರಣ ಯಂತ್ರಂ ! ಗೃಹೋದ್ಯೋಗ-ಗ್ರಾಮೋದ್ಯೋಗ-ಮೂಲೋದ್ಯೋಗ ಸಾಧನಂ ! ಸಂಗೀತ ಬೋಧನಂ ! ವಿಜ್ಞಾನ–ಶೋಧನಂ ! ಈ ಒಂದು ಸ್ವರ್ಣಸ್ವಪ್ನಂ ಸಂಸ್ಕೃತಿ-ಕೇಂದ್ರಮಾದ ತಮ್ಮಿಂದೆ ಸಾರ್ಥ ಕೇಂದ್ರಮಾಗದಿಹುದೇ ? "

ಎಂದು ಈ ಪ್ರಸಾದ ನಿಲಯದಲ್ಲಿ ನಿಂತು ಅಧ್ಯಯನ-ಅಭ್ಯಾಸಗಳ ಮೂಲಕ ತಮ್ಮ ಅಂತರ್ಬಾಹ್ಯ ಪರಿಪೂರ್ಣತೆಗಾಗಿ ಜ್ಞಾನಾರ್ಜನೆಗೈಯುತ್ತಿರುವ ವಿದ್ಯಾರ್ಥಿಗಳಿಗೆ, ಆ ಜ್ಞಾನಾರ್ಜನೆಗೆ, ಆ ವಿದ್ಯಾಭ್ಯಾಸಕ್ಕೆ ಪೋಷಕವಾಗುವ ವಾಚನಾಲಯ, ಮುದ್ರಣಯಂತ್ರ, ಗೃಹೋದ್ಯೋಗ, ಗ್ರಾಮೋದ್ಯೋಗ, ಮೂಲೋದ್ಯೋಗ ಸಾಧನೆ, ಸಂಗೀತ-ಬೋಧನೆ, ವಿಜ್ಞಾನಶೋಧನೆ–ಈ ಮೊದಲಾದ ಶಾಖೋಪಶಾಖೆಗಳನ್ನೂ ನಡೆಯಿಸುವ ಏರ್ಪಾಡಾಗಬೇಕೆಂದು ತನ್ನ ಆಶಯಗಳನ್ನೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೇಡಿಕೆಗಳನ್ನೂ ಮುಂಡಿಸಿದ್ದಿತು. ಆದರಂತೆ ಎಂದಿನಿಂದಲೂ ಇವೆಲ್ಲವುಗಳನ್ನೂ ಶಕ್ತಿಮೀರಿಯೂ ಹೆಣಗಿ ಅಸ್ತಿತ್ವದಲ್ಲಿ ಪ್ರಸಾದ ನಿಲಯದ ಪರವಾಗಿ ನಡೆಯಿಸುವ ಯೋಚನೆ-ಯೋಜನೆಗಳನ್ನೂ ಇಟ್ಟುಕೊಂಡಿದೆ.

ಪ್ರಸಾದ ನಿಲಯದ ವಿವಿಧಾಂಗಗಳು

ಪರಿಣಾಮವಾಗಿ ಒಂದು ವಾಚನಾಲಯ ಅಥವಾ ಗ್ರಂಥ ಭಾಂಡಾರವು ಸ್ಥಾಪಿತವಾಗಿದೆ. ಇಲ್ಲಿ ಸದ್ಯಕ್ಕೆ ಇಂಗ್ಲಿಷ್, ಸಂಸ್ಕೃತ, ಮರಾಠಿ, ಹಿಂದೀ ಭಾಷೆಗಳ ಸಾವಿರಾರು ಗ್ರಂಥಗಳನ್ನು ಸಂಗ್ರಹಿಸಲಾಗಿದೆ. ಜೊತೆಗೆ ಶಕ್ಯವಿದ್ದೆಡೆ ಲಭಿಸಬಹುದಾದ ಎಷ್ಟೋ ತಾಡೋಲೆಯ ಹಳೆಯ ಗ್ರಂಥಗಳನ್ನೂ ಕಲೆಹಾಕಲಾಗಿದೆ. ಇದರಿಂದ ವಿದ್ಯಾರ್ಥಿಗಳ ಜ್ಞಾನಾ ಹೆಚ್ಚಿನ ಪೋಷಣೆ ದೊರೆಯುವದಲ್ಲದೆ, ಅವರಲ್ಲಿ ವಾಚನಾಭಿರುಚಿಯನ್ನೂ ಸಂಶೋಧನಾಭಿರುಚಿಯನ್ನೂ ಹೆಚ್ಚಿ ಅನುಕೂಲವೂ ಆಗುವದು.

ಈ ಪ್ರಸಾದ ನಿಲಯದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವಲ್ಲಿ ಪ್ರಧಾನಪಾತ್ರ ವಹಿಸಿದ ಹುಬ್ಬ ಮೂರುಸಾವಿರ ಮಠದ ಲಿಂಗೈಕ್ಯ ಶ್ರೀಮನ್ನಿರಂಜನ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳವರಿಗೆ ಕೃತ ಸಮರ್ಪಣೆಮಾಡುವ ದೃಷ್ಟಿಯಿಂದ, ಅವರ ಸ್ಮಾರಕವಾಗಿ ಈ ಗ್ರಂಥಭಾಂಡಾರಕ್ಕೆ " ಶ್ರೀ ಜಗದ್ಗುರು ಗುರುಸಿದ್ಧ ಗ್ರಂಥಭಾಂಡಾರ "ವೆಂದು ನಾಮಕರಣಮಾಡಿದ್ದು, ಆಯಿಲ್ ಕಿಂಗ " (Oil King) ಅಂದರೆ '' ಸ್ನೇಹಭೂಪ " (ಸ್ನೇ ತೈಲವೆಂದೂ ಅರ್ಥವುಂಟು) ರೆಂದು ಪ್ರಸಿದ್ಧಿಪಡೆದಿದ್ದ ಲಿಂಗೈಕ್ಯ ಶ್ರೀ ಭೂಪರೆಡ್ಡಿ ಬಸವಪ್ಪನವರ ಸ್ನಿಗ್ಧ ಅಮೃತ ಹಸ್ತ ಇದರ ಅನಾವರಣವನ್ನು ೨೬—೯—೧೯೫೫ ರಂದು ಮಾಡಲಾಯಿತು. ದಿನದಿನಕ್ಕೂ ಒಂದಿಲ್ಲೊಂದು ರೀತಿಯಿಂದ ಗ್ರ ಗಳು ಸಂಗ್ರಹಿತವಾಗಿ ಗ್ರಂಥಾಲಯವು ಬೆಳೆಯುತ್ತಲೇ ಇದೆ.

ಶ್ರೀ ಮೃತ್ಯುಂಜಯ ಗವಯಿಗಳೆಂಬವರು ಸಂಗೀತದ ಕಡೆಗೆ ಒಲವಿರುವ ಈ ಪ್ರಸಾದ ನಿಲಯದ ವಿದ್ಯಾರ್ಥಿಗಳಿಗೆ ಸ್ವರರ ಅನುಕೂಲತೆಯ ಪ್ರಕಾರ ಸಂಗೀತ ಬೋಧನೆಯನ್ನೂ ಮಾಡುತ್ತಿರುವರು ಇದು ಕೇವಲ ಪ್ರಾರಂಭವೇ ಎಂದು ಹೇಳಬೇಕೇ ?

ಈ ಸಂಗೀತ ಬೋಧನೆಯ ಪ್ರಗತಿಯ ಜೊತೆಗೆ, ವಿದ್ಯಾರ್ಥಿಗಳ ಭಾವೀ ಜೀವನದ ಸ್ವಾವಲಂಬನೆಯ ದೃಷ್ಟಿಯಿ ಈ ಪ್ರಸಾದ ನಿಲಯದ ಪರವಾಗಿ ಇನ್ನೂ ಒಂದು ದೊಡ್ಡ ಮುದ್ರಣಯಂತ್ರವು, ಆಧುನಿಕ ಯಾಂತ್ರಿಕ ಸೌಕರ್ಯೋಪಕರ ಳೊಂದಿಗೆ ಸ್ಥಾಪಿಸಲ್ಪಡಬೇಕಾಗಿದೆ.

ವಿಜ್ಞಾನದ ವಿವಿಧ ಮುಖ ಸಂಶೋಧನೆಗೆ ಅನುಕೂಲವಾಗುವಂತಹ, ವಿಜ್ಞಾನ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಉ ರಣಗಳನ್ನೊಳಗೊಂಡ ಒಂದು ಮಹಾ ಪ್ರಯೋಗ ಶಾಲೆಯೂ ಅಸ್ತಿತ್ವದಲ್ಲಿ ಬರಬೇಕಾಗಿದೆ.

ದಿಗ್ದೇಶಗಳಿಂದ ಇಲ್ಲಿ ಬಂದು, ಕಲೆತು ಕಲಿತು ಹೋಗುವ ಅಸಂಖ್ಯ ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆಗೆ ಅನುಕ ವಾಗುವಂತಹ ಒಂದು ದೊಡ್ಡ ಔಷಧಾಲಯವೂ-ಚಿಕಿತ್ಸಾಲಯವೂ ಸ್ಥಾಪಿಸಲ್ಪಡಬೇಕು. ರೋಗಗಳ ನಿದಾನವನ್ನು ಕಂ ಹಿಡಿದು, ಅದಕ್ಕೆ ಯೋಗ್ಯ ಔಷಧೋಪಚಾರವನ್ನು ಸಕಾಲಕ್ಕೆ ಒದಗಿಸುವ, ಪ್ರಸಂಗಬಿದ್ದಲ್ಲಿ ಶಸ್ತ್ರಚಿಕಿತ್ಸೆಯನ್ನೂ ಮಾಡು ಯೋಗ್ಯ ಅನುಭವಿಕ, ತಜ್ಞ, ನಿಸ್ಸ್ವಾರ್ಥ ವೈದ್ಯರೂ ಶಸ್ತ್ರಚಿಕಿತ್ಸಕರೂ ಇಲ್ಲಿ ಸಕಾಲಿಕ ತೃಪ್ತಿಕರ ಕಾರ್ಯವನ್ನು ಸೇವಾಭಾ ಯಿಂದ ಮಾಡುವಂತಾಗಬೇಕು.

ಸದ್ಯಕ್ಕೆ ಪ್ರಸಾದನಿಲಯ ವಿದ್ಯಾರ್ಥಿಗಳ ರೋಗನಿವಾರಣೆಗಾಗಿ ಔಷಧೋಪಚಾರವನ್ನು ನೀಡಲು ಡಾಕ್ಟರರೀರ್ವ (ವೈದ್ಯರಿಬ್ಬರು) ಮುಂದೆ ಬಂದು ನೆರವು ನೀಡುತ್ತಿರುವರು. ಇದು ಈ ದಿಶೆಯಲ್ಲಿ ಆಗಬೇಕಾದ ಮಹಾಕಾರ್ಯದ ಕೇ ಆರಂಭವೇ ಸರಿ !

ರೋಗ ನಿವಾರಣೆ, ರೋಗಚಿಕಿತ್ಸೆಗಳಿಗಿಂತ, ರೋಗ ಪ್ರತಿಬಂಧವು ಹೆಚ್ಚು ಲೇಸು. ವಿದ್ಯಾರ್ಥಿಗಳ ದೇಹ ಅಂಗಾಂಗಗಳು ಸುವ್ಯವಸ್ಥಿತವಾಗಿ, ಸುಂದರವಾಗಿ ಹೃಷ್ಟ ಪುಷ್ಟ ಬಲಿಷ್ಠವಾಗಿ, ಪ್ರಮಾಣಬದ್ಧವಾಗಿ ತೇಜಃಪುಂಜವಾಗಿ ಅ ಬಾಹ್ಯದಲ್ಲಿ ಬೆಳೆದು ಅವರ ಅಂತರಿಕ ಧೀಶಕ್ತಿಯೊಡನೆ ಬಾಹ್ಯದೇಹದ ಭೀಮ-ವಜ್ರ-ಶಕ್ತಿಯೂ ಸಂಗಮಿಸಿ ಅಂತಃಪ್ರವೇಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಣಿಯಾಗುತ್ತಿರುವ ರೋಗಪಡೆಯನ್ನು ಪ್ರತಿರೋಧಿಸಿ ಪ್ರತಿಬಂಧಿಸಿ, ಅವರು ಆರೋಗ್ಯ-ಸಾಮರ್ಥ್ಯಶಾಲಿಗಳಾದ, ಅದ್ಭುತ ಶಕ್ತಿಯ ಅಸಾಮಾನ್ಯ ಆದರ್ಶ ಮಾನವರಾಗಬೇಕಾದರೆ, ಈ ಪ್ರಸಾದನಿಲಯದ ಅಂಗವಾಗಿ ಒಂದು ವ್ಯಾಯಾಮ ಶಾಲೆಯೂ ಅಗತ್ಯವು. ಇದು ಶಾರೀರಿಕ ಬಲಸಂವರ್ಧನೆಯ ಆಧುನಿಕ ಶಾಸ್ತ್ರೋಕ್ತ-ಶಾಸ್ತ್ರಸಮ್ಮತ-ಸಕಲ ಸಾಹಿತ್ಯೋಪಕರಣ ಗಳಿಂದೊಡಗೂಡಿರಬೇಕು. ಇಲ್ಲಿ ರೋಗ-ರಾಹಿತ್ಯದ ಬಲ ಸಂವರ್ಧನೆಯ ಸಾಧನದ ಜೊತೆಗೆ ಯೋಗ-ಸಾಹಿತ್ಯದ ಸಾಧನವೂ ರೂಪುಗೊಳ್ಳಬೇಕು. ಅಸ್ತಿತ್ವದಲ್ಲಿ ಬರಬೇಕು. ದೇಹಾರೋಗ್ಯವರ್ಧಕ ವಿವಿಧ ಯೋಗಾಸನಗಳ ಜೊತೆಗೆ ಅಂತರಿಂದ್ರಿಯ ವಿಕಾಸಕ್ಕೆ ಅನುಕೂಲವಾದ ಅಷ್ಟಾಂಗ ಯೋಗವೂ, ಸ್ಥಾಪಿತವಾಗಬಹುದಾದ ಆದರ್ಶ ವ್ಯಾಯಾಮ ಶಾಲೆಯಲ್ಲಿ ಸಮಾವೇಶ ಗೊಳ್ಳಬೇಕು.

ಇನ್ನು ಗೃಹೋದ್ಯೋಗ-ಗ್ರಾಮೋದ್ಯೋಗ-ಮೂಲೋದ್ಯೋಗ ಸಾಧನಗಳೂ ಇಲ್ಲಿ ಕರಗತವಾಗಬೇಕು. ಇವುಗಳಿಂದ ಮಹಾತ್ಮಾಗಾಂಧೀಜಿಯವರ ಸ್ವರ್ಣ ಸ್ವಪ್ನವಾಗಿದ್ದ ಸುರಾಜ್ಯವು, ಸ್ವಾವಲಂಬನೆಯ ಸ್ವತಂತ್ರ ರಾಜ್ಯವು ನನಸಾಗುವದಲ್ಲದೆ ಶ್ರೀ ಬಸವಣ್ಣನವರ ಕಾಯಕ ಸ್ವಪ್ನವೂ ಕೃತಿಗಿಳಿಯುವದು.

ಹೆಣ್ಣುಮಕ್ಕಳ ಪ್ರಸಾದ ನಿಲಯ

ಈ ಗೃಹೋದ್ಯೋಗ ಗ್ರಾಮೋದ್ಯೋಗ ಮೂಲೋದ್ಯೋಗಗಳ ಪ್ರಗತಿಯ, ವಿಕಾಸದ ಬಗೆಗೆ ಹೇಳಬೇಕಾದರೆ ಈ ಗೃಹೋದ್ಯೋಗಗಳು ಗೃಹಿಣಿಯೆಂದೆನ್ನಿಸಿಕೊಳ್ಳುವ ಹೆಣ್ಣು ಮಕ್ಕಳಿಗೇನೇ ಗಂಡಸರಿಗಿಂತ ಹೆಚ್ಚಾಗಿ ಒಗ್ಗತಕ್ಕವು! ಇಂದಿನ ಬಿಕ್ಕಟ್ಟಿಯ ಮತ್ತು ಕೊರತೆಯ ಜೀವನದಲ್ಲಿ ಸಂಸಾರ ನಿರ್ವಹಣೆಗೆ ಸತಿಪತಿಗಳಿರ್ವರೂ ತಮ್ಮ ತಮ್ಮ ಪರಿಸ್ಥಿತಿಗನುಗುಣವಾಗಿ ಉಪಜೀವನಕ್ಕೂ ಜೀವನಕ್ಕೂ ಸಾಧನವಾದ, ಒಂದೊಂದು ಕಾಯಕವನ್ನೋ ಉದ್ಯೋಗವನ್ನೋ ಕೈಕೊಳ್ಳುವದು ಅನಿವಾರ್ಯವೂ ಆಗಿದೆ! ಅಗತ್ಯವೂ ಆಗಿದೆ! ಹತ್ತೀ ಹಿಂಜುವದು, ನೂಲುವದು, ನೆಯ್ಯುವದು, ಹೊಲಿಗೆ, ಹೆಣಿಗೆ, ಕಸೂತಿ ಈ ಮೊದಲಾದ ಉದ್ಯೋಗಗಳನ್ನು ಹೆಣ್ಣುಮಕ್ಕಳು, ನಿರಕ್ಷರಿಗಳಿರಲಿ, ಅಲ್ಪಶಿಕ್ಷಿತೆಯರಿರಲಿ, ಮನೆಯಲ್ಲಿಯೇ ಕುಳಿತುಕೊಂಡು, ಕೈಕೊಂಡು, ತಮ್ಮ ದುಡಿಮೆಯಿಂದ ಸಂಸಾರ ನಿರ್ವಹಣೆಯಲ್ಲಿ ಪತಿಗೆ ನೆರವಾಗಬಹುದು. ಈ ಗೃಹೋದ್ಯೋಗ-ಗ್ರಾಮೋದ್ಯೋಗ-ಮೂಲೋದ್ಯೋಗಗಳ ಕ್ಷೇತ್ರಗಳಲ್ಲಿ ಹೆಚ್ಚಾಗಿ ಶಿಕ್ಷಣ ಪಡೆದವರು, ಹೆಚ್ಚಿನ ಶಿಕ್ಷಣ ಪಡೆದವರು, ಆ ಶಿಕ್ಷಣದ ಪಾತ್ರತೆಗೆ ಅನುಗುಣವಾಗಿ, ವಿವಾಹಿತೆಯರಿದ್ದರೆ ತಮ್ಮ ತಮ್ಮ ಪತಿಯ ಸಲಹೆಯಂತೆ, ಅವಿವಾಹಿತೆಯರಿದ್ದರೆ, ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಶೀಲಮರ್ಯಾದೆಗಳಿಗೆ ಚ್ಯುತಿ ಬರದಂತಹ ಯಾವುದಾದರೊಂದು ವೃತ್ತಿಯನ್ನೋ ಊಳಿಗವನ್ನೋ ನೌಕರಿಯನ್ನೋ ಕೈಕೊಂಡು ಪ್ರಪಂಚವನ್ನು ಸಾಗಿಸಬಹುದು. ಆಧ್ಯಾತ್ಮಿಕ ಪ್ರಪಂಚದಲ್ಲಿ ಉರ, ಶಿರ, ಕರಗಳ ಸಮನ್ವಯವಾದಂತೆ ಲೌಕಿಕ ಪ್ರಪಂಚದಲ್ಲಿಯೂ ಇವುಗಳ ಸಮನ್ವಯವು ಅಗತ್ಯವಿದೆ, ಉರ ಅಂದರೆ ಹೃದಯ ಅರ್ಥಾತ್ ಭಕ್ತಿ, ಶಿರ ಅಂದರೆ ತಲೆ ಅರ್ಥಾತ್ ಜ್ಞಾನ, ಕರ ಅಂದರೆ ಕೈಯು ಅರ್ಥಾತ್ ಕ್ರಿಯೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಈ ಭಕ್ತಿಜ್ಞಾನಕ್ರಿಯೆಗಳ ಸಮನ್ವಯದ ಅಗತ್ಯವಿದ್ದಂತೆ ಲೌಕಿಕ ಕ್ಷೇತ್ರದಲ್ಲಿ ಒಂದು ಉದ್ಯೋಗ (ಕ್ರಿಯೆ) ಆ ಉದ್ಯೋಗಕ್ಕೆ ಸಂಬಂಧಿಸಿದ ಜ್ಞಾನ ಮತ್ತು ಆ ಉದ್ಯೋಗ, ಆ ಉದ್ಯೋಗಕ್ಕೆ ಸಂಬಂಧಪಟ್ಟ ಜ್ಞಾನ ಇವುಗಳ ಬಗೆಗೆ ಆಸಕ್ತಿ (ಭಕ್ತಿ) ಇವು ಅಗತ್ಯವಾಗಿವೆ!

ವೇದಕಾಲದಿಂದಲೂ ಇಂದಿನವರೆಗೆ ನಮ್ಮ ನಾಡು ಒಂದೊಂದು ಕ್ಷೇತ್ರದಲ್ಲಿಯೂ ಹೆಸರಾಂತ ಸ್ತ್ರೀಯರಿಂದ ಹೆಸರಾಗಿದೆ. ಪ್ರಕಾಶಮಾನವಾಗಿದೆ. ಬ್ರಹ್ಮಚಾರಿಣಿಯರು, ಬ್ರಹ್ಮವಾದಿನಿಯರು, ಆಧ್ಯಾತ್ಮಿಕ ತುಟ್ಟತುದಿಯನ್ನು ಮುಟ್ಟಿದ ವೀರವಿರಾಗಿಣಿಯರು, ಪಾಂಡಿತ್ಯದಲ್ಲಿ, ಜ್ಞಾನದಲ್ಲಿ ಪುರುಷರನ್ನೇ ಸೋಲಿಸಿದ ವೀರವಿದುಷಿಯರು, ಪ್ರತಿಭಾ ಸಂಪನ್ನೆಯರಾದ ಕವಯಿತ್ರಿಯರು, ದೇಶಕ್ಕಾಗಿ ಆತ್ಮಾರ್ಪಣೆ ಮಾಡಿದ ವೀರಮಹಿಳೆಯರು, ಮಿಂಚಿದ ಮಹಿಳೆಯರು, ವಿವಿಧ ಕಲಾವಿದೆಯರು, ಕಲಾಪ್ರವೀಣೆಯರು, ಒಂದೊಂದು ಉದ್ಯೋಗದಲ್ಲಿಯೂ ವೃತ್ತಿಯಲ್ಲಿಯೂ ದುಡಿದುಡಿದು ಅನುಭವಪರಿಪೂರ್ಣತೆಯನ್ನು ಪಡೆದ ಉದ್ಯೋಗ ನಿಪುಣೆಯರು, ವೃತ್ತಿ-ನಿಷ್ಣಾತೆಯರು, ತಮ್ಮ ಹಿತೋಪದೇಶದ ಜ್ಯೋತಿಯಿಂದ, ತಪದ ತೇಜದಿಂದ, ಸಚ್ಛೀಲದ ಪ್ರಖರತೆಯಿಂದ ಅನುಭವ-ಅನುಭಾವಗಳ ವಿದ್ಯುತ್ಪ್ರಭೆಯಿಂದ ಕೈಹಿಡಿದ ಪತಿಯನ್ನು ಸದ್ಗತಿಗೆ ಊರ್ಧ್ವಗತಿಗೆ ಉದ್ಧರಿಸಿದ ಆದರ್ಶ ಸತಿ, ಪತಿವ್ರತಾ ಶಿರೋಮಣಿ, ಸಾಧ್ವಿ, ತ್ಯಾಗಿನಿ, ಯೋಗಿನಿ ಈ ಮೊದಲಾದವರಿಂದ ನಮ್ಮ ನಾಡು ಪವಿತ್ರವಾಗಿದೆ, ಪ್ರೋಜ್ಜ್ವಲವಾಗಿದೆ!

ಪುರುಷರ ಜೊತೆಗೆ ಸ್ತ್ರೀಯರೂ ಇಂದಿನ ಪರಿಸ್ಥಿತಿಯಲ್ಲಿ ಲೌಕಿಕ ಮತ್ತು ಆಧ್ಯಾತ್ಮಿಕ ಪ್ರಪಂಚವೆರಡರಲ್ಲಿಯೂ ಈ ಮೊದಲು ವಿವರಿಸಿದಂತೆ ಉರಶಿರಕರಗಳ ಸಮನ್ವಯವನ್ನು ಸಾಧಿಸಬೇಕಾಗಿದೆ. ಅಂದರೇನೇ ದಾಂಪತ್ಯ ಜೀವನವಾಗಲೀ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವತಂತ್ರ ಜೀವನವಾಗಲೀ ಸುಗಮವಾಗಿ ಸಾಗಬಲ್ಲನು. ಇದನ್ನು ಆಳವಾಗಿ ವಿಚಾರಿಸಿ, ಶಿಕ್ಷಣಕ್ಕಾಗಿ ಹಾತೊರೆಯು ಬಡ ಹೆಣ್ಣು ಮಕ್ಕಳ ಸಲುವಾಗಿ, ಈ ಪ್ರಧಾನ ಪ್ರಸಾದನಿಲಯದ ಅಂಗವಾಗಿ, ಒಂದು ಪ್ರತ್ಯೇಕ ಹೆಣ್ಣುಮಕ್ಕಳ (ವಿದ್ಯಾ ನಿಯರ) ಪ್ರಸಾದ ನಿಲಯವನ್ನು ೧೯೬೨ ನೇ ಇಸ್ವಿಯಲ್ಲಿ ಬೆಳಗಾವಿಯ ಶೆಟ್ಟಿಬೀದಿಯಲ್ಲಿಯ ಒಂದು ಬಾಡಿಗೆಯ ಮ ಪ್ರಾರಂಭಿಸಿದರು. ಆರಂಭದಲ್ಲಿ ೫ ವಿದ್ಯಾರ್ಥಿನಿಯರಿದ್ದರು. ಸದ್ಯಕ್ಕೆ ೩೦ ವಿದ್ಯಾರ್ಥಿನಿಯರಿರುವರು. ಪ್ರಾಥಮಿಕ ಶ ಶಿಕ್ಷಣವನ್ನು ಮೊದಲು ಮಾಡಿಕೊಂಡು, ಹಾಯ್‌ಸ್ಕೂಲು, ಕಾಲೇಜು, ಟ್ರೇನಿಂಗ ಕಾಲೇಜು ಈ ಮೊದಲಾದವುಗಳ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿನಿಯರು ಇರುವರಿಲ್ಲಿ. ವಿದ್ಯಾರ್ಥಿ ಪ್ರಸಾದನಿಲಯದ ಮುಖಾಂತರವಾಗಿಯೇ ವಿದ್ಯಾರ್ಥಿನಿಯರಿಗೆ ಪ್ರಸಾದದ ಏರ್ಪಾಡು ಆಗುತ್ತಿರುವದು.

ಈ ಎಲ್ಲ ವಿದ್ಯಾರ್ಥಿನಿಯರ ಮೇಲ್ವಿಚಾರಣೆಗಾಗಿ ಮಾರ್ಗದರ್ಶನಕ್ಕಾಗಿ ನಿವೃತ್ತ ಶಿಕ್ಷಕಿಯರಿಬ್ಬರನ್ನು ನೇಮಿಸಲಾ

ಈ ಹೆಣ್ಣುಮಕ್ಕಳಿಗೆ ಶಾಲೆ, ಹಾಯ್‌ಸ್ಕೂಲ, ಕಾಲೇಜ ಈ ಮೊದಲಾದ ಸಂಸ್ಥೆಗಳ ಶಿಕ್ಷಣದ ಜೊತೆಗೆ ಗೃಹೋ ಶಿಕ್ಷಣದ ಸೌಕರ್ಯವನ್ನೂ ಒದಗಿಸಬೇಕೆಂಬ ಅಂಶವನ್ನು ಲಕ್ಷದಲ್ಲಿಟ್ಟು, ಇದರ ಶ್ರೀಕಾರ ಹಾಕಿದಂತೆ ಸದ್ಯಕ್ಕೆ ಎರಡು ಗೆಯ ಯಂತ್ರಗಳನ್ನು ಹೆಣ್ಣುಮಕ್ಕಳ ಪ್ರಸಾದ ನಿಲಯಕ್ಕೆ ಪೂರೈಸುವ ವ್ಯವಸ್ಥೆ ಮಾಡಿರುವರು. ಹೊಲಿಗೆಯನ್ನು ಬೇಕೆನ್ನುವ ಹೆಣ್ಣುಮಕ್ಕಳೆಲ್ಲರೂ ಈ ಯಂತ್ರಗಳ ಉಪಯೋಗವನ್ನು ಮಾಡಿಕೊಳ್ಳುವರು. ಹೀಗೆ, ತಮ್ಮ ನಿತ್ಯದ ಅಭ್ಯಾ ಜೊತೆಗೆ, ಹೆಣ್ಣುಮಕ್ಕಳೂ ಜೀವನೋಪಾಯಕ್ಕೆ ಸಾಧನವಾಗಬಲ್ಲ ಒಂದು ಕಲೆಯನ್ನು ಕಲಿಸಲು ಮಾಡಿದ ಏರ್ಪಾಡು ಶ್ರೀ ದೂರದೃಷ್ಟಿಯನ್ನು ಸಾರುವಂತಿದೆ. ಅದು ಇನ್ನೂ ದೊಡ್ಡದಾಗಿ ಬೆಳೆಯಲೆಂದು ಶ್ರೀಗಳವರ ಮನೀಷೆಯಿದೆ.

ಸಂಸ್ಕೃತ ಭಾಷೆಯ ಮಹತ್ವವನ್ನೂ, ಅದರ ಪ್ರಾಚೀನತೆಯನ್ನೂ ಅದರಲ್ಲಿರುವ ಅಪಾರವಾದ, ವಿವಿಧಮುಖ ಜ್ಞಾ ಭಾಂಡಾರವನ್ನೂ ಗಮನಿಸಿ, ವಿದ್ಯಾರ್ಥಿಗಳಿಗೆ ಸಂಸ್ಕೃತ ಜ್ಞಾನವೂ ಅಗತ್ಯವೆಂದು ಭಾವಿಸಿ, ಪ್ರಸಾದ ನಿಲಯದ ಅಂಗ " ಶ್ರೀ ಶಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ " ಯೊಂದನ್ನು, ಮಹಾಸ್ವಾಮಿಗಳು ನಡೆಯಿಸುವ ಏರ್ಪಾಡು ಮಾಡಿರು ಸಂಸ್ಕೃತದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳು ಇದರ ಸದುಪಯೋಗ ಲಾಭಗಳನ್ನು ಪಡೆಯುತ್ತಿರುವರು. ಶ್ರೀ. ಕೇದನೂ ಇವಕ್ಕೆ ಸೇವೆ ಸಲ್ಲಿಸುವರು.

ಇನ್ನೂ ' ಎನಿತೆನಿತು ಸಾಧನಗಳೋ ! ಎನಿತೆನಿತು ಯೋಜನೆಗಳೋ ! ' ವಿದ್ಯಾರ್ಥಿ-ವಿದ್ಯಾರ್ಥಿನಿ-ಕುಲದ ಒ ಫಲವು, ನಿಲವುಗಳಿಗನುಣವಾಗಿ ಕಾಲಮಾನ ಪರಿಸ್ಥಿತಿಗನುಗುಣವಾಗಿ ಅವರ ಮಾನವತಾ–ವಿಕಾಸದ ಪರಿಪೂರ್ಣ ಪ್ರಮಾಣವನ್ನು ಅನುಲಕ್ಷಿಸಿ ಇನ್ನೂ ಎನಿತೊಂದು ಯೋಚನೆಗಳೋ, ಎನಿತೊಂದು ಯೋಜನೆಗಳೋ ! ಎನಿತೊಂದು ಸಾ ಗಳೋ ! ಎನಿತೊಂದು ಪ್ರಯೋಗಗಳೋ ! ಎನಿತೊಂದು ಪಲ್ಲಟಗಳೋ !

ಈ ಮೇರೆಗೆ ನಾಗನೂರ ಮಹಾಸ್ವಾಮಿಗಳ ಗಾಢ ತಪದ ಪ್ರಾಸಾದಿಕ ದೃಷ್ಟಿಯಲ್ಲಿ ಸೃಷ್ಟಿಗೊಂಡ ಈ ಪ್ರಸಾದ ಯದ ವಿರಾಡ್ಗರ್ಭದಲ್ಲಿ ಹುದುಗಿದ ಯೋಜನೆಗಳೆನಿತೆನಿತೋ ! ಅವೆಲ್ಲವೂ ಕೃತಿಗಿಳಿದು ಪ್ರಕಾಶಕ್ಕೆ ಬಂದಾಗ ಅವರ ಘನತೆಯ ಮಹಿಮೆಯು ಗೋಚರವಾಗಿ ಪ್ರತ್ಯಯಕ್ಕೆ ಬಂದೀತು. ಈ ಸಂಸ್ಕೃತ ವಿದ್ಯಾ ಸಂಸ್ಥೆಗೂ ಸಹ ಮುಂಬಯಿ ಪಬ್ಲಿ ಟ್ರಸ್ಟ ಆ್ಯಕ್ಟ ೧೯೫೩ (Bombay xxix of 1953) ರನ್ವಯ ನೋಂದು (ರಜಿಸ್ಟ) ಮಾಡಲ್ಪಟ್ಟು ಶಾಸನ ಮಾ ಗಣ್ಯ ಸಂಸ್ಥೆಯಾಗಿದೆ.

ಇತರ ಸಂಸ್ಥೆಗಳ ಸೇವೆಯಲ್ಲಿ ಶ್ರೀಗಳು

ಶ್ರೀ ಶಿವಯೋಗಮಂದಿರದಲ್ಲಿ ಲಿಂಗೈಕ್ಯ ಪೂಜ್ಯ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಆಶೀರ್ವಾದದ ಬಲದ ಬೆ ನಲ್ಲಿ ಬೆಳೆದು ಬಂದ ಶಿವಯೋಗದ ಈ ದಿವ್ಯಶಕ್ತಿ, ಶಿವಯೋಗಮಂದಿರದ ಹೊರಗೆ, ತನ್ನ ಮಹಾಮಣಿಹ ಸಿದ್ಧಿಗಾಗಿ ವಿಶಾ ವಾದ ಕಾರ್ಯಕ್ಷೇತ್ರವನ್ನು ಆಯ್ದುಕೊಂಡಿದ್ದರೂ, ಒಳಗೊಳಗೇ ತನ್ನ ಗುರುವಿನ ಸಂಕಲ್ಪ ಸೂತ್ರಕ್ಕೆ ಒಳಗಾಗಿ ಶಿವಯೋ ಮಂದಿರದತ್ತ ಒಂದಿಲ್ಲೊಂದು ಕಾರಣದಿಂದ ಆಕರ್ಷಿತವಾಗುತ್ತಿರಬೇಕು.

ಶಿವಯೋಗಮಂದಿರದ ಅಧ್ಯಕ್ಷರಾಗಿದ್ದ ಪೂಜ್ಯ ಹಾವೇರಿಯ ಹುಕ್ಕೇರಿ ಮಠಾಧ್ಯಕ್ಷರಾದ ಶ್ರೀ ಶಿವಬಸವಮಹಾಸ್ವಾ ಗಳವರು ಲಿಂಗದೊಳಗಾದರು. ಆ ಕಾಲಕ್ಕೆ ಹುಬ್ಬಳ್ಳಿಯ ಮೂರುಸಾವಿರ ಮಠದ ಲಿಂಗೈಕ್ಯ ಶ್ರೀ ಮನ್ನಿರಂಜನ ಗುರುಸಿ ರಾಜಯೋಗೀಂದ್ರಮಹಾಸ್ವಾಮಿಗಳವರೂ, ಆಲಕೆರೆಯ ಶ್ರೀ ಅನ್ನದಾನೀಶ್ವರ-ಮಹಾಸ್ವಾಮಿಗಳವರೂ ಇವರ ಕಾರ್ಯಕುಶಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರ್ಯಾನುಭವ, ಕರ್ತೃತ್ವಶಕ್ತಿ–ಈ ಮೊದಲಾದವುಗಳನ್ನು ಕಣ್ಣಾರೆ ಕಂಡು, ಮೆಚ್ಚಿ, ಶ್ರೀಶಿವಯೋಗಮಂದಿರದ ಅಧ್ಯಕ್ಷ ಪದಕ್ಕೆ ಇವರೇ ಸಮರ್ಥರೆಂದು ಭಾವಿಸಿ, ನಂಬಿ, ಅವರ ವಿಶ್ವಸ್ತ ಮಂಡಲವನ್ನು (ಟ್ರಸ್ಟಿಜನರನ್ನು) ಒಪ್ಪಿಸಿ, ಅದರ ಅಧ್ಯಕ್ಷ ಪದಕ್ಕೆ ಇವರನ್ನು ನೇಮಿಸುವ ವ್ಯವಸ್ಥೆ ಮಾಡಿದರು. ಶ್ರೀಗಳವರು ಶಿವಯೋಗ ಮಂದಿರದ ಅಧ್ಯಕ್ಷಪದವನ್ನು ೧೯೪೮ ರಲ್ಲಿ ಸ್ವೀಕರಿಸಿ ೧೯೫೬ ರ ವರೆಗಿನ ತಮ್ಮ ಎಂಟು ವರ್ಷಗಳ ಮೇಲ್ವಿಚಾರಣೆಯಲ್ಲಿ, ಒಂದು ಲಕ್ಷ ಎಂಭತ್ತುಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಹುಬ್ಬಳ್ಳಿ ಶ್ರೀಮೂರುಸಾವಿರ ಮಠದ ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರರ ಹಾಗೂ ಹಾಲಕೆರೆ ಅನ್ನದಾನೀಶ್ವರ ಶ್ರೀಗಳವರ ಸಲಹೆಯ ಮೇರೆಗೆ ಅಧ್ಯಾತ್ಮ ವಿಶ್ವವಿದ್ಯಾಲಯವನ್ನು (Divinity College) ಸ್ಥಾಪಿಸುವ ಹೊಳಹು ಹಾಕಿದರೆಂಬುದು ಗಮನಿಸತಕ್ಕ ಸಂಗತಿ. ನಂತರ ಶ್ರೀಗಳು ತಮ್ಮ ಪ್ರಸಾದ ನಿಲಯದ ಕಾರ್ಯಬಾಹುಲ್ಯದ ಮೂಲಕ ಈ ಅಧ್ಯಕ್ಷಪದವಿಯನ್ನು ಬಿಟ್ಟುಕೊಟ್ಟರು.

ಘಟಪ್ರಭಾ ಜೆ. ಜಿ. ಆಸ್ಪತ್ರೆಯ ಅಧ್ಯಕ್ಷರಾಗಿ

ಹುಬ್ಬಳ್ಳಿಯ ಮೂರುಸಾವಿರಮಠದ ಲಿಂಗೈಕ್ಯ ಶ್ರೀಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರ ಆಶ್ರಯದಲ್ಲಿ ಸ್ಥಾಪಿತವಾದ ಘಟಪ್ರಭೆಯ ಶ್ರೀಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆಯ ಪರಿಸ್ಥಿತಿಯು ಸೂಕ್ಷ್ಮವಾದಾಗ ವಿಶ್ವಸ್ತ ಮಂಡಲದವರು ಕಾಯಕ ಜೀವಿಗಳಾದ, ನಿಸ್ವಾರ್ಥ–ನಿಷ್ಕಾಮ ಸೇವಾ ನಿರತರಾದ ಈ ಮಹಾಸ್ವಾಮಿಗಳ ಮೊರೆ ಹೊಕ್ಕರೇನೇ ತಮ್ಮ ಆಸ್ಪತ್ರೆಯ ದುಸ್ಥಿತಿಗೆ ಪರಿಹಾರ ದೊರಕುವದೆಂದು ಭಾವಿಸಿ, ಇವರನ್ನೇ ಸರ್ವಾನುಮತದಿಂದ ಅಧ್ಯಕ್ಷ ಪದಕ್ಕೆ ಆರಿಸಿದರು. ೧೯೬೧ ರಿಂದ ೧೯೬೬ ರ ವರೆಗೆ ಅದರ ಚೇಅರಮನ್‌ರಾಗಿ ತಮ್ಮ ಕರ್ತೃತ್ವಶಕ್ತಿಯಿಂದ ಆಸ್ಪತ್ರೆಗೆ ಅಂಟಿಕೊಂಡಿದ್ದ ಎಲ್ಲ ಅಡಚಣೆ-ತೊಂದರೆ ಕಷ್ಟಗಳನ್ನು ನಿವಾರಿಸಿ ಅದನ್ನು ಪೂರ್ವದ ಪ್ರಗತಿಪಥಕ್ಕೆ ಒಯ್ದು ತಲುಪಿಸಿದರು. ಪ್ರಸಾದ ನಿಲಯದ ಕಾರ್ಯಕಲಾಪಗಳು ದಿನದಿನಕ್ಕೆ ಹೆಚ್ಚುತೊಡಗಿದುದರಿಂದ, ಈ ಆಸ್ಪತ್ರೆಯ (ದವಾಖಾನೆಯ) 'ಚೇಅರಮನ್' ಪದವನ್ನು ೧೯೬೬ ರಲ್ಲಿ ಬಿಟ್ಟುಕೊಟ್ಟರು.

ಮತ್ತೆ ಶಿವಯೋಗಮಂದಿರದ ಅಧ್ಯಕ್ಷರಾಗಿ

೧೯೬೬ ರಲ್ಲಿ ಇವರ ಗುರುಗಳಾದ ಪೂಜ್ಯ ಹಾಲಕೆರೆ ಅನ್ನದಾನೀಶ್ವರ ಶಿವಯೋಗಿಗಳ ಹಾಗೂ ಪೂಜ್ಯ ಹಾನಗಲ್ಲ ಸದಾಶಿವ ಶ್ರೀಗಳವರ ಅಪ್ಪಣೆಯ ಮೇರೆಗೆ ಶಿವಯೋಗ ಮಂದಿರದ ಅಧ್ಯಕ್ಷಪದ ಸ್ವೀಕಾರಕ್ಕೆ ಮತ್ತೆ ಒಪ್ಪಿಕೊಂಡು ವಿಶ್ವಸ್ತ ಮಂಡಲದ ಅನುಮತಿಯ ಪ್ರಕಾರ ಅದನ್ನು ಸ್ವೀಕರಿಸಿದರು. ಈಗ ಈ ಶ್ರೀಗಳವರ ಸಮರ್ಥ ನೇತೃತ್ವದಲ್ಲಿ ಕರ್ತೃತ್ವಶಕ್ತಿಯ ಮಾರ್ಗದರ್ಶನದಲ್ಲಿ ಮಂದಿರದ ಪರಿಸ್ಥಿತಿಯು ದಿನದಿನಕ್ಕೆ ಸುಧಾರಿಸುತ್ತ ಪ್ರಗತಿ ಪಥದತ್ತ ಸಾಗಿದೆ. ಈಗ ಇದರ ಸಂಸ್ಥಾಪಕರಾದ ಲಿಂಗೈಕ್ಯ ಪೂಜ್ಯ ಶ್ರೀಹಾನಗಲ್ಲ ಕುಮಾರ ಶಿವಯೋಗಿಗಳ ಶತಮಾನೋತ್ಸವದ ಸ್ಮಾರಕವಾಗಿ ಒಂದು ಭವ್ಯ ಮಂದಿರದ (ಕಟ್ಟಡದ) ನಿರ್ಮಾಣದ ಯೋಜನೆಯನ್ನು ಇಟ್ಟುಕೊಂಡಿದ್ದಾರೆ.

ಈ ರೀತಿ ಮಹಾಸ್ವಾಮಿಗಳು ಬೇರೆ ಬೇರೆ ಸಂಸ್ಥೆಗಳಿಗೆ ಸಂಬಂಧಿಸಿದ ಜನರ ಆಗ್ರಹಕ್ಕಾಗಿ, ಆ ಸಂಸ್ಥೆಗಳ ಹಿತದ ದೃಷ್ಟಿಯಿಂದ ಪ್ರಗತಿಯ ದೃಷ್ಟಿಯಿಂದ ಅವುಗಳನ್ನು ದಕ್ಷತಾಪೂರ್ಣವಾದ ಸಮರ್ಥ ಮಾರ್ಗ ದರ್ಶನದಲ್ಲಿ, ನಡೆಯಿಸಿಕೊಂಡು ಹೋಗಿ, ಅವುಗಳನ್ನು ಆರ್ಥಿಕ ದೃಷ್ಟಿಯಿಂದ ಅಂತರಿಕ ಪರಿಸ್ಥಿತಿಯ ದೃಷ್ಟಿಯಿಂದ ಸುಧಾರಿಸಿ ತಿರುಗಿ ಆ ಸಂಸ್ಥೆಗಳ ಆಡಳಿತೆಯನ್ನೂ ಮೇಲ್ವಿಚಾರಣೆಯನ್ನೂ ಆ ಆ ಸಂಸ್ಥೆಗಳ ಜನರಿಗೆ ನಿರ್ಲಿಪ್ತತೆಯಿಂದ ಒಪ್ಪಿಸಿಕೊಟ್ಟಿದ್ದಾರೆ.

ಶ್ರೀಗಳವರ ಇತರ ಕಾರ್ಯಕ್ರಮಗಳು.

ಅಖಿಲ ಭಾರತ ಶಿವಾನುಭವ ಸಮ್ಮೇಲನದ ಹದಿನೇಳನೆಯ ಅಧಿವೇಶನವನ್ನು ದಿನಾಂಕ ೬, ೭–೧೧-೬೩ ರಂದು ಬೆಳಗಾವ ಶಹಾಪೂರ ಭಕ್ತ ಜನರು ಶ್ರೀ ಮಹಾಸ್ವಾಮಿಗಳನ್ನು ಮುಂದೆ ಮಾಡಿಕೊಂಡು ಬೆಳಗಾವಿಯ ಲಿಂಗರಾಜ ಕಾಲೇಜಿನ ಭವ್ಯ ಮಂಟಪದಲ್ಲಿ ಶ್ರೀ ಸಿದ್ಧಗಂಗಾಮಠಾಧೀಶರಾದ ಶ್ರೀ ಶಿವಕುಮಾರ ಸ್ವಾಮಿಗಳವರ ಘನ ಅಧ್ಯಕ್ಷತೆಯಲ್ಲಿ ಧಾರವಾಡದ ಶ್ರೀ ಮುರುಘಮಠದ ತ್ರಿವಿಧ ದಾಸೋಹ ಮೂರ್ತಿಗಳಾದ ಲಿಂಗೈಕ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಸಮರ್ಥ ನೇತೃತ್ವದಲ್ಲಿ ಏರ್ಪಡಿಸಿದರು. ಬೆಳಗಾವಿಯ ಸಾಮಾಜಿಕ ಇತಿಹಾಸದಲ್ಲಿ ಈ ಸಮಾರಂಭವು ಒಂದು ಸ್ಮರಣಾರ್ಹವಾದ ಘಟನೆಯಾಗಿದೆ. ಇದರಿಂದ ಬೆಳಗಾವಿಯಲ್ಲಿ ನಮ್ಮ ಸಮಾಜದ ಸಂಘಟನೆ ಹಾಗೂ ಸ್ಥಾನಮಾನಗಳ ಅರಿವು ಸಾರ್ವಜನಿಕರಿಗಾಯಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿ ವರ್ಷವೂ ಗಣೇಶಚತುರ್ಥಿ, ನಾಡಹಬ್ಬ ಈ ಮೊದಲಾದ ಉತ್ಸವಗಳನ್ನು ಏರ್ಪಡಿಸಿ, ಸಾಹಿತ್ಯ ಸಾಂ ಮನೋರಂಜಕ ಕಾರ್ಯಕ್ರಮಗಳನ್ನು ಹಮ್ಮಿ ಆಯಾ ವಿಷಯಗಳಲ್ಲಿ ತಜ್ಞರಾದ ಪ್ರಸಿದ್ಧ ವ್ಯಾಖ್ಯಾತರ ವ್ಯಾಖ್ಯಾ ಮೂಲಕ, ವಿದ್ಯಾರ್ಥಿಗಳಲ್ಲಿ ಒಂದು ಬಗೆಯ ಜಾಗೃತಿಯನ್ನೂ ನವಚೈತನ್ಯವನ್ನೂ ಹುಟ್ಟಿಸಿ, ಅವರಿಗೆಲ್ಲ ಈ ಉತ್ಸ ಮೂಲಕ ಜ್ಞಾನ ಪ್ರಸಾದವನ್ನು ಹಂಚುತ್ತ ಕನ್ನಡನಾಡನುಡಿಗಳ ಸೇವೆಗೆ ಕೇಂದ್ರಶಕ್ತಿಯಾಗಿದ್ದಾರೆ.

ನಾಗನೂರ ರುದ್ರಾಕ್ಷಿಮಠದ ಪೂರ್ವದ ಮಹಾಸ್ವಾಮಿಗಳ " ನಮ್ಮ ತರುವಾಯ ಉತ್ತರಾಧಿಕಾರಿಗಳಾಗಿ ಮಠಕ್ಕೆ ಬಂದವರು ಮಠದ ಜೀರ್ಣೋದ್ಧಾರಮಾಡಿ, ಐನೂರು ಜನ ಮುತ್ತೈದೆಯರಿಗೆ ಪ್ರಸಾದವನ್ನು ಅಣಿಗೊಳಿಸಿ ಗೊಳಿಸಬೇಕು. ಮತ್ತು ಬಸವ ಪುರಾಣವನ್ನು ನಡೆಯಿಸಬೇಕು." ಎಂಬ ಸಂಕಲ್ಪವನ್ನು ಈಡೇರಿಸುವ ದೃಷ್ಟಿ ೧೯೫೬ ರಲ್ಲಿ ಮಠದ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಂಡರು. ೧೯೫೭ ರಲ್ಲಿ ಹುಬ್ಬಳ್ಳಿಯ ಶ್ರೀ ಮೂರುಸಾವಿರ ಲಿಂಗೈಕ್ಯ ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ೫೦೧ ಸುಮಂಗಲೆಯರಿಗೆ ಮಂಗಳ ಪ್ರಸಾದದ ವ್ಯವಸ್ಥೆ ಮಾಡಿ ಅವರನ್ನು ತೃಪ್ತಿಗೊಳಿಸಿದರು.

೧೯೬೧ ಮಾರ್ಚ ೨೫ ರಿಂದ ಅರವತ್ತುಮೂರು ದಿನಗಳ ವರೆಗೆ ಬಸವ ಪುರಾಣವನ್ನು ನಡೆಸುವ ವ್ಯವಸ್ಥೆ ದರು. ಇವರ ಪ್ರಾರಂಭೋತ್ಸವವನ್ನು ಹುಬ್ಬಳ್ಳಿಯ ಮೂರುಸಾವಿರ ಮಠದ ಈಗಿನ ಶ್ರೀ ಜಗದ್ಗುರು ಗಂಗಾಧರ ಯೋಗೀಂದ್ರ ಮಹಾಸ್ವಾಮಿಗಳು ನೆರವೇರಿಸಿದರು. ಶ್ರೀ ನಿಡುಮಾಮಿಡಿ ಮಠದ ಶ್ರೀ ಜಗದ್ಗುರು ಚೆನ್ನಬಸವರಾಜ ಕೇಂದ್ರ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು.

" ಈ ಬಸವ ಮಹಾಪುರಾಣವು ಸುಸೂತ್ರವಾಗಿ ಸಾಗಿ ಮಂಗಲ ಸಮಾಪ್ತಿಯಾಗಬೇಕು. ಇದಕ್ಕೆಲ್ಲ ಶ್ರೀ ಬಸ ನವರೇ ಕೃಪೆಮಾಡಬೇಕು ! " ಎಂಬ ಶ್ರೀ ಸ್ವಾಮಿಗಳ ದೃಢ ಸಂಕಲ್ಪಕ್ಕೆ ಊರ ಭಕ್ತ ಜನರೂ ಸುತ್ತುಮುತ್ತಲಿನ ಹಳ್ಳಿ ಜನರೂ ಭಕ್ತಿಪೂರ್ವಕವಾಗಿ ಉತ್ತರವಿತ್ತರು. ತಮ್ಮ ತಮ್ಮ ಬಳಿಯಲ್ಲಿದ್ದ ಪ್ರಸಾದದ ಸಾಧನ ಸಾಹಿತ್ಯ ಸಾಮಗ್ರಿಗಳ ಸ್ವಯಂಪ್ರೇರಣೆಯಿಂದ ತಂದು ರಾಶಿ ಹಾಕಿದರು, ಬಸವ ಪುರಾಣವೂ ಸಾಗಿತು. ಬಡ ಜನರಿಗೆ ಅನ್ನಸಂತರ್ಪಣೆಯ ಕಾರ್ಯ ನಡೆಯಿತು.

ಬಸವಪುರಾಣದಲ್ಲಿ ಶ್ರೀ ಬಸವಣ್ಣನವರ ವಿವಾಹದ ಮತ್ತು ಹರಳಯ್ಯ ಮಧುವಯ್ಯಗಳ ಪ್ರಸ್ತಾವ ಬಂದ ಸಂದ ದಲ್ಲಿ ಬಡಜನರ ನೂರಾರು ಲಗ್ನಗಳನ್ನು ಉಚಿತವಾಗಿ ನೆರವೇರಿಸಿ, ಮದುಮಕ್ಕಳಿಗೆಲ್ಲ ಹೊಸಹೊಸ ಉಡುಗರೆಗಳನ್ನು ಆಶೀ ದಿಸಿದರು.

ಈ ಬಸವ ಪುರಾಣವು ನಡೆದ ಕಾಲಾವಧಿಯಲ್ಲಿ ನಡುನಡುವೆ ಅನುಭಾವಿಗಳೂ, ತಜ್ಞರೂ, ಶಾಸ್ತ್ರವೇತ್ತ ಸುಜ್ಞರೂ ಆದವರ ವ್ಯಾಖ್ಯಾನಗಳನ್ನೇರ್ಪಡಿಸಿ ಅನುಭಾವದೂಟವನ್ನು ಎಲ್ಲರಿಗೂ ಉಣಬಡಿಸಿದರು. ಶ್ರೀ ಧಾರವಾಡ ಕಲ್ಯಾಣಮಠದ ಶ್ರೀ ಕುಮಾರಸ್ವಾಮಿಗಳೂ ಶ್ರೀ ಸಾವಳಗಿ ಮಠದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳೂ ಶ್ರೀ ಎಸ್. ಡಿ. ಇಂ ರವರೂ ಮತ್ತು ಶ್ರೀ ನಾಗನೂರ ಶ್ರೀಗಳವರ ಈ ಅನನ್ಯ ಲೇಖಕ ಭಕ್ತನೂ ಅನುಕೂಲತೆಯ ಪ್ರಕಾರ ಈ ಪುರಾಣ ಕಾ ಕ್ರಮಕ್ಕೆ ಆಗಮಿಸಿ ವ್ಯಾಖ್ಯಾನಗಳನ್ನಿತ್ತರು.

ಪುರಾಣ ಮಂಗಲಕಾರ್ಯವು ಧಾರವಾಡದ ಶ್ರೀ ಮ. ನಿ. ಲಿಂಗೈಕ್ಯ ಶ್ರೀಮೃತ್ಯುಂಜಯ ಮಹಾಸ್ವಾಮಿಗಳವರ ಅ ಕ್ಷತೆಯಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಈಗಿನ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾ ಳವರ ಮುಖ್ಯ ಆಧಿಪತ್ಯದಲ್ಲಿ ಮೇ ತಿಂಗಳ ಕೊನೆಯಲ್ಲಿ ಅನೇಕ ಹರಗುರು ಚರಮೂರ್ತಿಗಳ ಮತ್ತು ಅಸಂಖ್ಯ ಭಕ್ತ ಜನ ಸಮ್ಮುಖದಲ್ಲಿ ಒಳ್ಳೇ ವಿಜೃಂಭಣೆಯಿಂದ ವೈಭವಪೂರ್ಣವಾಗಿ ಮುಕ್ತಾಯಗೊಂಡಿತು.

ಎಂಟನೆಯ ಉತ್ತರಾಧಿಕಾರಿ

ಇದೇ ಮಂಗಲ ಸಂದರ್ಭದಲ್ಲಿಯೇ ಅನೇಕ ಹರಗುರು ಚರಮೂರ್ತಿಗಳ ಸನ್ನಿಧಿಯಲ್ಲಿ ಮತ್ತು ಸಹಸ್ರಾರು ಭಕ್ತರ ಸಮ್ಮುಖದಲ್ಲಿ

"ಕೋವಾಡದ ಹಿರಿಯಮಠದ ಶ್ರೀ ಪ್ರಭುಸ್ವಾಮಿಗಳವರನ್ನು ಈ ರುದ್ರಾಕ್ಷಿಮಠದ ಎಂಟನೆಯ ಉತ್ತರಾಧಿಕಾರಿಯ ನಿಯಮಿಸಿಕೊಳ್ಳಲಾಯಿತು."

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ನಾಗನೂರ ಶಿವಬಸವಮಹಾಸ್ವಾಮಿಗಳವರು ತಮ್ಮ ಜೀವನದ ಮಹಾಧ್ಯೇಯವನ್ನು ಕುರಿತು, ಚಿಂತಿಸಿ, ಧ್ಯಾನಿಸಿ, ಪ್ರಸಾದ ನಿಲಯದಲ್ಲಿಯೇ ಪರಮಾತ್ಮನ ಸಾಕ್ಷಾತ್ಕಾರವೆಂಬ ಒಂದು ನಿರ್ಣಯಕ್ಕೆ ಬಂದು ತಲುಪಿದಾಗ, ಈಗ ಭವ್ಯ ಗಾಢರೂಪವನ್ನು ತೋರುವ ಈ ಪ್ರಸಾದ ನಿಲಯವು ಆಗ ಅವರ ಹೃದ್ಭಾವದಲ್ಲಿ ಬೀಜರೂಪವಾಗಿ ಸ್ಪಂದಿಸುತ್ತಿದ್ದಿತು. ಈಗ ಆ ಬೀಜವು ಮೊಳೆತು, ಚಿಗಿತು, ಕೊನರಿ, ಬಲಿತು, ದಿಕ್ಕುದಿಕ್ಕುಗಳಲ್ಲಿ ಶಾಖೋಪಶಾಖೆಗಳನ್ನೂ ಚಾಚಿ, ಸಹಸ್ರಾನುಸಹಸ್ರ ವಿದ್ಯನ್ನಾಲಾಧರ-ವಿಯದ್ವಿಹಾರಿ-ವಿದ್ಯಾರ್ಥಿ-ವಿಹಗ-ಸಂಕುಲಕ್ಕೆ ಆಶ್ರಯವನ್ನು ನೀಡಿ ರಸತನ್ಮಯತೆಗೆ, ಯೋಗ ಸಮಾಧಿಗೆ ಸೆಳೆವ ಮಹಾಬ್ರಹ್ಮವೃಕ್ಷವಾಗಿದೆ.

ಇಂತಹ ಮಹಾಬ್ರಹ್ಮವಟವೃಕ್ಷದ ಹೊಣೆಯನ್ನೂ ಹೊರೆಯನ್ನೂ ವಹಿಸಬೇಕಾದರೆ, ನಿರ್ವಹಿಸಬೇಕಾದರೆ, ನಿಂದರೆ ನೆಳಲಿಲ್ಲದ, ನಡೆದರೆ ಹೆಜ್ಜೆಯಿಲ್ಲದ, ಹಿಡಿವೊಡೆ ಒಡಲಿಲ್ಲದ, ವ್ಯೋಮಕಾಯನಾದ ಆ ಅನುಭಾವದ ತುಟ್ಟತುದಿಯನು ಮುಟ್ಟಿದ, ಬಸವಾದಿ ಪ್ರಮಥರ ಲಕ್ಷೋಪಲಕ್ಷ ಗ್ರಹಗಳ ನಡುವೆ, ಅಖಂಡ ಜ್ಯೋತಿರ್ಗೋಲವಾಗಿ ಅನುಪಮ ಪ್ರಕಾಶ ಕೇಂದ್ರವಾಗಿ ಅವಿಚ್ಛಿನ್ನಾಕರ್ಷಣ ಬಿಂದುವಾಗಿ ತೊಳಗಿ ಬೆಳಗುವ ಪ್ರಭು-ಸೂರ್ಯನೇ ಬೇಕು.

ನಾಗನೂರ ಶ್ರೀ ರುದ್ರಾಕ್ಷಿಮಠದ ಅಸ್ತಿತ್ವಕ್ಕೆ ಓಂ ಶ್ರೀಕಾರ ಹಾಕಿದವರು ಮೂಲತಃ ಶ್ರೀ ಅಲ್ಲಮಪ್ರಭು-ಶ್ರೀ ಸಿದ್ಧರಾಮಸ್ವಾಮಿಗಳು.

ಪ್ರಥಮ ಮಹಾಸ್ವಾಮಿಗಳಾದ ಶ್ರೀ ಅಲ್ಲಮಪ್ರಭುಗಳ ನಂತರ ಈ ಮಠಕ್ಕೆ ಈಗ ಅಷ್ಟಮ ಉತ್ತರಾಧಿಕಾರಿಯಾಗಿ ಬಂದಿರುವ ಈ ಮಹಾಸ್ವಾಮಿಗಳೂ **ಪ್ರಭುಗಳೇ** ಸರಿ.

ಆ ಅನಾದಿ ಅಲ್ಲಮಪ್ರಭುವಿನ ಉಜ್ವಲ ತಪದ ಮಹೋನ್ನತ ಅನುಭಾವಸಿದ್ಧಿಯ ಪರಂಪರೆಯನ್ನೂ, ಈ ರುದ್ರಾಕ್ಷಿ ಮಠದ ಆದಿ ಅಲ್ಲಮಪ್ರಭುಗಳ ಅಪ್ರತಿಮ ಸಂಯಮಶಕ್ತಿ ಶಿವಯೋಗ ನಿಷ್ಠೆಯನ್ನೂ ಅವರ ನಂತರ ಉತ್ತರಾಧಿಕಾರಿಗಳಾಗಿ ಬಂದ ಮಹಾಸ್ವಾಮಿಗಳ ಲಿಂಗಪೂಜಾನಿಷ್ಠೆ, ನಿಸ್ಸ್ವಾರ್ಥ-ನಿಷ್ಕಾಮ ಪರೋಪಕಾರಭಾವ, ಭಕ್ತೋದ್ಧಾರ ದೃಷ್ಟಿಗಳನ್ನೂ ಸದ್ಯದ ಮಹಾಸ್ವಾಮಿಗಳ ದಾಸೋಹಂಭಾವ, ಪರಹಿತ-ಸೇವೆ, ವಿದ್ಯಾರ್ಥಿ ಕುಲೋತ್ಕರ್ಷ ಸುವಿಶಾಲ ದೃಷ್ಟಿ, ಪ್ರಸಾದ ಮಹಿಮಾವ್ಯಾಪ್ತಿ, ಪ್ರಸಾದ ಪ್ರಸನ್ನ ದೀಪ್ತಿಗಳನ್ನೂ ಇದೀಗ ಎಂಟನೆಯ ಉತ್ತರಾಧಿಕಾರಿಯಾಗಿ ಬಂದಿರುವ ಈ ಪ್ರಭುಮಹಾಸ್ವಾಮಿಗಳು ಅಂಗವಿಸಿಕೊಂಡು, ಅಳವಡಿಸಿಕೊಂಡು ಮಹಾ ವಟವೃಕ್ಷದಂತೆ ಬೆಳೆದು ಬೇರು ಬಿಟ್ಟ ಈ ಪ್ರಸಾದ ನಿಲಯದ ಸತ್ಪವಿತ್ರವಾದ ಧ್ಯೇಯ ಧೋರಣಗಳನ್ನೂ ಶಿಕ್ಷಣೋತ್ಕರ್ಷ ಕಾರ್ಯಕಲಾಪಗಳನ್ನೂ ಚ್ಯುತಿ ಬರದಂತೆ ನಿಸ್ಸ್ವಾರ್ಥ ದೃಷ್ಟಿಯಿಂದ ತಪಸ್ತೇಜದಿಂದ ಮುಂದುವರಿಸಿಕೊಂಡು ಹೋಗಬೇಕಾಗಿದೆ. ಈ ದೃಷ್ಟಿಯಿಂದ ಈ ಪವಿತ್ರ ಕ್ಷೇತ್ರದಲ್ಲಿ ಇವರು ವಹಿಸಬೇಕಾದ ಪಾತ್ರವು ಅಪ್ರತಿಮವಾದುದು. ಈ ಪಾತ್ರತೆಯನ್ನು ಇವರು ಅಮೋಘವಾಗಿ ವ್ಯಕ್ತಗೊಳಿಸುವರೆಂದು ಸಮಸ್ತ ಹರ-ಗುರು-ಚರ ಮೂರ್ತಿಗಳೂ ಅಸಂಖ್ಯ ಭಕ್ತಗಣಂಗಳೂ ಇವರಲ್ಲಿ ಭರವಸೆಯನ್ನಿಟ್ಟಿರುವರು.

ಸಾಹಿತಿಗಳಿಗೆ ಪುರಸ್ಕಾರ

ಶ್ರೀಶಿವಬಸವಮಹಾಸ್ವಾಮಿಗಳು ನನ್ನ ಜೀವನ ಪ್ರಕಾಶ ಸಾಹಿತ್ಯ ವಿಕಾಸಕ್ಕೆಂದು ಸಿದ್ಧಪಡಿಸಿದ ಒಂದು ನಿಧಿಯ ಯೋಜನೆಯು, ನನ್ನನ್ನು ಅವರಡಿಗಳೆಡೆಗೆ ಸೆಳೆಯಲು ಒಂದು ನಿಮಿತ್ತ ಮಾತ್ರವಾಯಿತು. ಆ ಪೂರ್ವದಲ್ಲಿ ಶಹಾಪುರದಲ್ಲಿ ಪ್ರಸಾದ ನಿಲಯವಿರುವಾಗ, ಒಂದೆರಡು ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಸಂದಣಿಯಲ್ಲಿ ಅವರನ್ನು ಕಂಡು ನಮಸ್ಕರಿಸಿ ಬಂದಿದ್ದೆ. ಆದರೆ ಈ ನಿಧಿಯ ಯೋಜನೆಯಿಂದ ಅಪರಿಚಿತನಂತೆ ದೂರವಿರುವ ನನ್ನನ್ನು ದಯಾರ್ದ್ರ ಹೃದಯದಿಂದ ಅವರು ತಮ್ಮೆಡೆಗೆ ಸೆಳೆದರು.

ಯಾವ ಒಳ್ಳೆಯ ಕೆಲಸಕ್ಕಾದರೂ ಒಂದು ಸುವರ್ಣ ಕ್ಷಣದ ಯೋಗ ಬರಬೇಕು. ಮಹಾಸ್ವಾಮಿಗಳು ನನ್ನ ವಿಷಯ ದಲ್ಲಿ ಸಾಕಷ್ಟು ಸಂಗತಿಗಳನ್ನು ನನ್ನ ಗೆಳೆಯರಿಂದ, ಸಾಹಿತಿ ಬಂಧುಗಳಿಂದ ಕೇಳಿಕೊಂಡರು; ಬಳಿಕ ನನ್ನನ್ನು ಸನ್ನಿಧಿಗೆ ಕರೆ ಯಿಸಿಕೊಂಡರು; ಕರುಣಾರ್ದ್ರ ದೃಷ್ಟಿಯಿಂದ ಕಂಡರು. ನನ್ನ ಉದ್ಧಾರದ ಮಾರ್ಗವನ್ನು ಹುಡುಕಹತ್ತಿದರು.

ಒಂದು ಸಮಾಧಾನಕರ ನಿಧಿಯನ್ನು ಸಂಗ್ರಹಿಸಿ, ನನ್ನ ದುಃಸ್ಥಿತಿಯನ್ನು ಸುಧಾರಿಸುವ ಯೋಜನೆಯನ್ನು ರೂಪಿಸಿ ಕೊಂಡ ಈ ಪ್ರಭುಗಳು, ಸ್ವ-ಪರ ಸಮಾಜದಲ್ಲಿ ನನ್ನ ವಿಷಯಕ್ಕೆ ಸಹಾನುಭೂತಿ ಸಹಕಾರ ಗೌರವಾದರಗಳನ್ನು ನಿರ್ಮಿಸಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲವಿಲಂಬವಾದರೂ ಅಡ್ಡಿಯಿಲ್ಲ ಆ ಯೋಜನೆಗೆ ತಮ್ಮ ನಿರ್ಮಲ ಅಂತಃಶಕ್ತಿಯಿಂದ ಒಂದು ಮೂರ್ತಸ್ವರೂಪ ಕೊಟ್ಟೇಬಿಟ್ಟರು. ಜನತೆಯಲ್ಲಿ ಆಗ ನನ್ನ ವಿಷಯಕ್ಕುಂಟಾದ ಕರುಣೆಗೆ ಕೊನೆಯಿಲ್ಲದಾಯಿತು; ಒಂದೇ ನಾಗನೂರಿನಲ್ಲಿ ದಿವಸಕ್ಕೆ ಒಂದೇ ಕ್ಷಣಕ್ಕೆ ಐದುನೂರಾಒಂದು ರೂಪಾಯಿ ನಿಧಿ ಸಂಗ್ರಹವಾಯಿತು. ನಾಗನೂರ ಗ್ರಾಮ ತನ್ನ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲು ಎಂದೂ ಹಿಂದೆ ಹೆಜ್ಜೆಯಿಡಲಾರದೆಂಬ ಮಾತು ನನ್ನ ಪ್ರತ್ಯಯಕ್ಕೆ ಬಂತು. ನನ್ನ ತಳ ತಣ್ಣಗಾಗಹತ್ತಿತು; ಬಳಲಿಕೆ ಬಡವಾಯಿತು.

ಈ ನಿಧಿ ಸಂಗ್ರಹದ ಕಾರ್ಯದಲ್ಲಿ ತೊಡಗಿದ ಸರ್ವ ಸಮಾಜ ಬಾಂಧವರು ವಿಶೇಷವಾಗಿ ಸ್ವಜಾತಿಯ ಬಾಂಧ ಎಷ್ಟೋ ತೊಂದರೆ ತೊಡಕುಗಳನ್ನು ಸಮಯಾನುಸಾರ ಚಾತುರ್ಯದಿಂದ ಸುಲಭಗೊಳಿಸಬೇಕಾಯಿತು. ವಿಲಂಬ ವಿಷಾದಪಡುತ್ತಿದ್ದ ಶ್ರೀ. ಮಹಾಸ್ವಾಮಿಗಳು, ಈ ಸತ್ಕಾರ್ಯದ ಸಮಾರಂಭಕ್ಕಾಗಿ ಆದಾವ ಶುಭಯೋಗ ಎಂದು ವಾಗುವದಪ್ಪಾ ಸಣಕಲ್ಲಾ ? ಎಂದು ಆತುರತೆಯದಾದರೂ ನೊಂದ ಮನಸಿನಿಂದ ಕೇಳುತ್ತಿದ್ದರು. ಬುದ್ಧೀ, " ನನ್ನ ಭಾಗ್ಯಕ್ಕೆ ತಲ್ಪುವಷ್ಟು ತಲ್ಪುವುದು; ಕಲ್ಪಿಸಿದಷ್ಟೆಲ್ಲ ಕೈ ಸೇರಬೇಕೆಂಬುವಷ್ಟು ಭಾಗ್ಯಶಾಲಿ ನಾನಲ್ಲ. " ಸಣಕಲ್ಲ ನಿಧಿ ಸಂಕಲನಮಾಡಬೇಕೆಂಬ ' ತಮ್ಮ ಉದಾರ ಭಾವನೆಗೆ ನಾನು ಪಾತ್ರನಾದುದೇ, ಆದಂದೇ ನನ್ನ ಭಾಗ್ಯಕ್ಕೆ ಎಣೆ ಎಂದು ಭಾವಿಸಿದ್ದೇನೆ. ಸಾಹಿತಿಯ ಸಂಸಾರ ಸಂಬಂಧ ಹೇಗಿರಬೇಕೋ ಹಾಗೆ ಇದ್ದೇನೆಂಬುದೇ ನನ್ನ ಸಮಾಧಾನ. ಆಶೀರ್ವಾದ ಸಂಪತ್ತಿಗಿಂತ ಅಧಿಕ ಸಂಪತ್ತು ನನಗಿನ್ನಾವುದು ? " ಎಂದು ನಿವೇದಿಸಿಕೊಂಡೆ.

ಕಾಲ ಗಳಿಗೆಯಿಂದ ದಿನಕ್ಕೆ, ದಿನದಿಂದ ಮಾಸಕ್ಕೆ, ಮಾಸದಿಂದ ವರುಷಕ್ಕೆ, ವರುಷದಿಂದ ಪರ್ವಕ್ಕೆ ಉರು ಒಂದು ಪೂರ್ಣ ಪರ್ವವನ್ನೇ ಹಿಂದೆ ನೂಕಿತು; ವಿಶಾಲ--ಉನ್ನತ ದೃಷ್ಟಿಯ, ಉದಾರಭಾವ ಸಂಪೂರಿತ ಸಮಾಜ ಕಾ ನಿರತ ಸ್ವಬಾಂಧವರು ಮತ್ತೆ ಚೇತರಿಸಿಕೊಂಡರು; ಟೊಂಕಕಟ್ಟಿ ಅಣಿಯಾದರು. ನಿಧಿಯ ಮಳೆಗರೆಯಹತ್ತಿತು. ತಮ್ಮ ಸ್ಥಾನ, ಅಧಿಕಾರ, ಕಾರ್ಯಬಾಹುಲ್ಯಗಳನ್ನು ಮರೆತು ಎಲ್ಲರೂ ಒಕ್ಕಟ್ಟನಿಂದ ಪರಿಶ್ರಮಪಡಹತ್ತಿದರು. ಈಗ ಆ ಸುವರ್ಣಕ್ಷಣದ ಶುಭೋದಯವಾಯಿತು.

ಕೊನೆಗೆ, ಅಲ್ಲಿಯ ವರೆಗೆ ಸಂಗ್ರಹಿತವಾದ ೮೩೩೧ ರೂಪಾಯಿಗಳ ನಿಧಿಯನ್ನೇ ನನಗೆ ದಿನಾಂಕ ೨೦-೯-೧೯೫ ಒಪ್ಪಿಸಬೇಕೆಂದು ನಿರ್ಧರಿಸಿ, ಧಾರವಾಡ ಕರ್ನಾಟಕ ಕಾಲೇಜಿನ ಆಂದಿನ ಮಾನ್ಯ ಪ್ರಿನ್ಸಿಪಾಲರಾಗಿದ್ದ (ಇಂದು ಬೆಂಗ ವಿಶ್ವವಿದ್ಯಾಲಯದ-ಉಪಕುಲಪತಿಗಳು) ಪದ್ಮ ಶ್ರೀ. ಡಾ. ಶ್ರೀ. ವ್ಹಿ. ಕೆ. ಗೋಕಾಕರವರನ್ನೂ ಬೆಳಗಾವಿಯ ಲಿಂಗ ಕಾಲೇಜಿನ ಆಂದಿನ ಮಾನ್ಯ ಪ್ರಿನ್ಸಿಪಾಲರಾಗಿದ್ದ ಶ್ರೀ ಪರಮ ಶಿವಯ್ಯನವರನ್ನೂ ಈ ಕಾರ್ಯಕ್ರಮಕ್ಕೆ ಆಮಂತ್ರಿಸಿ ಪದ್ಮಶ್ರೀ. ಡಾ. ಗೋಕಾಕರವರು ಪ್ರಕೃತಿಯ ಅಸ್ವಾಸ್ಥ್ಯದ ಮೂಲಕ ಬರದೇ, ತಾವು ಬಂದಿದ್ದರೆ ಮಾತನಾಡಬೇಕಾ ಭಾಷಣವನ್ನು ಬರೆದು ಕಳುಹಿದರು. ಅದನ್ನೇ ಶ್ರೀ. ಎಸ್. ಡಿ. ಇಂಚಲರವರು ಓದಿದರು. ಮಾನ್ಯ ಶ್ರೀ ಪರಮಶಿವಯ್ಯನ ಸಂದರ್ಭೋಚಿತವಾಗಿ ಮಾತನಾಡಿ ತಮ್ಮ ಅಮೃತ ಹಸ್ತದಿಂದ ನಿಧಿಯನ್ನು ನನಗೆ ಒಪ್ಪಿಸಿದರು.

ಇದೆಲ್ಲವೂ ಕೊನೆಗಂಡಮೇಲೆ ಒಂದು ದಿನ ಸ್ವಾಮಿಗಳು ಹೇಳಿದರು. " ನಿನ್ನ ಸಲುವಾಗಿ ಕೂಡಿಸಬೇಕೆಂ ಆ ನಿಧಿಯ ಸಂಗ್ರಹವು ಸಮಾಧಾನಕರವಾಗಲಿಲ್ಲ ಎಂಬುದು ನಿಜವಾದರೂ ವಿಷಾದಾಸ್ಪದವಾಗಲಿಲ್ಲ. ದೇವರ ದಯೆಯ ನಮ್ಮ ಭಾಗ್ಯ, ಕೀರ್ತಿ, ಗೌರವಗಳು ನಮಗೆ ಸಂಪ್ರಾಪ್ತವಾಗುತ್ತವೆ. " ಅಂದರು.

" ಗುರುಗಳೇ, ಆ ಕರಗಿ ಹೋಗುವ, ನಾಶವಾಗುವ ನಿಧಿಯ ಯೋಜನೆಯು ಏನೇ ಆಗಲಿ, ಆ ನಿಧಿಯ ನಿ **ದಿಂದ ಅಕ್ಷಯ ನಿಧಿಯಾದ ತಾವೇ ನನ್ನ ಭಾಗ್ಯಕ್ಕೆ ಲಭಿಸಿದ್ದೀರಿ** ಇದು ನನ್ನ ಪುಣ್ಯ ! ದೇವರ ಕೃಪೆ ! ಅನುಗ್ರಹ ! " ಎಂದು ವಿನೀತಭಾವದಿಂದ ಹೃದಯತುಂಬಿ, ಕಂಠತುಂಬಿ, ಅವರಡಿಗೆರಗಿದೆ. ಶ್ರೀ ಮಹಾಸ್ವಾ ಕೈಕೊಂಡ ನಿಧಿಯ ಯೋಜನೆಯ ಸಂಕ್ಷಿಪ್ತ ಇತಿಹಾಸ ಇದು !

ವಚನಶಾಸ್ತ್ರ ಪಿತಾಮಹರಾದ ಲಿಂಗೈಕ್ಯ ಡಾ. ಫ. ಗು. ಹಳಕಟ್ಟಿಯವರು ' ಮನೆ ನೋಡಾ ಬಡವರು; ನೋಡಾ, ಧನ ಸಂಪನ್ನರು. ತಮ್ಮ ವಚನ ಸಾಹಿತ್ಯ ಕ್ಷೇತ್ರದಲ್ಲಿ ' ಶೂನ್ಯ ಸಂಪಾದನೆಯೇ ' ತಮ್ಮ ಗುರಿಯ ಸಿರಿಯಾದ ಲೌಕಿಕ, ವ್ಯಾವಹಾರಿಕ ಈ ಕ್ಷೇತ್ರದಲ್ಲಿಯೂ ' ಶೂನ್ಯ ಸಂಪಾದನೆಯೇ ' ಅವರಿಗೆ ಗತಿಯಾಯಿತು. ಅವರ ಆರ್ಥಿಕ ದುಸ್ಥಿ ಯನ್ನು ಅಪರೋಕ್ಷವಾಗಿ ಅರಿತು, ಅವರ ಸಲುವಾಗಿಯೂ ತಮ್ಮ ಸಾಹಸ ಪ್ರಯತ್ನಗಳ ಮೂಲಕ, ಸುಮಾರು ನಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾವಿರಕ್ಕೂ ಮಿಕ್ಕಿ ನಿಧಿಯನ್ನು ಕಲೆಹಾಕಿ, ಪ್ರಪ್ರಥಮವಾಗಿ ಪ್ರಸಾದ ನಿಲಯದಲ್ಲಿ ಧಾರವಾಡ ನವಕಲ್ಯಾಣಮಠದ ಶ್ರೀ. ಮ. ನಿ. ಶ್ರೀ ಕುಮಾರಸ್ವಾಮಿಗಳ ಅಮೃತ ಹಸ್ತದಿಂದ ದಿನಾಂಕ ೪-೧೨-೧೯೫೬ ರಂದು ಅರ್ಪಿಸುವ ವ್ಯವಸ್ಥೆ ಮಾಡಿದರು. ಸಾಹಿತಿಗಳನ್ನು ಪುರಸ್ಕರಿಸಿದಂತೆ ರಾಷ್ಟ್ರ ಶಿಲ್ಪಿಗಳಾದ ಗಣ್ಯ ಶಿಕ್ಷಕರನ್ನು ಮರೆತಿಲ್ಲ. ರಾಷ್ಟ್ರ ಪ್ರಶಸ್ತಿ ವಿಜೇತರಾದ ಶ್ರೀಮಾನ್ ಎಸ್. ಡಿ. ಇಂಚಲರವರನ್ನು ಸತ್ಕರಿಸಿ ಆಶೀರ್ವದಿಸಿದರು.

ಬಡ ವಿದ್ಯಾರ್ಥಿಗಳಿಗೆ ಸಹಾಯ

ಅಸಹಾಯ ಪರಿಸ್ಥಿತಿಯಲ್ಲಿ ಬಳಲುತ್ತಿರುವ ಸಾಹಿತಿಗಳಿಗೆ ಈ ರೀತಿ ಸಹಾಯವಿತ್ತು ಪುರಸ್ಕರಿಸಿದರೆ, ಅಸಾಮಾನ್ಯ ಬುದ್ಧಿಶಕ್ತಿಯ ಬಡ ವಿದ್ಯಾರ್ಥಿಗಳಿಗೆ ತಮ್ಮ ಪ್ರಸಾದ ನಿಲಯದಲ್ಲಿ ಪ್ರವೇಶಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಡುವದಲ್ಲದೆ ಶಕ್ಯವಿದ್ದ ರೀತಿಯಲ್ಲಿ ದೇಶ ವಿದೇಶಗಳ ಶಿಕ್ಷಣಕ್ಕೆ ೧೫-- ೨೦ ಸಾವಿರ ರೂಪಾಯಿಗಳ ಆರ್ಥಿಕ ಸಹಾಯವನ್ನೂ ಒದಗಿಸಿ ಪ್ರೋತ್ಸಾಹನವೀಯುತ್ತಿರುವರು.

ಕ್ಷೇತ್ರ–ಸಂದರ್ಶನ

ಶರಣರಿದ್ದೆಡೆಯೇ ಅವಿಮುಕ್ತ ಕ್ಷೇತ್ರವೆಂದೂ, ಅವರ ಅಂಗಳವೇ ವಾರಣಾಸಿಯೆಂದೂ, ಅವರ ಪವಿತ್ರ ಹೃದಯದ ದಯಾಧರ್ಮವೇ ಸುಪವಿತ್ರ ಕ್ಷೇತ್ರದ ಮಹಾತೀರ್ಥವೆಂದೂ, ತನ್ನಲ್ಲಿಯೇ ಕಾಶಿ, ಕೈಲಾಸ, ಶ್ರೀಶೈಲಗಳು ಇರುವವೆಂದೂ ಶ್ರೀ ಮಹಾಸ್ವಾಮಿಗಳಿಗೆ ಮನವರಿಕೆಯಾಗಿದ್ದರೂ, ತಮ್ಮ ಉದ್ದೇಶ ಸಾಧನೆಗಾಗಿ, ಕಾರ್ಯನಿಮಿತ್ತವಾಗಿ, ಧ್ಯೇಯಪೂರ್ತಿಗಾಗಿ, ಅನೇಕಸಲ ಅನಿವಾರ್ಯವಾಗಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಅವರು ಸಂಚರಿಸಬೇಕಾಗುವದು. ಈ ರೀತಿ ಕೈಕೊಂಡ ಸಂಚಾರ ಕಾರ್ಯಕ್ರಮಗಳಲ್ಲಿ ಅವರು ಅನಾಯಾಸವಾಗಿ ಕೆಲವೊಂದು ತೀರ್ಥಕ್ಷೇತ್ರಗಳಿಗೆ ಹೋಗಬೇಕಾಗುವದು. ಈ ರೀತಿ ಅನೇಕಸಲ ಅನಾಯಾಸವಾಗಿ ತೀರ್ಥಕ್ಷೇತ್ರ ದರ್ಶನವೂ, ಪುಣ್ಯ ಸಂಗ್ರಹವೂ, ಏಕಕಾಲದಲ್ಲಿ ಘಟಿಸಬಹುದು.

ಕರ್ಮ-ಧರ್ಮ ಸಂಯೋಗದಿಂದ ೧೯೬೫ ನೆಯ ಮಾರ್ಚ ತಿಂಗಳಲ್ಲಿ ಶ್ರೀಗಳವರು ಹೊಂಭುಜ ಕ್ಷೇತ್ರಕ್ಕೆ ಅಲ್ಲಿಯ ಶ್ರೀಗಳವರ ಬಿನ್ನಹದ ಮೇರೆಗೆ ದಯಮಾಡಿಸಿದರು. ಅವರ ಯೋಗ್ಯತೆಯನ್ನರಿತು, ಅಲ್ಲಿಯ ಶ್ರೀ ದೇವೇಂದ್ರ ಕೀರ್ತಿ ಮಹಾಸ್ವಾಮಿಗಳವರು ತಮ್ಮ ಆತ್ಮತೃಪ್ತಿಗಾಗಿ ಅವರಿಗೆ ಒಂದು ಬಿನ್ನವತ್ತಳೆಯನ್ನೂ ಅರ್ಪಿಸಿದರು. ಇದು ಈ ಶ್ರೀ ಮಹಾಸ್ವಾಮಿಗಳವರ ಧನ್ಯತೆ, ಮಾನ್ಯತೆ, ಗಣ್ಯತೆಗಳಿಗೆ ಸಾಕ್ಷಿಯಾಗಿದೆ.

ಪ್ರಸಾದ ನಿಲಯದ ನೂತನ ಭವ್ಯ ಕಟ್ಟಡ

ಈ ರೀತಿ, ಶ್ರೀ ಮಹಾಸ್ವಾಮಿಗಳ ವಿವಿಧ ಕಾರ್ಯ ಕಲಾಪಗಳ ಸಂಚಾರೀ ಜೀವನದಲ್ಲಿ, ತಮ್ಮ ಸುವಿಚಾರೀ ಯೋಜನೆಯ ಪ್ರಸಾದನಿಲಯದ ಸರ್ವಾಂಗೀಣ ಪ್ರಗತಿಗಾಗಿ ಹೆಣಗುತ್ತಲೇ ಬಂದಿರುವರು. ದಿನದಿನಕ್ಕೂ ಬೆಳೆಯುತ್ತಿರುವ ವಿದ್ಯಾರ್ಥಿಗಳ, ಅಂತೆಯೇ ವಿದ್ಯಾರ್ಥಿನಿಯರ ಸಂಖ್ಯೆ ಅವರ ಶಿಕ್ಷಣ ಜೀವನದ ಉತ್ಕರ್ಷಕ್ಕೆ ಸಹಾಯಕವಾಗುವ ಇಂತಹ ಒಂದು ಪ್ರಸಾದ ನಿಲಯದ ಅವಶ್ಯಕತೆಯು ಎಷ್ಟೆಂಬುದನ್ನು ಕೈಯೆತ್ತಿ ಸಾರುತಿದೆ.

ಬೆಳಗಾವಿಯ ದುರ್ಗದಲ್ಲಿ ಜನಿಸಿ, ಶಹಾಪುರಕ್ಕೆ ದಟ್ಟಡಿಯಿಕ್ಕಿ ಬೆಳಗಾವಿಯ ಹನುಮನ ಬೀದಿಯಲ್ಲಿಯ ಹೊಸ ಸ್ವತಂತ್ರ ಕಟ್ಟಡಕ್ಕೆ ಹರಿದು ಇದೀಗ ಬೆಳಗಾವ-ಕೊಲ್ಹಾಪುರ ರಸ್ತೆಯ ಪೂರ್ವ ಬದಿಗೆ, ಶ್ರೀ ಪಂಡಿತ ಜವಾಹರಲಾಲ ಮೆಡಿಕಲ್ ಕಾಲೇಜಿನ ಎದುರಿಗೆ, ಭವ್ಯ ಸುಂದರ ಸ್ವಪ್ನವು ಭೂಮಿಗವತರಿಸಿದಂತೆ ನಿರ್ಮಿತವಾದ ನೂತನ ಕಟ್ಟಡಕ್ಕೆ ಈ ಪ್ರಸಾದ ನಿಲಯವು ಕಾಲಿಡಲಿರುವದು.

ಹನುಮನ ಬೀದಿಯ ಕಟ್ಟಡವು, ದಿನವೂ ವರ್ಧಿಸುತ್ತ ಸದ್ಯಕ್ಕೆ ನಾಲ್ಕೈದು ನೂರರ ವರೆಗೆ ನೆಲೆಗೊಂಡ ವಿದ್ಯಾರ್ಥಿಗಳ ವಾಸಕ್ಕೆ ಸಾಲದಾಗಿ ತೀರ ಕಿರಿದೆನಿಸತೊಡಗಿತು. ಅಲ್ಲದೆ ಶಿಕ್ಷಣ, ಉದ್ಯಮ, ವಾಣಿಜ್ಯ, ವಿವಿಧ ಕಾರಖಾನೆ ಈ ಮೊದಲಾದವುಗಳ ಸೃಷ್ಟಿಯಿಂದ ದಿನದಿನಕ್ಕೂ ಕಲ್ಪನೆ ಮೀರಿ ಎಲ್ಲೆಡೆಗೂ ವಿಸ್ತರಣಗೊಳ್ಳುತ್ತಿರುವ ಬೆಳಗಾವಿಯ ಮಹಾನಗರದಲ್ಲಿ, ಒಮ್ಮೆ ಪ್ರಶಾಂತ ವಾತಾವರಣದಲ್ಲಿದ್ದ ಹನುಮನ ಬೀದಿಯು, ಉಳಿದೆಲ್ಲ ಬೀದಿಗಳಂತೆ, ಗಜಿಬಿಜಿಸುತ್ತಿರುವ ಜನಸಂದಣಿಯ ಗೊಂದಲ ಗದ್ದಲದಲ್ಲಿ ಮುಳುಗೇಳುತ್ತಿರುವದರಿಂದ, ತನ್ನದೇ ಆದ ವಿದ್ಯಾರ್ಥಿಗಳ ಒಂದು ಮಹಾಸ್ತೋಮವನ್ನೇ ಕಟ್ಟಿಕೊಂಡ ಪ್ರಸಾದ ನಿಲಯವು ಇನ್ನು ಇಲ್ಲಿರುವದು ಸರಿಯಿಲ್ಲ. ಇದನ್ನೆಲ್ಲ ದೂರದೃಷ್ಟಿಯಿಂದ, ಧೂರ್ತದೃಷ್ಟಿಯಿಂದ ಮಹಾಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಚಾರಿಸಿ, ಈ ಮೊದಲು ವಿವರಿಸಿದಂತೆ ಪೂರ್ಣ ಬೆಂಗಳೂರ (ಅಥವಾ ಬೆಳಗಾವಿ ಕೊಲ್ಹಾಪುರ) ರಸ್ತೆಯ ಪೂರ್ವ ಶ್ರೀ ಪಂಡಿತ ಜವಾಹರಲಾಲ ಮೆಡಿಕಲ್ ಕಾಲೇಜಿನ ಎದುರಿಗಿರುವ ಐದು ಎಕರೆ ಭೂಮಿಯನ್ನು ಸರಕಾರದಿಂದ ದೊ ಸನ್ಮಾನ್ಯ ಶ್ರೀ ಪರ್ವತಿ ಎಂಜಿನೀಯರರು ವಿಚಾರಪೂರ್ವಕವಾಗಿ ಸಿದ್ಧಗೊಳಿಸಿದ ನಕ್ಷೆ (Plan) ಗನುಗುಣವಾಗಿ, ಸಿ ವಾದ ನವ್ಯ ಭವ್ಯ ಸುಂದರ ಬಂಧುರ ಭದ್ರವಾದ ಕಟ್ಟಡಕ್ಕೆ ಏಳೆಂಟು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿರುವರು. "

ಎರಡಂತಸ್ತಿನ ಈ ಭವ್ಯವಾದ ಕಟ್ಟಡದಲ್ಲಿ ಎಪ್ಪತ್ತೆರಡು ಕೋಣೆಗಳೂ ನಾಲ್ಕು ವಿಸ್ತೃತ ಸಭಾಗೃಹಗಳೂ (Hal ಸುವಿಶಾಲವಾದ ಅಂಗಣವೂ, ಅಲ್ಲದೆ ವಿಸ್ತಾರವಾದ ಬಯಲೂ ನೋಟಕರ ಚಿತ್ರವನ್ನು ಸೆರೆಗಯ್ಯುತ್ತಲೇ ಸೂರೆಗೊಳ್ಳು ಅಡುಗೆಯ ಮನೆ ಅಥವಾ ಪಾಕಶಾಲೆಯೊಂದಕ್ಕೇನೇ ಸುಮಾರು ಎರಡು ಲಕ್ಷ ರೂಪಾಯಿ ವೆಚ್ಚವಾಗಿರಬೇಕು. ಈಗ ಮುಂದೆಯೂ ಜನತೆಯ ಉದಾರಾಶ್ರಯವೂ ಅನುಕೂಲ ಕಾಲವೂ ಕೂಡಿ ಬಂದರೆ, ಈ ಕಟ್ಟಡದ ಮೂ ಅಂತಸ್ತಿನ ಯೋಜನೆಯೂ ಶ್ರೀ ಮಹಾಸ್ವಾಮಿಗಳ ವಿಚಾರದಲ್ಲಿದೆ.

ಇದರ ಕೋನ ಶಿಲೆಯ ಸಮಾರಂಭವನ್ನು ಕೇಂದ್ರ ಸರಕಾರದ ಸಮರ್ಥ ಸನ್ಮಾನ್ಯ ಗೃಹಮಂತ್ರಿ ಶ್ರೀ. ವಾಯ್. **ಚವ್ಹಾಣರವರು** ತಮ್ಮ ಅಮೃತ ಹಸ್ತದಿಂದ ದಿನಾಂಕ ೧೦—೫—೧೯೬೩ ರಂದು ಒಳ್ಳೇ ವೈಭವ ವಿಜೃಂಭಣೆಗ ಜರುಗಿಸಿದರು.ಬೆಳಗಾವಿಯ ಮಹಾನಗರಕ್ಕೆ ಶ್ರೀ ಶಾರದಾ-ಅನ್ನಪೂರ್ಣೆಯರ ಮಹಾ ಸೌಭಾಗ್ಯದ ಮಂಗಲ ತಿಲಕದಂತಿರು ಭವ್ಯ ಪ್ರಸಾದ ನಿಲಯವು ಶ್ರೀ ನಾಗನೂರ ಮಹಾಸ್ವಾಮಿಗಳ ಉದಾತ್ತ-ನಿರಂತರ-ತಪಸ್ಸು, ವಿದ್ಯಾರ್ಥಿ ಲೋಕಕ್ಕೂ ಮಾ ಸಮಾಜಕ್ಕೂ ನೀಡಿದ ಒಂದು ದಿವ್ಯ ಕಾಣಿಕೆಯಾಗಿದೆ.

ಇದೇ ೧೯—೨—೧೯೬೪ ರಂದು ಜನನಾಯಕ ಸನ್ಮಾನ್ಯ ಕಾಂಗ್ರೆಸ ಅಧ್ಯಕ್ಷ ಶ್ರೀ. ಎಸ್. ನಿಜಲಿಂಗಪ್ಪನ ಅಮೃತಹಸ್ತದಿಂದ ಈ ನೂತನ ಪ್ರಸಾದ ನಿಲಯದ ಉದ್ಘಾಟನೆಯಾಗುವದು ಅಸೀಮ ಆನಂದದ ಸಂಗತಿಯಾಗಿದೆ.

ಮಹಾಸ್ವಾಮಿಗಳ ಜೀವನ

ಕಿರುಮೊರಡಿಯಲ್ಲಿ ಯಾರ ಕಣ್ಣಿಗೂ ಬೀಳದಷ್ಟು ಕಿರುದೊರೆಯಾಗಿ ಉಗಮಿಸಿ, ಮುಂದ್ಮುಂದೆ ಹರಿಹರಿದಂತೆ, ದಿ ಗಳಿಂದ ಹರಿದು ಬಹ ನೀರ ಪೂರ ಹೀರಿ, ಮಹಾಪೂರವಾಗಿ ಪರಿಣಮಿಸಿ, ಇಳಾವಳಯದ ಬೆಳೆಯ ಬಸಿರಿಗೆ ಹಚ್ಚ ಹ ಅಮೃತದುಸಿರನು ಪಸರಿಸಿ, ವಿಶ್ವಹಿತವನು ಸಾಧಿಸಿ ತನ್ನ ಅಂತಿಮ ಧ್ಯೇಯವಾದ ಅನಂತ ಅಪಾರ ಮಹಾಂಭೋಧಿ ಘುಮ್ಮಿಕ್ಕಿ ನುಗ್ಗುವ ಮಹಾ ತರಂಗಿಣಿಯಂತೆ ಶ್ರೀ ನಾಗನೂರ ಮಹಾಸ್ವಾಮಿಗಳ ಜೀವನವು ನುಗ್ಗುತ್ತಿದೆ.

ಶಾಲೆಯ ಮೆಟ್ಟಲನ್ನು ಹೆಚ್ಚಾಗಿ ಏರದ, ಅಲ್ಲಿಯ ಶಿಕ್ಷಣ ವರ್ಗಗಳಲ್ಲಿ ಹೆಚ್ಚಾಗಿ ಸೇರದ, ಓರ್ವ ತೀರ ಸಾಮಾ ಬಾಲಕನ ಜೀವನದಿಂದ ಶ್ರೀಕಾರ ಹಾಕಿದ ಶ್ರೀ ಮಹಾಸ್ವಾಮಿಗಳ ಜೀವನವು, ಲೋಕಾನುಭವವನ್ನು ಸಂಗ್ರಹಿಸಿ, ಮ ಸ್ವಾಮಿಗಳ ಮಹಾಗುರುಗಳ ಆಶೀರ್ವಾದ-ಅನುಗ್ರಹಗಳನ್ನು ಸಂಪಾದಿಸಿ, ಶರಣ ಜೀವನದ ಒಳತಿರುಳನ್ನು ಅವಗ್ರ ತಪೋಜೀವನದ ಸಂಯಮದ ತೇಜವನ್ನು ಅಳವಡಿಸಿ, ನಿಷ್ಕಾಮ-ನಿಸ್ವಾರ್ಥ ಸೇವಾ-ಭಾವವನ್ನು ಅಂಗವಿಸಿ, ಪ್ರಸಾ ವ್ಯಾಪ್ತಿ-ದೀಪ್ತಿಗಳನ್ನು ಸಂಗವಿಸಿ, ಅಸಂಖ್ಯ ವಿದ್ಯಾರ್ಥಿಗಳ ಶಾರದೋಜ್ಜ್ವಲ ಲೋಕವನ್ನು ಸಂಗಡಿಸಿ, ವಿವಿಧ ಸ್ವಭ ಪ್ರಕೃತಿಗಳ ಲೋಕ-ಪ್ರಪಂಚವನ್ನು ಆತ್ಮೀಕರಿಸಿ, ದ್ವಂದ್ವ ಪ್ರಪಂಚವನ್ನು ಸಮರಸಗೊಳಿಸಿ, ಎಲ್ಲವನ್ನೂ ಒಳಗೊಂಡು, ದರಲ್ಲಿಯೂ ಭಾಗವಹಿಸಿ ಎಲ್ಲವನ್ನು ಮೀರಿನಿಂತ ಮಹಾ ಜೀವನವೂ ಪವಿತ್ರ ಜೀವನವು ! ಅತೀತ ಜೀವನವು !! ನಿರ್ಲಿ ಜೀವನವು.!!!

ಅಂತೆಯೇ ಅವರು ತಮ್ಮ ಜೀವನದಲ್ಲಿ ಲೋಕಕಲ್ಯಾಣಕ್ಕಾಗಿ ಪರೋಪಕಾರಕ್ಕಾಗಿ, ಪರಹಿತಸುಖಕ್ಕಾಗಿ, ವಿಶೇ ವಿದ್ಯಾರ್ಥಿ ಜಗದುತ್ಕರ್ಷಕ್ಕಾಗಿ ಸಂಚರಿಸಿದ ಪಳ್ಳಿಪಟ್ಟಣಗಳೆಷ್ಟು ? ಸಂಧಿಸಿದ ಜನರೆಷ್ಟು ? ಸಂಗ್ರಹಿಸಿದ ಧನವೆಷ್ಟು ಮಾಡಿದ ಪ್ರಯೋಗಗಳೆಷ್ಟು ? ಪಡೆದ ಅನುಭವವೆಷ್ಟು ? ಇಲ್ಲಿ ಪ್ರಸ್ತಾಪಿಸುವದು ಈ ಲೆಕ್ಕಣಿಕೆಗೆ ಅದೆಂತು ಸಾಧ್ಯ ?

ಇಲ್ಲಿಯ ವರೆಗೆ ತಮ್ಮ ನಿರಂತರ ಪರಿಶ್ರಮದ, ತಪದ ಪ್ರಭಾವದಿಂದ ನಮ್ಮ ಸಮಾಜಕ್ಕೆ, ವಿದ್ಯಾರ್ಥಿ ಲೋ ವಿವಿಧ ರೀತಿಯಲ್ಲಿ ವಿವಿಧ ರೂಪದಲ್ಲಿ ಸಂಗ್ರಹಿಸಿ, ಬಿಟ್ಟುಕೊಟ್ಟ ಆಸ್ತಿಯ ಸುಮಾರು ಇಪ್ಪತ್ತು ಲಕ್ಷವನ್ನಾದರೂ ಮಿಕ್ಕಬಹು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟೆಲ್ಲವನ್ನೂ ಸಂಗ್ರಹಿಸಿಯೂ ಅವರು ತಮಗಾಗಿ ಇಟ್ಟುಕೊಂಡುದೇನು ? ಒಂದು ವಿಶ್ವಸ್ತ ಮಂಡಲ (ನಾಗನೂರ ಶ್ರೀ ಶಿವ ಬಸವ ಮಹಾಸ್ವಾಮೀಜೀ ಎಜ್ಯುಕೇಶನ್ ಟ್ರಸ್ಟ) ರಚಿಸಿ ಎಲ್ಲವನ್ನೂ ಅದಕ್ಕೆ ಒಪ್ಪಿಸಿರುವರು. !

ಕಾಯಕ ನಿಷ್ಠೆಯಲ್ಲಿ ದುಡಿದುಡಿದು ಗಟ್ಟಿಕೊಂಡು, ಮುಪ್ಪಿನಲ್ಲಿಯೂ ಒಪ್ಪುಗೆಡದ ದೇಹ ಸಂಪತ್ತು ! ಜ್ಞಾನಾನುಭವವನ್ನು ಗ್ರಹಿಸಿ ಮನಸ್ಸನ್ನು ನಿಗ್ರಹಿಸಿ ಪಡೆದ ತಪಸ್ಸಂಪತ್ತು ! ಶ್ರೀ ಗುರುಸೇವೆಯಲ್ಲಿ, ಮಹಾಸ್ವಾಮಿ ಸೇವೆಯಲ್ಲಿ ಘನ-ಕರಣ ಸೇವೆಯಲ್ಲಿ ತನುಮನಧನಗಳನ್ನು ಸವೆಯಿಸಿ, ಆತ್ಮಸರ್ವಸ್ವವನ್ನೂ ಅರ್ಪಿಸಿ, ತನ್ನನ್ನಿಲ್ಲಗೈದು ಪಡೆದ ಮಹಾಗುರು ಕಾರುಣ್ಯ ಸಂಪತ್ತು ! ಕೃಪಾ ಸಂಪತ್ತು ! ಲೋಕದ ಚರಾಚರದಲ್ಲಿ ಆ ಪರಮಾತ್ಮನ ಅಂಶವನ್ನೂ, ಅಂಶುವನ್ನೂ ವಂಶವನ್ನೂ ಕಂಡು ಅವನ ಮಹಾ ದಿವ್ಯ ಸ್ಪರ್ಶವನ್ನು ಅನುಭವಿಸಿ, ಯಾರಿಗೂ ಅನ್ಯಾಯವೂ, ಅಪಾಯವೂ, ದು:ಖವೂ ಕೆಡಕೂ ಉಂಟಾಗದಂತೆ ದಕ್ಷತೆ ವಹಿಸಿ, ಎಲ್ಲವನ್ನೂ ಅನುಕಂಪಭಾವದಿಂದ ಕಾಣುವ ದಯಾಧರ್ಮ ಸಂಪತ್ತು ! ಹೃದಯ ಸಂಪತ್ತು, ಅದುವೇ ಶ್ರೀಗಳ ಜೀವನ ಸೊತ್ತು.

ಈ ಸಂಪತ್ತನ್ನುಳಿದರೆ, ಅವರ ಬಳಿಯಲ್ಲಿ ಇನ್ನಾವ ಸಂಪತ್ತಿದೆ ? ಈ ದಿವ್ಯ ಸಂಪತ್ತಿನ ಬಲದಿಂದ ಅವರು ತಮ್ಮ ಜೀವಮಾನದಲ್ಲಿ ಇನ್ನೂ ಲೋಕಕಲ್ಯಾಣದ ಯಾವ ಮಹಾ ಕಾರ್ಯದ ಸುಳುಹು-ಹೊಳಹುಗಳನ್ನು ಹಾಕಲಿರುವರೋ ! ಇದು ಅವರ ಅಂತಸ್ತ್ರತ ಪಶ್ಚೈತನ್ಯ ದೃಷ್ಟಿಗೇನೇ ಗೊತ್ತು, ಆ ಪರಮಾತ್ಮನಿಗೇನೇ ಗೊತ್ತು ! ಅಂತಹ ಮಹಾಕಾರ್ಯದ ಯೋಜನೆಗಾಗಿ, ಅದರ ಸಾಧನೆ ಸಿದ್ಧಿಗಾಗಿ ಅವರು ಅಮರ ಅಕ್ಷಯ ನಿತ್ಯ ಜೀವನವನ್ನು ಬಾಳಲಿ, ಲೋಕದ ಕಷ್ಟಕಾರ್ಪಣ್ಯಂಗಳನ್ನು ಹೂಳಲಿ, ದ್ವಂದ್ವವನ್ನೇ ಸೀಳಲಿ ! ಹೃದಯ-ಲೋಕವನ್ನೇ ಆಳಲಿ, ಒಳಹೊರಗೂ ಪ್ರಸಾದ ಭಾವನೆಯನ್ನೇ ತಾಳಲಿ.

ಭದ್ರಶುಭಮಂಗಲಂ ಅವರನ್ನು ಸುತ್ತಲಿ ! ಸತ್ಯ ಶಿವ ಸುಂದರಂ ಅವರನ್ನು ಮುತ್ತಲಿ ! ಸಚ್ಚಿದಾನಂದವೋ ಅವರನ್ನು ತುತ್ತಲಿ !

ಓಂ ಶಾಂತಿಃ ! ಶಾಂತಿಃ !! ಶಾಂತಿಃ !!!

ಆಡಿ ಅಳುಪದಿರಾ, ಲೇಸ ಮಾಡಿ ಮರುಗದಿರಾ,
ಎಲೆ ಮನವೇ, ಕೂಡಿ ತಪ್ಪದಿರಾ.
ಬೇಡಿದವರಿಗಿಲ್ಲೆನ್ನದಿರು. ಕಂಡಾ, ಮನವೇ ?
ನಾಡ ಮಾತು ಬೇಡ, ಸೆರಗೊಡ್ಡಿ ಬೇಡು
ಕೂಡಲಸಂಗನ ಶರಣರ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃಷಿಕೃತ್ಯ ಕಾಯಕದಿಂದಾದಡೇನು ?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ,
ಅದೆಂತೆನೆ: ಆತನ ತನುಶುದ್ಧ, ಆತನ ಮನಶುದ್ಧ,
ಆತನ ನಡೆಶುದ್ಧ ನುಡಿಯೆಲ್ಲ ಪಾವನವು !
ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು.
ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮನೇ ಜಗತ್ಪಾವನ.
ಇಂತಪ್ಪವರ ನಾನು ನೆರೆನಂಬಿ ' ನಮೋ ನಮಃ '
ಎಂಬೆನಯ್ಯಾ ಕೂಡಲ ಸಂಗಮದೇವಾ.

ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದು ಪದವೆಂದರೆ :
ದಿಟವ ನುಡಿವುದು, ನುಡಿದಂತೆ ನಡೆವುದು.
ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ
ಕೂಡಲಸಂಗಮದೇವ.

ಅಪ್ಪನು ನಮ್ಮ ಮಾದರ ಚೆನ್ನಯ್ಯ;
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ;
ಚಿಕ್ಕಯ್ಯನೆಮ್ಮಯ್ಯ; ಕಾಣಯ್ಯಾ;
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ;
ಎನ್ನನೇತಕ್ಕರಿಯರಿ, ಕೂಡಲ ಸಂಗಯ್ಯಾ ?

ಬಸವಣ್ಣ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ

ಮೈಸೂರ ಸಂಸ್ಥಾನದ ಶ್ರೀಮನ್ ಮಹಾರಾಜರವರಾದ

ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್

ಜಿ. ಸಿ. ಬಿ., ಜಿ. ಸಿ. ಎಸ್. ಐ.

ಅವರ ಸನ್ನಿಧಿಯಲ್ಲಿ

ಬೆಳಗಾವಿಯ ಹನುಮನ ಬೀದಿಯಲ್ಲಿಯ ವಿದ್ಯಾರ್ಥಿ–ಪ್ರಸಾದ–ನಿಲಯದ ಹೊಸ ಕಟ್ಟಡದ ಉದ್ಘಾಟನೆಯ ಸಮಾರಂಭದ ಕಾಲಕ್ಕೆ ವಿದ್ಯಾರ್ಥಿ–ಪ್ರಸಾದ–ನಿಲಯದ ಪರವಾಗಿ ಸಮರ್ಪಿಸಲ್ಪಟ್ಟ

ಬಿನ್ನವತ್ತಳೆ

ಕನ್ನಡ ನಾಡಿನ ತಿಲಕ! ಕನ್ನಡಮ್ಮನ ಅಲಕ! ಕನ್ನಡಿಗರ ಪುಲಕ! ತಮ್ಮ ಸ್ವಾಗತದಲಿ ಸ್ವರ್ಣಾಕ್ಷರ ರಜಿತವಾಯ್ತು ನಮ್ಮೀ ವಿದ್ಯಾ-ಪ್ರಸಾದ-ನಿಲಯದ ಫಾಲ–ಫಲಕ!

ವಿದ್ಯಾಪಕ್ಷಪಾತಿಯೇ, ಸಿರಿಯ ಶುಭ್ರಜ್ಯೋತಿಯೇ, ಧೃತ-ನ್ಯಾಯ-ನೀತಿಯೇ, ಪ್ರಸೃತ-ಶರದಭ್ರ-ಖ್ಯಾತಿಯೇ, ತಮ್ಮ ಮೃದು-ಪದ-ಸ್ಪರ್ಶದಲಿ ನವಿರೇರಿತು ನಮ್ಮೀ ಪ್ರಸಾದ-ನಿಲಯದ ಮಣ್ಣು, ತೆರೆಯುತಿ ಹೃದಯದ ಕಣ್ಣು!

ಓ ರಾಜ-ಪ್ರಮುಖ! ಪ್ರಜಾ-ಸಕಲ-ಸುಖ! ವಿವಿಧೋದ್ಯೋಗ-ಮುಖ! ಕವಿ-ಗಮಕಿ-ಕಲಾವಿದ-ಸಖ! ತಮ್ಮ ಅಮೃತೋಚ್ಛ್ವಾಸದಲಿ ಪ್ರಜ್ವಲಿಸುತೆ ಮೇಲೇಳಲಿ ಶಿಕ್ಷಣ-ಸಂಸ್ಕೃತಿ-ಮುಖ!

ಜಯ ಚಾಮರಾಜೇಂದ್ರ, ದರಹಾಸ-ಜಿತಚಂದ್ರ, ಸದ್ಗುಣ-ಮಣಿ-ಸಾಂದ್ರ, ತಮ್ಮ ವರದ ಹಸ್ತವು ಬಡ ವಿದ್ಯಾರ್ಥಿಗಳ ಜ್ಞಾನ-ಪ್ರಸಾದ-ನಿಲಯದ ಈ ಹೊಸ ಕಟ್ಟಡದ ಬಾಗಿಲ ತೆರೆದು, ಒಳಗಿನ ಶಿಕ್ಷಣ-ಸಂಸ್ಕೃತಿಗಳ ಬೆಳಗಿನ ಅಧಿದೇವತೆಯ ವೈಭವದ ಸಾಕ್ಷಾತ್ಕಾರವನು ಮಾಡಿಸಲಿ! ಅವಳ ದಿವ್ಯ ಪ್ರಭೆಯನು ಎಲ್ಲರೆದೆಗಳಲಿ ಮೂಡಿಸಲಿ!

ನಾಗನೂರ ಶ್ರೀಗಳವರ ಚಿತ್ರಕಾಶದಲಿ ಕಂಡ ಆದರ್ಶವು ನವ್ಯ-ಪ್ರಸಾದ-ನಿಲಯವಾಗಿ ದಿನಾಂಕ ೬-೬-೧೯೩೭ ರ ಶುಭ ಮುಹೂರ್ತದಿ ಬೆಳಗಾವಿಯ ದುರ್ಗದಿ ಜನಿಸಿ, ಶಹಪೂರದಿ ದಟ್ಟಡಿಯಿಕ್ಕಿ, ಹುಬ್ಬಳ್ಳಿಯ ಮೂರು ಸಾವಿರ ಮಠದ ಶ್ರೀಮನ್ನಿರಂಜನ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರ ವಿಶಾಲಾಶ್ರಯದಲಿ ಘನಿಸಿ, ಜನತೆಯ ಔದಾರ್ಯದಲಿ ಬೆಳೆದು, ಇಂದು ತಮ್ಮ ರಾಜಕಳೆಯಲ್ಲಿ ಹೊಳೆಯಲೆಂದು ಹಂಬಲಿಸಿ ನಿಂತಿಹುದಿದೋ ಮೈಸೂರ-ಸಂಸ್ಕೃತಿ-ಕೇಂದ್ರಾ! ದಾನಶ್ರೀಯುವೇಂದ್ರಾ!

ಆದಿಯಲಿ ಬರಿ ಇರ್ಪತ್ತೈದು ವಿದ್ಯಾರ್ಥಿಗಣ! ಇಂದೋ ಇನ್ನೂರೈವತ್ತು! ಇಂತಹ ಪ್ರಚಂಡ ವಿದ್ಯಾರ್ಥಿ ಸಮೂಹಕೆ ಆವಶ್ಯಕವಾದ ಕಟ್ಟಡವೆಂತಹದೋ! ಆಯವೋ, ಸ್ವಾಮಿಗಳ ಜೋಳಿಗೆಯನ್ನು ಎಂತೋ ತುಂಬುತಿಹ ಸಹಸ್ರ ಕರಂಗಳು! ವ್ಯಯವೋ, ವರುವರುಷಕ್ಕೆ ಲಕ್ಷ-ಲಕ್ಷಕ್ಕೇರುತಿದೆ! ಬರಿ ಊಟ ವಸತಿಗಳ ಸೀಮೆಯನ್ನು ಮೀರಿ, ಜಾತಿ-ಮತ-ಪಂಥಾತೀತವಾದ ಛಾತ್ರಕುಲವು ಶಿಕ್ಷಣ-ಸಂಸ್ಕೃತಿ-ಪದಕೇರುವೊಡೆ, ಎನಿತೆನಿತು ಸಾಧನಗಳೋ! ಎನಿತೆನಿತ ಯೋಜನೆಗಳೋ! ವಾಚನಾಲಯಂ! ಮುದ್ರಣಯಂತ್ರಂ! ಗೃಹೋದ್ಯೋಗ-ಗ್ರಾಮೋದ್ಯೋಗ-ಮೂಲೋದ್ಯೋಗ-ಸಾಧನಂ!

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಗೀತ-ಬೋಧನಂ ! ವಿಜ್ಞಾನ-ಶೋಧನಂ ! ಈ ಒಂದು ಸ್ವರ್ಣಸ್ವಪ್ನಂ, ಸಂಸ್ಕೃತಿ-ಕೇಂದ್ರನಾದ ತವಿಮ್ಮಂದೆ ಸಾ ಕೇಂದ್ರವಾಗದಿಹುದೇ ? ಜಯ ಚಾಮರಾಜೇಂದ್ರ ಭೂಪ ! ವಿಭವದ ಹೊಂಬೆಳಕಿನ ದೀಪ !

ರವಿಯುದಿಸೆ, ಅವನಿಗರ್ಘ್ಯಪುಷ್ಪವೀಯುವದು ಅವನು ಘನವಂತನೆಂದು ಸಾರಲಿಲ್ಲ; ಆ ಘನತೆಯ ಮ ಯಲಿ, ಹೃದಯದಿ ಉಂಟಾದ ತಮ್ಮ ಭಕ್ತಿಯ ಕುರುಹಿಗಾಗಿ ! ಅಂತೆಯೇ ಈ ಬಿನ್ನವತ್ತಳೆಯನ್ನು ತಮ್ಮ ಸನ್ನಿಧಿ ಸಮರ್ಪಿಸುತಿಹೆವು, ತಮ್ಮ ಉದಾರ ಹೃದಯದ ಬೆಳಕಿನಲ್ಲಿ, ನಮ್ಮ ಭಕ್ತಿಯ ಪ್ರತೀಕವಾಗಿ ! ತಮ್ಮ ದಾನವಾಹಿ ನಿರಂತರವಾಗಿ ಹರಿಯಲಿ ! ಮೇರೆಮೇರೆಗಳನ್ನು ತುಂಬಿ ಮೆರೆಯಲಿ ! ಭೋರ್ಗರೆದು ದ್ಯಾವಾ-ಪೃಥಿವಿಗಳಲ್ಲಿ ಮರುದನಿಗೊ ಮೊರೆಯಲಿ ! ಸಕಲ ಹೃದಯಗಳನ್ನು ಪುನೀತಗೊಳಿಸಿ ಮಹಾ ಐಕ್ಯದಲ್ಲಿ ಬೆರೆಯಲಿ !

ಓಂ ಶಾಂತಿಃ ! ಶಾಂತಿಃ !! ಶಾಂತಿಃ !!!

ಹನುಮನಬೀದಿ, ಬೆಳಗಾವಿ
ಸೋಮವಾರ ದಿನಾಂಕ ೧೦-೯ ೧೯೫೧

ಇಂತು ತಮ್ಮ ಕೃಪಾಪೋಷಿತ,
ವ್ಯವಸ್ಥಾಪಕ ಸಮಿತಿ,
ವಿದ್ಯಾರ್ಥಿ ಪ್ರಸಾದ ನಿಲಯ, ಬೆಳಗಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ. ಮ. ನಿ. ಪ್ರ. ಸ್ವ. ಪ್ರಭುದೇವರು ನಾಗನೂರು
ಶ್ರೀ. ಮ. ನಿ. ಪ್ರ. ಸ್ವ. ಶಿವಬಸವಸ್ವಾಮಿಗಳ ಉತ್ತರಾಧಿಕಾರಿಗಳು



ಶ್ರೀ. ಮ. ನಿ. ಪ್ರ. ಸ್ವ. ಶ್ರೀ ನಾಗನೂರು ಶ್ರೀಗಳವರು ಶ್ರೀ ಉಡುಪಿ
ಪೇಜಾವರಮಠದ ಶ್ರೀಗಳೊಂದಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ನಾಗನೂರಲ್ಲಿಯ ಶ್ರೀರುದ್ರಾಕ್ಷಿಮಠದ ಕರ್ತೃಗದ್ದಿಗೆಯ ಚೌಕಿಮಠ



ನಾಗನೂರಲ್ಲಿಯ ಶ್ರೀರುದ್ರಾಕ್ಷಿಮಠ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗ ಎರಡು

ಕರ್ಮಯೋಗಿ ನಾಗನೂರ ಶ್ರೀಶಿವಬಸವ ಶ್ರೀಗಳವರ

ವ್ಯಕ್ತಿತ್ವ ದರ್ಶನ

ವಿವಿಧ ಬರೆಹಗಾರರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಗಳವರ ಅಂತಶ್ರೀ

ತಂತ್ರ ಶಿವಾಚಾರಿ

ಸಸಿಯ ಮೇಲೆ ಸಾಗರವರಿದಂತಾಯಿತ್ತು ಮನದ ತಮಂಥವನು ಗೆಲಿದು, ತನುವೆ ದಾಸೋಹವಾಗಿ, ಆಚಾರವೆಲ್ಲ ತಯವಂಗಳಾಗಿ, ಘನಚೈತನ್ಯಾತ್ಮಕನೆ ಪೂಜೆ ಮಾಡುತ್ತ ಚರಲಿಂಗವಾಗಿ ಸಂಚಾರ ಮಾಡಿದನೆನೆ ಶ್ರೀಶಿವಬಸವ ಮಹಾ ಮಿಗಳಿಂದ ಕನ್ನಡಮಾತೆಗೆ ದಾಸೋಹದಲ್ಲಲ್ಲದೆ ಮನುಕುಲದ ಮದಹರಿಯದಂದು ತಿಳುಹಲು ಜಂಗಮವಾಗಿ ಬಂದು ಕನ್ನಡ ಸಂಕುಳದ ದಾಸೋಹಿಯಾಗಿ ದಾಸೋಹ ಸಂಬೋಧೆಯಾದ ಮಂಗಲಮೂರ್ತಿಯನಾರು ಅರಿವರು ಅವರ ಪ್ರಸಾದಭೋಗಿ ಲ್ಲದೆ ಶಿವೋಹಂ ಎಂಬುದಲ್ಲ ದಾಸೋಹ ಎಂಬ ಮಂತ್ರ ಅಂತರಂಗವಾದ ಮೌನಮೂರ್ತಿ ಶಿವಬಸವ ಮಹಾಸನ್ನಿಧಿ. ಮಂಗಲಮೂರ್ತಿಗೆ ಸಾಸಿರ ಸಾಸಿರಮುಖ, ಸಾಸಿರ ಸಾಸಿರ ತೋಳು, ಸಾಸಿರ ಸಾಸಿರ ಪಾದ. ಕಾಣದ ಕೈಯಿಂದಮುಟ್ಟಿ, ೋಡದ ಕಣ್ಣಿಂದ ಕಂಡು, ಆಡದ ಬಾಯಿಂದ ಮಾತನಾಡಿಸಿ, ನೀಡದ ಕೈಯಿಂದ ಇಕ್ಕಿ ಜಂಗಮದಾಟವನಾಡುವ ಲಿಂಗಾಂಗ ೀಲಾ ಸಂಚಾರಿ ಶಿವಸ್ಪರ್ಶದಿಂದ ಕನ್ನಡ ನೆಲ, ಜಲ, ಭಾನು, ಬಾನು–ಪಂಚಮಹಾಭೂತಗಳಿಗೆ ಪೂರ್ವಾಶ್ರಯವಿಲ್ಲ. ಪರಮಪೂಜ್ಯ ಶಿವಬಸವ ಮಹಾಸನ್ನಿಧಾನದಲ್ಲಿ.

ಸಂಸಾರವನರಿಯದ ನಿರ್ವಿಕಾರಿಯಾಗಿ ಜನಿಸಿ ಜನನವಿಲ್ಲ. ಆಚಾರ ಅಂಗಲೇಪವಾಗಿ ಕಾಯವಿಲ್ಲ. ಅರಿವು ಅಂತರಂಗ ಲ್ಲಿಪ್ಪುದಾಗಿ ಮನವಿಲ್ಲ. ಜಂಗಮ ಅರ್ಪಿತವಾಗಿ ಧನವಿಲ್ಲ. ಸತ್ಯ ಸದಾಚಾರಿಯಾಗಿ ಒಳಹೊರಗೆಂಬುದಿಲ್ಲ. "ಕಂಗಳೊಳಗೆ ರುಳಿಲ್ಲ. ಕಾಯದೊಳಗೆ ಮಾಯವಿಲ್ಲ. ಮನದೊಳಗೆ ಅಹಂಕಾರವಿಲ್ಲ" ದ ನಿಬ್ಬೆರಗಿನಮೂರ್ತಿ ! ತನುವಿನಲಿ ತನುಸವೆದು; ನದಲ್ಲಿ ಮನಸವೆದು; ಧನದಲ್ಲಿ ಧನಸವೆದು ಮಾಟಕೂಟವೆಂಬ ಕೀರ್ತಿಯ ಬಲೆಗೆ ಸಿಲುಕದ ಬಸವಶಿವ ಶ್ರೀಶಿವಬಸವ ಹಾಸ್ವಾಮಿಗಳು

ತನುವೆ ತಾವು ಮನವೆ ಹಾನಗಲ್ಲ ಗುರು ಕುಮಾರಸ್ವಾಮಿಗಳು. ತನುವೆ ತಾವು ಮನವೆ ಜಗದ್ಗುರು ಗುರುಸಿದ್ಧಪ್ರಭು ನುವೆ ತಾವು ಪ್ರಾಣವೆ ಸಕಲಾತ್ಮಚೇತನ ಮಂಗಳಮೂರ್ತಿ. ತನುವೆ ತಾವು ಮನವೆ ಸಕಲಜೀವಾತ್ಮರ ಲೇಸು. ತನುವೆ ತಾವು ನವೆ ಅಜ್ಞಾನ ತಿಮಿರಚ್ಛೇದನ ಜ್ಞಾನಾತಪಪ್ರತಾಪ. ತನುವೇ ತಾವು ಮನವೇ ಜಾತಿವಿಜಾತಿಭೇದ ರೋಗ ವೈದ್ಯರೂಪು. ನುವೇ ತಾವು ಮನವೇ ವಿಶ್ವಕುಟುಂಬ ವಾತ್ಸಲ್ಯ ಮಂತ್ರ. ಇಂಥ ಘನವನೊಳಗೊಂಡ ಶ್ರೀಶಿವಬಸವ ಮಹಾಸನ್ನಿಧಿಯವರು ೇಹ, ಮನ ಧರಿಸದ ಅಜಡರು. ಇಂಥ ಸ್ವತಂತ್ರ ಶಿವಾಚಾರಿಗಳು.

ಮನದಂತೆ ಮಂಗಳ

ಮಾಡುವ ಭಕ್ತಿಗೆ ಒಲಿದ ದೇವನಿಗೆ ಆದಾವ ಭೇದ? ಬಯಲನಾಶ್ರಯಿಸಿ, ಬಯಲನೇ ನಂಬಿ, ಬಯಲಪ್ರಸಾದಿ ಮಾಗಿ, ಬಯಲನೊಂದು ಕೈಲಿಧರಿಸಿ ಸಂಚರಿಸತೊಡಗಿದರು. ಗುರುಕರುಣವಾಗಿ ಶ್ರೀಶಿವಬಸವ ಸುಕುಮಾರ ಶಿವಯೋಗಿ ಮನದಂತೆ ಮಂಗಳವೆಂಬುದು ತಪ್ಪದು ನೋಡಾ ! ಎಂದು ಶಿವಯೋಗಮಂದಿರದಲಿ ವರಗುರು ಕುಮಾರೇಶನ ಅಂತರಂಗಬೋಧೆ ನಿಲ್ಲದ ಶಿವನ ಮನೆಯಾದ ಮಠಕ್ಕೆ ಅಧಿಕಾರವಾದರೂ ನೀನು ಕಾರಣಿಕನಾಗು; ಮಹಾಪ್ರಸಾದ ಸೇವಾ ದುರಂಧರನಾಗು ಎಂಬ ಮಂತ್ರೋಪದೇಶ ಹಾಗೂ ಆಶೀರ್ವಾದ.* ಅಂತರಂಗದಲ್ಲಿ ಗುರುಕೃಪಾರೂಪ ಮಂತ್ರ ಪ್ರಾಣಲಿಂಗ. ಆ ಪ್ರಾಣಲಿಂಗ ರಹೊಡೆದು ಶ್ರೀ ಶಿವಬಸವ ಮಹಾಸನ್ನಿಧಿ ಮುಗ್ಧರಾಗಿ ನಾಗನೂರ ರುದ್ರಾಕ್ಷಿಮಠದ ಪ್ರಭುಸ್ವಾಮಿಗಳ ಸಮಾಧಿ ಸನ್ನಿಧಾನ ಂದ ಎದ್ದು ಸಂಚಾರ ಕೈಕೊಂಡು ಬೆಳಗಾವಿ ಕೋಟೆಗೆ ಬಂದು ಲಿಂಗಪೂಜೆ ಮಾಡಿಕೊಂಡರು ಸದ್ಭಕ್ತರಮಧ್ಯೆ.

ಬರಿಗೈ ಚರ ಜಂಗಮವೇ ಲಿಂಗವಿಡಿದ ಮಹಾಂತನು? ಇಷ್ಟಲಿಂಗವಿದೆ ಚಿಂತಾಮಣಿ! ಆ ಇಷ್ಟಲಿಂಗವೇ ಶ್ರೀಶಿವಬಸವ ಮಹಾಸ್ವಾಮಿಗಳಲಿ ಚಿಂತಿಸಿತೊ ಎನೆ ಭಕ್ತರಂತರಂಗದಲಿ ಜಂಗಮದಾಸೋಹಭಾವ ಬುಗ್ಗೆ ಚಿಮ್ಮಿತು. ಶ್ರೀಗಳ ಲಿಂಗಪೂಜೆ ದಳಗೊಂಡು ಕಳೆಯೇರಿತು. ಇದೇನು ಪವಾಡವೆ? ಅಲ್ಲ. ಲಿಂಗಾಚಾರ; ಶುದ್ಧಭಕ್ತಿಯಬೆಡಗು. ಅಂತರಂಗ ವಲ್ಲಿರುವ ಗುರುವಾಣತಿಯೆಂಬ ಮಂತ್ರಲಿಂಗ ನಡಿಸಿದಂತೆ, ನಡಿಸಿದ ದಿಕ್ಕಿನಲ್ಲಿ ಸಂಚಾರ ಆರಂಭವಾಯಿತು ಪೂಜ್ಯಸನ್ನಿಧಿಯದು.

* ಶ್ರೀ. ನಾಗನೂರ ಮಹಾಸನ್ನಿಧಿ ಹತ್ತರ ಇಂದಿಗೂ ಹಾನಗಲ್ಲ ಶ್ರೀಗಳವರು ಕೊಟ್ಟ ಆಶೀರ್ವಾದವು ಭದ್ರವಾಗಿ ಉಳಿದುಕೊಂಡು ಬಂದಿದೆ. ಆ ಆಶೀರ್ವಾದವನು ಪುಣ್ಯದಂತೆ ಕಾಪಾಡಿಕೊಂಡು ಬಂದಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟಲಿಂಗ ಚಿಂತೆ ವಿಕಳಾವಸ್ಥೆಗೆ ಭಕ್ತವೃಂದ ಓಗೊಟ್ಟು ದಾಸೋಹಕಾರ್ಯದ ಲಿಂಗಪೂಜೆಯಲ್ಲಿ ಸೇವಾಭಾಗಿಗಳಾಗತೊಡಗಿ; ಈ ಲಿಂಗಮೂರ್ತಿಯ ಕರುಣಾಮೃತ ಪ್ರಸಾದಕ್ಕೆ ಪ್ರತಿವರುಷ ವಿದ್ಯಾರ್ಥಿಗಳ ಗಣಸಮೂಹ ಹೆಚ್ಚತೊಡಗಿತು. ಬರವು ಭಕ್ತಿ ಶಕ್ತಿಯ ಬೆಳಗಿನ ಬರವಾಯಿತು ಶ್ರೀಗಳಿಗೆ. ವಿದ್ಯಾರ್ಥಿಗಳ ಸಂಖ್ಯೆ ಬೆಳೆದಂತೆ ಶ್ರೀಗಳ ಸಂಚಾರವೂ, ಸಂ ಕ್ಷೇತ್ರವೂ ವಿಶಾಲವಾಗತೊಡಗಿತು. ವಿದ್ಯಾರ್ಥಿಗಳ ಅನುಕೂಲತೆಗಾಗಿ ಶ್ರೀಗಳ ಪೂಜಾಮಂದಿರ ಶಹಪೂರದಿಂದ ಬೆಳಗಾಂ ಹನುಮನಬೀದಿಗೆ ಸ್ಥಳಾಂತರಿಸಲ್ಪಟ್ಟಿತು. ಅದೊಂದು ಸ್ವಾರಸ್ಯಮಯ ಘಟನೆ. ಭೂತಪೀಡಿತ, ಯಾರೂ ಇರಲು ಮ ಮಾಡದ ಭೂತವಾಸದ ಗೃಹಪ್ರವೇಶ ಶ್ರೀಗಳ ಪಾಲಿಗೆ ಬಂತು ಲಿಂಗಾರ್ಚನೆಗಾಗಿ. ಈ ಲಿಂಗಪೂಜಾಮಂದಿರ ಹುಬ್ಬ ಮೂರುಸಾವಿರಮಠದ ಜಗದ್ಗುರು ಶ್ರೀಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳಿಂದ ಅಣಿಗೊಳಿಸಲ್ಪಟ್ಟಿತು. ಜಂಗ ಲಿಂಗಾರ್ಚನೆಯೊಡನೆ ಭೂತಶುದ್ಧಿಯಾಯಿತು. ಭೂತ ನಿರ್ಗಮನವೂ ಆಯಿತು. ಲಿಂಗಭಕ್ತಿ, ಜಂಗಮ ದಾಸೋ ನಾಡಿಗೆ ನಾಡೇ ಜಾಗೃತವಾಗತೊಡಗಿತು. ಅಂದಿನಿಂದ ಇಂದಿನ ವರೆಗೆ * ಅಂಕಗುಣಿತ ಸಂಖ್ಯೆಯಲ್ಲಿ ಬೆಳೆಯತೊ ವಿದ್ಯಾರ್ಥಿಗಳ ಬಳಗ.

ವಿದ್ಯಾರ್ಥಿಗಳ ವಸತಿ ಸೌಕರ್ಯ ಹಾಗೂ ಪ್ರಸಾದ ಸೌಲಭ್ಯದ ಕಾರ್ಯ ನೆರವಿಗೆ ಅಂದು ಬ್ರಿಟಿಶ್ ಸರಕಾರ ಬರು ಲಿಲ್ಲ. ಸ್ವಾತಂತ್ರ್ಯಪೂರ್ವದ ಸಮಾಚಾರವದು. ವಿದ್ಯಾರ್ಥಿಗಳಂತೆ ಸ್ವಾತಂತ್ರ್ಯಯೋಧರೂ ಈ ಸನ್ನಿಧಿಯಲ್ಲಿ ಆ ಪಡೆಯುತ್ತಿದ್ದರು. ಈ ಲಿಂಗಾಶ್ರಯದಲ್ಲಿ ಸರಕಾರವು ಏನೂ ಮಾಡಲರಿಯದು. ರಾಷ್ಟ್ರೀಯ ಮಹಾಕಾರ್ಯಕ್ಕೆ ಗುರು ಮಂಗಲ ಕರಗಳ ಮಾರ್ಗದರ್ಶನ ಬಹು ಪುರಾತನ ಪರಂಪರೆ. ನಾಗನೂರ ಶ್ರೀಗಳವರು ಭಾರತ ಸ್ವಾತಂತ್ರ್ಯ ಹೋ ದಂಥ ಪವಿತ್ರ ಕಾರ್ಯದಲ್ಲಿ ನಾಡಜನರಿಗೆ ಮಹದಾಶ್ರಯವೂ ಆಗಿದ್ದುಂಟು. ಇತಿಹಾಸಕಾರರು ಮರೆಯಲಾಗದ ಸಂ ಯಿದು. ಅಂದಿನ ನಿಯಂತ್ರಣದ ಕಾಲದಲ್ಲಿ ಆಹಾರ ಧಾನ್ಯಗಳ ಸಾಗಾಟ ಅಸಾಧ್ಯವಾದ ಸಮಯವಾದರೂ ಕೂಡ ಸರಾಗ ನಡೆಯಿತು. ಪ್ರಸಾದ ಸಂತರ್ಪಣೆ. "ಪ್ರಥಮಗುರು ಕಾಣಲಿಕೆ ಕರ್ಮಂಗಳು ಬೆಚ್ಚಿ ಬೆದರಿದವು." ಎಂಬಂತೆ ಆ ಕಾ ಸರಕಾರದ ಬಂಧನಗಳೆಲ್ಲ ಕಳಚಿ ಸೇವೆಗೆ ಸಿದ್ಧವಾದವು. ಎಂಥ ರೋಮಾಂಚನಕಾರಿ ಘಟನೆಗಳಿವು! ಈ ಪ್ರಸಾದ ಮ ಸೇವೆಗೆ ಜಾತಿ, ಮತ, ಪಂಥಗಳಿಲ್ಲದೆ ಜನಸೇರತೊಡಗಿತು. "ಇವನಾರವ, ಇವನಾರವ" ನೆನ್ನದ ಶ್ರೀಗಳ ಆಶ್ರಯದಲ್ಲಿ ಸಂ ಭಾರತ ನಿರ್ಮಾಣವಾಯಿತು–ಹಿಂದು ಮುಸ್ಲಿಮರನೊಳಗೊಂಡು.

ಹಾಯಸ್ಕೂಲು, ಕಾಲೇಜು, ಟ್ರೇನಿಂಗ ಕಾಲೇಜು, ಆಯುರ್ವೇದ ಕಾಲೇಜುಗಳ ವಿದ್ಯಾರ್ಥಿಗಳು ದಿನೇ ದಿನೇ ತೊಡಗಿದರು. ಶಿವನು ತಂದಿಕ್ಕುವಾಗ ಬಡತನವೆಂಬುದುಂಟೆ? ದಾಸೋಹಿಗೆ ಲಿಂಗಸತ್ತಂದಿಗಲ್ಲದೆ ಬಡತನವು ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯದ ಕಾರ್ಯವೆಂದರೆ ಅದೊಂದು ಸಂಭ್ರಮದಕಾರ್ಯ ಶ್ರೀಗಳಿಗೆ. ವಿದ್ಯಾರ್ಥಿಗಳು ಲಿಂಗದಾ ಬಯಸಿದರಾಗಿ ಅವರಿಗೆ ಸುಂದರ ವಾಸಸ್ಥಾನಬೇಕು, ಬೆಳಕು, ಗಾಳಿಗಳಿಲ್ಲದ ಸ್ಥಳದಲ್ಲಿ ವಿದ್ಯಾರ್ಜನೆ ಕುಂಠಿತವಾಗುವುದೆ ಅವರ ನಂಬುಗೆ. ಶ್ರೀಗಳು ಆಧುನಿಕ ಮಾದರಿಯ ಒಂದು ವಿದ್ಯಾರ್ಥಿ ವಸತಿಗೃಹ ನಕ್ಷೆ ಸಿದ್ಧಗೊಳಿಸಿದರು, ಕಾರ್ಯ ಪ್ರಾ ವಾಯಿತು. ಎರಡುನೂರು ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಅವಕಾಶ ಕಟ್ಟಿಸುವ ಅವರ ಸಂಕಲ್ಪಸಿದ್ಧಿಗೆ ವರುಷೆರಡುವ ಗಳು ಸಾಕಾದವು. ಹಳೆಯ ಭೂತದ ಮನೆಯ ಬದಲು ಹೊಸದೊಂದು ಸುಂದರ ನಿಲಯ ಮೈವೆತ್ತಿತು.

ವಸತಿ ಪ್ರಸಾದಗಳ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅವಕಾಶವನ್ನು ಕಲ್ಪಿಸಲಾಯಿತು. ಸ್ವ ತ್ರವಾದ ಲಾಯಬ್ರರಿಯೂ ಪ್ರಾರಂಭವಾಯಿತು. ದಿನ ಪತ್ರಿಕೆ, ಮಾಸ ಪತ್ರಿಕೆಗಳು ಬರತೊಡಗಿದವು. ಚರ್ಚಾಕೂ ಪ್ರಸಾದನಿಲಯದ ವಿದ್ಯಾರ್ಥಿಗಳನ್ನು ಉತ್ತಮ ವಾಗ್ಮಿಗಳನ್ನಾಗಿ ನಿರ್ಮಿಸುವ ರಂಗಸಾಲೆಯಾಯಿತು. ಡಾ. ಕಾಮತರು ಅ ಬಡವಿದ್ಯಾರ್ಥಿಗಳ ಉಪಚಾರಕ್ಕೆ ಶ್ರೀಗಳ ಸೇವೆಯೇ ಎಂದು ಭಾವಿಸಿ ಕೊಂಡಿದ್ದರು. ಪ್ರಸಾದ ನಿಲಯದ ನೆರೆಮನೆಯವರ ಶ್ರೀಗಳು ನಿತ್ಯ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ನಿರೀಕ್ಷಿಸುತ್ತಿದ್ದರು.

"ವತ್ಸಂ ಗೌರಿವ ಗೌರೀಶೋ ಧಾವಂ ತಮನುಧಾವತಿ"

ಎಂಬಂತೆ ವಿದ್ಯಾರ್ಥಿಗಳ ಕರೆ, ನಿತ್ಯಕಾರ್ಯೋನ್ಮುಖತೆಗಳ ಸಂತೋಷದಲ್ಲಿ ಶ್ರೀಗಳು ಸದ್ಯೋನ್ಮುಕ್ತ, ಲೀಲಾವಿನೋದಿ. ಕೊ ಕೂಗದ ಮುನ್ನ ಏಳುವುದು ನಿತ್ಯದಲಿ ದಯಾಳು ಶಿವನ ನೆನೆದರೆ ಆಳಿಗಾಳಯ್ಯ ನೆಂಬ 'ಬೆಳಗಿನ ಎಚ್ಚರ' ದಲ್ಲಿ ಶ್ರೀಗ ವಿದ್ಯಾರ್ಥಿಗಳನ್ನು ಎಚ್ಚರಿಸುವದು ನಿತ್ಯದ ಪಾಠ.

* ನಾಗನೂರ ಮಹಾಸ್ವಾಮಿಗಳ ಪ್ರಸಾದ ನಿಲಯ ಪ್ರಾರಂಭವು ೧೯೩೩ ರಲ್ಲಿ ಆಗಿರುವಂದಿನಿಂದ ಇಂದಿನವರೆಗೆ ಅಂದರೆ ೧೯೩೪–೬೯ ರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಳಯ್ಯಾ ನಿಮ್ಮ ತಾಯಿತಂದೆಗಳು ಬಂದಿಹರು
ಬಾಳಾಕ್ಷ ಶಿಶು ಮಹಂತ ಲಿಂಗದೊರೆಯೆ
ಬಸವ ಮಡಿವಳ ಚೆನ್ನ ಸಿದ್ಧರಾಮೇಶ್ವರರು
ಅಸಮ ಪರತರಗೌರಿ ಮಹದೇವಿ ಮುಕ್ತಾಯಿ "

ಬ ಪ್ರಾತಃಕಾಲದಲ್ಲಿ ಅಂತರಂಗದ ಲಿಂಗದೇವನನ್ನು ವಿದ್ಯಾರ್ಥಿಗಳು ಎಚ್ಚರಿಸಿಕೊಳ್ಳುವ ಗೀತ ನಿನಾದ. ಅವರಿಗೆ ಓಂಕಾರದ ಓಂಕಾರ ಅದರಲ್ಲಿ ನಿರತವಾಗಿ ವಿದ್ಯಾರ್ಥಿಗಳ ಮೇಲ್ವಿಚಾರಣೆ ಮಾಡುತ್ತಿದ್ದರು. ಪ್ರತ್ಯಕ್ಷವಾಗಿ ಅದೆಲ್ಲ ಜೀವನದ ಪ್ರಾತಃ ಲ !! ಈ ಗೀತ ವಿಶ್ವದ ವಿಕಾಸ ಕ್ರಮದ ಅಂತಿಮ ಧ್ಯೇಯದ ಜಾಗೃತ ಪ್ರಯತ್ನದ ಅಭೀಪ್ಸೆಯಲ್ಲದೆ ಮತ್ತೇನು ? ಲಿಂಗ ತಾಳ್ದು, ಲಿಂಗದೊಳಿರ್ದು, ಲಿಂಗವನೆ ಆಗಿ ಉದಾತ್ತ ದಾರ್ಶನಿಕ ದರ್ಶನಾನುಭಾವದ ಅನುಷ್ಠಾನ ಆ ಮಹಾ ಸನ್ನಿಧಿಯ ದು. ಈ ಅನುಷ್ಠಾನದ ಪ್ರಭಾವಕ್ಕೆ ರಾಜ ಮಹಾರಾಜರು ಬರತೊಡಗಿದರು. ಉನ್ನತಾಧಿಕಾರಿಗಳೂ, ಮಂತ್ರಿಗಳೂ ಈ ಪಾದಗಳ ದರ್ಶನಾಶೀರ್ವಾದಬಯಸಿ ಬಂದರು. ವಿದ್ಯಾ ಪ್ರಸಾರ, ಸಂಸ್ಕೃತಿಯ ಪ್ರಕಾರ, ಯುವಕರಲ್ಲಿ ಆತ್ಮವಿಶ್ವಾಸದ ಬೆಳ ನೆ, ಸ್ವದೇಶಾಭಿಮಾನದ ಅರಿವು ಸಹಜೀವನ ತರಬೇತಿ ಇವೆಲ್ಲ ಕಳೆದರ್ಧ ಶತಮಾನದಿಂದ ಅವ್ಯಾಹತವಾಗಿ ಮಹಾಸನ್ನಿಧಿ ವರ ಕೃಪೆಯ ಆಶ್ರಯದಲ್ಲಿ ಚಿಗುರಿ ವಿಶಾಲವಾಗಿ ಪಸರಿಸುತ್ತಿವೆ. ಕನ್ನಡ ನಾಡಿನಲ್ಲಿ ಈ ರೀತಿಯಲ್ಲಿ ಇದೊಂದು ಸಾಂಸ್ಕೃತಿಕ ಕ್ರಾಂತಿ. ಈ ಪ್ರಸಾದ ನಿಲಯದಲ್ಲಿಂದ ಹೊರಬಂದ ವಿದ್ಯಾರ್ಥಿಗಳು ನಾಡಮುಖಂಡರಾಗಿದ್ದಾರೆ, ತಂತ್ರಜ್ಞರಾಗಿದ್ದಾರೆ, ನ್ಯಾಯಾಧೀಶರಾಗಿದ್ದಾರೆ, ಉನ್ನತ ಅಧಿಕಾರಿಗಳಾಗಿದ್ದಾರೆ, ಸಂಶೋಧಕರಾಗಿದ್ದಾರೆ, ಕವಿಗಳಾಗಿದ್ದಾರೆ, ಕಲಾವಿದರಾಗಿದ್ದಾರೆ, ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾನಿಲಯದ ಶಿಕ್ಷಣ ಕ್ಷೇತ್ರದ ವರೆಗೆ ವ್ಯಾಪಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ರಾಷ್ಟ್ರಜೀವನದ ವಿಧರಂಗಗಳಲ್ಲಿ ಪ್ರವೇಶಿಸಿ ಕಲ್ಯಾಣರಾಜ್ಯ ನಿರ್ಮಾಣದಂಥ ಮಹಾ ಕಾರ್ಯದಲ್ಲಿ ನಿರತರಾಗಿದ್ದಾರೆ, ನಾಡಿನ ಬಹುಪಾಲದ ಶಿಕ್ಷಿತ, ಪ್ರತಿಭಾವಂತ ಯುವಕರಲ್ಲಿ ಶಿವ ದೃಷ್ಟಿ, ಸೃಷ್ಟಿಕರ್ತರು ಕರ್ನಾಟಕದ ಜಂಗಮ ಪುಂಗವರೆಂದರೆ ಅತಿಶಯೋಕ್ತಿಯಲ್ಲ. ಳೆಯ ಮೈಸೂರ ಭಾಗ ಹಾಗೂ ಮುಂಬೈ, ಹೈದರಾಬಾದ, ಕರ್ನಾಟಕಗಳಲ್ಲಿರುವ ಪ್ರಸಾದ ನಿಲಯಗಳನ್ನು ಗಣನೆಗೆ ತಂದು ಕೊಂಡರೆ, ಆ ಬೃಹದಾಕಾರದ ಕಾರ್ಯದ ಕಲ್ಪನೆಯಾಗುತ್ತದೆ. ಎಲ್ಲ ಮಹಾಕಾರ್ಯಗಳು ಸದ್ದಿಲ್ಲದೆ ನಡೆಯುವವೆಂಬ ಶ್ರೀ ಅರ ವಿಂದರ ಮಾತು ನೆನಪಿಗೆ ಬರುತ್ತದೆ. ಈ ನಾಡ **ಗುರು ಹಾಗೂ ವಿರಕ್ತ ಶ್ರೇಷ್ಠರು** ನಮ್ಮ ನಾಡು ಹಾಗೂ ದೇಶಗಳ ನಿರ್ಮಾಣ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಭಾಗಿಗಳಾಗಿರುವರು. ಆಧುನಿಕ ಭಾರತ ಸಾಂಸ್ಕೃತಿಕ ಇತಿಹಾಸದಲ್ಲಿ ಈ ಜಂಗಮ ಪುಂಗವರದು ಒಂದು ಸುವರ್ಣ ಪ್ರಕರಣ. ಮಹಾತ್ಮಾ ಬಸವಣ್ಣನವರು ಮಾಡಿದ ಸಂಸ್ಕೃತಿಯ ಕ್ರಾಂತಿಯು ನೂರೊಂದು ವಿರಕ್ತರ ನಂತರ ಪುನಃ ಇಪ್ಪತ್ತನೆಯ ಶತಮಾನದಲ್ಲಿ ಪ್ರಾರಂಭವಾಗಿ ಅದೊಂದು ಶಾಶ್ವತ ಸ್ವರೂಪದ ತಳಹದಿಯನ್ನು ವೀರಶೈವ ಧರ್ಮಗುರುಗಳ ಮತ್ತು ವಿರಕ್ತರ ಮುಂದಾಳುತನದಲ್ಲಿ ಪಡೆದು ನಡೆದಿದೆ. ಇದು ಬಸವವತರಣವಲ್ಲದೆ ಮತ್ತೇನು ?

ನಾಗನೂರ ಶ್ರೀಗಳವರ ತಪೋನಿಷ್ಠೆ ಅದ್ಭುತವಾಗಿದೆ. ಅವರೊಂದು ಆತ್ಮವಿಜ್ಞಾನ ರಹಸ್ಯಶಾಲೆ. ಶಾಕುಂತಲಾ ನಾಟಕದಲ್ಲಿ ಕಣ್ವಮಹರ್ಷಿಗಳು ಹೇಳುತ್ತಾರೆ—" ನಾವು ಅರಣ್ಯವಾಸಿಗಳಾಗಿದ್ದರೂ ಪ್ರಾಪಂಚಿಕರ ಜೀವನ ರಹಸ್ಯ ನಮಗೆ ಗೊತ್ತು. ಶ್ರೀಗಳವರ ಸಾಮಾಜಿಕ, ರಾಷ್ಟ್ರೀಯ, ಧಾರ್ಮಿಕ ಪ್ರಜ್ಞೆ ಅದ್ಭುತವಾಗಿದೆ. ರಾಜಕೀಯ ಬಿಕ್ಕಟ್ಟು ಉಂಟಾದಾಗ, ಸಾಮಾಜಿಕ ತೊಂದರೆ ಉದ್ಭವಿಸಿದಾಗ ಮುಂದಾಳುಗಳು ಇಲ್ಲಿಗೆ ಬಂದು ಪೂಜ್ಯಪಾದದಿಂದ ಪರಿಹಾರವನ್ನು ಕಂಡುಕೊಳ್ಳು ತ್ತಾರೆ. ಸಮಾಜ ಹಾಗೂ ವ್ಯಕ್ತಿ ಜೀವನಕ್ಕೆ ಅವರ ದರ್ಶನ, ಸ್ಪರ್ಶದ ಚೇತೋಹಾರಿ. ಮಹಾಸನ್ನಿಧಿಯವರದು ಮಾತನಾಡದ ಸ್ಮೃತಿ, ಮಥನವಿಲ್ಲದ ವಿಚಾರ, ಚಲನೆಯರಿಯದ ಸಂಚಾರ. ನಾಡಿನ ಆಗುಹೋಗುಗಳು, ಸಾಮಾಜಿಕ ಪ್ರವಾಹದ ಸ್ಥಿತ್ಯಂತರ ಗಳು ತಮ್ಮ ಗತಿಮೂಲ, ಹಾಗೂ ಗತಿಯ ಉದ್ದೇಶಗಳನ್ನು ಅವರೊಡನೆ ಸಂಭಾಷಿಸುತ್ತವೆ. ಆ ಮಹಾತಪಸ್ವಿ ನಾಡಿನ ಕಣ್ಣು, ಜಂಗಮ ಪದವೇ ಸಾಮಾಜಿಕ ಹಾಗೂ ವೈಯಕ್ತಿಕ ಪ್ರಜ್ಞೆಯಲ್ಲವೆ ? ಸಮಾಜ ಜೀವನಚುಕ್ಕಾಣಿ ಜಂಗಮ. ವೈಜ್ಞಾನಿಕ ಭಾಷೆಯಲ್ಲಿ ಹೇಳಬೇಕಾದರೆ ಸಮಾಜ ಪುರುಷನ ವ್ಯಕ್ತಿತ್ವವು ರೂಪುಗೊಳ್ಳಬೇಕಾದರೆ ವ್ಯಕ್ತಿಯ ಜೀವನದಲ್ಲಿ ಇಚ್ಛೆ–ಜ್ಞಾನ ಹಾಗೂ ಕ್ರಿಯೆಯು ನಾಯಕ ಭಾವನೆ (Master sentiment) ಯದು ಹೇಗೆ ಮಹಾಪಾತ್ರವಿರುತ್ತ ದೆಯೋ ಅದೇ ರೀತಿ ಜಂಗಮ ಮೂರ್ತಿಯ ಪಾತ್ರವಿದೆ. ಸಮಾಜ ಪುರುಷನ, ನಾಡಪುರುಷನ ಇಚ್ಛಾಶಕ್ತಿಯೇ ಜಂಗಮ. ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ನಾಯಕರಿಗೆ ಹೇಗೆ ಆಶ್ರಯ ನೀಡಿ ಮಾರ್ಗದರ್ಶನ ಮಾಡಿದರೋ ಅದೇ ರೀತಿ ಕರ್ನಾಟಕದ ಏಕೀಕರಣದ ನಾಯಕರಿಗೂ ಆಶೀರ್ವಾದ ಮಾಡಿದರು. ಅವರೆಲ್ಲಿ ಸಂಚಾರಮಾಡಿ ಪ್ರಚಾರ ಮಾಡುತ್ತಾರೆ ? ಅದರೆ ಅವರ ಲ್ಲಿಯೇ ಎಲ್ಲವೂ ಸಂಚರಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಡಿನ ಪ್ರಗತಿಗೆ ಪುರುಷರಷ್ಟೇ ಸ್ತ್ರೀಯರೂ ಹೊಣೆಗಾರರೆಂದು ಪ್ರಜ್ಞಾವಂತರಾದ ಇವರು ಬಸವಣ್ಣ ಹಾ ಗಾಂಧೀಜಿಯವರಂತೆ ಸ್ತ್ರೀಯರ ಪ್ರಗತಿಗೆ ಲಕ್ಷ್ಯಕೊಟ್ಟಿದ್ದಾರೆ. ವಿದ್ಯಾರ್ಥಿನಿಯರ ಶಿಕ್ಷಣದ ಸೌಕರ್ಯಕ್ಕಾಗಿ ಪ್ರಸಾದ ನಿ ವನ್ನು ಪ್ರಾರಂಭಿಸಿದ್ದಾರೆ. ಇದು ಸಾಮಾಜಿಕ ಜೀವನ ಪುನರ್ರಚನೆಯ ದ್ವಿತೀಯ ಹಂತ. ಕನ್ನಡನಾಡ ಸುಪ್ರಸಿದ್ಧ ಕವಿಗ ಶ್ರೀ ಈಶ್ವರ ಸಣಕಲ್ಲ ಹಾಗೂ ವಚನ ಶಾಸ್ತ್ರ ಪಿತಾಮಹ ದಿವಂಗತ ಡಾ. ಫ. ಗು. ಹಳಕಟ್ಟಿ ಅವರಿಗೆ ಶ್ರೀಗಳವರು ಹಮ್ಮಿ ನ್ನರ್ಪಿಸಿ ತಮ್ಮ ಸಕ್ರಿಯವಾದ ಆಶೀರ್ವಾದವನ್ನು ನೀಡಿದ ಘಟನೆ ಶ್ರೀಗಳವರಿಗೆ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ರುವ ಕಕ್ಕುಲತೆಯನ್ನೂ ಕಳಕಳಿಯನ್ನೂ ಎತ್ತಿ ತೋರಿಸುತ್ತಿದೆ.

ಶ್ರೀ ಶಿವಬಸವ ಮಹಾಸನ್ನಿಧಿಯವರ ಚರಿತ್ರವೆಂದರೆ ಕನ್ನಡನಾಡ ಪುನರುಜ್ಜೀವನದ ಒಂದು ಸುವರ್ಣಪಟ; ಕ ಕುಲಕ್ಕೊಂದು ಸ್ಫೂರ್ತಿಯ ಕೇಂದ್ರ; ಆಶಾಕಿರಣ. ಕನ್ನಡಿಗರ ತಪಶ್ಶಕ್ತಿಯ ಕೇಂದ್ರ ಬಿಂದುಗಳಲ್ಲೊಂದು. ಆ ಪರಮಪು ಲಿಂಗಲೀಲೆ, ಕನ್ನಡ ಕುಲಜೀವನ ಮಹಾಶಿಲ್ಪಿ. ಆ ಮಹಾ ಬೆಳಗು ಸಾವಿರಾರು ಅಂತರಂಗ ಪ್ರಣತೆಗಳಿಗೆ ಜ್ಯೋ **ಚುಂಬನ ನೀಡಿದೆ !** ಕನ್ನಡನಾಡ ಜೀವನ ಪಾವನ. ಸಿದ್ಧಿ ಆ ಮಹಾಸನ್ನಿಧಿಯ ಸಂಸ್ಪರ್ಶ ಸಂಚಾರ !!

ಹುಡಿಯಲಿ ಅರಳುವ ಹೂಗಳ ರಕ್ಷಕ
ಜಾತಿಯಜಾಡ್ಯವ ಕಳೆಯುವ ಶಿಕ್ಷಕ
ಶಿವಬಸವೆಂಬುದು ಪಂಚಮಪುರುಷ
ಬದುಕಿನ ತಮದೊಳು ಬೆಳಕಿನ ಹರುಷ !

—**ವಿ. ಎಸ್. ಕಂಬಿ,** ಎಮ್. ಎ. ಧಾರವಾಡ

ನಸುಬಣ್ಣದಾ ನೆಲವು ಕಿಸುಬಣ್ಣದಾ ದಿಕ್ಕು
ನೊರೆಬಣ್ಣ ಮುಗಿಲ ಸಿರಿಗೇನು ಅಲ್ಲಿ
ಹಸುಕು ಕಸುಕಿನ ಹಸುರು ಹಣ್ಣಿನಾ ಹೊಸ ಹಳದಿ
ನಸುಕಿನಾ ನೀಲಿ ಮುಂಜಾವಿನಲ್ಲಿ

ಹಗಲುಗನಸಿನ ಸವಿಯು ಇರುಳಗನಸಿಗೆ ಬಹುದೆ
ಇರುಳಿನದು ಇಲ್ಲದಾ ಸಂತೆ ಕಾಣೋ
ನಗುನಗುತಲೂ ಕನಸು ನೋಡ ನೋಡುತೆ ಕನಸು
ಬೆಸಿಲಲ್ಲೆ ಬೆಳತಿಗೆಯ ಗುಂತಿ ಕಾಣೋ.

—ಮಧುರ ಚೆನ್ನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೀಲಸಂಪನ್ನ ಶಿವಬಸವ ಶ್ರೀಗಳು

ಈ ಜಗದೊಳಗೆ ಜನಿಸಿದ ಎಲ್ಲ ಧರ್ಮಗಳು, ಶೀಲವನ್ನು ಮೂಲವಾಗಿ ಪ್ರತಿಪಾದಿಸುತ್ತವೆ. ಆದ್ದರಿಂದ ಆಯಾ ಧರ್ಮಾನುಯಾಯಿಯಾದ ಮಾನವನು ಶೀಲವನ್ನು ತನ್ನ ಜೀವನದ ಮೂಲ ಉಸಿರನ್ನಾಗಿ ಮಾಡಿಕೊಂಡು ಬಾಳಬೇಕು. ಶೀಲವೆಂದರೆ ಪರಿಶುದ್ಧ ಜೀವನವೇ ಶೀಲ. ಈ ಬಾಳಿನಲ್ಲಿ ಮಾನವನು ಗಳಿಸಿಕೊಳ್ಳಬೇಕಾದುದು ಉಳಿಸಿಕೊಳ್ಳಬೇಕಾದುದು ಪರಿಶುದ್ಧ ಜೀವನ. ಇದರಿಂದ ಮಾನವನ ಅಂತಿಮಗುರಿಯಾದ ಮುಕ್ತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಪರಿಶುದ್ಧ ಜೀವನದ ಪವಿತ್ರಾತ್ಮರು ತಮ್ಮ ಮುಕ್ತಿಯ ಗುರಿಯನ್ನೊಂದೇ ಸಾಧಿಸದೆ ಸಕಲ ಮಾನವ ಕೋಟಿಯ ಉದ್ಧಾರಕ್ಕಾಗಿ, ಮಹಾ ಶಾಂತಿಗಾಗಿ ಶ್ರಮಿಸುವರು, ಇಂತಹ ಶೀಲವಂತ ಮಹಾತ್ಮರು ಆತ್ಮವಿಶ್ವಾಸ, ಕಾರ್ಯಾಕಾಂಕ್ಷೆ, ಕಷ್ಟಸಹಿಷ್ಣುತೆ, ನಿಷ್ಕಪಟತೆ, ಸ್ಥೈರ್ಯ, ಧೈರ್ಯ, ಸಂತೃಪ್ತಿ, ದಯಾದೃಷ್ಟಿ, ಸರಿಸಮಾನತೆ ಮೊದಲಾದ ಉಚ್ಚಗುಣಗಳನ್ನು ಅಳವಡಿಸಿಕೊಂಡಿರುತ್ತಾರೆ. ಈ ಪ್ರಪಂಚ ಮತ್ತು ಪಂಚೇಂದ್ರಿಯಗಳ ಉಪಟಳದಿಂದ ದೂರಿರುತ್ತಾರೆ. ಇಂತಹ ಪವಿತ್ರ ಗುಣಗಳ ಶೀಲಸಂಪನ್ನ ಪವಿತ್ರಾತ್ಮರಲ್ಲಿ ನಾಗನೂರು ಶ್ರೀ ಶಿವಬಸವ ಶ್ರೀಗಳೊಬ್ಬರು.

ಶೀಲವಂತರ ಬಗ್ಗೆ ಮಹಾ ಷಟ್‌ಸ್ಥಲ ಜ್ಞಾನಿ ಚೆನ್ನಬಸವಣ್ಣನವರ ಉಕ್ತಿಯಿದು.

"ಶೀಲವಂತನಾದೊಡೆ ಪ್ರಪಂಚ ನಾಸ್ತಿಯಾಗಿರಬೇಕು. ಶೀಲವಂತನಾದೊಡೆ ಪಂಚೇಂದ್ರಿಯಗಳು ನಾಸ್ತಿಯಾಗಿರಬೇಕು. ತನ್ನ ಕರ್ತೃವಿನಲ್ಲಿ ಸಕಸಂಶಯ ನಾಸ್ತಿಯಾದ ಶೀಲಕ್ಕೆ ಭವಂ ನಾಸ್ತಿ ಇವು ನಾಸ್ತಿಯಾದಲ್ಲದೆ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಶೀಲವಂತ ನೆನಿಸಬಾರದು. ಈ ವಂಚನೆಯ ಡಂಬಕ ಅಪಸ್ಮಾರಿಗಳಿಗೆಂತಯ್ಯಾ"

ಷಟ್‌ಸ್ಥಲ ಚಕ್ರವರ್ತಿಯ ಈ ಶೀಲಗಳಲ್ಲಿ ಈ ಪ್ರಪಂಚವು ನಾಸ್ತಿಯಾಗಬೇಕಾದರೆ ಪಂಚೇಂದ್ರಿಯಗಳು ಮೊದಲು ನಾಸ್ತಿಯಾಗಿರಬೇಕು. ಈ ಪಂಚೇಂದ್ರಿಯಗಳನ್ನು ಶ್ರೀ ಶಿವಬಸವ ಶಿವಯೋಗಿಗಳವರು ತಮ್ಮ ಅಂಕಿತದಲ್ಲಿಟ್ಟುಕೊಂಡು ಅವುಗಳನ್ನು ಜಯಿಸಿ ಹೇಗೆ ಶೀಲಸಂಪನ್ನರಾಗಿರುವರೆಂಬುದನ್ನು ನೋಡುವಾ.

ನೇತ್ರಶೀಲ

ಪಂಚೇಂದ್ರಿಯಗಳಲ್ಲಿ ಮೊದಲನೆಯದು ಕಣ್ಣು. ಅದು ಕಾಣಿಸಿದ ದಾರಿಯಲ್ಲಿ ಕಾಲು ಹೆಜ್ಜೆ ಹಾಕುವದು. ಆದಕ್ಕಾಗಿ

"ಕಣ್ಣುಮನ ನಾಲಗೆಯು ತನ್ನವೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನನೇ ತಾನು ಕೊಲ್ಲುವವು"
ಎಂಬ ರಾಷ್ಟ್ರಕವಿ ಸರ್ವಜ್ಞ ಮೂರ್ತಿಯ ಹಾಗೂ
"ಸುತ್ತು ಸುಳಿಯದಂತೆ ಅಂಧಕನ ಮಾಡಯ್ಯ"

ಎಂಬ ಮಹಾನುಭಾವಿ ಅಣ್ಣ ಬಸವಣ್ಣನವರ ಮಾತಿನ ಮರ್ಮವನ್ನರಿತ ಶ್ರೀಗಳವರು ಈಗ ೭೨ ವರುಷಗಳಾಯುಷ್ಯದಲ್ಲಿ ತಮ್ಮ ದೃಷ್ಟಿಯನ್ನು ಬಹಳೇ ಪವಿತ್ರವಾಗಿಟ್ಟುಕೊಂಡಿದ್ದಾರೆ. "ಪರವಧುವನು ಮಹಾದೇವಿ ಎಂದು ಕಾಂಬೆನು" ಎಂಬ ಅಣ್ಣನ ಉಕ್ತಿಯನ್ನು ಚಾಚು ತಪ್ಪದೆ ಪಾಲಿಸುತ್ತಿದ್ದಾರೆ. ದೇವರೂಪಿ ಮಾನವನನ್ನು ಕಾಣುವ ಅವರ ವಿಶ್ವ ಬಾಂಧವ್ಯ ದೃಷ್ಟಿ ಅತ್ಯಂತ ಪವಿತ್ರವಾದುದು. "ಬಾಹ್ಯದೃಷ್ಟಿ ಪವಿತ್ರವಾದಾಗ ಅಂತರ್ದೃಷ್ಟಿ ಪವಿತ್ರವಾಗುತ್ತದೆ." ಎಂಬ ಶ್ರೀಹಾನಗಲ್ಲ ಕುಮಾರ ಶಿವಯೋಗಿವರೇಣ್ಯರ ಅಮೃತವಾಣಿಯನ್ನೂ

"ಅಲಿನಿಂದೊಡೆ ಸುಳಿದು ಸೂಸುವ ಗಾಳಿನಿಲುವದು,
ಗಾಳಿನಿಂದೊಡೆ ಮನವು ನಿಲುವುದು; ಮನವು ನಿಂದೊಡೆ
ಬಿಂದು ನಿಲುವುದು; ಬಿಂದು ನಿಂದೊಡೆ ಕಾಲಕರ್ಮಗಳು
ಕಳೆದು ಮಾಯೆ ಹೇಳ ಹೆಸರಿಲ್ಲದಂತಾಗುವದು"

ಎಂಬ ಪ್ರಭುಲಿಂಗ ಲೀಲೆಯಲ್ಲಿಯ ಪ್ರಭುದೇವರ ಉಕ್ತಿಯನ್ನು ಪದೇ ಪದೇ ಹೇಳುತ್ತಾರೆ. ಈ ದೃಷ್ಟಿಶೀಲ ಸಾಧಿಸಬೇಕಾದರೆ ತನ್ನ ಕರದಿಷ್ಟಲಿಂಗದಲ್ಲಿ ದೃಷ್ಟಿಯನ್ನು ಲೀನಗೊಳಿಸಿ ಪ್ರಾಣಭಾವ ಲಿಂಗಗಳೊಡನೆ ಸಮರಸಗೊಳ್ಳಬೇಕಾಗುತ್ತದೆ. ಆದ್ದರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ
ಸಂಸಾರ ಏನವನ ಬಾಳುವೆ ಏನವನ ನಡೆ ಏನವನನುಡಿ
ಏನವನ ಕರ್ತೃ ? ಕೂಡಲಸಂಗಮದೇವ ನಿಮ್ಮ ತೊತ್ತು
ಗೆಲಸ ಮಾಡದವನ ಬದುಕೇನವನ ?
" ನೆರೆಕೆನ್ನೆಗೆ ತೆರೆಗಲ್ಲಕೆ ಶರೀರ ಗೂಡುಹೋಗದಮುನ್ನ
ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲುಹಿಡಿಯದ ಮುನ್ನ....
ಪೂಜಿಸು ನಮ್ಮ ಕೂಡಲಸಂಗಮ ದೇವನ "

ಎಂಬ ಅಣ್ಣನ ಉಕ್ತಿಯಂತೆ ಪ್ರತಿನಿತ್ಯ ತ್ರಿಕಾಲದೋಳ್ ಲಿಂಗಪೂಜೆಮಾಡುತ್ತ ಲಿಂಗಾಂಗ ಸಾಮರಸ್ಯ ಸುಖ ಅನುಭೋಗಿಸುತ್ತ ಅದನ್ನು ಆತ್ಮ ಜಿಜ್ಞಾಸುಗಳಿಗೆ ಬೋಧಿಸುತ್ತ ಅಂತರ್ಬಾಹ್ಯ ಶೀಲ ಸಂಪನ್ನರಾಗಿದ್ದಾರೆ.

ಶ್ರೋತ್ರಶೀಲ

ಶೋತ್ರಶೀಲವು ಶಬ್ದಶೀಲದಿಂದ ಸಂಭವಿಸುತ್ತದೆ. " ಶಿವಶಬ್ದವೇ ಶೀಲ; ಅಶಿವಶಬ್ದವೇ ಅಶ್ಲೀಲ. ಶಿವಶಬ್ದ ಶ್ರವಣಮಾಡುವದೇ ಶ್ರೋತ್ರಶೀಲ ಆಲಿಸಿದ್ದನ್ನೇ ನಾವು ಆಡಬೇಕಾಗುತ್ತದೆ. ಪ್ರಸಾದವಾಣಿಯನ್ನು ಕೇಳುವವನ ಮುಖ ಪ್ರಸಾದವಾಣಿಯೇ ವೈಖರಿಯಾಗಿ ಹೊರಹೊಮ್ಮುತ್ತದೆ. ಇದರಿಂದ ವಾಕ್‌ಶೀಲವೂ ಸಂಭವಿಸುತ್ತದೆ."

" ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ "
" ಕಿವಿಯಲ್ಲಿ ನಿಮ್ಮ ಕೀರುತಿತುಂಬಿ "
" ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ "

ಈ ಮಾತುಗಳು ಶ್ರೋತ್ರ ಶೀಲವನ್ನು ಹೇಳುತ್ತಿವೆ. ಶ್ರೀ ಶಿವಬಸವ ಶಿವಯೋಗಿಗಳವರು ಮೇಲಿನ ಮಾತುಗಳಂತೆ ವರ್ತನವನ್ನಿಟ್ಟುಕೊಂಡಿದ್ದಾರೆ. ಅವಾಚ್ಯ ಶಬ್ದಗಳನ್ನವರು ಎಂದೂ ನುಡಿಯುವದಿಲ್ಲ. ನುಡಿಯುವವರನ್ನು ಕಂಡರೆ ಎಳ್ಳ ಸೇರರು. ಅಂತಪರಿಗೆ ನಿಮಗೇನಾದರೂ ಬೇರೆ ಕೆಲಸವಿಲ್ಲವೆ ? ಇಂತಹ ಶಬ್ದಗಳನ್ನಾಡುವ ಬದಲು ಮಂಗಲಮಯನಾದ ದೇವನ ಸಂಬಂಧ ಏನಾದರೂ ಆಡಿರಿ; ನುಡಿಯಿರಿ ಎಂದು ಉಪದೇಶಿಸುತ್ತಾರೆ. ಅದರಂತೆ ತಾವೂ ಆಚರಿಸುತ್ತಾರೆ. ಹರ ಗುರುನಿಂದೆಗಳನ್ನು ಅವರು ಎಂದೂ ಕೇಳರು; ಎಷ್ಟೂ ಸಹಿಸರು. ಹರ ಗುರುಗಳಲ್ಲಿ ಅಚಲವಾದ ಭಕ್ತಿಯನ್ನಿಟ್ಟ ಅವರು ಅವರ ಸ್ಥಲಗುರುಗಳಾದ ಹಾಲಕೆರೆಯ ಅನ್ನದಾನೀಶ್ವರ ಮಹಾಸ್ವಾಮಿಗಳವರ ಬಗ್ಗೆ ಒಬ್ಬ ಮಹಾಸ್ವಾಮಿಗಳವರು 'ಹ ಸ್ವಾಮಿಗಳಿಗೆ ಏನೂ ತಿಳಿಯದು' ಹಾಗೆ ಹೀಗೆ ಎಂದು ಕೆಲವು ಮಾತುಗಳನ್ನಾಡುವಾಗ್ಗೆ " ಸ್ವಾಮಿಗಳಾದ ನಿಮ್ಮ ಬಾಯಿ ಇಂತಹ ಮಾತುಗಳು ಬರಬಾರದು. ಇವು ನಿಮ್ಮ ಸ್ವಾಮಿತ್ವಕ್ಕೆ ಯೋಗ್ಯ ಮಾತುಗಳಲ್ಲ " ಎಂದು ಖಂಡ ತುಂಡಾಗಿ ಹ ಅವುಗಳನ್ನು ಅಲ್ಲಿಯೇ ಖಂಡಿಸಿಬಿಟ್ಟರು. ಇದರಿಂದ ಶ್ರೀಗಳವರ ಶ್ರೋತ್ರ ಶೀಲವು ಎಷ್ಟು ಪರಮ ಪವಿತ್ರವಾದುದು ಎಂ ಗೊತ್ತಾಗುತ್ತದೆ. ಇಂತಹ ಶ್ರೋತ್ರೀಯ ಶೀಲಸಂಪನ್ನರು ಶ್ರೀ ಶಿವಬಸವ ಶಿವಯೋಗಿಗಳು.

ಘ್ರಾಣಶೀಲ

ಘ್ರಾಣದ ಕಾರ್ಯ ಗಂಧವನ್ನು ಗ್ರಹಿಸುವದು. ಗಂಧದಲ್ಲಿ ಸುಗಂಧ, ದುರ್ಗಂಧ ಎಂದು ಎರಡು ಬಗೆ. ಸುಗಂಧ ಸೇವಿಸಲು ಯೋಗ್ಯ. ದುರ್ಗಂಧವು ಅಯೋಗ್ಯ " ಸುಗಂಧಂ ಪುಷ್ಟಿ ವರ್ಧನಂ " ಎಂಬ ಉಕ್ತಿ ಇದ್ದರೂ ಇದರಲ್ಲಿ ತಾಮ ರಾಜಸ ಸಾತ್ವಿಕ ಎಂಬ ಮೂರು ಪ್ರಕಾರಗಳಿವೆ. ಈ ಸಾತ್ವಿಕ ಗಂಧವನ್ನು ಘ್ರಾಣ ಮೂಲಕ ಗ್ರಹಿಸಿ ತನ್ನ ಆಚಾರ ಲಿ ಕ್ಕರ್ಪಿಸಿ ಪ್ರಸಾದವನ್ನಾಗಿ ಘ್ರಾಣಿಸುವದೇ ಸೂಕ್ಷ್ಮವಾದ ಘ್ರಾಣಶೀಲ. ಹೀಗೆ ಮಾಡುವದರಿಂದ ತನ್ನ ಸಾಧನೆ ಸಂಪ ವಾಗುತ್ತದೆ. ಶರೀರ ಸತ್ವಗೊಳ್ಳುತ್ತದೆ, ವಿಷಯವಾಸನೆಯಿಂದ ಈ ಸುಗಂಧವನ್ನು ಮೂಸಬಾರದು. ನೇರವಾಗಿ ಶಿವಲಿಂಗ ರ್ಪಿಸಿದ ಪುಷ್ಪಾದಿಗಳ ಪರಿಮಳವನ್ನು ಆಘ್ರಾಣಿಸಬೇಕು. ಹೊರಗಿನ ಪರಿಮಳಕ್ಕಿಂತ ಒಳಗಿನ ಪರಿಮಳ ಒಳಿತು.

" ಉಸಿರು ಪರಿಮಳವಿರಲು ಕುಸುಮದ ಹಂಗೇಕಯ್ಯ ? ಕ್ಷಮೆ, ದಯೆ ಶಾಂತಿ, ಸೈರಣೆ ಇರಲು ಸಮಾಧಿಯ ಹಂಗೇಕಯ್ಯ ಎಂದು ಮಹಾದೇವಿ ಅಕ್ಕ ಕೇಳುತ್ತಾಳೆ. ಉಸಿರು-ಬಸಿರುಗಳು ಪಾರಮಾರ್ಥದ ಪರಿಮಳದಿಂದ ಕೂಡಿರುವದೇ ಘ್ರಾಣಶೀ ಇಂತಹ ಘ್ರಾಣಶೀಲರಾದ ನಮ್ಮ ಶ್ರೀಗಳವರು " ಸೂರ್ಯ ಚಂದ್ರ ನಾಡಿಗಳ ಕೇಂದ್ರವಾದ ಮೂಗು ಹದಗೆಡಬಾರದ ಮೂಸುವದನ್ನು ಮೊದಲು ಲಿಂಗಕ್ಕೆ ಮೀಸಲಾಗಿ ಅರ್ಪಿಸಿ ಬಳಿಕ ಅಂಗ ಆಘ್ರಾಣಿಸಬೇಕು " ಎಂದು ಅಪ್ಪಣೆ ಕೊಡಿಸುತ್ತಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನರಂರೆ ತಾವೂ ಆಚರಿಸುತ್ತ ಆಚಾರಲಿಂಗಾರ್ಪಿತಜನ್ಯ ಸದ್ವಾಸನೆಯನ್ನು ಆಘ್ರಾಣಿಸುತ್ತ ಶಿವಪ್ರಸಾದವಾದ ತಮ್ಮ ಜೀವನ ನ್ನು ಸುಂದರವಾಗಿ ಸುಖಮಯವಾಗಿ ಸಾಗಿಸುತ್ತಿದ್ದಾರೆ.

ಹ್ವಾಶೀಲ

ನೇತ್ರಾ ಶೀಲದಂತೆ ಜಿಹ್ವಾ ಶೀಲವೂ ಬಹಳೇ ಮುಖ್ಯವಾದುದು. ಆದ್ದರಿಂದ ಪರಿಶುದ್ಧವಾದ ಸಾತ್ವಿಕ ಆಹಾರವನ್ನು ಂಗಾರ್ಪಿತಮಾಡಿ ಹಿತಮಿತವಾಗಿ ಪ್ರಸಾದ ರೂಪದಿಂದ ಸೇವಿಸಬೇಕಾಗುತ್ತದೆ. ಇಂತಹ ಸಾತ್ವಿಕ ಪ್ರಸಾದ ಸೇವಿಸುವ ಸಾದಿಗೆ ಜಿಹ್ವೆಯ ಎಲ್ಲ ಬಗೆಯ ಚಪಲತೆಗಳನ್ನು ಜಯಿಸಿ ಜಿಹ್ವಾಶೀಲನಾಗುವದು ಸಾಧ್ಯ. ಆಹಾರದಂತೆ ಆತನು ಮಾತು ಳನ್ನು ಸಹ ಹಿತಮಿತವಾಗಿ ಬಳಸಿ ಮಾತನ್ನು ಮಂತ್ರವನ್ನಾಗಿಸುವದು ನಾಲಗೆಯ ಶೀಲ. ಮಾತು ಮಂತ್ರವಾಗಬೇಕಾದರೆ ಾತನ್ನು ಸತ್ಯವಾಗಿ ಮನಸ್ಸಿನಲ್ಲಿ ಸಂಯಮಿಸಬೇಕು. ಅಂದರೆ ಮಾತಿನಂತೆ ಮನಸ್ಸು; ಮನಸ್ಸಿನಂತೆ ಮಾತು ಇರಬೇಕು. ಾತು, ಮನ, ಜ್ಞಾನ, ಕ್ರಿಯೆಗಳೆಲ್ಲ ಸತ್ಯನಿಷ್ಠವಾಗಿರಬೇಕು.

" ಸತ್ಯವ ನುಡಿವುದೇ ಸ್ವರ್ಗಲೋಕ ಮಿಥ್ಯವ ನುಡಿವುದೇ ಮೃತ್ಯುಲೋಕ "
" ಮೌನದಲುಂಬುದು ಆಚಾರವಲ್ಲ ಲಿಂಗಾರ್ಪಿತ ಮಾಡಿದ ಬಳಿಕ ತುತ್ತಿಗೊಮ್ಮೆ ಶಿವಶರಣು ಎನ್ನುತ್ತಿರ ಬೇಕು. ಕರಣವೃತ್ತಿಗಳಡಗುವವು ಕೂಡಲ ಸಂಗಮನ ನೆನೆಯುತ ಉಂಡರೆ "

ಸನೇಂದ್ರಿಯ ಶೀಲವು ಈ ವಚನಗಳಲ್ಲಿ ಎರಡನೆಯದು. ಜಿಹ್ವಾಶೀಲವನ್ನು ಸುಂದರವಾಗಿ ಸಂಪೂರ್ಣವಾಗಿ ಪ್ರತಿಪಾದಿ ತ್ತದೆ. ಅದಕ್ಕಾಗಿ ಲಿಂಗಾರ್ಪಿತ ಪ್ರಸಾದದ ಆರೋಗಣೆಯಾಗಬೇಕು. ಲಿಂಗವಾರ್ತೆಯನ್ನೇ ನುಡಿಯುತ್ತಿರಬೇಕು. ಇಂತಹ ಡುವ ಆರೋಗಿಸುವ ಸುಶೀಲವನ್ನು ಶ್ರೀ ಶಿವಬಸವ ಶಿವಯೋಗಿಗಳವರು ತಮ್ಮ ಆಧ್ಯಾತ್ಮಿಕ ಜೀವನದಲ್ಲಿ ಸಂಪೂರ್ಣವಾಗಿ ಳವಡಿಸಿಕೊಂಡಿದ್ದಾರೆ. " ಮಾನವನು ಜಿಹ್ವಾಲಂಪಟನಾಗಬಾರದು. ಆದರಿಂದ ಆವನ ಶಾರೀರಿಕ, ಮಾನಸಿಕ, ನೈತಿಕ ಶೀಲ ಲ್ಲವೂ ಹಾಳಾಗುವವು " ಎಂದು ನಮ್ಮೆಲ್ಲರಿಗೂ ಮೇಲಿಂದ ಮೇಲೆ ಹೇಳುತ್ತಾರೆ. ಅವರ ದಿವ್ಯ ಪಾದ ಸನ್ನಿಧಿಯಲ್ಲಿ ನಾಲ್ವತ್ತು ರುಷಗಳಿಂದ ಜೀವಿಸುತ್ತಿದ್ದ ನಾನು ನಾಲಿಗೆಯ ರುಚಿಗಾಗಿ ಇಂತಹ ಅಡಿಗೆಯನ್ನು ಮಾಡಿರೆಂದು ಹೇಳಿದುದನ್ನು ಕಿವಿಯಾರೆ ಳಿಲ್ಲ; ಕಣ್ಣಾರೆ ಕಂಡಿಲ್ಲ.

" ಬಯಸಿ ಬಂದುದು ಅಂಗಭೋಗ ಬಯಸದೆ ಬಂದುದು ಲಿಂಗಭೋಗ "
" ಅದರ ತಾಗುವ ರುಚಿಯು ಉದರ ತಾಗುವ ಸುಖವ ಲಿಂಗಾರ್ಪಿತವಲ್ಲದೆ ಕೊಂಡರೆ ಕಿಲ್ಬಿಷ ನೋಡಾ ಕೂಡಲ ಸಂಗಮದೇವಾ "

ಎಂಬ ಸೂಳ್ನುಡಿಯಂತೆ ಸುಶೀಲ ಸಂಪನ್ನರಾಗಿ ಹಾನಗಲ್ಲ ಕುಮಾರ ಶಿವಯೋಗಿಗಳ ಪರಮ ಶಿಷ್ಯರಾದ ಇವರು, ಅವರು ಸ್ವೀಕರಿಸುತ್ತಿದ್ದ ಪವಿತ್ರವಾದ ಸಾತ್ವಿಕ ಆಹಾರವನ್ನೇ ಈ ವರೆಗೂ ಸೇವಿಸುತ್ತ ಜಿಹ್ವಾಶೀಲರಾಗಿದ್ದಾರೆ. " ಉಣ್ಣುವ ದಕ್ಕಾಗಿ ಜೀವಿಸಬೇಡ ಜೀವಿಸುವದಕ್ಕಾಗಿ ಉಣ್ಣು " ಎಂಬ ಗಾದೆಯಂತೆ ಶ್ರೀ ಶಿವಬಸವ ಶ್ರೀಗಳವರಷ್ಟು ಕಡಿಮೆ ಪ್ರಸಾದ ಸೇವಿಸುವವರನ್ನು ನನ್ನ ಈ ಅರವತ್ತು ವರುಷಗಳ ಆಯುಷ್ಯದಲ್ಲಿಯೇ ಕಂಡಿಲ್ಲ. ಏಕೆಂದರೆ ನಾನು ಅನೇಕ ಸಾರೆ ಅನೇಕ ಸ್ವಾಮಿ ಗಳು ಆರೋಗಿಸುವ ಪಂಕ್ತಿಯಲ್ಲಿ ಪ್ರಸಾದ ಸ್ವೀಕರಿಸಿದವನಿದ್ದೇನೆ. ಈ ಜಿಹ್ವಾ ಶೀಲದಿಂದ ಶ್ರೀಗಳು ಸಾಧಿಸಿದ ಬ್ರಹ್ಮಚರ್ಯವು ಬಹಳೇ ಪವಿತ್ರವಾಗಿದೆ.

" ಅಯ್ಯಾ ಎಂದೊಡೆ ಸ್ವರ್ಗ ಎಲವೋ ಎಂದೊಡೆ ನರಕ,
" ಉಡುವಿನ ನಾಲಗೆಯಂತೆ ಎರಡಾದರೆ ಕೂಡಲ ಸಂಗಯ್ಯ ಮೆಚ್ಚುವನೆ "

ಮಾತಿನ ಶೀಲ ಶೀಲದ ಮತ್ತೊಂದು ಮುಖವು. ಮಾತು ಬಿರುಸಾಗಬಾರದು, ಬಿರುಕಾಗಬಾರದು, ಎಂಬುದನ್ನರಿತ ಶ್ರೀಗಳವರಿಗೆ ಬಿರುಸು ಬಿರುಕು ಮಾತುಗಳನ್ನಾಡಿಯೇ ಗೊತ್ತಿಲ್ಲ. ಅವರ ಮಾತಿನಲ್ಲಿ ಮಂಗಲ ತುಂಬಿದ ಮಂತ್ರ ಶಕ್ತಿಯಿದೆ. ಒಂದು ಗಂಡಾಂತರ ಪ್ರಸಂಗದಲ್ಲಿ ಒಬ್ಬ ದುಷ್ಟ ವ್ಯಕ್ತಿಯನ್ನು ಕುರಿತು " ಅಪ್ಪಾ ನಾನು ಕೈಕೊಂಡ ಕಾರ್ಯವು ನಿನ್ನ ಮನಸ್ಸಿಗೆ ಬರದಿದ್ದರೆ ಈ ಕ್ಷಣದಲ್ಲಿಯೇ ನೀನು ಮಾಡಬೇಕಾದುದನ್ನು ಮಾಡು. ನಾನು ನಿನಗೆ ಏನೂ ಆತಂಕ ಮಾಡುವದಿಲ್ಲ. ಶಿವನಿಚ್ಛೆ ಇದ್ದಂತೆ ಆಗಲಿ! " ಎಂದು ಉಸುರಿದ ಆ ಮಂತ್ರಮಯ ಮಂಗಳ ವಾಣಿಯನ್ನು ಆಲಿಸಿದ ಆ ದುಷ್ಟ ವ್ಯಕ್ತಿಯ ಹೃದಯ ಕರಗಿ ಶಿಷ್ಯನಾಗಿ ಸಾಷ್ಟಾಂಗವೆರಗಿ ಕ್ಷಮೆ ಬೇಡಹತ್ತಿದನು. ಆಗ ಶ್ರೀಗಳವರು ಕ್ಷಮೆ ಮಾಡಲಿಕ್ಕೆ ನಾನಾರು ? ಆ ದಯಾಘನನಾದ ಪರಮಾತ್ಮನಲ್ಲಿ ಕ್ಷಮೆ ಬೇಡು ಎಂದು ಹೇಳಿ ಪ್ರಸಾದ ಸ್ವೀಕರಿಸಲು ಕಳುಹಿಸಿದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಮಾತಿನ ಮೊದಲ ಬಲ್ಲವರ ಎನಗೊಮ್ಮೆ ತೋರಾ ಗುಹೇಶ್ವರಾ " ಎಂಬ ಪ್ರಭುವಾಣಿ ಈ ಪ್ರಸಂಗದಲ್ಲಿ ತರುತ್ತದೆ. ಇಂತಹ ಮಾತಿನ ಜಿಹ್ವಾ ಶೀಲಿನ ಮಾತು ಜ್ಯೋತಿರ್ಲಿಂಗವಾಗುತ್ತದೆ. ಆತನು ಮಾತನಾಡಿದರೂ ಸ... ವಾಗಿದ್ದರೂ ಸರಿ. ಆತನ ಮೌನದಲ್ಲಿ ಸಮರ್ಥ ಸಿದ್ಧ ಪುರುಷನ ಶಕ್ತಿ ಇರುತ್ತದೆ. ಆದಕ್ಕಾಗಿ ಶ್ರೀಗಳವರು ಮ... ಧ್ಯಾನ ಮಗ್ನರಾಗಿರುವದು ಹೆಚ್ಚು. ತಮ್ಮ ದರ್ಶನಾರ್ಥಿಗಳಾಗಿ ಬಂದವರಿಗೆ ನಾಲಗೆಯ ಪಾವಿತ್ರ್ಯವನ್ನು ಕಾಯ್ದು... ಧ್ಯಾನ ತತ್ಪರರಾಗಿರಲು ಬೋಧಿಸುತ್ತಾರೆ.

ಸ್ಪರ್ಶಶೀಲ

ಸ್ಪರ್ಶಶೀಲವು ದೇಹಕ್ಕೆ ಸಂಬಂಧ ಪಟ್ಟುದು. ಆದ್ದರಿಂದ ದೇಹವು ಬಹಳೇ ಪವಿತ್ರವಿರಬೇಕಾಗುತ್ತದೆ. ಪವಿ... ಬಯಸುವ ಶೀಲವಂತನು ಮೈಲಿಗೆಯುಳ್ಳ ಜಡ ವಸ್ತುಗಳನ್ನು ಮುಟ್ಟಲಾರನು. ಮುಟ್ಟಿದರೂ ಮಣ್ಣು ನೀರು... ಉಜ್ಜಿ ಕೈ ತೊಳೆದುಕೊಳ್ಳಬೇಕಾಗುವದು. ಸಾಮಾನ್ಯವಾದ ಜಡ ಕೊಳೆಗಿಂತಲೂ ಅವಗುಣ ಕೊಳೆಯು ಬಹಳೇ ಕೆ...

ಹಸಿವು, ತೃಷೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ಅವಗುಣಗಳ ಮೈಲಿಗೆ ಮುಟ್ಟದಿರುವದೇ ಅಚ್ಚ ಶೀಲ. ಈ ಮುಟ್ಟು ಕಟ್ಟುಗಳ ಕಟ್ಟಳೆಯು ಬಹು ಆಳವಾದುದು. ಇದನ್ನು ಕಡೆಗಣಿಸು... ಶ್ರೀಗಳವರಕಃ ಸ್ಪರ್ಶ ಶೀಲವು ಬಹಳೇ ಪವಿತ್ರವಾಗಿದೆ.

" ಮನಸ್ಸನ್ನೂ ಆದರಂತೆ ಶರೀರವನ್ನೂ ಪವಿತ್ರವಾಗಿ ಇಟ್ಟುಕೊಳ್ಳಬೇಕು. ಇದರಿಂದ ಮನಕ್ಕೆ ಮುಂದೆ ಶಾಂತಿ ದೊರೆಯುವದು. " ಇದು ಶ್ರೀಗಳು ನಮ್ಮೆಲ್ಲರಿಗೆ ಆಗಾಗ ಕೊಡಿಸುವ ಅಮರ ವಾಣಿಯ ಆಪ್ಪಣೆ. ಈ... ಯನ್ನು ತಾವು ತಪ್ಪದೆ ಪಾಲಿಸಿ ಪವಿತ್ರ ಶರೀರಿಗಳಾಗಿದ್ದಾರೆ. ಅಲ್ಲದೆ ಷಡ್ರಿಪು ಅವಗುಣ ಸಮೂಹವು ... ಅವರ ಹತ್ತಿರ ಸುಳಿಯುವಂತೆಯೇ ಇಲ್ಲ. " ಸಕಲ ಜೀವಾತ್ಮರಿಗೆ ಲೇಸನೆ ಬಯಸುವ " ಆದರಲ್ಲಿ ಎಲ್ಲವೂ ತ... ಬೇಕೆಂಬ ಲೋಭವು ತಿಲಮಾತ್ರವೂ ಇಲ್ಲ. ಅದು ಇರಬೇಕಾಗಿದ್ದರೆ ಸಕಲ ಸಮಾಜ ಹಿತಕ್ಕಾಗಿ ಮಾತ್ರ. ಮದಮತ್ಸರ... ಅವರಲ್ಲಿ ಎಸಿತೂ ಇಲ್ಲ. ಇಂತಹ ಪವಿತ್ರ ಗುರುವಿನ ಹಸ್ತ ಮಸ್ತಕಕ್ಕೆ, ಪಾದ ಸ್ಪರ್ಶ ಕರಶಿರಗಳಿಗೆ ಆಗತ್ಯ ಆಗಬೇಕು.

" ಶ್ರೀಗುರುದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಲೆ ಎನ್ನ ಭವಂ ನಾಸ್ತಿಯಾ... ಎನ್ನ ತನ್ನ ಮಾಡಿದ ಎನಗೆ ತನಗೆ ತೆರಹಿಲ್ಲದಂತೆ ಮಾಡಿ ತೋರಿಸಿದನು ನೋಡಾ "

ಎಂಬ ಚೆನ್ನನ ಉಕ್ತಿಯಂತೆ ಶ್ರೀ ಶಿವಬಸ ಶ್ರೀಗಳವರು ಎಷ್ಟೋ ಸಾವಿರ ಜೀವಿಗಳನ್ನು ತಮ್ಮ ಪವಿತ್ರ ಸ್ಪರ್ಶ... ದಿಂದ ಮುಕ್ತಾತ್ಮರನ್ನಾಗಿ ಮಾಡಿದ್ದಾರೆ. ಮಾಡುತ್ತಿದ್ದಾರೆ.

ಶ್ರೀಗಳವರು ತಮ್ಮ ಬಾಹ್ಯ ಶೀಲಗಳ ಜೊತೆಗೆ ಅಂತರಂಗ ಶೀಲವನ್ನು ಚೆನ್ನಾಗಿ ಆಳವಡಿಸಿ ಕೊಂಡಿದ್ದಾರೆ.

" ಅಂತರಂಗ ಆತ್ಮ ಶುದ್ಧಿ ಇಲ್ಲದವರನೆಂತು
ನಂಬುವನಯ್ಯ ನಮ್ಮ ಕೂಡಲಸಂಗಮದೇವ "

ಎಂಬ ಅಣ್ಣನ ಉಕ್ತಿಯಂತೆ ಅಂತರಂಗ ಶೀಲಕ್ಕೆ ಬಹಳೇ ಮಹತ್ವ ಕೊಟ್ಟಿದ್ದಾರೆ. ಅಂತಃಕರಣ ಚತುಷ್ಟಿಗಳಾದ ಮನ, ಬು... ಚಿತ್ತ-ಅಹಂಕಾರ ಇವುಗಳ ಶುದ್ಧಿಯೇ ಅಂತರಂಗಶೀಲ. ' ವೇದ ವೇದಾಂತವ ನೋಡಿದರೇನು ಮನ ಸಂತಕವಳಿಯದನ್ನ... ಮನಃಶುದ್ಧಿಯನ್ನು ಮಾಡಿಕೊಳ್ಳುವ ಶೀಲ ವೇದ ವೇದಾಂತಗಳ ಓದಿಗಿಂತಲೂ ಮಿಗಿಲಾದುದು. ನಮ್ಮ ಶ್ರೀಗಳವರು ... ವೇದಾಂತಗಳ ಅಭ್ಯಾಸವನ್ನು ಹೆಚ್ಚಾಗಿ ಮಾಡಿದವರಲ್ಲಿ ಮನಶುದ್ಧವಿಲ್ಲ. ಓದು ಆದೊಂದು ಶೂಲವೆಂಬುದನ್ನರಿತ ಅವರು

" ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ
ಘಾತವ ಮಾಡಿ ಗಂಗೆಯಲಿ ಮುಳುಗಿದರೆ
ಆಗುವದೇನಯ್ಯ ?....ಆದಕಾರಣ ಮನವ
ನೋಯಿಸದವನೆ ಪರಮ ಪಾವನ ನೋಡಾ
ಕಪಿಲ ಸಿದ್ಧ ಮಲ್ಲಿಕಾರ್ಜುನಾ "

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಯೋಗಿ ಸಿದ್ಧರಾಮ ದೇವರ ಈ ವಾಣಿಯಂತೆ ಮನಸ್ಸಿನ ಮಲಿನತೆ ಅಳಿದು ಮನಃಶುದ್ಧ ಶೀಲರಾಗಿದ್ದರೆ ಅವರಿಗೆ ಒಳ ಒಂದು ಹೊರಗೊಂದು ಎಂಬುದು ಗೊತ್ತೇ ಇಲ್ಲ. ಮನಶ್ಶೀಲದಂತೆ ಬುದ್ಧಿ ಚಿತ್ತಗಳ ಶೀಲವನ್ನು ಸಂಪಾದಿಸಿರುವರು. ಕರಣ ತುಷ್ಟಯಗಳಲ್ಲಿ ಕೊನೆಯದಾದ ಅಹಂಕಾರವು

" ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ "

ಂಬ ಅಣ್ಣನ ವಾಣಿಯಂತೆ ಅವರಲ್ಲಿ ಎನಿತೂ ಇಲ್ಲ. ಈ ಪ್ರಕಾರ ಶ್ರೀಗಳವರ ಅಂತರ್ಬಾಹ್ಯ ಶೀಲ ಸಂಪನ್ನತೆಯ ಪ್ರಭಾವ ಂದ ಪ್ರತಿನಿತ್ಯ ನಾಲ್ಕು ನೂರು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಜಾತ್ಯತೀತ ಭಾವನೆಯಿಂದ ಪ್ರಸಾದ ಸೇವಿಸುತ್ತ ರಾಷ್ಟ್ರದ ಾವೈಕ್ಯವನ್ನು ಸಾಧಿಸುತ್ತಿದ್ದಾರೆ. ' ಬೇಡುವಾತ ಜಂಗಮನಲ್ಲ ಬೇಡಿಸಿ ಕೊಳ್ಳುವಾತ ಭಕ್ತನಲ್ಲ ' ಎಂಬಂತೆ ಅವರು ಬಯ ದೆ ಸುಮಾರು ೨೪-೨೫ ಲಕ್ಷ ರೂ. ಬೆಲೆಬಾಳುವ ಸ್ಥಾವರ ಆಸ್ತಿಯು ಸಕಲ ಸಮಾಜ ಭಕ್ತರಿಂದ ಅವರ ಪದತಲಕ್ಕೆ ಅರ್ಪಿತವಾ ದೆ. ಅಲ್ಲದೆ ೭-೮ ಲಕ್ಷ ರೂಪಾಯಿ ಬೆಲೆ ಬಾಳುವ ಪ್ರಸಾದನಿಲಯದ ನೂತನ ಭವ್ಯ ಕಟ್ಟಡವು ಅವರ ಶೀಲ ಸಂಪನ್ನತೆಯ ನತೆಯನ್ನು ಎತ್ತಿ ತೋರಿಸುತ್ತಿದೆ. ಇಂತಹ ಶೀಲ ಸಂಪನ್ನ ಗುರುವಿಗೆ ನನ್ನ ಅನಂತ ದೀರ್ಘ ದಂಡ ಪ್ರಣಾಮಗಳು.

ಈ ಲೇಖನವನ್ನು ಶ್ರೀಶೈಲ ಮಣಿಖಚಿತ ಕನಕ ಸೂರ್ಯ ಸಿಂಹಾಸನಾಧೀಶ ಜಗದ್ಗುರು ಚೆನ್ನಬಸವ ದೇಶಿ ಕೇಂದ್ರ ಶ್ರೀಗಳು ಡುಮಾವಿಡಿ ಸಂಸ್ಥಾನಮಠ ಗುಳೂರು ಸನ್ನಿಧಿಯವರು ಬರೆದ ' ಶೀಲ ಸಂಪಾದನೆ ' ಗ್ರಂಥದ ಅಭ್ಯಾಸ ಮಾಡಿ ಅದರ ಆಧಾರದ ಮೇಲೆ ಸನ್ನಿಧಿಯವರವೇ ಕೆಲವು ಮಾತುಗಳನ್ನು ಬಳಿಸಿಕೊಂಡು ಬರೆದಿರುವೆ. ಅದಕ್ಕಾಗಿ ಸನ್ನಿಧಿಗೆ ಉಪಕೃತನಾಗಿ ಅವರಚರಣ ಸನ್ನಿಧಿಯಲ್ಲಿ ನನ್ನ ಅನಂತ ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸುವೆ.

—ವೀ. ಬ. ಭದ್ರಣ್ಣವರ, (ಬಸವನಣುಗ)

ಬೀಜದಿಂದ ಬಳ್ಳಿ ಬಳ್ಳಿಯಿಂದಲೆ ಬೀಜ
ಭಾವಬುದ್ಧಿಗಳ ಪರಿಯಿಂಥದಯ್ಯಾ
ಸೋಜಿಗದ ಮಾತೇನು ? " ತಿಳಿಯುವದು ತೀರುತಲೆ
ತಿಳಿವು ಮೈದಾಳುವದು " ಸತ್ಯವಯ್ಯ.

"ಶುದ್ಧ ಹೇತುವಿನಿಂದೆ
ಬದ್ಧ ಕಂಕಣನಾಗು
ನಿದ್ದೆಯಿಂದೇಳೆಂದು
ಬುದಿ ಗಲಿಸಿದ ಗುರುವೆ "

—ಮಧುರಚೆನ್ನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜೆಯ ಪ್ರಸಾದ

ಸಾಮಾನ್ಯವಾಗಿ ನಾವು ನೋಡುವ ಹಳ್ಳಿಯು ಒಂದಾನೊಂದು ಕಾಲದಲ್ಲಿ ಪ್ರದೇಶವಾಗಿತ್ತು. ಅನ್ನದ ಅನ್ವೇ ವಸತಿ ಸೌಕರ್ಯದ ಅವಶ್ಯಕತೆ ಹಳ್ಳಿಯು ನಿರ್ಮಾಣವಾಗಲು ಕಾರಣಗಳಾದವು. ಹಳ್ಳಿಗಳು ಕೂಡಿ ಊರು, ಪಟ್ಟಣ ಶಹರಗಳಾಗುತ್ತವೆ. ಇವು ಜನಜೀವನದ ಜೀವಾಳ. ಬಾಳಬದುಕಿನ ಹೃದಯ. ಜೀವನದ ಆಗುಹೋಗುಗಳ ಬೆನ್ನ ಹೊಸ ಬಾಳಿಗೆ ಹೊಸ ಬೇಕಿನ ಅವಶ್ಯಕತೆ ಇದ್ದಂತೆ, ಅಲ್ಲಲ್ಲಿ ಕಾಲಮಾನ ಪರಿಸ್ಥಿತಿಗಳಿಗೆ ಹೊಂದಿಕೊಂಡು ಹೊಸ ಹ ಉಗಮವಾಗುತ್ತಿವೆ. ನಾನಾ ಭಾಗಗಳ ಅನೇಕತೆಯ ರೂಪ ವೈವಿಧ್ಯತೆಗಳೇ ಜಗತ್ತಿನ ಅನೇಕ ಸಂಸ್ಕೃತಿಗಳಿಗೆ ತವ ಇವೆಲ್ಲವುಗಳ ಕ್ರೋಢೀಕರಣವೇ ದೇಶದ ಇತಿಹಾಸ. ಇವುಗಳಿಗ ಪುಟಕೊಟ್ಟು ಪ್ರಮಾಣಬದ್ಧ ಸೂಚಿಯೊಂದನ್ನು ಕ ಸುವ ಗುರುತರ ಹೊಣೆ ಅಕ್ಷರಸ್ಥರ ಮೇಲೆ ಇದೆ.

ಮೇಲಿನ ಪೀಠಿಕೆಯ ಮಾಲಿಕೆಯಲ್ಲಿ ಭಾರತ ದೇಶವು ಅಪವಾದವಲ್ಲ. ಈಗ ಅನಾಮಧ್ಯೇಯವಾಗಿದ್ದ ಹಳ್ಳಿಯಿಂದ, ಹೊಸದಾಗಿ ತಲೆ ಎತ್ತಿದ ಊರಿಗೆ ಬಂದು ತಲುಪುವದೇ, ಬರೆಯುತ್ತಿರುವ ಕಥನದ ವಿಷಯ. ಈ ವಿಚಾರವನ್ನು ಪೃಥಕ್ಕರಿಸುವದೇ ಸೂಕ್ತವಾದದ್ದು. ಹಿಂದೆ ಹಳ್ಳಿಯಿಂದ ದಿಲ್ಲಿಯ ವರೆಗ ಚಲಿಸುವ ಚಕ್ರಗಳು ಇಂದು ಯಿಂದ ಹಳ್ಳಿಗಳೆಡೆಗೆ ಉರುಳುತ್ತಿವೆ. ಈ ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಂಡು, ಲಕ್ಷ್ಯವನ್ನು ಪೂರೈಸಬೇಕಾಗಿದೆ. ಹಿನ್ನೆಲೆಯ ಆಧಾರದ ಮೇಲೆ, ಒಂದು ಪರಿಚಯಾತ್ಮಕ ಶಬ್ದಚಿತ್ರ ರೂಪಿಸಿದರೆ, ಅಪ್ರಸ್ತುತವಾಗಲಾರದು.

ಊರಿಗೊಂದು ಹೆಸರು. ಹೆಸರಿಗೊಂದು ಆಧಾರ. ನಾಗನೂರು ಸಹ ಒಂದು ಹಳ್ಳಿ. ಕರ್ನಾಟಕದ ಬೆ ಜಿಲ್ಲೆಯೊಳಗಿನ ಇಂದಿನ ಬೈಲಹೊಂಗಲ (ಹಿಂದಿನ ಸಂಪಗಾವಿ) ತಾಲೂಕಿನ ಒಂದು ಹಳ್ಳಿ. ಇದು ಬೆಳಗಾಂವಿ ಬೈಲಹೊಂಗಲಕ್ಕೆ ಇದ್ದ ರಾಜಮಾರ್ಗದಲ್ಲಿ ಅಕ್ಕ ಪಕ್ಕಗಳಲ್ಲಿರುವ ಸಂಪಗಾಂವಿಯ ಉತ್ತರಕ್ಕೆ ನಾಲ್ಕು ಮೈಲುಗಳ ದಲ್ಲಿದೆ. ಸಂಪಗಾಂವಿಯಿಂದ ನೇಸರಗಿಗೆ ಹೋಗುವ ಮಾರ್ಗಕ್ಕೆ, ಬೈಲವಾಡವೆಂಬ ಹಳ್ಳಿಯ ಹತ್ತಿರ ನಾಗನೂರಿಗೆ ಹೋ ಸರ್ವಋತು ಕೂಡುದಾರಿಯನ್ನು ನಿರ್ಮಿಸಲಾಗಿದೆ. ಸಂಪಗಾವಿಯಿಂದ ಭಾವಿಹಾಳ ಲಕ್ಕುಂಡಿ ಮೇಲಿಂದ ಈ ಹಳ್ಳಿಗೆ ಹೋ ಸಹ ಒಂದು ಮಾರ್ಗವಿದೆ. ಇದನ್ನು ಬೇಸಿಗೆಯಲ್ಲಿ ಮಾತ್ರ ಉಪಯೋಗ ಮಾಡಿಕೊಳ್ಳಬಹುದು.

ಈಗ ನಾವು ಕಾಣುವ ನಾಗನೂರಿನಿಂದ ಒಂದು ಫರ್ಲಾಂಗ ದೂರದಲ್ಲಿ ಆ ಕೂಡುದಾರಿಯ ಮೇಲೆ ಕಟ್ಟ ಪೂಲಿನ ಇಕ್ಕೆಡೆಗಳಲ್ಲಿ ಪ್ರಾಚೀನ ನಾಗನೂರು ಇತ್ತೆಂಬುದನ್ನು ಮನಗಾಣಬಹುದು. ಇತ್ತ ನಿರೀಕ್ಷಿಸಿದರೆ ಅಲ್ಲಲ್ಲಿ ಹಲ ಅವಶೇಷಗಳನ್ನು ಕಾಣಬಹುದು.

ನಾಗನೂರ ಹೆಸರಿನ ಸಂಬಂಧ ವಿವೇಚಿಸುವದು ಉತ್ತಮ. ಹಿಂದೆ ನಾಗನೆಂಬ ಪ್ರಸಿದ್ಧ ಮುಖಂಡನ ಸ್ಮರಣ ವಾಗಿಯೋ, ಒಂದು ದೊಡ್ಡ ನಾಗ (ಹಾವು) ವು ಅಲ್ಲಿಯ ಧನರಾಶಿಯ ಕಾವಲಿಗಾಗಿದ್ದದರಿಂದಲೋ, ಈ ಹೆಸರು ಬಹುದು. ಅಥವಾ ಹಿಂದೀ ಭಾಷೆಯ ಪದಗಳಾದ ನಗೀನಾ (ರತ್ನ), ನಾಗಿನ (ನಾಗರಹಾವು) ಅಥವಾ ನಿಗಾ-ದೃ ಅರ್ಥಾತ್ ಕಾವಲು ಮಾಡುವವ ಎಂಬರ್ಥದಲ್ಲಿ ವಿನ್ಯಾಸಮಾಡಿದರೆ ಮೇಲಿನ ಶಬ್ದದ ಅಪಭ್ರಂಶದಿಂದ ನಾಗನೂರು ಹೆಸರು ಬಂದಿರಬಹುದೆಂದು ಅನಿಸುತ್ತದೆ.

ಊರಿಗೊಂದು ದಾರಿ, ದಾರಿಗೊಂದು ಮನೆ, ಮನೆಗಳನ್ನೊಳಗೊಂಡು ಕೇರಿ. ಕೇರಿಗಳ ಮಧ್ಯದಲ್ಲಿ ಒಂದು ಇರುವದು ಸ್ವಾಭಾವಿಕ. ಇಂಥ ಮಠಗಳಲ್ಲಿ ನಾಗನೂರ ಮಠವೂ ಒಂದು. ಇಂಥ ಮಠಗಳ ವೈಶಿಷ್ಟ್ಯವನ್ನು ಉಳಿಸಿಕೊ ಹೋಗಲು ಮಠಪತಿಗಳನ್ನೂ, ಕೆಲವು ಹಿತಚಿಂತಕರನ್ನೂ ನಿಯುಕ್ತಮಾಡುವ ವಾಡಿಕೆ ಇದೆ. ತಲೆಮಾರುಗಳಿಂದ ಈ ನಿರ್ವಹಿಸುವ ಮನೆತನದಲ್ಲಿ ಶ್ರೀ ಶೀಲಯ್ಯನ ಮಠದವರೆಂಬ ಒಂದು ಮನೆತನ. ಈ ಮನೆತನದ ಸಂಕೇತವೆಂಬಂತೆ ಶಿವಬಸವರೆಂದು ನಾಮಕರಣ ಹೊಂದಿದ್ದ ಮಹಾಸ್ವಾಮಿಗಳು ೧೮೯೮ ರಲ್ಲಿ ಜನಿಸಿದರು. ಅವರ ಬಾಲ್ಯದ ಎರಡು ವರ್ಷ ಪ್ರಾಥಮಿಕ ಶಿಕ್ಷಣವನ್ನು ಪೂರೈಸಲು ಹುಟ್ಟೂರಿನಲ್ಲೇ ಕಳೆದವು. ಅವರ ಮನಸ್ಸಿನ ಉಬ್ಬರಕ್ಕೆ ನೆರವಾಗಿ ಹುಬ್ಬ ರುದ್ರಾಕ್ಷಿ ಮಠದಲ್ಲಿ, ಐದನೇ ಇಯತ್ತೆಗಳ ವರೆಗೆ ಶಿಕ್ಷಣವನ್ನು ಪಡೆದರು. ಶ್ರೀಗಳ ಮನದ ಉಕ್ಕಿಗೆ ಸದಾವಕಾಶವ ದೊರೆಯಿತು. ಅವರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ೧೯೧೨ ರಲ್ಲಿ, ಹಣಬರಟ್ಟಿ ಪಟ್ಟದ ದೇವರು ಶಿವಯೋಗಮಂದಿರಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ೂಟ್ಟರು. ಈ ಕಾಲವು ಶ್ರೀಗಳ ಹಣೆಬರೆಹದ ಓದುವಿಕೆಗೊಂದು ಅವಕಾಶ ಒದಗಿಸಿಕೊಟ್ಟಿತು. ಶಿವಯೋಗ ಮಂದಿರದ ್ಳದಯವೆಂದರೆ ಶ್ರೀ ಕುಮಾರ ಶಿವಯೋಗಿಗಳು. ಇವರ ವಿಶೇಷ ಅನುಗ್ರಹದಿಂದ ಶ್ರೀ ಶಿವಬಸವ ಸ್ವಾಮಿಗಳು ೂರ್ಣತ್ವದ ಪರಿಣತಿಯನ್ನು ತಲುಪುವಂಥವರಾದರು. ಆಗ ಶ್ರೀ ಕುಮಾರ ಶಿವಯೋಗಿಗಳು ಅನಾರೋಗ್ಯದಿಂದ ಬಳಲುತ್ತಿ ದ್ದಾಗ ಶ್ರೀ ಶಿವಬಸವ ಸ್ವಾಮಿಗಳು ಮಾಡಿದ ಸಿಷ್ಯಾಮಸೇವೆ, ನಿಸ್ವಾರ್ಥ ಪ್ರೀತಿ, ನಿಸ್ಸೀಮ ಭಕ್ತಿ ಕೂಡಿ, ಶಿವಯೋಗಿಳ ೂರ್ಣಾನುಗ್ರಹಕ್ಕೆ ಪಾತ್ರರಾದರು.

ಇಂಥ ದೈವೀ ಸಂಪದ್ಭರಿತರಾದ ಶ್ರೀ ಶಿವಬಸವ ಸ್ವಾಮಿಗಳ ಹೆಸರಿನ ವಿವೇಚನೆ ಮಾಡುವದೇ ವಿಹಿತವೆಂದೆನಿಸುವದು. ಶಿವ ಎಂದರೆ ಈಶ್ವರ–ವಿಸ್ತಾರ–ವಿಶಾಲವೆಂತಲೂ ಬಸವ ಎಂದರೆ ಆ ನನ ವಾಹನ–ಸಾಧನ–ಸೇವಕ–ಕಾಯಕವೆಂತಲೂ ಗಬಹುದು. ಶಿವದರ್ಶನವು ಹೇಗೆ ಬಸವನ (ನಂದಿಯ) ಎರಡು ಕೋಡುಗಳ (ಹುಬ್ಬುಗಳ) ಮಧ್ಯದಿಂದ ಸಾಧ್ಯವಾಗು ದೋ, ಹಾಗೆ ನಮ್ಮ ಮಹಾಸ್ವಾಮಿಗಳ ತುಂಬು ಹೃದಯದ ದರ್ಶನವು ಸೇವೆಯಿಂದಲೇ ಪಡೆಯುವದು ಸಾಧ್ಯ. ಅವರ ರ್ಶನದಿಂದ ಆಗುವ ಅನುಭವದ ಆಳವನ್ನು ಅಳೆಯಲು ಇದೊಂದೇ ಉಪಾಯ. ಇದರ ಗೂಡಾರ್ಥವೆಂದರೆ–– ಯಾವುದೇ ುಹಾನುಭಾವರ, ಇಲ್ಲವೆ ದೇವರ ದರ್ಶನವಾಗಬೇಕಾದರೆ ತಲೆಬಾಗಿ ವಿನಯದ ಭಾವನೆಯನ್ನು ಹುಟ್ಟಿಸಿಯೇ, ದರ್ಶನ ಡೆಯಬೇಕು.

ಇದಕ್ಕೆ ಇನ್ನೊಂದು ಅರ್ಥವೂ ಇರುತ್ತದೆ. ಶಿವನ ವಿಸ್ತಾರ–ನಿರಾಕಾರಕ್ಕೆ ಬಸವನು ಸಾಕಾರ ರೂಪಿ. ಭಕ್ತರ ರ್ವಿಕಾರ ಭಾವನೆಗಳಿಂದ ಒಡಮೂಡುವ ಭಾವನೆಗಳಿಂದ ಉದ್ಭವಿಸುವ ಸಾಕಾರ ಸ್ವರೂಪವೇ ಇಂಥವುಗಳಲ್ಲಿ ಒಂದು. ಇದರಂತೆ ನಮ್ಮ ಸ್ವಾಮಿಗಳು ಸಾಮಾನ್ಯ ವ್ಯಕ್ತಿಯಂತೆ ಕಂಡರೂ, ಪ್ರಣವ ಸ್ವರೂಪಿಯಾಗಿದ್ದು ಅಸಾಮಾನ್ಯ ಪ್ರತಿಭಾಸಂಪನ್ನ ಾಗಿದ್ದಾರೆ. ಶಾಂತವಾದ ಸಾಗರದ ಆಳದ ಅರಿವು ಹೇಗೆ ಸಾಧ್ಯವಿಲ್ಲವೋ ಹಾಗೆ ಪ್ರಶಾಂತ ಚಿತ್ತದ, ಸ್ಥಿತಪ್ರಜ್ಞರಾದ ಮಹಾಸ್ವಾಮಿಗಳ ಆಳವನ್ನು ಅಳವಡಿಸಿಕೊಳ್ಳುವದು ದುಸ್ಸಾಧ್ಯವಾದ ಕಾರ್ಯ. ಇಂಥ ಮಹಾಜನರು ಮಾಡಿ ತೋರಿಸುವ ಮೇರುಕೃತಿಗಳೇ ಅಜರಾಮರ ಕೀರ್ತಿ ಗೋಪುರಗಳು. ಗೋಪುರಗಳ ಸ್ಫೂರ್ತಿಯಿಂದ ಮಿನುಗುವ ಕಿರಣಗಳೇ ಕಾರ್ಯ ಕ್ಷಿತಿಜಗಳಿಗೆ ದಾರಿದೀಪವಾಗಿವೆ. ಮರುಬಯಲಿಗೆ ಓಯಾಸಿಸಗಳೇ ಆಶೆಯ ಕಿರಣಗಳಾಗಿವೆ. ಬಯಲಿನ ಬಿಸಿಲ ಬೇಗೆಯ ಬಾಯಾರಿಕೆಗೆ ಹಚ್ಚಹಸಿರು, ತಂಪು ತಂಗಾಳಿಯಂತಿದೆ. ಇದೇ ತೆರನಾಗಿ, ಹಿಂದೆ ಬಯಲಾಗಿ ಬಿಸಿಲ್ಗುದುರೆಯಂತೆ ಕಾಣುತ್ತಿದ್ದ ಸ್ಥಳದಲ್ಲಿ ಈಗ ಕಾಣುವದು ಭವ್ಯ ಪ್ರಸಾದ ನಿಲಯ–ವಿದ್ಯಾರ್ಥಿಗಳ ತಂಗುಮನೆ.

ಸಾಮಾನ್ಯವಾಗಿ ಮಹಾಸ್ವಾಮಿಗಳು, ಮಠಪತಿಗಳು ತಮ್ಮ ಸ್ಥಾನಗಳ ಬಲದಿಂದ ಧರ್ಮದ ಬೆಳವಣಿಗೆಗೋ, ಸ್ಥಾವರ ಜಂಗಮಗಳಿಗೆ ಬೆಳಕನ್ನು ತೋರಲೋ, ತಮ್ಮ ಉದ್ಧಾರಕ್ಕೆ ಪೂರಕವಾಗುವ ಪರಮಾರ್ಥ ಚಿಂತನೆಯಲ್ಲೋ, ಪೂಜೆ ಪುನಸ್ಕಾರಗಳಲ್ಲೋ, ಜಪತಪ, ಹೋಮಹವನ, ಧ್ಯಾನಗಳಲ್ಲಿಯೋ ಮಗ್ನರಾಗಿ ಕಾಲಕಳೆಯುವದು ಸ್ವಾಭಾವಿಕ. ಇವೆಲ್ಲವುಗ ಳಿಗೆ ಮಾತೆಯೋಪಾದಿಯಲ್ಲಿದ್ದ ಸರ್ವಧರ್ಮಗಳ ಬೀಜ ಮಂತ್ರವಾಗಿ, ಸರ್ವ ಜೀವಿಗಳಿಗೆ ಕಣ್ಣುಗಳಂತಿದ್ದ ದಯೆ ಮತ್ತು ಕಾಯಕದ ನೆರವಿನಿಂದ ನಾಗನೂರ ಸ್ವಾಮಿಗಳು ಕಾರ್ಯನಿರತರಾದರು. ತಮ್ಮ ಹರಣದಲ್ಲಿ ಭಕ್ತಿ–ಸೇವೆಯ ಹೂರಣ ತುಂಬಿ ಕಾಯಕದ ಚರಣಗಳಲ್ಲಿ ಶರಣು ಹೋದರು. ಅವರ ಎಪ್ಪತ್ತರ ಇಳಿವಯಸ್ಸಿನಲ್ಲಿ ಕಾಣುವ ಚಟುವಟಿಕೆ, ಲವಲವಿಕೆ, ಹುರುಪು ಹುಮ್ಮಸುಗಳನ್ನು ವೀಕ್ಷಿಸಿದರೆ, ಇಪ್ಪತ್ತರ ಯುವಕರನ್ನು ನಾಚಿಕೆಪಡಿಸುವಂತಹದು, ಇದರ ಒಳಗುಟ್ಟೆಂದರೆ ಸ್ವಾಮಿಗಳ ಅಂತರಾತ್ಮನ ಸ್ಫೂರ್ತಿ, ಅಂತರಿಕ ಶದ್ಧಿ, ಪರಂಪರಾಗತ ಪ್ರಜ್ಞೆಯ ಒಲವು, ಅವರು ಮಾಡಿದ, ಮಾಡುತ್ತಿರುವ ಮತ್ತು ಮುಂದೂ ಮಾಡುವ ಕೈಲಾಸದಂಥ ಪವಿತ್ರ ಕಾಯಕವನ್ನು ನಿರೀಕ್ಷಿಸಿದರೆ ಅವರು ಸಾಮಾನ್ಯ ಮನುಷ್ಯರಾಗದೆ ಅವ ತಾರೀ ಪುರುಷರೆಂದು ಹೇಳಲು ಯಾವದೇ ಅಭ್ಯಂತರವಿಲ್ಲ. ಅಥವಾ ಇದು ಅತಿಶಯೋಕ್ತಿಯಾಗಲಾರದು. ಈ ಮಹಾಸ್ವಾಮಿ ಗಳ ಹಿರಿ ಹಿರಿಮೆಗಳಿಗೆ ಅವರು ಆಡಿ ಮಾಡಿ ತೋರಿಸುವ ದುಡಿಮೆಯ ಸಿರಿಯೇ ಸಾಕ್ಷಿ, ಅವರಲ್ಲಿ ಹಿರಿಕಿರಿಯರೆಂಬ, ಬಡವ ಬಲ್ಲಿದನೆಂಬ, ಒಡೆಯ ಆಳುಗಳೆಂಬ ಭೇದವಿಲ್ಲದ ಹೃದಯವಿದೆ. ಅವರ ಅಂತ:ಕರಣದ ಶುದ್ಧಿಯೇ ಸರ್ವ ಜೀವಿಯ ಕಲ್ಯಾಣ ಸಾಧನೆಗೆ ಸ್ಫೂರ್ತಿಯ ನೆಲೆ. ಈ ಭಾವನೆಯಿಂದ ಜೀವಿಸುವ ಸ್ವಾಮಿಗಳು ಎಲ್ಲ ರೀತಿಯಿಂದಲೂ ಸಂಘಜೀವಿ.

ಶ್ರೀ ಶಿವಬಸವ ಸ್ವಾಮಿಗಳು ಮಾಡಿದ ಎಲ್ಲ ಕಾರ್ಯಗಳ ಸಮಾಲೋಚನೆ ಮಾಡದೆ ನೈಮಿತ್ತಿಕವಾಗಿ ಒಂದೆರಡು ಗಳನ್ನೇ ಉದಾಹರಿಸಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನಗಳಲ್ಲಿ ಶ್ರೇಷ್ಠವಾದ ಅನ್ನ, ವಸನ, ನಿವೇಶನಗಳನ್ನು ಹೊಂದಿದ ಮೂರ್ತ ಸ್ವರೂಪವೆಂದು, ಪ್ರಸ್ತುತ ಬೆಳಗಾವಿಯ ಮಾರುತಿಗಲ್ಲಿಯಲ್ಲಿದ್ದ. ವಿದ್ಯಾರ್ಥಿ ಪ್ರಸಾದ ನಿಲಯವು ೧೯೩೨ ರಲ್ಲಿ ಸ್ಥಾಪಿಸಲ್ಪಟ್ಟಿತು. ಕೇವಲ ೨೫ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ನಿಲಯದಲ್ಲಿ ೩೦೦ ಕ್ಕೂ ಮಿಕ್ಕಿ ವಿದ್ಯಾರ್ಥಿಗಳ ಬೇಡಿಕೆಗಳು ಬರತೊಡಗಿದವು. ಆಶ್ರಯದ... ಆಶ್ರಯ ನೀಡಿದಷ್ಟೂ ಕಡಿಮೆ ಎನಿಸುತ್ತದೆ. ಇಂಥ ಮಹಾಕಾರ್ಯಗಳ ಯಶಸ್ಸಿಗೆ ಸರ್ವರ ಸಕ್ರಿಯ ಸಹಾಯ ಸಹಕಾರ ಪ್ರಾಮುಖ್ಯವಾದುವು.

ಇದರ ಬೆಳವಣಿಗೆಗೆ ಸಹೃದಯರಾದ ಕೊಡುಗೈಯವರಿಗೇನು ಕೊರತೆ ಇಲ್ಲ. ಅನೇಕ ಭೂಮಿ ... ಳಲ್ಲಿ ಕೆಲವುಗಳನ್ನು ಕೊಡಬಹುದು. ಶ್ರೀಮನ್ನಿರಂಜನ ಜಗದ್ಗುರು ಮೂರುಸಾವಿರ ಮಠ, ಹುಬ್ಬಳ್ಳಿ, ಶ್ರೀಮಂತ ರಾಜಾ ... ಮನಗೌಡಾ ಸರದೇಸಾಯಿ ವಂಟಮುರಿ, ಬಿ. ಬಿ. ಇನಾಮದಾರ, ಖೋದಾನಪುರ, ಯು. ಎನ್. ಶಿಂದೆ ತೊರಗಲ ... ಎಮ್. ಎನ್. ಮುತಾಲಿಕ ದೇಸಾಯಿ, ಸಿರಗಾಂವಕರ. ಟಿ. ಡಿ. ದೇಶಪಾಂಡೆ, ಚಂದೂರ, ಹೀಗೆ ಅನೇಕ ದಾನವಂತ... ನಗದು ಹಣ ರೂಪದಿಂದ ಸಹಾಯ ಮಾಡಿದವರೂ ಸಹ ಎಣಿಸಲಾರಷ್ಟು ಸಂಖ್ಯೆಗಳಲ್ಲಿ ಇರುತ್ತಾರೆ. ತಮ್ಮ ತಮ್ಮ ... ಆದೇಶದಂತೆ ಪ್ರೇರಿತರಾಗಿ, ಅನೇಕ ಪಾಲಕರು, ಪೋಷಕರು, ರಕ್ಷಕರಾಗಿ ತಮ್ಮಿಂದಾದಷ್ಟು ಅಳಿಲ ಸೇವೆಯನ್ನು ಮಾಡಿ... ಆದರೆ ದಾಸೋಹ ದಾಸರಾಗಿ ದುಡಿದ ಮಹಾಸ್ವಾಮಿಗಳ ಪಾಲು ಕಡಿಮೆಯದಲ್ಲ.

ಈ ನಿಲಯದಲ್ಲಿ ಈಗಾಗಲೇ ಸಾವಿರಾರು ವಿದ್ಯಾರ್ಥಿಗಳು ಕಲಿತು, ಜೀವನದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಯೋ... ಯನುಗುಣವಾಗಿ ಬಾಳನ್ನು ಸಾಗಿಸುತ್ತಿದ್ದಾರೆ. ಇವರಲ್ಲಿ ಕೆಲವರು ಸರಕಾರೀ ಮತ್ತು ಖಾಸಗೀ ರಂಗಗಳಲ್ಲಿ ದುಡಿ... ದ್ದಾರೆ. ವಿದ್ಯಾಖಾತೆ, ಕಂದಾಯ, ಲೋಕೋಪಯೋಗಿ, ಅಂಚೆ ಮತ್ತು ತಂತಿ, ಅಬಕಾರಿ, ಸಂಚಾಯತ, ಕೋ... ನ್ಯಾಯಾಸ್ಥಾನಗಳಲ್ಲಿ ಮಿನುಗುತ್ತಿದ್ದಾರೆ. ಅದರಂತೆ ಸಾರಿಗೆ ಸೌಕರ್ಯ, ಪೋಲೀಸ, ವಿಮಾ, ವಾಣಿಜ್ಯ ಉದ್ದಿಮೆ, ಕೃಷಿ ಮುಂತಾದವುಗಳಲ್ಲಿ ನಿರತರಾಗಿದ್ದಾರೆ. ಇನ್ನುಳಿದವರು ವಕೀಲರಾಗಿ, ಡಾಕ್ಟರರಾಗಿ, ಇಂಜಿನಿಯರಾಗಿ ಸ್ವತಂತ್ರ ... ಗಳಲ್ಲಿ ಅಗ್ರಗಣ್ಯರಾಗಿದ್ದಾರೆ.

ಇವೆಲ್ಲವುಗಳ ಪರಿಣಾಮ ಮಾತ್ರ, ಬೇಡಿಕೆಯನ್ನು ಪೂರೈಸಲಾರದಂಥ ಸಮಸ್ಯೆಯನ್ನುಂಟುಮಾಡಿತು. ನಿ... ಸುವ್ಯವಸ್ಥೆಯ ಪರಿಣಾಮವೋ, ಎಲ್ಲ ಅನುಕೂಲತೆಗಳ ಸಂಯೋಗದಿಂದಲೋ, ದೈವೀ ವಿಲಾಸದಿಂದಲೋ ಸಕಲರ ... ವಾತ್ಸಲ್ಯದಿಂದಲೋ, ನಿಲಯದಲ್ಲಿ ಆಶ್ರಯ ಪಡೆಯಲು ಹೇಳತೀರದಷ್ಟು ಇಚ್ಛುಕರು ಬಂದರು.

ಈ ಸಂಘರ್ಷಕ ಫಲವೇ ಹೊಸ ಪ್ರಸಾದ ನಿಲಯದ ಸ್ಥಾಪನೆಗೆ ಸಂಕಲ್ಪ ಮಾಡಿದ್ದು, ಈ ಸಂಕಲ್ಪಕ್ಕೆ ಆತ್ಮ ... ಮೂಲಾಧಾರ. ಈ ಮೂಲಾಧಾರಕ್ಕೆ ಮಣಿಚಕ್ರವೇ ಪೀಠ. ಅಂತೇ ಮೂಲಾಧಾರ ಮನಸ್ಸಿಗೆ ಮಾರ್ಗವೇ ಪೀಠ. ಎ... ಪೂರಕ ಅಂಗಗಳು. ಪರ್ಯಾಯದಿಂದ ಸುದೃಷ್ಟವಾಗಿ ಹೇಳುವದಾದರೆ, ಮನಸ್ಸಿನಲ್ಲಿದ್ದ ಭಾವನೆಗಳಿಗೆ, ಹುದುಗಿದ ... ಶಕ್ತಿಯೇ ಮೂಲ. ಇದನ್ನು ತಿಳಿದುಕೊಂಡು ಕಾರ್ಯ ನಿರತರಾಗಬೇಕು. ಸ್ವಾಮಿಗಳು ಇದನ್ನರಿತು ನವ ಸಾಕಾರ ... ತಂದುಕೊಟ್ಟ ವಿದ್ಯಾರ್ಥಿ ಪ್ರಸಾದ ನಿಲಯವಿದು.

ಈ ಭವ್ಯ ಭವನವು, ಬೆಂಗಳೂರ ಪೂನಾ ಹೆದ್ದಾರಿಯ ಮಗ್ಗುಲಲ್ಲಿ, ಬೆಳಗಾವಿಯ ಉತ್ತರ ದಿಸೆಗೆ, ನೆಹರೂ ... ಕಲ ಕಾಲೇಜಿನ ಎದುರಿಗೆ ವಿಶಾಲ ಬಯಲಿನಲ್ಲಿ ತಲೆಯೆತ್ತಿ ನಿಂತಿದೆ. ಆ ವಿಸ್ತೀರ್ಣವಾದ, ಮಟ ಮಟ ಮಧ್ಯಾಹ್ನದಲ್ಲಿ ... ಲುವ ಬಯಲಿಗೆ ಈ ನಿಲಯವು ತಂಗು ಮನೆಯಾಗಿದೆ. ಇದೊಂದು ಚಮತ್ಕಾರವೆಂದರೆ ತಪ್ಪಾಗಲಿಕ್ಕಿಲ್ಲ. ಈ ನಿಲ... ಅನತಿ ದೂರದಲ್ಲಿ ಹೆಮ್ಮರದಂತೆ ಬೆಳೆದ ಎಲ್ಯುಮೀನಿಯಮ ಕಾರಖಾನೆ, ಮಾಳಮಾರುತಿ ಯೋಜನೆಯ ವಿಶಾಲ ವಸತಿ... ಗಳು ಮುಂತಾದವುಗಳು-ಪರಿಪಕ್ವ ಯೋಜನೆಗಳು-ಬೇರೂರಿವೆ. ಇಂದಲ್ಲ ನಾಳೆ ಬೆಳಗಾಂವಿಗೆ ಅಲ್ಲಿಂದಲೇ ಬೆಳಕು ಬರು... ಈ ಮಹಾ ಭವನವನ್ನು ನಿರ್ಮಿಸಲು ಅನೇಕಾನೇಕ ಅಡೆತಡೆಗಳು ಬಂದರೂ ಧೈರ್ಯದಿಂದ ಎದುರಿಸಬೇಕಾಯಿತು. ... ಣಿತ ಹಿತೈಷಿಗಳ ಹಂಬಲ ಬೆಂಬಲಗಳಿಂದ ಸ್ಥಳದ ವಶೀಕರಣ, ಕಟ್ಟಡದ ನಕ್ಷೆ, ಅಂದಾಜಿನ ಪತ್ರಿಕ ತಯಾರಿಸುವದು... ಅದರ ನಿರ್ಮಾಣದ ವರೆಗಿನ ನಾನಾತರದ ಸಲಕರಣೆ, ಉಪಕರಣೆ, ಯಾಂತ್ರಿಕ-ತಾಂತ್ರಿಕ ಮತ್ತು ಮಾಂತ್ರಿಕರ ಸ... ಸಹಾಯ ಸೌಕರ್ಯಗಳು ಸಕಾಲದಲ್ಲಿ ದೊರೆತು, ಸಮಯ ಸೂಚಕ ಸೂಜಿಯಂತೆ, ಪ್ರಗತಿ ಫಲಕಗಳಿಗೆ ಅನುಗುಣವಾ... ಕಾರ್ಯ ಪೂರ್ತಿಗೊಂಡಿದೆ. ಇದರ ಅಸ್ತಿತ್ವಕ್ಕೆ ಅನೇಕ ದಾನಿಗಳು, ಮಾನಿಗಳು, ಕುಲಗಳು, ಶೀಲಗಳು ಕೂಡಿ ಕೈಕು... ಆತ್ಮೀಯತೆಯಿಂದ ಮಾಡಿದ ಕಾಯಕದ ಫಲವೇ ಪ್ರಸಾದ ನಿಲಯದ ಕಟ್ಟಡ. ಈ ನಿಲಯದ ಪೂರ್ಣ ಕ್ಷೇತ್ರ ಐದು ಎಕರೆ... ಕಟ್ಟಡದ ಪ್ರಾಕಾರ ವಿಸ್ತೀರ್ಣ ೪೦,೦೦೦ ಚದರಡಿಗಳು ಅಂದರೆ ಪೂರ್ಣ ಕ್ಷೇತ್ರದ ಒಂದೈದಾಂಶದಷ್ಟು, ಕಟ್ಟಡದ ಸ... ಗೂವು ರೇಖೆಗಳೆಂದರೆ, ಕೆಳಗಿನ ಮತ್ತು ಮೊದಲಂತಸ್ತಿನಲ್ಲಿ ಒಟ್ಟಾಗಿ ೭೩ ಕೋಣೆಗಳಾಗುತ್ತವೆ. ಇವೆಲ್ಲವುಗಳಲ್ಲಿ ಸಾಧ...

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೦೦ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಸೌಕರ್ಯ ಒದಗಿಸಲಾಗಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಸುಸಜ್ಜಿತ ಅಡಿಗೆ ಮನೆ, ಇದಕ್ಕೆ ಹೊಂದಿಕೊಂಡು ಊಟದ ಮನೆ, ಇಂಥ ಉಲ್ಹಾಸದಾಯಕ ವಾತಾವರಣಕ್ಕೆ ಪೂರಕವಾಗಿ ಆರೋಗ್ಯಕ್ಕೆ ಪ್ರಧಾನ ಅಂಗವಾದ ವ್ಯಾಯಾಮ ಮಾಡಲಿಕ್ಕೆ ವ್ಯಾಯಾಮ ಶಾಲೆಯನ್ನೂ ಜೋಡಿಸಲಾಗಿದೆ. ಇವೆಲ್ಲವುಗಳು ಕಟ್ಟಿ ಪೂರ್ತಿಗೊಂಡಾಗಿನ ಅಂದಾಜು (೮, ೨೫,೦೦೦) ಎಂಟು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು.

ಮಹಾಸ್ವಾಮಿಗಳ ಇನ್ನೊಂದು ಧೂರ್ತ ವಿಚಾರಗಳ ಮೂರ್ತ ಸ್ವರೂಪವಾದದ್ದು ನೋಡಲೇಬೇಕು. ಹೊಸ ಪ್ರಸಾದ ನಿಲಯವು ಪೂರ್ಣವಾಗಿ ವಸತಿಗ್ರಹವಾದ ನಂತರ, ಹಳೇ ನಿಲಯವನ್ನು ಹೆಣ್ಣುಮಕ್ಕಳ ವಸತಿಗ್ರಹವನ್ನಾಗಿ ಮಾರ್ಪಡಿಸುವದು. ಇದು ಶಹರದ ಮಧ್ಯದಲ್ಲಿರುವದರಿಂದಲೂ, ಮಕ್ಕಳಿಗೂ ಪಾಲಕರಿಗೂ ಸುರಕ್ಷಿತತೆಯ ಅಭಯ ಹಸ್ತವಿರುವದರಿಂದಲೂ, ಸ್ತ್ರೀ ಸಹಜ ಪ್ರವೃತ್ತಿ, ಸಂಕೋಚಿತ ಭಾವನೆಗಳಿಗೊಪ್ಪುವಂತೆ ಸರಿಪಡಿಸಿಕೊಳ್ಳುವ ವಿಚಾರವಿದೆ. ಇದೆಂಥ ಸ್ತುತ್ಯ ಮತ್ತು ಧೂರ್ತ ವಿಚಾರ.

ಈ ಪ್ರಕಾರ ನಿಲಯವು ಯಥಾ ಸಾಂಗವಾಗಿ ತಯಾರಾಗಿದ್ದರೂ, ಅದರ ನಿತ್ಯ ನೂತನ ಪ್ರೇರಣೆಗೆ, ಪಾಲನ ಪೋಷಣೆಗೆ, ಕಾಲಮಾನ ಪರಿಸ್ಥಿತಿಗಳಿಗೆ ಒಗ್ಗುವಂತೆ ಸಾಧನ ಸಾಮುಗ್ರಿಗಳ ಅವಶ್ಯಕತೆಯೂ ಇದೆ. ದೈನಂದಿನದ ಆಗು ಹೋಗುಗಳ ಕಾರ್ಯ ಕಲಾಪಗಳಿಗ ಬೆಂಬಲವೂ ಬೇಕಾಗಿದೆ. ಇದರ ಪ್ರತಿಷ್ಠಾಪನೆಗೆ ಅಗತ್ಯವಾದ ನೆರವು ದೊರೆತಂತೆ ಮುಂದಿನ ಕ್ರಮವನ್ನುಪಕ್ರಮಿಸಲು ಸರ್ವರ ಪ್ರೀತಿ ಬೇಕು. ಈ ಪ್ರೀತಿ ಜ್ಯೋತಿ ಬೆಳಗಲು ಸೇವೆಯೆಂಬ ತುಪ್ಪ ಬೇಕು. ತುಪ್ಪದ ಆಧಾರಕ್ಕೆ ಭಕ್ತಿಯ ಪ್ರಣತಿ ಬೇಕು. ಪ್ರಣತಿಯಲ್ಲಿ ಸದಾಕಾಲದ ಬತ್ತಿಗೆ ಪ್ರೇರಣೆ ಬೇಕು. ಇವೆಲ್ಲವುಗಳ ಸಂಗತಿಯಿಂದ ಪ್ರಶಾಂತ ಕಾಂತಿ ಪ್ರಸಾದ ನಿಲಯದ ಬೆಳಕಾಗಬೇಕು. ಈ ಬೆಳಕು ಎಲ್ಲರಿಗೂ ದಾರಿದೀಪವಾಗಬೇಕು. ಯಾವುದೇ ದೃಷ್ಟಿಕೋನದಿಂದ ನೋಡಿದರೂ " ಎನ್ನ ಮನದ ಬೆಳಕಿಗೆ ಒಂದೇ ಬಿಂದು " ವೆಂಬುದರ ಮರ್ಮವನ್ನು ಅರಿಯುವದೇ ಒಂದು ಕಾಯಕ.

ಶ್ರೀ ಶಿವಬಸವ ಮಹಾಸ್ವಾಮಿಗಳ ಆತ್ಮೀಯತೆ, ನಿರಭ್ರ ಹೃದಯ ಮತ್ತು ನೈತಿಕ ಬಲ ಸಕಲ ಕಾರ್ಯಗಳಿಗೆ ಪ್ರೇರಕ, ತಾರಕ ಮತ್ತು ಪಾಲಕ ಶಕ್ತಿ, ಅವರ ದಿವ್ಯತ್ವದ ಹಿರಿಸಿರಿಯನ್ನು ನಾನು ಕಂಡಿದ್ದು, ಅವರ ಪ್ರಥಮ ದರ್ಶನದಲ್ಲಿ. ನನ್ನ ಸಹಜ ಪ್ರಶ್ನೆಗೆ ಅವರ ನೇರ ಉತ್ತರವೆಂದರೆ--" ನಾನೊಬ್ಬ ಜಂಗಮ, ನನಗೆಲ್ಲಿಯ ಹುಟ್ಟು. ನಿಮಗೆ ಸ್ವಲ್ಪ ಸಿಕ್ಕರೆ ಬಹಳ ಬರೆಯುವವರು. ನನ್ನ ಸಲುವಾಗಿ ಅಲ್ಲ, ಪ್ರಸಾದ ನಿಲಯದ ಬಗ್ಗೆ ಬರೆಯಿರಿ. " ಹೀಗೆ ಆಡಿದ ಮಾತುಗಳಲ್ಲಿ ಇಂಗಿತ ಮತಿತಾರ್ಥವೇನೆಂಬುದನ್ನು ಓದುಗರೇ ಊಹಿಸಲಿ.

ನನಗಾದ ದರ್ಶನದ ಫಲಿತಾಂಶವನ್ನು ನಾನು ಬರೆಯದಿರಲಾರೆ. ಈ ಕೆಲವೇ ಶಬ್ದಗಳಲ್ಲಿ ಹುದುಗಿದ ಪೂರ್ಣ ಪ್ರಜ್ಞೆಯ ಅನ್ವೇಷಣೆಯ ಪ್ರಬಲ ತಾತ್ವಿಕತೆಯ ಹೊಂಬೆಳಕು ಸೂಸುತ್ತಿದ್ದುದನ್ನು ಕಾಣಬಹುದು. ಅವರ ನಗುಮುಖದಲ್ಲಿ ಈ ಬೆಳಕು ಮಿಂಚುತಿರುವದನ್ನು ನಾನು ಕಂಡೆನು. ಸ್ವಾಮಿಗಳ ಸನ್ನಿಧಿಯ ಸೊಬಗು ಸಂಪತ್ತಿನ ಸವಿಯನ್ನು ಸವೆಯಲು ಸದವಕಾಶ ದೊರೆಯಲೆಂದು ಬಯಸುವವರಲ್ಲಿ ನಾನೂ ಒಬ್ಬ. ಅವರ ಹಿರಿಮೆಯನ್ನು ಕೊಂಡಾಡಲು ನೂರುನಾಲಿಗೆಗಳ ನಾಗನಿಗೂ ಆಗಲಾರದು. ಮುತ್ತಿನಂತೆ ಮಾತುಗಳು, ಮಾತುಗಳಂತೆ ಕೃತಿಗಳು, ಜಂಗಮರ ಸೋಲುಗಳು ಸೊತ್ತುಗಳಾಗಿ ತೋರುವವು. ಅವರ ಮಹಿಮೆಯ ಮೀಮಾಂಸೆಯನ್ನಾಗಲಿ, ಮಹಾತ್ಮೆಯನ್ನಾಗಲಿ ಯಾವುದೇ ಗದ್ಯ-ಪದ್ಯಗಳಿಗೆ, ಚಿತ್ರ–ರೇಖಾ ವಿನ್ಯಾಸಗಳಿಗೆ, ವೈಚಾರಿಕ ವರ್ಣನೆ–ವಿವರಣೆಗಳಿಗೆ ಸಾಧ್ಯವಾಗದು. ಇವುಗಳ ಅನುಭವಕ್ಕೆ ಅವರ ಸನ್ನಿಧಿಯೇ ತರುಣೋಪಾಯ. ಇಂಥ ಅವಕಾಶದಿಂದ ನಮಗೆ ಲಭಿಸುವ ಫಲವೇ ನಮ್ಮ ಬಾಳಿಗೆ ಬೆಳಕು, ಈ ಬೆಳಕಿನ ಒರೆಗಲ್ಲಿನಿಂದ ನಮ್ಮ ಪರೀಕ್ಷೆಯನ್ನು ನಾವೇ ಮಾಡಿಕೊಳ್ಳಬೇಕು.

ಶ್ರೀ ಶಿವಬಸವ ಮಹಾಸ್ವಾಮಿಗಳ ಆಯುರಾರೋಗ್ಯಕ್ಕೆ ಎಷ್ಟು ನಾಲಿಗೆಗಳು ನಲಿಯುವವೋ, ಎಷ್ಟು ಮನ ಮಂದಿರಗಳಲ್ಲಿ ಪೂಜೆಗಳಾಗುವವೋ ತಿಳಿಯಲಾಗದು. ಇಂಥ ತಪಸ್ವಿಗಳ ಬಲದಿಂದ ಎಷ್ಟು ಮಾತೆಯರ ಕೈಗಳು ತೊಟ್ಟಿಲ ತೂಗಲು ಕಾತರಗೊಳ್ಳುವವೋ, ಇನ್ನೆಷ್ಟು ಬಾಳಿನ ಬಟ್ಟಲಿಗೆ ಪ್ರೀತಿಯ ಹಾಲು ತುಂಬಲು ಹಾತೊರೆಯುವವೋ ಸೇವಾದೀಕ್ಷೆ ಹೊಂದುವವೋ. ಇಂಥ ಪುತ್ರರನ್ನು ಪಡೆದ ಮಾತೆಯರ ಉದರ ಧನ್ಯವಲ್ಲವೇ. ಕಾಲಗರ್ಭದಲ್ಲಿ ಹುದುಗಿದ ಹದಿಬದೆಯರ ಆಶೀರ್ವಾದವೂ ಇದೇ ಅಲ್ಲದೇ, ಇಂಥವರ ಸಂಗ ಸಂಗಮದಲ್ಲಿ ಪ್ರೀತಿ ಜ್ಯೋತಿ ಬೆಳಗುವ ಸುದಿನವೊಂದು ಮೂಡುವದು ನಿಶ್ಚಯ. ಈ ಬೆಳಕಿನಲ್ಲಿ ಸರ್ವರೂ ಕೂಡಿ ತಾಳಿ ಬಾಳಿ ಬದುಕುವಾ. ಬದುಕಲು ಕಾಯಕವೇ ಕೈಲಾಸವೆಂಬ ಬೀಜ ಮಂತ್ರವನ್ನು ಜಪಿಸುತ್ತ ಭವ್ಯ ಭವಿಷ್ಯತ್ತಿಗಾಗಿ ಅಣಿಯಾಗುವಾ. ಜನತಾ ಜನಾರ್ದನವೆಂಬ ಸಾಣೆಯ ಮೇಲೆ ಕಾಯಕದ ಚಂದನವನ್ನು ತೇಯುತ್ತ ಅದರ ಸುವಾಸನೆಯನ್ನು ಬೀರುತ್ತ ಸಾಗುವಾ. ಈ ಕಾರಣಗಳಿಂದ ಮಾನವ ಜನುಮದ ಸಾಫಲ್ಯವನ್ನು ಸಾರ್ಥಕ ಮಾಡಿಕೊಳ್ಳುವ ಹೆಬ್ಬಯಕೆಯಲ್ಲಿ ಮುನ್ನಡೆಯುವಾ.

— ಡಿ. ಎಸ್. ಭಿಡೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಾಜ ಸಂಜೀವಿನಿ, ಶಿವಬಸವ ಶ್ರೀಗಳು

ಭಾರತೀಯರು ಜನ್ಮತಃ ಧಾರ್ಮಿಕರು ದಾರ್ಶನಿಕರೆಂಬ ಮಾತು ಜಗಜನಿತವಾಗಿದೆ. ಎಂತಹ ರಾಷ್ಟ್ರೀಯ ಗಳಲ್ಲಿಯೂ, ಪರರ ದಬ್ಬಾಳಿಕೆಗಳಲ್ಲಿಯೂ, ತಮ್ಮ ಧರ್ಮವನ್ನೂ, ಸಂಸ್ಕೃತಿಯನ್ನೂ ಅವರು ಅಚ್ಚಳಿಯದಂತೆ ಉಳಿಸಿ ಬಂದಿದ್ದಾರೆ. ಅನೇಕ ಮಹಾತ್ಮರು ಭಾರತದಲ್ಲಿಯೆ ಜನ್ಮವೆತ್ತಿ ಆಧ್ಯಾತ್ಮಿಕ ಪ್ರಪಂಚದಲ್ಲಿ ಹೊಸ ಹಾದಿಯನ್ನು ತೋ ಅರುವಿನ ಬೆಳಗನ್ನು ಮೂಡಿಸಿದ್ದಾರೆ

ಸಮಾಜದಲ್ಲಿ ಇಂದಿನವರೆಗೆ ಎಷ್ಟೋ ತಪಸ್ವಿಗಳು, ಪರಮಪೂಜ್ಯಪಾದರು, ಅಸಾಮಾನ್ಯ ಪಂಡಿತರು, ಬುದ್ಧಿಶಾಲಿಗಳು, ಆಗಿ ಹೋಗಿರಬಹುದು. ಆದರೆ ಸಮಾಜದ ಮೇಲಿನ ಪ್ರೇಮ, ಸಮಾಜೋನ್ನತಿಯ ಚಿಂತೆ, ಸಮ ದ್ಧಾರಕ್ಕೆ ಬೇಕಾಗುವ ಕಷ್ಟ ಸಹಿಷ್ಣುತೆ, ಇವೇ ಮೊದಲಾದ ಗುಣಗಳಿಂದ ಪ್ರಕಾಶಮಾನರಾದ ಶ್ರೀ. ಮ. ನಿ. ಪ್ರ. ಶಿ ಸ್ವಾಮಿಗಳಂತಹ ಸುಧಾರಕರನ್ನು ಪಡೆದ ಸಮಾಜ ಧನ್ಯ.

ಲೋಕದಲ್ಲಿ ಕೆಲವರು ಕೀರ್ತಿಕಾಯರಾಗಿಯೆ ಜನ್ಮವೆತ್ತುತ್ತಾರೆ. ಮತ್ತೆ ಕೆಲವರು ಹುಟ್ಟಿ ಕೆಲವು ದಿವ ಮೇಲೆ ಕೀರ್ತಿಯನ್ನು ಗಳಿಸುತ್ತಾರೆ. ಶ್ರೀ ನಾಗನೂರ ಮಹಾಸ್ವಾಮಿಗಳು ಮಾನವರಾಗಿ ಹುಟ್ಟಿ, ಮನುಷ್ಯತ್ವವನ್ನು ದಿಸಿ, ದೇವತ್ವವನ್ನು ಪಡೆದ ಮಹಾಮಹಿಮರು. ಇಂತಹ ಅಪಾರವಾದ ಜನಪ್ರಿಯತೆಯನ್ನು ಗಳಿಸಬೇಕಾದರೆ ಆವರ ವಾದ ಸಮಾಜ ಸೇವಾ ಕಾರ್ಯವೇ ಮೂಲವಾಗಿದೆ.

ಬೆಳಗಾಂವಿ ಜಿಲ್ಹೆಗೆ ಸೇರಿದ, ಬೈಲಹೊಂಗಲ ತಾಲೂಕಿನ, ನಾಗನೂರ ಗ್ರಾಮದಲ್ಲಿ, ಶೀಲಯ್ಯನವರ ಶ್ರೇಷ್ಠ ಮನೆತನದಲ್ಲಿ, ಶ್ರೀ ಆಡವಯ್ಯ ರುದ್ರಮ್ಮನವರೆಂಬ ಪುಣ್ಯವಂತ ದಂಪತ್ತಿಗಳ ಪವಿತ್ರಗರ್ಭದಿಂದ ಇ. ಸ. ೧೮ ಶ್ರೀಗಳವರು ಜನ್ಮವೆತ್ತಿದರು. ಅವರು ಮೊದಲು ಎರಡು ವರ್ಷ ಪ್ರಾಥಮಿಕ ಅಭ್ಯಾಸವನ್ನು ನಾಗನೂರಿನಲ್ಲಿಯೇ ಮಾ ನಂತರ ಹುಬ್ಬಳ್ಳಿಯ ರುದ್ರಾಕ್ಷಿಮಠದಲ್ಲಿದ್ದು, ತಮ್ಮ ಅಭ್ಯಾಸವನ್ನು ಮುಂದುವರಿಸಿದರು. ೫ ನೇ ಇಯತ್ತೆಯಲ್ಲಿ ಓದ ವಾಗಲೇ ಹಣಬರಟ್ಟಿಯ ಪಟ್ಟದದೇವರು ಅವರನ್ನು ಹೆಚ್ಚಿನ ತರಬೇತಿಗಾಗಿ ಇಸವಿಸನ್ ೧೯೧೨ ರಲ್ಲಿ ಶಿವಯೋಗಮ ಕಳುಹಿಸಿ ಕೊಟ್ಟರು. ಶ್ರೀಗಳವರು ಅಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತ, ಆದರ ಜೊತೆಗೆ ವೀರಶೈವ ಸಮಾಜದಲ್ಲಿ ಕ್ರಾಂತಿಯನ್ನು ಹುಟ್ಟಿಸಿದ, ಶಿವಯೋಗ ಮಂದಿರದ ಪ್ರಾಣವಾಗಿದ್ದ, ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳ ಸೇವ ಮಾಡಿ ಅವರ ವಿಶೇಷ ಅನುಗ್ರಹಕ್ಕೆ ಪಾತ್ರರಾದರು. ಅವರು ಆಧ್ಯಾತ್ಮಿಕ ಅಭ್ಯಾಸಕ್ಕಿಂತಲೂ ಶ್ರೀಗುರು ಕುಮಾ ಸೇವೆಯೇ ಹೆಚ್ಚಿನದೆಂದು ಭಾವಿಸಿದ್ದರು. ನಾಗನೂರ ಶ್ರೀಗಳವರು ತ್ರಿಕರಣ ಶುದ್ಧಿಯಿಂದ ಮಾಡುತ್ತಿರುವ ಸೇವೆಗೆ ಹಾ ಶ್ರೀಗಳವರು ಮೆಚ್ಚಿ ಅತ್ಯಂತ ಆತ್ಮೀಯ ಶಿಷ್ಯರನ್ನಾಗಿ ಮಾಡಿಕೊಂಡರೆಂದು ಅವರ ಚರಿತ್ರದಿಂದ ತಿಳಿದು ಬರುತ್ತದೆ.

ಮುಂದೆ ಮಹಾತಪಸ್ವಿಗಳಾದ ಹಾಲಕೆರೆ ಶ್ರೀ. ಮ. ನಿ ಪ್ರ. ಶ್ರೀಗುರು ಅನ್ನದಾನ ಮಹಾಸ್ವಾಮಿಗಳವರಿಂದ ಹವನ್ನು ಪಡೆದರು. ಶ್ರೀಗುರು ಕೃಪೆಯನ್ನು ಪಡೆದ ಶ್ರೀಗಳವರಿಗೆ ೧೯೬೪ ರಲ್ಲಿ ನಾಗನೂರಿನ ಪ್ರಮುಖರು ನಾಗನೂರ ಕ್ಷಿಮಠದ ಸರ್ವಾಧಿಕಾರವನ್ನು ಒಪ್ಪಿಸಿದರು. ಆದರೆ ಸಮಾಜ ಪ್ರೇಮಿಗಳಾದ ಶ್ರೀಗಳವರು ನಾಗನೂರ ಮಠ ಒಂದನ್ನು ಸುವ ಸಂಕುಚಿತ ದೃಷ್ಟಿಯನ್ನು ಬದಿಗಿರಿಸಿ, ನಾಡನ್ನೇ ತಮ್ಮ ಬೀಡನ್ನಾಗಿ ಮಾಡಿಕೊಂಡು, ನಾಡಿನ ಸಾವಿರಾರು ಕುಟು ಳನ್ನು ಉದ್ಧರಿಸುವ ನಾಗರಿಕರನ್ನು ತರಬೇತಿಗೊಳಿಸುವ ವಿಧಾಯಕ ಕಾರ್ಯದಲ್ಲಿ ಹಗಲಿರುಳೆನ್ನದೆ ಕಾಯಕವೇ ಕೈ ವೆಂದು ಬೋಧಿಸುವ ಮಹಾನುಭಾವರಾದ ಶ್ರೀ ಬಸವಣ್ಣನವರ ವಚನದಂತೆ ಬೆಳಗಾಂವಿಯ ಕಿಲ್ಲೆಯಲ್ಲಿ ಕೇವಲ ೨ ರ್ಥಿಗಳಿಂದ ಇಸವಿಸನ್ ೧೯೩೨ ರಲ್ಲಿ 'ವೀರಶೈವ ವಿದ್ಯಾರ್ಥಿ ಪ್ರಸಾದ ನಿಲಯ'ವನ್ನು ಪ್ರಾರಂಭ ಮಾಡಿ ಕಾಯಕ ನಿ ದರು. ಈಗ ಅದರ ಸಂಖ್ಯೆ ೩೦೦ ಕ್ಕೂ ಮಿಕ್ಕಿದೆ. ಶ್ರೀಗಳವರು ಶುದ್ಧ ಮನಸ್ಕರಾಗಿ ಅವಿಚ್ಛಿನ್ನವಾಗಿ ೪೦ ವರ್ಷಗಳ ಸಮಾಜದಲ್ಲಿ ನೂತನ ಚೈತನ್ಯವನ್ನು ಹುಟ್ಟಿಸಿ ಅಸಾಧಾರಣವಾದ ಕಾರ್ಯ ಮಾಡಿದ್ದರಿಂದಲೇ ಜನರು ಅವರನ್ನು ಶಿವ ನೆಯಿಂದ ಕಾಣುತ್ತಾರೆ. 'ನಡೆಯಂತೆ ನುಡಿ, ನುಡಿಯಂತೆ ನಡೆ' ಇವೆರಡನ್ನು ಅವರು ತ್ರಿಕರಣ ಶುದ್ಧವಾಗಿ ಅಳವಡಿಸಿ ರಲ್ಲದೇ, ಸಮಾಜಸೇವೆಯನ್ನು ತಮ್ಮ ಶೀಲಕ್ಕೆ ಚ್ಯುತಿ ಬಾರದಂತೆ ಮಾಡುತ್ತಿರುವರು.

ನಾಗನೂರ ಶ್ರೀಗಳವರು ತಾವು ಸ್ವತಃ ಶಿವಯೋಗಿಗಳಾಗಿದ್ದರೂ ಗುರು, ಲಿಂಗ, ಜಂಗಮರಲ್ಲಿ ಅಸಾಧಾರಣ ಭಕ್ತಿಯನ್ನು ಅಳವಡಿಸಿಕೊಂಡು, ಬಹಿರ್ಮುಖದಲ್ಲಿ ಅನಂತಕಾರ್ಯಗಳಲ್ಲಿ ತೊಡಗಿದ್ದರೂ, ಅಂತರ್ಮುಖಿಗಳಾಗಿ ಶಿವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲ್ಲಿಯೇ ತಲ್ಲೀನರಾಗಿರುತ್ತಾರೆ. ಇಂತಹ ದಿವ್ಯ, ಭವ್ಯ, ಯೋಗಿಗಳಿಗೆ ಭಕ್ತಾದಿಗಳು ತನ್ನು ಸರ್ವಸ್ವವನ್ನು ಅರ್ಪಿಸಲಿಕ್ಕೆ ದ್ಧರಾದರೆಂಬುವದಕ್ಕೆ ೬ ೭ ಲಕ್ಷ ರೂಪಾಯಿಗಳಿಂದ ನಿರ್ಮಿತವಾಗಿರುವ 'ವೀರಶೈವ ವಿದ್ಯಾರ್ಥಿ ಪ್ರಸಾದ ನಿಲಯದ' ನೂತನ ಟ್ಟಡವೇ ಸಾಕ್ಷಿಯಾಗಿ ನಿಂತಿದೆ. ಇಂತಹ ಮಹತ್ಕಾರ್ಯ ಸಾಧ್ಯವಾಗಬೇಕಾದರೆ ಅವರಲ್ಲಿರುವ ಗುರುಭಕ್ತಿಯೇ ಕಾರಣ ಆ ರು ಶ್ರೇಷ್ಠರ ಆಶೀರ್ವಾದವೇ ಶ್ರೀಗಳವರಿಗೆ ಅಕ್ಷಯನಿಧಿಯಾಗಿ ಸಮಾಜಸೇವಾ ಕಾರ್ಯದಲ್ಲಿ ಹೆಚ್ಚಿನ ಕೀರ್ತಿಯನ್ನು ತಂದು, ಕೊಟ್ಟಿದೆಯೆಂದು ಧೈರ್ಯವಾಗಿ ಹೇಳಬಹುದು.

ಶ್ರೀಗಳವರು ಹೆಣ್ಣುಮಕ್ಕಳಿಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ರಂಗಗಳಲ್ಲಿ ಸಮಾನ ಸನ್ಮಾನಗಳನ್ನು ಕಲ್ಪಿಸಿ ಕೊಟ್ಟರೆಂಬುದಕ್ಕೆ ಇಸವಿಸನ್ ೧೯೬೦ ರಲ್ಲಿ ' ವಿದ್ಯಾರ್ಥಿನಿ ಪ್ರಸಾದ ನಿಲಯ 'ವನ್ನು ಸ್ಥಾಪನೆಮಾಡಿರುವದೇ ಸಾಕ್ಷಿಯಾಗಿದೆ.

ಬಸವಾದಿ ಪ್ರಮಥರಂತೆ ಶ್ರೀಗಳವರು ಹೆಣ್ಣುಮಕ್ಕಳನ್ನು ಗೌರವದಿಂದ ಕಾಣುತ್ತಾರೆ. ಒಂದು ಕುಟುಂಬದ ಉದ್ಧಾರ ಆಗಬೇಕಾದರೆ, ಧರ್ಮದ ಜಾಗ್ರತೆಯಾಗಬೇಕಾದರೆ, ಸಮಾಜದ ಉನ್ನತಿಯಾಗಬೇಕಾದರೆ ಹೆಣ್ಣುಮಕ್ಕಳೆ ಕಾರಣ ಎಂಬುದನ್ನು ಶ್ರೀಗಳವರು ಅರಿತವರಾದದ್ದರಿಂದ ಸ್ತ್ರೀಯರ ಸುಧಾರಣೆಗೆ, ಇಸವಿಸನ್ ೧೯೪೮ ರಲ್ಲಿ ಮುಳಗುಂದ 'ಶ್ರೀಬಾಲಲೀಲಾ ಮಹಾಂತ ' ಶಿವಯೋಗಿಯ ಪುರಾಣವನ್ನು ಹೆಣ್ಣುಮಕ್ಕಳಿಂದಲೇ ಹೇಳಿಸಿ, ಆ ಪುರಾಣ ಮುಕ್ತಾಯ ಸಮಾರಂಭದ ಮಂಗಲ ದಿನದಲ್ಲಿ ' ಶ್ರೀ ಅಕ್ಕನಬಳಗ 'ವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆ ಬಳಗವು ಶ್ರೀಗಳವರ ಕೃಪಾಛತ್ರದಲ್ಲಿ ಸಂಘಟನಾ ಶಕ್ತಿಯನ್ನು ಬೆಳಸಿಕೊಂಡು ಧರ್ಮ ಜಾಗೃತಿಯ ಕಾರ್ಯಗಳನ್ನು ಒಳ್ಳೇ ಚಟುವಟಿಕೆಯಿಂದ ಮಾಡುತ್ತಿರುವದು. ಹೀಗೆ ಶ್ರೀಗಳವರು, ಮಹಿಳೆಯರು ಮಾಡುತ್ತಿರುವ ವೀರಶೈವ ಧರ್ಮಪ್ರಸಾರದ ಕಾರ್ಯಕ್ಕೆ ಪುಷ್ಟಿಯಿತ್ತು ಅದನ್ನು ಬೆಳೆಯಿಸ ಬೇಕೆಂದು ಬಯಿಸಿದ ಅವರ ವಿಶಾಲದೃಷ್ಟಿ ನಮ್ಮೆಲ್ಲರಿಗೆ ಅನುಕರಣೀಯವಾಗಿದೆ. ಸಚ್ಚಾರಿತ್ರ್ಯ, ಸದ್ಭಾವನೆ, ನಿಸ್ವಾರ್ಥ ಜೀವನಗಳಿಂದ ಕೂಡಿದ ಅವರ ಸಾಮಾಜಿಕ ಜೀವನದಿಂದ ಮಹಿಳೆಯರು ಅವರಿಂದ ಇನ್ನಿಷ್ಟು ಮಹತ್ಕಾರ್ಯಗಳನ್ನು ಬಯಸು ವದು ಸಹಜವಾಗಿವೆ.

ಒಟ್ಟಿನಮೇಲೆ ಸಮಾಜದ ಅಜ್ಞಾನವನ್ನು ಹೋಗಲಾಡಿಸುವದಕ್ಕಾಗಿ ಹಗಲಿರುಳು ನಿರುಪಾಧಿಯಿಂದ ಪ್ರಯತ್ನಿಸು ತ್ತಿರುವ ನಿಜವಾದ ಸದ್ಗುರುವು; ಹೊನ್ನು, ಹೆಣ್ಣು, ಮಣ್ಣುಗಳೆಂಬ ತ್ರಿವಿಧ ಮೋಹಜಾಲಗಳನ್ನು ಮೆಟ್ಟಿ ಮೆರೆದ ವೈರಾಗ್ಯ ಮೂರ್ತಿಯು; ಇಂದ್ರಿಯ ವ್ಯಾಪಾರಗಳನ್ನು ವಶದಲ್ಲಿಟ್ಟುಕೊಂಡು ಬಾಹ್ಯಾಡಂಬರಗಳನ್ನೆಲ್ಲ ಬದಿಗೊತ್ತಿದ ಸತ್ಯ ಸ್ವಾಮಿಗಳು, ಕೇವಲ ಶಿವಾರ್ಪಣ ಸದ್ಬುದ್ಧಿಯಿಂದ ಸಮಾಜಸೇವಾ ಕಾರ್ಯವನ್ನು ಸಾಗಿಸಿದ ನಿಸ್ಸೀಮ ಶಿವಯೋಗಿಗಳು. ಇಂತಹ ಅನುಪಮ, ಆದರ್ಶಭೂತ ಪುಣ್ಯ ಶಿವಯೋಗಿಗಳು ತೋರಿದ ರಾಜಬೀದಿಯಲ್ಲಿ ನಾವೆಲ್ಲರು ನಡೆದು ಸರ್ವಾಂಗೀಣ ಉನ್ನತಿ ಯನ್ನು ಪಡೆಯಲು ಮುನ್ನಡೆಯಬೇಕಾಗಿದೆ

ಒಂದು ಕಲ್ಲುಸಕ್ಕರೆಯ ಹರಳನ್ನು ಅವ ಭಾವದಲ್ಲಿ ಕಡೆದರೂ, ಅದು ಸವಿಯೇ ಹತ್ತುವಂತೆ ಶ್ರೀಗಳವರ ಜೀವನವನ್ನು ಸರ್ವತೋಮುಖವಾಗಿ ನೋಡಿದರೂ, ಅದು ಸುಂದರವಾಗಿಯೇ, ಪರಿಪೂರ್ಣವಾಗಿಯೇ, ಕಾಣುಸುವದು.

ಕನ್ನಡ ಗಡಿನಾಡಿನಲ್ಲಿ ವೀರಶೈವ ಸಾಹಿತ್ಯ, ಸಂಸ್ಕೃತಿ ಪ್ರಸಾರವನ್ನು ಕೈಕೊಂಡ ನಾಗನೂರ ಶ್ರೀಗಳವರ ಸಾಹಸ ಪ್ರಶಂಸನೀಯವಾಗಿದೆ. ಸಮಾಜಸೇವೆಯೇ ಅವರ ನಿತ್ಯ ಸತ್ಯದ ಕಾಯಕವಾಗಿದೆ.

ಶ್ರೀಗಳವರು ನೂತನವಾಗಿ ರಚಿಸಿದ ' ವಿದ್ಯಾರ್ಥಿ ಪ್ರಸಾದ ನಿಲಯದ ' ಉದ್ಘಾಟನಾ ಸಮಾರಂಭದ ಶುಭಗಳಿಗೆ ಯಲ್ಲಿ, ಅದರ ಸವಿ ನೆನಹಿಗಾಗಿ ಒಂದು ಸ್ಮೃತಿಗ್ರಂಥವು ಹೊರಬೀಳುವದು ಅತ್ಯಗತ್ಯ. ಇಂತಹ ಒಂದು ಸುಯೋಗವು ಇಂದೊದಗಿ ಬಂದಿದೆ. ಇದರಲ್ಲಿ ಈ ಬರಹ ರೂಪಿನ ಅಳಿಲು ಸೇವೆ ಸಲ್ಲಿಸಲು ಭಕ್ತಿಯನ್ನು ಮಾಡುವ ಸದಾವಕಾಶ ದೊರೆತು ದಕ್ಕಾಗಿ ನಮಗೆ ಪರಮಾನಂದವಾಗಿದೆ.

ಸಮಾಜಸೇವಾ ನಿರತರಾದ ನಾಗನೂರ ಶಿವಯೋಗಿವರ್ಯರಿಗೆ ಜಗದೀಶನು ಇನ್ನೂ ಹೆಚ್ಚಿನ ಆಯುರಾರೋಗ್ಯವನ್ನು ಕೊಟ್ಟು ರಕ್ಷಿಸಲೆಂದು ಸೊನ್ನಲಿಗೆಯ ಸೋದರಿಯರಾದ ನಾವು ಹಾರೈಸುವೆವು.

ಸುಗ್ಗಲಾದೇವಿ ನಂದರಗಿ

ರವಿದೇವಿ ನಂದರಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಗಳ ವರಪ್ರದಾನ

ಭಾರತವು ಧರ್ಮ ಪ್ರಧಾನವಾದ ದೇಶ. ಅಂತೆಯೇ ಭಾರತೀಯರಿಗೆ ಧರ್ಮವೆಂದರೆ ಪಂಚಪ್ರಾಣ. ಈ ಇತಿಹಾಸದಲ್ಲಿ ಧರ್ಮಕ್ಕಾಗಿ ದುಡಿದಂಥ ಅನೇಕ ಮಹಾನ್ ವ್ಯಕ್ತಿಗಳ ಉಜ್ವಲ ಪರಂಪರೆಯು ತೋರಿ ಬರುತ್ತದೆ. ಪರಂಪರೆಯನ್ನು ಅರ್ವಾಚೀನ ಕಾಲದಲ್ಲಿಯೂ ನಡೆಯಿಸಿಕೊಂಡು ಬಂದಂಥ ಮಹಾನುಭಾವರಲ್ಲಿ ಶ್ರೀಮನ್ನಿರಂಜನ ಜ ಕೀರ್ತಿಪೂರ್ಣರಾದ ನಾಗನೂರ ಸ್ವಾಮಿಗಳೂ ಒಬ್ಬರು. ಇವರುಗಳು ತಮ್ಮ ಜ್ಞಾನ ಜ್ಯೋತಿಯ ಪ್ರಕಾಶವನ್ನು ದೀಪಸ್ತಂಭದಂತೆ ಬಡವರಿಗೂ ಬಲ್ಲಿದರಿಗೂ ಏಕಕಾಲಕ್ಕೆ ಸಮಾನತೆಯಿಂದ ಕೊಡುತ್ತ ಯೋಗ್ಯ ಮಾರ್ಗ ದರ್ಶ ಮಾಡುತ್ತಲಿದ್ದಾರೆ. ಇದಕ್ಕೆ ಅನುಕೂಲವಾಗುವಂತೆ ಜನರಿಗೆಲ್ಲ ವಿದ್ಯಾದಾನ ಮಾಡುವ ಮಹತ್ ಕಾರ್ಯವನ್ನು ಸ್ವಾಮಿಗಳವರು ಕೈಯಲ್ಲಿ ತಕ್ಕೊಂಡಿದ್ದಾರೆ. ಈ ಉದ್ದೇಶವನ್ನೇ ಮುಂದಿಟ್ಟುಕೊಂಡು ವಿದ್ಯಾರ್ಥಿಗಳಲ್ಲಿ ವಸತಿಯ ಸ ವನ್ನು ಲಭಿಸಿಕೊಂಡು ಬದ್ಧ ಕಂಕಣರಾಗಿ ದುಡಿದು ಈ ಪ್ರಸಾದ ಸದೃಶವಾದ ಭವನವನ್ನು ಕೊಡುಗೆಯಾಗಿ ಕೊಟ್ಟ ಇದರ ಫಲವನ್ನು ಅನುಭವಿಸಿ ಜ್ಞಾನಾರ್ಜನೆ ಮಾಡಿಕೊಂಡು ಐಹಿಕ ಮತ್ತು ಪಾರಮಾರ್ಥಿಕ ಸುಖವನ್ನು ಪಡೆದ ಜೀವ ಧನ್ಯರು. ಜನ ಸಾಮಾನ್ಯಕ್ಕೆ ಸಂಸಾರ ಬಂಧನದಿಂದ ಬಿಡುಗಡೆಹೊಂದಿ, ಪಾರಮಾರ್ಥಿಕ ಸುಖಸಾಧನೆಗೆ ಅವಕಾಶ ಕೊಡಲು ಈ ಮಹನೀಯರಂತಹ ಮಹಾತ್ಮರ ಸಂದೇಶ ಮತ್ತು ಸಂಪರ್ಕ ಅತೀವ ಮಹತ್ವದ ವಿಷಯಗಳು. ಈ ವಿ ಗುಣಗ್ರಾಹಕತ್ವ ಪರಿಣಾಮಕಾರಿಯಾಗಲಿಕ್ಕೆ ವಿಷಯಾಸಕ್ತಿಯ ಭಾವವನ್ನು ಕಡಿದೊಗೆಯುವದು ಅತ್ಯವಶ್ಯವಾದ ಗಿದೆ. ಈ ಬಗ್ಗೆ ಪ್ರಭುದೇವರು ತಮ್ಮ ವಚನದಲ್ಲಿ—"ಸಂಸಾರ ವಿಷಯ ರಸನ ಹೃದಯದಲ್ಲಿ ತುಂಬಿಕೊಂಡಿಪ್ಪ ಜೀ ಕಾಯದಲ್ಲಿ ವಚನಾಮೃತ ತುಂಬಿಡಡೆ ಭಿನ್ನ ಘಟದಲ್ಲಿ ಉದಕವ ಹೊಯ್ದಂತೆ ಕಾಣಾ ಗುಹೇಶ್ವರಾ" ಎಂದು ಸ್ಪಷ್ ಯಲ್ಲಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಅಣ್ಣನವರು ಇನ್ನೊಂದೆಡೆಗೆ :—

"ಕಾಣಬಹುದೇ ರಸದ ಭಾವಿ ನಿರ್ಭಾಗ್ಯಂಗೆ
ಕರೆಯ ಬಹುದೇ ಕಾಮಧೇನು ಅಶುದ್ಧಂಗೆ
ಎನ್ನೊಡೆಯಾ ಕೂಡಲ ಸಂಗನ ಶರಣರ
ಪುಣ್ಯವಿಲ್ಲದೆ ಕಾಣಬಹುದೇ ? ಎಂದು ಉದ್ಗಾರ ತೆಗೆದಿದ್ದಾರೆ.

ಈ ಸಂದರ್ಭದಲ್ಲಿ ಶ್ರೀಮನ್ನಿರಂಜನ ನಾಗನೂರ ಸ್ವಾಮಿಗಳ ಕೃಪಾಕಟಾಕ್ಷದಿಂದ ಸಿದ್ಧವಾದ ಈ ಜ್ಞಾನದ ಕಾ ನುವಿನ ಸಮ್ಮುಖದಲ್ಲಿ ಆಸೀನರಾಗಿರುವ ನಾವೆಲ್ಲರೂ ನಿಜವಾಗಿ ಧನ್ಯರು. ಇಂಥ ಸದವಕಾಶವನ್ನು ಕಲ್ಪಿಸಿಕೊಟ್ಟ ಶ್ರೀ ರಂಜನ ಪ್ರಣವ ಸ್ವರೂಪಿಗಳಾದ ನಾಗನೂರ ಸ್ವಾಮಿಗಳಿಗೆ ದೀರ್ಘಾಯುರಾರೋಗ್ಯ ದೊರೆಯಲೆಂದು ಪರಮೇಶ್ವ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ.

— ಪಂಚವ್ವಾತಾಯಿ ಸರದಾರ ಸೊಲ್ಲಾಪೂರ

ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವ ನಾಕೆಂಡ ನುಂಗಿದಂತೆ,
ಗುರು ಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ
ಆತನ ಸರ್ವಾಂಗವೆಲ್ಲ ಲಿಂಗ ಕಾಣಾ ರಾಮನಾಥಾ

— ದೇವರ ದಾಸಿಮಯ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಯಕಯೋಗಿ ಶಿವಬಸವ ಶ್ರೀಗಳು

ನಿಷ್ಕಾಮ ಕಾಯಕವು ಆತ್ಮನನ್ನು ಅಮರನನ್ನಾಗಿ ಮಾಡುವದು. ಸಕಾಮನಾಗಿ ಯಾವದನ್ನು ಮಾಡಿದರೂ ಬಂಧನಕ್ಕೊಳಗಾಗಬೇಕಾಗುವದು. ಅದರಿಂದ ತೃಪ್ತಿಯಾಗಲಾರದು. ಆತ್ಯಂತಿಕ ಸುಖವು ನಿಷ್ಕಾಮ ಕಾಯಕದಲ್ಲಿದೆ. ಕಾಯಕವೆಂದರೆ ಕೇವಲ ಕರ್ಮವೆಂದರ್ಥವಲ್ಲ. ಪರೋಪಕೃತಿ ಇರಬೇಕು. ತನ್ನ ಹೊಟ್ಟೆಪಾಡಿಗಾಗಿ ದುಡಿಯುವ ದುಡಿಮೆಗೆ ಕರ್ಮವೆಂದು ಅನ್ನುವ ರೂಢಿ ಇದೆ. ವೀರಶೈವ ಧರ್ಮದಲ್ಲಿ ಕಾಯಕಕ್ಕೆ ಮಹತ್ವ ಕೊಟ್ಟಿದ್ದಾರೆ. ಗುರು, ಲಿಂಗ, ಜಂಗಮರ ಪ್ರೀತ್ಯರ್ಥವಾಗಿ, ಅವರ ಪ್ರಸನ್ನತೆಗಾಗಿ ಯಾವದಾದರೊಂದು ಕಾಯಕ ಮಾಡಲೇಬೇಕು. ಕರ್ಮಯೋಗಕ್ಕಿಂತಲೂ, ಕರ್ಮ ಸನ್ಯಾಸವೇ ಮಿಗಿಲೆಂದು ಗೀತೆಯು ಪ್ರತಿಪಾದಿಸುತ್ತದೆ. ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಕ್ಕೆ, ಕರ್ಮಸನ್ಯಾಸವೆಂದು ಹೇಳುತ್ತಾರೆ. ಅಂತೆಯೇ ಕರ್ಮದಲ್ಲಿ ಅಧಿಕಾರವಿದೆ, ಫಲದಲ್ಲಿ ಇಲ್ಲವೆಂದು ಗೀತೆಯು ಸಾರಿಹೇಳುತ್ತದೆ. ಇದರಲ್ಲಿ ನಾನು ಕರ್ಮಮಾಡುವವನು ಎಂಬ ಅಭಿಮಾನ ಅಹಂಕಾರಗಳು ತುಂಬಿರುವದರಿಂದ ಇದಕ್ಕೂ ಸಹ ನಮ್ಮ ವೀರಶೈವ ಧರ್ಮವು ಒಪ್ಪುವದಿಲ್ಲ. ಏಕೆಂದರೆ ಅಹಂಕಾರ ಮೂಲವಾದ ಕರ್ಮಗಳು ಸರ್ವ ನಾಶಕ್ಕೆ ಕಾರಣಗಳು. ಆದುದರಿಂದ ನಿಷ್ಕಾಮ ಕಾಯಕ ಯೋಗಕ್ಕೆ ಮನ್ನಣೆ ಇತ್ತಿದ್ದಾರೆ.

೧೨ನೇ ಶತಮಾನದಲ್ಲಿ ಮಹಾತ್ಮಾ ಬಸವಣ್ಣನವರು ಕಲ್ಯಾಣದಲ್ಲಿ ಶಿವಾನುಭವ ಮಂಟಪವೆಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮುಖವಾಗಿ ವೀರಶೈವ ಧರ್ಮೋದ್ಧಾರ ಮಾಡಿದರು. ಆ ಸಂಸ್ಥೆಯಲ್ಲಿ ಸೇರಬೇಕಾದರೆ ಕಾಯಕ ಮಾಡಬೇಕು. ಗುರು, ಲಿಂಗ, ಜಂಗಮರೇ, ದೇವರು. ಅವರಿಗಾಗಿ ನಿತ್ಯ ದಾಸೋಹಮಾಡಿ ಅವರೊಕ್ಕ ಮಿಕ್ಕ ಪ್ರಸಾದ ಸ್ವೀಕರಿಸಬೇಕು. ಎಂದು ಮುಂತಾಗಿ ಕಾಯಕದ ಪವಿತ್ರ ಧರ್ಮಪ್ರಸಾರ ಮಾಡಿದ್ದಾರೆ. ಕಾಯಕವೇ ಕೈಲಾಸವೆಂದು ಹೇಳಿದ್ದಾರೆ. 'ಅರಿದಡೆ ಶರಣ ಮರೆದರೆ ಮಾನವ' ಎಂಬ ತತ್ವವನ್ನು ತಿಳಿಸಿದ್ದಾರೆ.

ಈ ಲಿಂಗವಂತ ಧರ್ಮದ ತತ್ವವನ್ನು ಅರಿತು ಶ್ರೀ. ಮ. ನಿ. ನಿರಾಭಾರಿ 'ಶ್ರೀ ಶಿವಬಸವ ಮಹಾಸ್ವಾಮಿಗಳು ನಾಗನೂರ' ಇವರು ಬೆಳಗಾವಿಯಲ್ಲಿ 'ವಿದಾರ್ಥಿ ಪ್ರಸಾದ ನಿಲಯ' ವೆಂಬ ಸಂಸ್ಥೆಯನ್ನು ೧೯೩೨ ನೇ ಇಸ್ವಿಯಿಂದ ಇಲ್ಲಿಯ ವರೆಗೂ ಅವ್ಯಾಹತವಾಗಿ ನಡೆಯಿಸುತ್ತಾ ಬಂದಿದ್ದಾರೆ. ೨೫ ವಿದ್ಯಾರ್ಥಿಗಳಿಂದ ಈ ಪ್ರಸಾದ ನಿಲಯವು ಪ್ರಾರಂಭವಾಗಿ ಇಂದು ಮೂರುನೂರು ವಿದ್ಯಾರ್ಥಿಗಳು ಇಲ್ಲಿ ಪ್ರಸಾದ ಪಡೆಯುತ್ತಿರುವರು. ಮಾಧ್ಯಮಿಕ ಶಿಕ್ಷಣ, ಉಚ್ಚಮಟ್ಟದ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿದೆ.

ಇಂತಹ ಪವಿತ್ರ ಶಿಕ್ಷಣ ಪ್ರಚಾರ ಕಾರ್ಯದ ಕಾಯಕವನ್ನು ಮಹಾಸ್ವಾಮಿಗಳು ಕೈಕೊಂಡು ಸಮಾಜಕ್ಕೆ ಮಹದುಪ ಕಾರಮಾಡಿದ್ದಾರೆ. ಅನ್ನದಾನವು ಜಗತ್ತಿನಲ್ಲಿ ದೊಡ್ಡದಾನವು. ವಿದ್ಯಾದಾನವು ಅದಕ್ಕೂ ದೊಡ್ಡದು. ಯಾಕಂದರೆ ಅನ್ನ ದಿಂದ ಕ್ಷಣಿಕವಾದ ತೃಪ್ತಿಯಾಗುತ್ತದೆ. ವಿದ್ಯೆಯಿಂದ ಜೀವವಿರುವ ಪರ್ಯಂತರ ತೃಪ್ತಿಯಾಗುತ್ತದೆಂದು ನೀತಿಯು ಹೇಳುತ್ತಿದೆ. ಅನ್ನದಾನದ್ವಾರಾ ವಿದ್ಯಾದಾನವು ನಿರಂತರ ನಡೆದೇ ಇರುತ್ತದೆ. ಗಂಡುಮಕ್ಕಳಂತೆ ಹೆಣ್ಣುಮಕ್ಕಳಿಗೂ ಒಂದು ಉಚಿತ ಪ್ರಸಾದ ನಿಲಯ ಪ್ರಾರಂಭಮಾಡಿ ಮಹಿಳಾ ಸಮಾಜದ ಉದ್ಧಾರ ಮಾಡಹತ್ತಿದ್ದಾರೆ. ಬೆಳಗಾಂವಿ ಅಕ್ಕನ ಬಳಗಕ್ಕೆ ಆಶ್ರಯ ಕೊಟ್ಟು, ಹೆಣ್ಣುಮಕ್ಕಳಿಗೂ ಕಾಯಕ ಧರ್ಮದ ತಿಳಿವಳಿಕೆಯನ್ನು ಬೀರಹತ್ತಿದ್ದಾರೆ.

ಈ ಮಹಾಸ್ವಾಮಿಗಳವರಿಗೆ ನಮ್ಮಂತೆ ಬೇರೆ ತಮ್ಮದಾದ ಮನೆಮಾರಗಳಿಲ್ಲ. ಆಪ್ತೇಷ್ಟರಿಲ್ಲ. ಒಬ್ಬರೇ ಒಬ್ಬ ರಾಗಿದ್ದು ಸಮಾಜವೇ ನಮ್ಮ ಬಂಧು ಬಳಗವೆಂದು ನಂಬಿ, ಸಮಾಜದ ಉದ್ಧಾರವೇ ಆತ್ಮೋದ್ಧಾರವೆಂದು ಬಗೆದು ಶಿಕ್ಷಣಸತ್ರಕ್ಕೆ ಸೂತ್ರವಾದ, ಜೀವಾಳವಾದ, ಪ್ರಸಾದಕೊಡುವ ಕಾಯಕವನ್ನು ಕೈಕೊಂಡಿದ್ದಾರೆ.

ವೀರಶೈವಸಮಾಜದ ಗಾಡಾಂಧಃಕಾರವನ್ನು ನಿರ್ನಾಮಗೊಳಿಸಲು ಬದ್ಧಕಂಕಣರಾದ ಶ್ರೀ ಹಾನಗಲ್ ಕುಮಾರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಶ್ರೀ ಶಿವಯೋಗ ಮಂದಿರದಲ್ಲಿ ನಾಗನೂರ ಮಹಾಸ್ವಾಮಿಗಳು, ಶಿವಯೋಗ ಸಾಧನಮಾಡಿ, ಶಿವತತ್ವ ಚಿಂತನೆಮಾಡಿ, ಅನುಷ್ಠಾನ, ಜಪ ತಪವನ್ನಾಚರಿಸಿ, ಶ್ರೀ ಕುಮಾರ ಸ್ವಾಮಿಗಳ ಕೃಪೆಗೆ ಪಾತ್ರರಾಗಿ ಅಖಂಡ ಬ್ರಹ್ಮತೇಜದಿಂದ ಕಂಗೊಳಿಸುತ್ತ ನಾಗನೂರ ರುದ್ರಾಕ್ಷಿಮಠಕ್ಕೆ ದಯಮಾಡಿಸಿ ಮಠದ ಜೀರ್ಣೋದ್ಧಾರ ಕಾರ್ಯಮಾಡಿದರು. ಭೂ, ಜಲ, ಸಂಪತ್ತಿಯನ್ನು ಬೆಳೆಯಿಸಿದರು. ಭಕ್ತರ ಸಹಕಾರ ಪಡೆದರು. ಸಮಾಜಕ್ಕಾಗಿ ತಮ್ಮ ಶರೀರವನ್ನೇ ಮುಡುಪಾಗಿಟ್ಟರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಣ್ಣೂರ ಮರಡೀಮಠದ ಕೆಂಪಯ್ಯ ಸ್ವಾಮಿಗಳ ಕಾರ್ಯಕ್ಕೆ ಬಹುವಿಧವಾಗಿ ಬೆಂಬಲನೀಡಿದರು. ಅಲ್ಲಿ ಸಹ ಅಘಟಿತ ಘಟನಾ ಕಾರ್ಯಗಳನ್ನು ಮಾಡಿದರು. ಅಲ್ಲಿ ಒಂದು ಹಾಯಸ್ಕೂಲ, ಬೋರ್ಡಿಂಗ ಸ್ಥಾಪಿಸುವಂತೆ ಮಾಡಿ ತಾವು ಅವುಗಳ ಸುವ್ಯವಸ್ಥೆಗಾಗಿ ತ್ರಿಕರಣಪೂರ್ವಕ ಹೋರಾಡಿದ ಸಂಗತಿಗಳು ಜನಜನಿತವಾಗಿವೆ.

ಶ್ರೀ ಶಿವಯೋಗಮಂದಿರದ ಸಂಸ್ಥೆಗೆ ಎರಡು ಸಲ ಚೇರಮನ್ನರಾಗಿರುವರು. ಈಗಲೂ ಇದ್ದಾರೆ. ಘಟ ಶ್ರೀಗುರುಸಿದ್ಧೇಶ್ವರ ದವಾಖಾನೆಗೆ ಈ ಮೊದಲು ಚೇರಮನ್ನರಾಗಿ ಪ್ರಭಾವೀ ಕಾರ್ಯಮಾಡಿದ್ದು ಆ ಭಾಗದ ಭಕ್ತಾ ಸುಪ್ರಸಿದ್ಧವದೆ.

ಈ ಶ್ರೀಗಳು ಅನಂತ ಕಾರ್ಯಗಳನ್ನು ಅನಾಸಕ್ತಿಯೋಗದಿಂದ ಮಾಡಿದ್ದಾರೆ. ಕಾರ್ಯಗಳೇ ಇವರ ಬೆನ್ನುಹತ್ತಿ ಹೊರತು ಕಾರ್ಯದ ಬೆನ್ನುಹತ್ತಿ ಇವರಿಲ್ಲ. ಶಿವನ ಕಾರ್ಯ ಶಿವನೇ ಮಾಡಿಸಿಕೊಳ್ಳುವವನು ನಾನಲ್ಲವೆಂಬ ನಿರಹ ಭಾವನೆಯಿಂದ ಸದಾ ಮೌನವ್ರತಧಾರಿಗಳಾಗಿ ಕೇವಲ ಶಿವಾರ್ಪಣ ಸದ್ಬುದ್ಧಿಯಿಂದ ಸಮಾಜಸೇವಾ ಕಾರ್ಯವನ್ನು ಸಾ ನಿಸ್ಸೀಮ ಶಿವಯೋಗಿಯು.

ನಿಷ್ಕಾಮ ಕಾಯಕ ಯೋಗದಿಂದ ಇಂತಹ ಕಾರ್ಯಗಳು ಸುಗಮವಾಗಿ ಸಾಗಿ, ಕೊನೆಗೊಳ್ಳುವವೆಂದು ಬೇರೆ ಬೇಕಿಲ್ಲ. ಈ ಮಹಾಸ್ವಾಮಿಗಳವರಿಗೆ ಆಯುರಾರೋಗ್ಯ ಇದಕ್ಕೂ ಹೆಚ್ಚಾಗಿ ದಯಪಾಲಿಸಲೆಂದು ಜಗದೀ ಪ್ರಾರ್ಥಿಸುತ್ತೇನೆ.

ವಾಚಕ ಮಹಾಶಯರೇ ಈ ಲೇಖದಲ್ಲಿ ಏನಾದರೂ ತಪ್ಪುಗಳಿದ್ದರೆ ನನ್ನವು, ಒಪ್ಪುಗಳಿದ್ದರೆ ಮಹಾತ್ಮ ತಿಳಿಯಬೇಕು.

ಸೌ. ಕಲಾವತಿದೇವಿ ಕವಟಗಿಮಠ, ಚಿಕ್ಕೋ

ಇಳೆ ನಿಮ್ಮದಾನ ಬೆಳೆ ನಿಮ್ಮದಾನ,
ಸುಳಿದು ಬೀಸುವ ವಾಯುನಿಮ್ಮದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನಂಬೆ ರಾಮನಾಥಾ ?

— ದೇವರ ದಾಸಿಮಯ್ಯ

ಅರಿದೆವರಿದೆವೆಂಬಿರಿ, ಅರಿದಪರಿಯೆಂತು ಹೇಳಿರೆ ?
ಅರಿದರರಿದೆವೆಂಬರೇ ? ಅರಿಯ ಭಾರದ
ಘನವರಿದು ಅರಿಯದಂತಿಪ್ಪರು ಗೊಹೇಶ್ವರಾ !

—ಪ್ರಭುದೇವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿದ್ಯಾರ್ಥಿನಿಯರ ಪ್ರಸಾದನಿಲಯ

ಬೆಳಗಾವಿ

ಕನ್ನಡ ನಾಡಿನಲ್ಲಿ ಪ್ರಸಾದ ನಿಲಯಗಳ ಇತಿಹಾಸದಲ್ಲಿ ಶ್ರೀ ಶ್ರೀನಾಗನೂರ ಶಿವಬಸವ ಮಹಾಸ್ವಾಮಿಗಳ ಹೆಸರು ಬೆಂಗಾಡಿನಲ್ಲಿ ಹಸಿರು ಮುರಿಯುವ ತೋಟದಂತೆ ಕಣ್ಮನಗಳಿಗೆ ಆನಂದದಾಯಕವಾಗಿದೆ. ಉತ್ತರ ಕರ್ನಾಟಕದ ಉಕ್ಕಿನ ಕೋಟೆಯೆನಿಸಿದ ಕನ್ನಡದ ಗಂಡುಮೆಟ್ಟಿನ ಗಡಿಯಾದ ಬೆಳಗಾವಿಯಲ್ಲಿ ಶ್ರೀಗಳವರ ಅಂತಃಕರಣವೇ ಮೈದಾಳಿದಂತೆ ಕಂಗೊಳಿಸುವ ಪ್ರಸಾದ ನಿಲಯವು ಬಡವಿದ್ಯಾರ್ಥಿಗಳಿಗೊಂದು ವರದಾನವಾಗಿದೆ. ವಿದ್ಯಾರ್ಜನೆಗೆಂದು ವಿವಿಧ ಭಾಗಗಳಿಂದ ಬಂದು ಸೇರಿದ ವಿದ್ಯಾರ್ಥಿಗಳ ಜೇನುಗೂಡಾಗಿದೆ. ಅಲ್ಲಿಯ ಪ್ರಸಾದವೇ ಶ್ರೀಗಳ ಒಲವಿನ ತನಿಜೇನು. ಅದನ್ನುಂಡು ಝೇಂಕರಿಸುವ ತುಂಬಿಗಳ ಮಧುರ ಗಾನ ಬೆಳಗಾಂವಿಯ ನಗರವನ್ನು ನಂದನವನವನ್ನಾಗಿಸಿದೆ. ಮಹಾನಗರದ ಆತ್ಮವಾಗಿದೆ. ಅಭಿಮಾನದ ಖಣಿಯಾಗಿದೆ. ಧರ್ಮ, ನೀತಿ, ಸಂಸ್ಕೃತಿಗಳ ಸಂಗಮಕ್ಷೇತ್ರವಾಗಿದೆಯೆಂದರೂ ಸಲ್ಲುವದು.

ವಿವಿಧ ವಿದ್ಯಾಮಂದಿರಗಳ ಕ್ಷೇತ್ರವಾದ ಬೆಳಗಾಂವಿಯಲ್ಲಿ ಬಹುಕಾಲದ ವರೆಗೆ ಕೇವಲ ಗಂಡುಮಕ್ಕಳಿಗಾಗಿ ವಸತಿ ಹಾಗೂ ಊಟಗಳನ್ನು ಒದಗಿಸಿ ಕೊಡುವ ಪ್ರಸಾದನಿಲಯವಾಗಿತ್ತು. ಆದರೆ ಯಾವ ನಮ್ಮ ತಾಯಂದಿರ ತೊಡೆಗಳ ಮೇಲೆ ನಮ್ಮ ಸಾಮ್ರಾಜ್ಯ ಬೆಳೆಯುವದೊ ಅಂತಹ ಬಡ ಹೆಣ್ಣುಮಕ್ಕಳಿಗಾಗಿ ವಿದ್ಯಾರ್ಜನೆಯ ವಿಶೇಷ ಅನುಕೂಲತೆಗಳು, ಬೆಳಗಾಂವಿಯಲ್ಲಿ ಇದ್ದಿರಲಿಲ್ಲವೆಂದೇ ಹೇಳಬೇಕು. ಈ ಕೊರತೆಯನ್ನು ಹೋಗಲಾಡಿಸುವ ಕುರಿತು ಶ್ರೀಗಳು ಮುಂದೆ ಬಂದರು. ಸನ್ ೧೯೬೨ ರಲ್ಲಿ ಬೆಳಗಾಂವಿಯ ಶೆಟ್ಟೀ ಬೀದಿಯಲ್ಲಿ ಹೆಣ್ಣುಮಕ್ಕಳಿಗಾಗಿ ಒಂದು ಪ್ರತ್ಯೇಕವಾದ ಪ್ರಸಾದ ನಿಲಯವನ್ನು ಸ್ಥಾಪಿಸಿದರು. ನಮ್ಮ ಭಾರತೀಯ ಸಂಸ್ಕೃತಿಯ ಸಾಕಾರ ಮೂರ್ತಿಗಳಂತಿರುವ ಹೆಣ್ಣುಮಕ್ಕಳು ಒಳ್ಳೆಯ ಗೃಹಿಣಿಯರಾಗುವಂತೆ ತಕ್ಕ ಶಿಕ್ಷಣದಲ್ಲಿ ತರಬೇತಿಗೊಳಿಸುವ ವಿಚಾರವನ್ನು ಮುಂದಾಲೋಚಿಸಿ ಅದನ್ನು ಈ ರೀತಿ ಕಾರ್ಯರೂಪಕ್ಕೆ ತಂದಿರುವದು ಶ್ರೀಗಳ ಉದಾರ ದೃಷ್ಟಿಯನ್ನು ಎತ್ತಿತೋರಿಸುವದಲ್ಲದೆ, ನಮ್ಮ ಹೆಣ್ಣುಮಕ್ಕಳ ಉದ್ಧಾರದ ಬಗೆಗೆ ಶ್ರೀಗಳಿಗಿರುವ ಕಳಕಳಿಯನ್ನೂ ಕಕ್ಕುಲತಿಯನ್ನೂ ಎತ್ತಿ ತೋರಿಸುತ್ತವೆ. “ ಲೋಕವೇ ನನ್ನ ಮನೆ, ಮಾನವ ಕುಲವೇ ನನ್ನ ಕುಟುಂಬ ” ವೆಂದು ನಂಬಿ ನಡೆಯುತ್ತಿರುವ ಶ್ರೀಗಳು ವಿಶ್ವವಿಶಾಲವಾದ ಕುಟುಂಬ ಜೀವಿಗಳು. ಕುಟುಂಬದ ಎಲ್ಲ ಮಕ್ಕಳೂ ಸರಿಸಮಾನವಾದ ಹಕ್ಕುಗಳನ್ನು ಪಡೆದು ಶಾರೀರಕವಾಗಿಯೂ, ಮಾನಸಿಕವಾಗಿಯೂ, ಹಾಗೂ ನೈತಿಕವಾಗಿಯೂ ಉತ್ತಮ ನಾಗರಿಕರಾಗಿ ಬೆಳೆಯಬೇಕೆಂಬುದೇ ಅವರ ಹೆಬ್ಬಯಕೆ. ಅದರ ಪೂರ್ಣತೆಗಾಗಿ ಅವರು ಹಗಲಿರುಳೂ ದುಡಿಯುತ್ತಿದ್ದಾರೆ. ಅದನ್ನೇ, ತಮ್ಮ ಜೀವನದ ಮುಕ್ತಿಯೆಂದೂ ನಂಬಿ ನಡೆದಿದ್ದಾರೆ; ನಡೆಯುತ್ತಿದ್ದಾರೆ. ಇಂಥವರು ದೇವ ಮಾನವರಲ್ಲವೇ ?

ಇಂಥ ಮಾನವತಾವಾದಿ ಶ್ರೀ ಶಿವಬಸವಸ್ವಾಮಿಗಳ ಉದಾರಾಶ್ರಯದಲ್ಲಿ ೧೯೬೨ ರಲ್ಲಿ ಬೆಳಕು ಕಂಡ ಹೆಣ್ಣುಮಕ್ಕಳ ಈ ಪ್ರಸಾದ ನಿಲಯದಲ್ಲಿ ಇದೀಗ ೨೬ ವಿದ್ಯಾರ್ಥಿನಿಯರುಂಟು. ಅವರು ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣ ಮಂದಿರಗಳಲ್ಲಿ ಓದುತ್ತಿದ್ದಾರೆ. ಈ ನಿಲಯದಲ್ಲಿ ಅಳವಡಿಸಿಕೊಳ್ಳಲಾದ ಕಾರ್ಯಕ್ರಮಗಳು ಉತ್ಸಾಹಪೂರಕವೂ, ಬೋಧಪ್ರದವೂ ಆಗಿವೆಯೆಂದು ಬೇರೆ ಹೇಳಬೇಕಿಲ್ಲ. ಬೆಳಗಿನ ೫ ಗಂಟೆಗೆ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಏರ್ಪಡಿಸಲಾಗುವದು. ಈ ಪ್ರಾರ್ಥನೆಯಿಂದ ಪ್ರತಿ ದಿನದ ಕಾರ್ಯಕಲಾಪಗಳು ಪರಿಶುದ್ಧವಾಗಿ ನಡೆಯುವಂತೆ ಮನಸ್ಸು ಶುದ್ಧವಾಗುವದು. ನಿತ್ಯದ ದಿನಚರಿಯು ಚಾಚೂ ತಪ್ಪದೆ ಶಿಸ್ತಿನಿಂದ ಸಾಗುತ್ತಿರುವದು. ವೇಳೆಗನುಸಾರವಾಗಿ ಓದು, ಆಟ, ಉಳಿದ ಚಟುವಟಿಕೆಗಳು ಜ್ಞಾನಾರ್ಜನೆಗೆ ಬಹು ಪೋಷಕವಾಗಿ ಸಾಗುವವು. ಈ ಎಲ್ಲ ಕಾರ್ಯಕ್ರಮಗಳನ್ನು ನಿಯಮಬದ್ಧವಾಗಿ ನಡೆಸಿಕೊಂಡು ಹೋಗಲೆಂದು ಇಬ್ಬರು ಮಾತೋಶ್ರೀಯವರು ಸಂಚಾಲಕರು ಇರುತ್ತಾರೆ. ಅವರು ನಮ್ಮನ್ನು ಬಹು ಕಕ್ಕುಲತೆಯಿಂದ ನೋಡಿಕೊಳ್ಳುತ್ತಾರೆ. ಅಲ್ಲದೆ ನಮಗೆ ಅವಶ್ಯವೆನಿಸಿದಾಗ ಪಾಠ ಹೇಳಿಕೊಡುತ್ತಾರೆ. ನಮ್ಮ ಆಟ ಅಭ್ಯಾಸಗಳಲ್ಲಿ ಅವರು ಸಕ್ರಿಯವಾಗಿ ನೆರವಾಗಿ ನಮಗೆಲ್ಲರಿಗೂ ಸ್ಫೂರ್ತಿಯನ್ನು ನೀಡುತ್ತಿರುತ್ತಾರೆ. ಅವರ ವಾತ್ಸಲ್ಯಪೂರ್ಣವಾದ ನಡೆನುಡಿಗಳಿಂದ ನಾವು ನಮ್ಮ ತವರುಮನೆಯನ್ನೂ ಮರೆಯುವಂತಹ ವಾತಾವರಣವನ್ನು ಈ ಮಾತೋಶ್ರೀ ಸಂಚಾಲಕರು ಈ ನಿಲಯದಲ್ಲಿ ನಿರ್ಮಿಸಿದ್ದಾರೆಂದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ಮನರಂಜನೆಗಾಗಿ, ಆಟ–ಪಾಠಗಳಿಗಾಗಿ ಎಲ್ಲ ತರವ ಯೋಗ್ಯ ಆಟದ ಹಾಗೂ ಓದುವ ಸಲಕರಣೆ ಒದಗಿಸಿಕೊಟ್ಟಿದ್ದಾರೆ. ಅಲ್ಲಿಯೇ ಒಂದು ಓದುಮನೆಯಿದ್ದು ಅಲ್ಲಿ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ವಿದ್ಯಾ ಯರ ಸೌಕರ್ಯಕ್ಕಾಗಿ ಇಡಲಾಗಿದೆ. ಇದಲ್ಲದೆ ಹೆಣ್ಣುಮಕ್ಕಳ ಕಲಾಭಿವೃದ್ಧಿಗೆ ಅನುಕೂಲತೆಗಳನ್ನೊದಗಿಸಿ ಕೊಡ ಒಂದು ಹೊಲಿಯುವ ಯಂತ್ರವಿದ್ದು, ಹೊಲಿಗೆಯ ಕಲೆಯನ್ನು ಪೂಜ್ಯ ಮಾತೋಶ್ರೀಯವರು ಹೇಳಿಕೊಡುತ್ತಾರೆ. ವಿದ್ಯಾರ್ಥಿನಿಯರಿಗೆ ಕಸೂತಿ, ಫ್ಯಾನ್ಸಿ ಡಿಝಾಯಿನ್, ಹೊಲಿಗೆಯ ತರತರದ ಪ್ರಕಾರಗಳು, ಕಾಗದ ಕೈಕೆಲಸ, ಉಲ್ಲ ಕಾಲುಚೀಲ, ಕೊರಳವಸ್ತ್ರ, ಸ್ವೇಟರ ಮೊದಲಾವುಗಳ ಹೆಣಿಗೆಯ ಕೆಲಸಗಳನ್ನು ಒಳ್ಳೇ ದಕ್ಷತೆಯಿಂದ ಹೇಳಿಕೊಡುತ್ತಾರೆ. ಈ ಸಂಚಾಲಿಕೆಯರು ನಮಗೆ ಅನೇಕ ಬಗೆಯಾದ ಕೈಕೆಲಸದ, ಕುಸುರಿನ ವಿದ್ಯೆಯನ್ನು ಹೇಳಿಕೊಟ್ಟು ನಮ್ಮಲ್ಲಿ ಬಾಳ ಹೆಚ್ಚಿನ ನಂಬಿಗೆಯನ್ನು ಹುಟ್ಟಿಸುತ್ತಿದ್ದಾರೆ. ಈ ವಿಷಯದಲ್ಲಿ ಅವರು ತಮ್ಮಲ್ಲಿದ್ದ ಎಲ್ಲ ವಿದ್ಯೆಯ ಸಂಪತ್ತನ್ನೂ ಸೂರೆ ತ್ತಿರುವದು ನಮ್ಮ ಪುಣ್ಯವೆಂದು ಭಾವಿಸುತ್ತೇವೆ.

ವಾರಕ್ಕೊಂದು ದಿನ ಈ ಪ್ರಸಾದ ನಿಲಯದಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಕೈಕೊಳ್ಳಲಾ ಚರ್ಚಾಕೂಟ, ವಚನಗಾಯನ, ವಚನಗಳಲ್ಲಿ ಸ್ಪರ್ಧೆ, ಶರಣ ಶರಣೆಯರ ಬಗೆಗೆ ಪ್ರವಚನ, ಸಮೀಪದ ರಮ್ಯಸ್ಥಳಗ ಐತಿಹಾಸಿಕ ಸ್ಥಳಗಳಿಗೂ ಚಿಕ್ಕ ಚಿಕ್ಕ ಪ್ರವಾಸ, ವನಭೋಜನ ಮುಂತಾದ ಉತ್ಸಾಹೀ ಕಾರ್ಯಕ್ರಮಗಳನ್ನು ಇಟ್ಟು ವಿದ್ಯಾರ್ಥಿನಿಯರಿಗೆ ಹೆಚ್ಚಿನ ಅನುಭವನ್ನು ಮಾಡಿಕೊಡಲಾಗುತ್ತದೆ. ಈ ಎಲ್ಲ ಕಾರ್ಯಕಲಾಪಗಳನ್ನು ನಮ್ಮ ವಿದ್ಯಾ ಯರಿಗಾಗಿ ನಡಿಸಿಕೊಂಡು ಹೋಗಲು ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಶ್ರೀಗಳು ತಮ್ಮ ಔದಾರ್ಯ ಕಳಕಳಿಯನ್ನೂ ತುಂಬಾ ವ್ಯಕ್ತಪಡಿಸುತ್ತಾರೆ. ಇದು ನಮ್ಮ ಭಾಗ್ಯವಲ್ಲದೆ ಮತ್ತೇನು ? ಹೀಗೆ ಪೂಜ್ಯಶ್ರೀಗಳು ವಾತ್ಸಲ್ಯಪೂರ್ಣರಾದ ತಂದೆ ತಾಯಿಗಳಾಗಿದ್ದಾರೆ. ಬುದ್ಧಿಯನ್ನು ಬೆಳಗುವ ಪ್ರತಿಭಾಪೂರ್ಣರಾದ ಗುರುಗಳಾಗಿ ಅವರಿಗೆ ನಾವು ತುಂಬು ಹೃದಯದಿಂದ ಕೃತಜ್ಞರಾಗಿದ್ದೇವೆ. ಪರಮಾತ್ಮನು ಅವರಿಗೆ ಸುಧೀರ್ಘವಾದ ಆಯುರಾರೋಗ್ಯ ದಯಪಾಲಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ಗೌರವ್ವ ಮ. ಪಾಟೀಲ
ವಿದ್ಯಾರ್ಥಿನಿಯು

ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಭಾವದ ಮರೆಯ ಬ್ರಹ್ಮನಾಗಿಪ್ಪ ಚೆನ್ನಮಲ್ಲಿಕಾರ್ಜುನನ
ನಿಲವನಾರು ಅರಿಯಬಾರದು.

— ಅಕ್ಕಮಹಾದೇವಿ

CC0. In Public Domain. Jangamwadi Math Collection, Varanasi

ಕರ್ಮಯೋಗಿ ಶಿವಯೋಗಿ

ನಾಗನೂರು ಬೆಳಗಾವ ಜಿಲ್ಹೆಯಲ್ಲಿಯ ಒಂದು ಹಳ್ಳಿ, ಬೈಲಹೊಂಗಲದ ಪಕ್ಕದಲ್ಲಿದೆ. ಅಲ್ಲಿಯ ಪರಿಸರ ವೀರರಸದ ಶಲು. ಕ್ಷಾತ್ರ–ತೇಜದ ಕಿರಣಗಳು ಇತಿಹಾಸದ ಪುಟಗಳಲ್ಲಿ ಅರುಣೋದಯದ ಹೊಂಬಣ್ಣದ ಕಿರಣಗಳಾಗಿವೆ. ಕಿತ್ತೂರಿನ ಳಗ, ಸ್ವಾತಂತ್ರ್ಯದ ವೀರ ಹೋರಾಟ, ಸಂಗೊಳ್ಳಿರಾಯನ ಸ್ವಾಮಿ ನಿಷ್ಠೆ, ಜನತೆಯ ದೇಶಪ್ರೇಮ, ಹಳ್ಳಿಗರ ವೀರ ಗೀತೆ ಳು, ಜನಪದ ಸಾಹಿತ್ಯ ಸೈಸರ್ಗಿಕ ಲಾವಣ್ಯ, ವನ ಸಿರಿ, ಬೆಳೆ-ಮಳೆ, ಎಲ್ಲವೂ ನಾಡಿನ ಸೊಬಗು. ಕೀರ್ತಿಯ ಕಳಸ, ನಾಡಿನ ರಿ, ಸಂಸ್ಕೃತಿ- ಸಾಹಿತ್ಯಗಳ ಸಂಗಮ. ನಾಗನೂರ ಹಳ್ಳಿ ಒಂದಾನೊಂದು ಕಾಲಕ್ಕೆ ಬಡಿದಾಟ, ಹೊಡೆದಾಟಕ್ಕೆ ಪ್ರಸಿದ್ಧಿ ಹೊಂದಿ, ಪ್ರವೃತ್ತಿ ಮಾರ್ಗದಲ್ಲಿತ್ತು. ಅದು ನಿವೃತ್ತಿ ಮಾರ್ಗವನನುಸರಿಸಿ, ಇಂದು ಆ ಹಳ್ಳಿಯ ಕೀರ್ತಿ, ಪ್ರಸಿದ್ಧಿ ದಿಲ್ಲಿಯ ಭೋಮಂಡಲದಲ್ಲಿ ಸುಳಿ ಸುಳಿದಾಡಲು ನಾಗನೂರ ಸಿದ್ಧಬಸವ ಶಿವಯೋಗಿಗಳ ನಿರಂತರ ಶ್ರಮ. ಚಿರಂತನ ಚಿಂತೆ ನಾಡಿನ ಲ್ಯಾಣಕಾರ್ಯ ನಿರತೆ, ಇವೆಲ್ಲವುಗಳ ಫಲಸಿದ್ಧಿಯೇ ಅವರ ನಭೋ ಮಂಡಲಸ್ಥ ಕೀರ್ತಿಧ್ವಜ. ಬೇಡಿ ಬಯಸಿ, ಕೀರ್ತಿಲಾಲ ಗಾಗಿ ಶ್ರೀಗಳವರು ದುಡಿದಿಲ್ಲ. ದುಡಿಯುತ್ತಿಲ್ಲ. ೧೯೩೨ ನೆಯ ವರ್ಷದಲ್ಲಿ ಶ್ರೀಗಳವರು ಬೆಳಗಾವಿ ಕೋಟೆಯಲ್ಲಿ ಕೇವಲ ಜ ವಿದ್ಯಾರ್ಥಿಗಳನ್ನು ಕರೆಯಿಸಿ, ಕೂಡಿಸಿ ಪ್ರಾರಂಭಿಸಿದ ಪ್ರಸಾದ–ನಿಲಯವು ಇಂದು ಇಷ್ಟೊಂದು ಬೃಹತ್ ರೂಪ ತಾಳಿ, ೀರ್ತಿ ಕಲಶವನ್ನು ಸಾಧಿಸುವದೆಂದು ಯಾರೂ ಅರಿತಿರಲಿಲ್ಲ. ಭಾವಿಸಿರಲಿಲ್ಲ. ಇದಕ್ಕೆ ಮೂಲ ಕಾರಣವೆಂದರೆ ಶ್ರೀಗಳವರ ಮೌನ ತಪಸ್ಸು. ಆ ಮೂಲಕ ಸಾಧಿಸಿದ ಸಿದ್ಧಿ. ಶ್ರೀಗಳವರು ಕನ್ನಡ ನಾಡಿನ ಕಾರಣ ಪುರುಷರು. ಶ್ರೇಷ್ಠ ಶಿವಯೋಗಿಗಳು ಸಲ ಸಾಧಕ ಸಿದ್ಧರು. ಕಾಯಕದಲ್ಲಿ ನಿರತರಾದರೆ, ಗುರುಲಿಂಗ ಜಂಗಮರನ್ನು ಮರೆಯುವ ಶರಣರು. ಸತತೋದ್ಯೋಗದಲ್ಲಿ ರ್ಗ್ಗವನ್ನು ಕಟ್ಟುವ ಕಾರಣ ಪುರುಷರು. ಶ್ರೀಗಳವರಿಗೆ ಮಾತು ಬೆಳ್ಳಿ, ಮೌನ ಬಂಗಾರ. ಮಕ್ಕಳ ಚಿಂತೆಯೇ ಅವರ ಚಿಂತೆ; ಶ್ರೀಗಳವರು ಎಂದೂ ಮುನಿದಿಲ್ಲ. ಎಳ್ಳಷ್ಟೂ ಮುನಿದಿಲ್ಲ. ಯಾರನ್ನೂ ಹಳಿದಿಲ್ಲ. ಎಂದೆಂದಿಗೂ ಯಾರಿಗೂ ದಿರು ಹಳಿದಿಲ್ಲ. ತಮ್ಮನ್ನು ಬಣ್ಣಿಸಿಕೊಂಡಿಲ್ಲ. ಅನ್ಯರಿಗೆ ಅಸಹ್ಯಪಟ್ಟಿಲ್ಲ. ಅಂತೆಯೇ ಅವರು ನಿಜವಾದ ಶಿವಯೋಗಿಗಳು. ಕಾಯಕ ಜೀವಿಗಳು. ಇದೂ ಶಿವನ ಪರಾವತಾರವೆಂದೇ ಹೇಳಬಹುದು. ಅವರ ಎಸಗಿದ ಕಾರ್ಯ ನೂತನ ಪವಾಡ. ಮುಂದಿನ ಪೀಳಿಗೆಗೆ ಮಹಾ ಕಲ್ಯಾಣ. ಮಾನವ ಕರ್ತವ್ಯ ಸಂದೇಶ ಕಲ್ಯಾಣ ರಾಜ್ಯವನ್ನು ಧರ್ಮರಾಜ್ಯವನ್ನಾಗಿ ಮಾಡಿದ ಶ್ರೇಯ ಬಸವಣ್ಣನವರಿಗೆ ಹೇಗೆ ಸಲ್ಲುವದೋ, ಅಷ್ಟೇ ಶ್ರೇಯ, ಶ್ರೀಗಳವರಿಗೆ ಸಲ್ಲುವದು. ಶ್ರೀಗಳು ಬಸವಣ್ಣನವರ ಜೀವನ ದಲ್ಲಿಯ ಅಂಶಗಳನ್ನು ಅಳವಡಿಸಿಕೊಂಡು ಚಾಚೂ ತಪ್ಪದೆ ಅನುಸರಿಸಿ, ನಾಡಿನ ಭಾಗ್ಯೋದಯದ ಕಾರಣ--ಪುರುಷರಾದದು, ಕನ್ನಡಿಗರ ಸಂಪದ್ಯುಕ್ತ ಜೀವನಕ್ಕೆ ಪ್ರೇರಕ, ಪೋಷಕ.

" ಸತ್ಯಂ ಶಿವಂ ಸುಂದರಂ "

ಪ್ರೊ. ವೀರೇಶ ರಾ. ಹಿರೇಮಠ M. A.
ಶಿಕ್ಷಣ ಸಂಯೋಜನಾಧಿಕಾರಿ, ಬೆಳಗಾವ

ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡು ದರುಶನ ಮುಕ್ತಿಗೆ
ನಿಲವೊಂದೆ, ಕೂಡಲಸಂಗಮದೇವಾ
ನಿಮ್ಮನರಿದಂಗೆ
—ಬಸವಣ್ಣ

Digitization by eGangotri and Sarayu Trust. Funding by MoE-IKS

“ ಅನ್ನದಾನಕ್ಕಿಂತ ಇನ್ನು ದಾನಗಳಿಲ್ಲ ! ”

ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯಾಗಬೇಕಾದರೆ ಆತನಿಗೆ ವಿದ್ಯೆ ಅತ್ಯವಶ್ಯಕ, ಆದಕ್ಕೆಂದೇ “ ವಿದ್ಯೆ ಇ... ದವನು ಹದ್ದಿಗಿಂತ ಕಡೆ ” ಎಂದು ಹೇಳುವದುಂಟು. ಅದರಲ್ಲೂ ಪ್ರಜಾ ಪ್ರಭುತ್ವದ ಯಶಸ್ಸಿಗೆ ಶಿಕ್ಷಣದ ಕೊಡುಗೆ ಸಣ್ಣದಲ್ಲ ಮನುಷ್ಯ ಸುಶಿಕ್ಷಿತನಾಗಿ, ಸುಸಂಸ್ಕೃತನಾಗಿ ಬಾಳಿದಾಗ ಮಾತ್ರ ಒಂದು ಸಮಾಜದ ಹಿರಿಮೆ ಹೆಚ್ಚುತ್ತದೆ. ಆದರೆ ನಮ್ಮ ದೇ... ದಲ್ಲಿ ಇಂದಿಗೂ ಮುಕ್ಕಾಲು ಪಾಲು ಜನರು ನಿರಕ್ಷರಿಗಳಾಗಿರುವರೆಂಬ ಸಂಗತಿಯನ್ನು ನಾವು ಅಲ್ಲಗಳೆಯಲು ಬರುವದಿಲ್ಲ. ಇದಕ್ಕೆ ಮುಖ್ಯ ಕಾರಣ ಬಡತನ. ಇಂಥ ಪರಿಸ್ಥಿತಿಯಲ್ಲಿ, ವಿದ್ಯಾಪ್ರೇಮ ಪ್ರೇರಿತರಾಗಿ, ನಿಸ್ಪೃಹಬುದ್ಧಿಯಿಂದ ಸಮಾ... ಸೇವೆಯನ್ನು ಎಲೆಮರೆಯ ಹೂವಿನಂತೆ ಸಾಗಿಸಿಕೊಂಡು ಹೋಗುತ್ತಿರುವ ಪುಣ್ಯ ಜೀವಿಗಳ ನೆನಪು ಆಗದಿರದು. ವಿದ್ಯಾರ್ಥಿ... ಗಳ ಸಲುವಾಗಿ ಉಚಿತ ಪ್ರಸಾದ ನಿಲಯಗಳನ್ನು ನಡೆಸಿಕೊಂಡು ಹೋಗುತ್ತಿರುವ ಕೆಲವು ವ್ಯಕ್ತಿಗಳು ಕೇವಲ ವ್ಯಕ್ತಿಗಳಾ... ರದೇ, ಸಮಾಜದ ಶಕ್ತಿಗಳಾಗಿದ್ದಾರೆ. ಇಂಥ ಪ್ರಾತಃಸ್ಮರಣೀಯ ದಾಸೋಹ ಮೂರ್ತಿಗಳಲ್ಲಿ ಧಾರವಾಡದ ಲಿಂಗೈಕ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಹಾಗು ಬೆಳಗಾವಿಯ ಶ್ರೀ ನಾಗನೂರ ಶಿವಬಸವಸ್ವಾಮಿಗಳು ಪ್ರಮುಖರು.

ನಾವು ಇಂದು ಅನೇಕ ಮಠಾಧಿಪತಿಗಳನ್ನು ನೋಡುತ್ತೇವೆ. ರಾಜಕಾರಣಿ ಸ್ವಾಮಿಗಳು. ವಿಲಾಸಿ ಸ್ವಾಮಿಗಳು, ‘ ಪ್ರಣಯಸ್ವರೂಪಿ ’ ಸ್ವಾಮಿಗಳು ಇವರೇ ಹೆಚ್ಚಾಗಿರುವ ಈ ಕಾಲದಲ್ಲಿ ಶ್ರೀ ಶಿವಬಸವ ಸ್ವಾಮೀಜಿಯವರಂಥ ಕರ್ಮಯೋಗಿಗಳು ಇನ್ನೂ ಸಿಗುತ್ತಾರೆಂಬುದೇ ನಮಗೊಂದು ಸಮಾಧಾನ, ಸಂತೋಷ. ಅವರು ಇಂದು ಬೆಳಗಾವಿಯಲ್ಲಿ ನಡೆಸುತ್ತಿರುವ ಪ್ರಸಾದ ನಿಲಯ ಅವರ ಘನತೆ, ಸೇವಾಬುದ್ಧಿಗಳ ಸುಂದರ ಸಂಕೇತವಾಗಿದೆ. ಸ್ವಾಮೀಜಿಯವರ ಅನಂತ ಕರ್ತೃತ್ವ ಶಕ್ತಿಯ ಬಗೆಗೆ ನಾನು ಸಾಕಷ್ಟು ಕೇಳಿದ್ದೇನೆ. ಅವರ ಸಾಧನೆಯ ಬಗೆಗೆ ಸಾಕಷ್ಟು ಅರಿತಿದ್ದೇನೆ. ಜಾತಿಮತಗಳ ಭೇದ ಭಾವವಿಲ್ಲದೆ ಸರ್ವರಿಗೂ ಶುಭಾಶೀರ್ವಾದವೀಯುವ ಸಮತಾಭಾವಿ ಶ್ರೀಗಳವರ ಪ್ರಸಾದ ನಿಲಯವು ಜನರ ಗೌರವಕ್ಕೆ ಪಾತ್ರವಾಗಿರುವದು ಸಹಜವೇ ! ಅನ್ನದಾನದ ಮೂಲಕ ವಿದ್ಯಾದಾನ ಮಾಡುತ್ತಿರುವ ಇಂಥ ಸಂಸ್ಥೆಗಳು ಎಷ್ಟಿದ್ದರೂ ಕಡಿಮೆಯೇ, ಅದರಲ್ಲೂ ‘ ಕಾಯಕವೇ ಕೈಲಾಸ ’ ಎಂದು ನಂಬಿ ಅದರಂತೆ ನಡೆಯುತ್ತಿರುವ ಪ್ರಸಾದನಿಲಯದ ಮಹಾತಪಸ್ವಿ ಶ್ರೀ ನಾಗನೂರ ಮಹಾಸ್ವಾಮಿಗಳು ಸಮಾಜಕ್ಕೆ ಭೂಷಣ ಪ್ರಾಯರು. ಒಂದು ಘನ ಉದ್ದೇಶಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿರುವ ಶ್ರೀ ಶಿವಬಸವ ಸ್ವಾಮೀಜಿಯವರಿಗೆ ದೀರ್ಘಾಯುರಾರೋಗ್ಯವನ್ನು ಕೋರಿ, ಅವರ ಉದಾತ್ತ ಕಾರ್ಯ ಎಂದಿನಂತೆ ಮುಂದೆಯೂ ನಿರ್ವಿಘ್ನವಾಗಿ ಸಾಗಬೇಕಾಗಿ ಮಹೇಶನಲ್ಲಿ ಪ್ರಾರ್ಥನೆ.

— ಪ್ರೊ. ಆರ್. ವಿ. ಹೊರಡಿ

ಹಾಲು ತುಪ್ಪವ ನುಂಗಿ ಬೇರಾಗಬಲ್ಲದೆ ?
ಸೂರ್ಯಕಾಂತಿಯಲ್ಲಿದ್ದಗ್ನಿಯ ಭೇದಿಸಬಲ್ಲರಾರು ?
ಅಪಾರಮಹಿಮ ಚೆನ್ನಮಲ್ಲಿಕಾರ್ಜುನಾ
ನೀನೆನ್ನೊಳಡಗಿರ್ದ ಪರಿಯ
ಬೇರಿಲ್ಲದೆ ಕಂಡು ಕಣ್ದೆರೆದೆ.

— ಅಕ್ಕ ಮಹಾದೇವಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಡ ವಿದ್ಯಾರ್ಥಿಗಳ ಸುರತರು

ಪೂಜ್ಯ ಶಿವಬಸವಸ್ವಾಮಿಗಳು ನಾಗನೂರು

ಪ್ರಪಂಚದಲ್ಲಿ ಮೂರು ವರ್ಗದ ಜನರಿರುವರು. ಅವರೆಂದರೆ, the will's, the wont's ಮತ್ತು the cant's. ಮೊದಲ ವರ್ಗಕ್ಕೆ ಸೇರಿದವರು ಕೈಗೆತ್ತಿಕೊಂಡ ಎಲ್ಲ ಕೆಲಸಗಳನ್ನು ಸುಲಭವಾಗಿ ಪೂರೈಸುವರು. ಎರಡನೆಯ ವರ್ಗಕ್ಕೆ ಸೇರಿದವರು ಎಲ್ಲವನ್ನೂ ವಿರೋಧಿಸುವರು. ಮೂರನೆಯ ವರ್ಗಕ್ಕೆ ಸೇರಿದವರು ಯಾವುದರಲ್ಲಿಯೂ ಯಶಸ್ಸು ಸಂಪಾದಿಸರು. ಪೂಜ್ಯ ಶಿವಬಸವ ಸ್ವಾಮಿಗಳು ನಾಗನೂರ ಅವರು ಪ್ರಥಮ ವರ್ಗದ ಜನರ ಮಾಲಿಕೆಯಲ್ಲಿ ಬರುವರು. ಪ್ರಸಾದ ನಿಲಯವನ್ನು ಸ್ಥಾಪಿಸಿ, ವಿದ್ಯಾರ್ಜನೆಯ ಹಂಬಲವಿರುವ ಬಡ ವಿದ್ಯಾರ್ಥಿಗಳಿಗೆ ಬೆಳಗಾವಿಯಲ್ಲಿ ಅಶನ-ಆಶ್ರಯಗಳ ಅನುಕೂಲತೆಗಳನ್ನು ಮಾಡಿಕೊಡುವ ವಿಚಾರವು ಅವರಲ್ಲಿ ಯಾವಾಗ ಯಾವ ಸಂದರ್ಭದಲ್ಲಿ ಅಂಕುರಿಸಿತೆಂಬುದು ಗೊತ್ತಿಲ್ಲದಿದ್ದರೂ ೧೯೩೩ ರಿಂದ ನಡೆಯಿಸಿಕೊಂಡು ಬಂದಿರುವ ಈ ಪ್ರಸಾದ ನಿಲಯವು ಮರವಾಗಿ ಫಲಿಸಿ ಆಶಿಸಿದ ಫಲಗಳನ್ನು ನೀಡುತ್ತಲಿರುವದು. ನಿಲಯದ ಬೆಳವಣಿಗೆಗಾಗಿ ಅವರು ಮಾಡಿದ ತ್ಯಾಗ, ಪ್ರಯತ್ನ ಮತ್ತು ಪಟ್ಟ ಕಷ್ಟ-ನಷ್ಟಗಳು ಸಹಜ ಮಾನವ ಪ್ರವೃತ್ತಿಗೆ ನಿಲುಕದಂತಹವುಗಳು. ಸಾರ್ವಜನಿಕ ಜೀವನಕ್ಕಾಗಿ ತಮ್ಮ ವೈಯಕ್ತಿಕ ಜೀವನದ ತ್ಯಾಗಮಾಡಿದರು. ಅವರಲ್ಲಿರುವ ಕರ್ತೃತ್ವ ಶಕ್ತಿಯು ಅಸಾಮಾನ್ಯವಾದುದು. ಅಂತೆಯೇ ನಿಲಯವನ್ನು ಸ್ಥಾಪಿಸಿ, ಬೆಳೆಯಿಸಿ ನಡೆಯಿಸಿಕೊಂಡು ಬರುವದು, ಅವರಿಂದ ಸಾಧ್ಯವಾಯಿತು. ಅಂದು ವಿದ್ಯಾರ್ಜನೆಯು ಕೇವಲ ಶ್ರೀಮಂತ ಮಕ್ಕಳ ಮತ್ತು ಪಟ್ಟಣಿಗರ ಸೊತ್ತಾಗಿತ್ತು. ಈಗಿನಂತೆ ಆಗ ಮಾಧ್ಯಮಿಕ ಶಾಲೆಗಳೂ ಬಹಳವಿದ್ದಿಲ್ಲವಾದ್ದರಿಂದ ಬಹುಜನ ವಿದ್ಯಾರ್ಥಿಗಳು ಮಾಧ್ಯಮಿಕ ಹಾಗೂ ಕಾಲೇಜ ವಿದ್ಯಾಭ್ಯಾಸಕ್ಕಾಗಿ ಬೆಳಗಾವಿಗೆಯೇ ಬರಬೇಕಾಗುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಪೂಜ್ಯ ಸ್ವಾಮಿಗಳವರು ಗ್ರಾಮಾಂತರ ಪ್ರದೇಶಗಳಲ್ಲಿರುವ ವಿದ್ಯಾರ್ಜನೆಯ ಹಂಬಲವಿರುವ ಬಡ ವಿದ್ಯಾರ್ಥಿಗಳನ್ನು ಕಂಡು, ಅರಿತು, ಅವರ ವಿದ್ಯಾಭ್ಯಾಸಕ್ಕೆ ಮೂಲತಃ ಆವಶ್ಯಕಗಳಾದ ಅಶನ ಮತ್ತು ಆಶ್ರಯಗಳ ಅನುಕೂಲತೆಯನ್ನು ಮಾಡಿಕೊಟ್ಟು ಬಡ ವಿದ್ಯಾರ್ಥಿಗಳ ಸುರತರುವಾಗಿರುವರು. ಅಶನ-ಆಶ್ರಯಗಳ ಅನುಕೂಲತೆಯನ್ನು ಕೇವಲ ವೀರಶೈವ ವಿದ್ಯಾರ್ಥಿಗಳಿಗೆ ಸ್ಥಿಮಿತಗೊಳಿಸದೆ ವಿದ್ಯಾರ್ಜನೆಯ ಹಂಬಲವಿರುವ ಯಾವದೇ ಮತದ ಮತ್ತು ಭಾಷೆಯ ಬಡ ವಿದ್ಯಾರ್ಥಿಗೆ ನಿಲಯದ ಪ್ರವೇಶ ದ್ವಾರವನ್ನು ತೆರೆದಿರಿಸಿದರು. ಇಂದಾದರೂ ನಾವು ಎಲ್ಲ ಮತದ ಮತ್ತು ಭಾಷೆಯ ವಿದ್ಯಾರ್ಥಿಗಳನ್ನು ನಿಲಯದಲ್ಲಿ ಕಾಣುತ್ತೇವೆ. ಬಡ ವಿದ್ಯಾರ್ಥಿಗಳು ಯಾವದೇ ಮತದವರಿರಲಿ, ಯಾವದೇ ಭಾಷೆಯವರಿರಲಿ ಸರಸ್ವತಿ ಮಂದಿರದಲ್ಲಿ ಹೇಗೆ ಪ್ರವೇಶ ಪಡೆಯುವರೋ ಹಾಗೆಯೇ ನಿಲಯದಲ್ಲಿ ಅವರಿಗೆ ಪ್ರವೇಶ ಸಿಗಬೇಕೆಂಬುದು ಸ್ವಾಮಿಗಳವರ ಮತ. ಸಹಜೀವನದಿಂದ ನಮ್ಮಲ್ಲಿರುವ ಅಂತರವು ಕಡಿಮೆಯಾಗಿ ಇಂದಿನ ವಿದ್ಯಾರ್ಥಿಗಳು ಭಾವೀ ಭಾರತದ ನಿಜವಾದ ನಾಗರಿಕರಾಗುವರೆಂದು ಅವರು ದೇಶಕ್ಕೆ ಸ್ವಾತಂತ್ರ್ಯ ಸಿಗುವ ಪೂರ್ವದಲ್ಲಿಯೂ ಹೇಳುತ್ತಿದ್ದರು.

ನಿಲಯವು ಸುವ್ಯವಸ್ಥಿತ ರೀತಿಯಲ್ಲಿ ನಡೆಯಬೇಕಾದರೆ, ಅದಕ್ಕೆ ಹಣದ ಧಾನ್ಯಾದಿಗಳ ಸಂಗ್ರಹಮಾಡುವದು ಅವಶ್ಯವಾಗಿತ್ತು. ತಾವು ಅಧಿಕಾರ ವಹಿಸಿಕೊಂಡ ಮಠದಿಂದ ಎಲ್ಲ ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಸಹಾಯ ಸಿಗುವಂತಿರಲಿಲ್ಲ. ಆ ಮಠದ ಉತ್ಪನ್ನವಾದರೂ ಅಷ್ಟಕ್ಕಷ್ಟೇ ಇತ್ತು. ಸಂಗ್ರಹ ಕಾರ್ಯಕ್ಕಾಗಿ ಸ್ವಾಮಿಗಳವರು ಊರಿಂದೂರಿಗೆ, ಮನೆಯಿಂದ ಮನೆಗೆ ಹೋಗದೆ ಅನ್ಯ ಮಾರ್ಗವೇ ಇರಲಿಲ್ಲ. ಅವರು ಹೋದೆಡೆಯಲ್ಲಿ ಸಮಾಜದ ಹಿರಿಯರು ಅವರನ್ನು ಸ್ವಾಗತಿಸಿ, ತಮ್ಮಿಂದಾದ ಸಹಾಯವನ್ನು ನೀಡುತ್ತ ಬಂದಿರುವರು. ಅದೆಷ್ಟೋ ಹಳ್ಳಿಗಳಲ್ಲಿ ಅಸಹಕಾರದ ಕಟು ಅನುಭವವನ್ನು ಅನುಭವಿಸಿದ್ದಾರೆ. ಕೆಲವು ಸಲ ಪೂಜೆ-ಪ್ರಸಾದಕ್ಕೆ ಅನುಕೂಲವಾಗದೆ ಉಪವಾಸ ಕೂಡ ಬಂದಿರುವರು. ಆದರೂ ತಮ್ಮ ಕಾರ್ಯದಲ್ಲಿ ಯಾವ ಅನಾಸ್ಥೆಯನ್ನೂ ತಾಳದೆ ಆಶಾವಾದಿಗಳಾಗಿ ಕಾರ್ಯವನ್ನು ಎಡೆಬಿಡದೆ ಪೂರೈಸುತ್ತಲೇ ಬಂದಿರುವರು. ಅವರ ದೃಢ ಸಂಕಲ್ಪ ಮತ್ತು ನಿರ್ಧಾರಗಳ ಫಲವಾಗಿಯೇ ತೊರೆಯ ರೂಪದಲ್ಲಿ ಪ್ರಾರಂಭವಾದ ನಿಲಯವು ಸಾಗರವಾಗಿ ಪರಿಣಮಿಸಿದೆ. ಜನರು ಒಳ್ಳೆಯವರು. "ನಾವು ಮಾಡುವ ಕೆಲಸವು ಯೋಗ್ಯವಾಗಿದೆಯೆಂದು ಅವರಿಗೆ ಅನಿಸಿದರೆ ನಮ್ಮ ನಿರೀಕ್ಷಣೆಗಿಂತಲೂ ಹೆಚ್ಚಾಗಿ ಕೊಡುವರು" ಎಂದು ಉದ್ಗಾರತೆಗೆಯುವರು. ನಿಲಯಕ್ಕೆ ಶಾಶ್ವತವಾದ ಆಸ್ತಿಯೊಂದು ಬೇಕು ಎಂದು ವಿಚಾರಿಸಿ, ಬೆಲೆಬಾಳುವ ಭೂಮಿ ಮತ್ತು ಇಮಾರತುಗಳನ್ನು ಸುಮಾರು ೭ ಲಕ್ಷ (ಹಳೆಯ ಮತ್ತು ಹೊಸ ಕಟ್ಟಡಗಳನ್ನು ಬಿಟ್ಟು) ದಾನವಾಗಿ ಮತ್ತು ಬೆಲೆಕೊಟ್ಟು ಕೊಂಡು ಸಂಗ್ರಹಿಸಿರುವರು. ಅದನ್ನು ೧೦ ಲಕ್ಷಕ್ಕೆ ಏರಿಸುವ ವಿಚಾರವನ್ನು ಸ್ವಾಮಿಗಳವರು ಮಾಡಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವರುಷ ವರುಷಕ್ಕೆ ನಿಲಯದ ಪ್ರವೇಶ ಬಯಸುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗತೊಡಗಿದ್ದರಿಂದ ಬಾಡಿಗೆ ಇಮಾರತುಗಳನ್ನು ತೊರೆದು, ಸ್ವಂತದ ಶಾಶ್ವತವಾದ ಇಮಾರತುಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡರು. ಮಾರು ಓಣಿಯಲ್ಲಿ ಪ್ರಥಮತಃ ಒಂದು ಹಳೆಯ ಇಮಾರತನ್ನು ಕೊಂಡರು. ಅಲ್ಲಿಯೆ ಶಾಶ್ವತವಾದ ಹೊಸಕಟ್ಟಡವನ್ನು ನಿರ್ಮಿಸು ಕನಸು ಕಂಡು ಇಂಜನಿಯರರಿಗೆ ಕಟ್ಟಡ ನಕ್ಷೆ ಮತ್ತು ಅಂದಾಜು ತಯಾರಿಸಲು ಹೇಳಿದರು. ನಕ್ಷೆ ತಯಾರಾಯಿತು ಅಂದಾ ಖರ್ಚು ೧ ಲಕ್ಷ ೨೫ ಸಾವಿರ ರೂಪಾಯಿ ಎಂದು ಆಗಿತ್ತು. "ಇಂಜನಿಯರರು ಎಷ್ಟು ಹಣ ತಮ್ಮಲ್ಲಿದೆ ?" ಎಂದು ಕೇಳಿದಾ ಸ್ವಾಮಿಗಳು ಐದು ಸಾವಿರ ಎಂದು ನಗುತ್ತ ಹೇಳಿದರು. " ಇಷ್ಟರಿಂದ ಹೊಸ ಕಟ್ಟಡ ಹೇಗಾಗುವದು " ಎಂದು ಇಂಜನಿಯ ಅಂದಾಗ, ಸ್ವಾಮಿಗಳವರು " ದೇವರಿದ್ದಾನೆ ಸಹಾಯ ಮಾಡುವವನು " ಎಂದು ಆಶಾಭಾವ ತಳೆದು ಕಾರ್ಯವನ್ನು ಕೈಗೆ ಕೊಂಡರು. ಕಟ್ಟಡದ ನಿಧಿ ಸಂಗ್ರಹ ಪ್ರಾರಂಭವಾಯಿತು. ಸಮಾಜದ ಎಲ್ಲ ಪ್ರತಿಯ ಜನರನ್ನು ಧನಸಹಾಯ ಮಾಡಿರೆಂ ಕೇಳಿದಾಗ, ಈ ಮೊದಲೇ ಸ್ವಾಮಿಗಳು ಮಾಡುತ್ತಿರುವ ಘನವಾದ ಸತ್ಕಾರ್ಯವನ್ನು ಕಂಡು ಮೆಚ್ಚಿದ ಸಮಾಜಸ್ಥರು, ಮುಕ್ತ ಹಸ್ತದ ಸಹಾಯ ಮಾಡಿದರು. ಅಂತೆಯೇ ಆವಾಗ್ಯೆ ಸುಮಾರು ೧॥ ಲಕ್ಷ ರೂಪಾಯಿ ವೆಚ್ಚದಿಂದ ಕಟ್ಟಡವು ಮಾರುತಿ ಓ ಯಲ್ಲಿ ಸಿದ್ಧವಾಯಿತು. ಒಂದು ಸಲ ಈ ಕಟ್ಟಡದ ಮಾತು ಬಂದಾಗ ಇಂಜನಿಯರರು ನಕ್ಕಷ್ಟನ್ನು ಹೇಳಿ, ತಮ್ಮ ಹತ್ತರವಿದ್ದ ೫ ಸಾವಿರ ರೂಪಾಯಿಗಳು ಹಾಗೇ ಉಳಿದವು. ಆದರೆ ಇಮಾರತು ತಯಾರಾಯಿತೆಂದು ಹೇಳಿದರು. ಇಷ್ಟರಿಂದಲೂ ಸಮಾಧಾ ಪಡದೆ ಇದಕ್ಕೂ ಉತ್ತಮವಾದ ಆಧುನಿಕ ಸೌಕರ್ಯಗಳಿಂದ ಸುಸಜ್ಜಿತವಾದ ಕಟ್ಟಡದ ಕನಸನ್ನು ಕಂಡು, ಊರ ಹೊ ೫ ಎಕರೆ ಭೂಮಿಯನ್ನು ಸರಕಾರದಿಂದ ಪಡೆದರು. ಈ ಭೂಮಿ ಸಿಗಬೇಕಾದರೆ ಬಹಳ ತೊಂದರೆಯಾಯಿತು. ಹೊ ಕಟ್ಟಡದ ನಕ್ಷೆ ಹಾಗೂ ಅಂದಾಜು ಖರ್ಚುಗಳು ಸಿದ್ಧವಾದವು. ಅಂದಾಜು ಖರ್ಚು ೭ ಲಕ್ಷ ರೂ. ಎಂದು ಇಂಜನಿಯರರು ಹೇ ದಾಗ ಸ್ವಾಮಿಗಳವರು ಅಧೈರ್ಯರಾಗದೆ ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಇಂದು ಅದರ ಉದ್ಘಾಟನಾ ಸಮಾರಂಭದಲ್ಲಿ ಪಾಲುಗೊಳ್ಳುತ್ತಿದ್ದೇವೆ. "ಇಷ್ಟು ಹಣ ಹೇಗೆ ಕೂಡಿತು" ಎಂದು ಒಂದು ಸಲ ಸಹಜ ಕೇಳಿದಾಗ ಅವರು " ನಾನು ಕೂಡಿಸಲಿಲ್ಲ ದೇವರೇ ಕೂಡಿಸಿಕೊಟ್ಟನು. " ಎಂದು ದೇವರಲ್ಲಿ ತಮಗಿರುವ ಅಚಲ ಭಕ್ತಿಯನ್ನು ವ್ಯಕ್ತಪಡಿಸಿದರು. ದೇವರ ಮೇಲೆ ಭಾರಹಾಕಿ ನಿರಪೇಕ್ಷ ಬುದ್ಧಿಯಿಂದ ಕಾರ್ಯಮಾಡಿದರೆ ಎಂಥ ಕಾರ್ಯವನ್ನೂ ನಾವು ಮಾಡಬಲ್ಲೆವು ಎಂಬುದು ಅವರ ದೃಢ ವಿಶ್ವಾಸ.

ಈ ವರೆಗೆ ಸ್ವಾಮಿಗಳವರು ಎಲ್ಲ ಕನಸುಗಳನ್ನು ನನಸನ್ನಾಗಿ ಮಾಡಿದ್ದರೂ, ಅವರು ಇನ್ನೂ ಕನಸುಣಿಗಳಾಗಿದ್ದಾರೆ. ಈಗ ನಿಲಯದಲ್ಲಿದ್ದ ವ್ಯವಸ್ಥೆಯಲ್ಲಿ ಇನ್ನೂ ಸುಧಾರಣೆಯಾಗಬೇಕು. ಜಾಣ ವಿದ್ಯಾರ್ಥಿಗಳಿಗೆ ಅನ್ನ-ಆಶ್ರಯದ ಅನುಕೂಲತೆ ಗಳೊಂದಿಗೆ ಸ್ಕಾಲರಶಿಪ್ ಕೊಡುವ ಅವರ ಉಚ್ಚ ವಿದ್ಯಾಭ್ಯಾಸಕ್ಕೆ ಮತ್ತು ಪರದೇಶ ಪ್ರವಾಸಕ್ಕೆ ಧನ ಸಹಾಯ ಒದಗಿ ಬೇಕೆಂಬುದು ಅವರ ವಿಚಾರ. ವಿದ್ಯಾರ್ಥಿಗಳಿಗೊಂದು ಮತ್ತು ವಿದ್ಯಾರ್ಥಿನಿಯರಿಗೊಂದು ಪ್ರತ್ಯೇಕವಾದ ಎರಡು ಹಾಯಸ್ಕೂಲ ಗಳು, ಒಂದು ಕಾಲೇಜ ಇವು ಅವರ ಇತ್ತೀಚಿನ ಕನಸಿನ ಕೂಸುಗಳಾಗಿವೆ. ಸಮಾಜ ಬಾಂಧವರು ಈ ಮೊದಲಿನಂತೆ ಸಹಾಯ ಹಸ್ತವನ್ನು ನೀಡಿದರೆ ಈ ಕನಸಿನ ಕೂಸುಗಳು ಸುಲಭವಾಗಿ ಬೆಳೆಯುತ್ತವೆ.

ಸ್ವಾಮಿಗಳವರ ಕೂಡ ಮಾತನಾಡುವಾಗ ಅವರಲ್ಲಿರುವ ನಿರಪೇಕ್ಷಾಭಾವ ಅವರ ಪ್ರತಿ ಮಾತಿನಲ್ಲಿಯೂ ಕಂಡು ಬರುವದು. ಒಂದು ಸಲ ಒಬ್ಬರು ಹಿರಿಯರು ಸ್ವಾಮಿಗಳವರಿಗೆ, ಪ್ರತಿ ವರುಷ ನಿಲಯದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ ಗಳಿಂದ, ಅವರು ವಿದ್ಯಾಭ್ಯಾಸ ಮುಗಿಯಿಸಿಕೊಂಡು ಹೊರಗೆ ಹೋಗುವಾಗ, ಅವರಿಂದ ಲಿಖಿತದಲ್ಲಿ "ಪ್ರತಿ ವರುಷ ಇಂತಿಷ್ಟು ಹಣಕೊಡುತ್ತ ಹೋಗುತ್ತೇನೆಂದು" ಬರೆಯಿಸಿಕೊಳ್ಳೋಣವೆಂದು ಸೂಚಿದರು. ಆಗ ಸ್ವಾಮಿಗಳವರು ಊಟ-ವಸತಿಯ ಅನುಕೂಲತೆಗಳನ್ನು ಮಾಡಿಕೊಟ್ಟದ್ದಕ್ಕೆ ಪ್ರತಿಯಾಗಿ " ಅವರಿಂದ ಹಣವನ್ನು ತೆಗೆದುಕೊಳ್ಳುವದು ಅಲ್ಲದ ಕೆಲಸ. ಇದಕೆ ನಾನು ಒಪ್ಪಲಾರೆ" ಎಂದು ಹೇಳಿದರು. ಸಾವಿರಾರು ವಿದ್ಯಾರ್ಥಿಗಳು ನಿಲಯದಲ್ಲಿ ಇದ್ದುಕೊಂಡು ಕಲಿತು, ಈಗ ಸಣ್ಣ-ದೊಡ್ಡ ಅಧಿಕಾರದ ಹುದ್ದೆಗಳಲ್ಲಿ ಇರುವರು. ಆದರಿಂದ ಸ್ವಾಮಿಗಳವರು ಎಂದೂ ಹಣವನ್ನು ಅಪೇಕ್ಷಿಸಿಲ್ಲ. ಇಂಥ ಹಳೆಯ ವಿದ್ಯಾರ್ಥಿ ಗಳು ಬಂದು ದರ್ಶನ ತೆಗೆದುಕೊಂಡಾಗ ಅವರ ಯೋಗಕ್ಷೇಮಗಳನ್ನು ವಿಚಾರಿಸಿ ಮಂದಸ್ಮಿತರಾಗಿ ಆಶೀರ್ವದಿಸುತ್ತಾರೆ.

ಜಿ. ಎಸ್. ರಾಚನಾಯ್ಕರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಾದ ನಿಲಯ ಹಾಗೂ ವಿದ್ಯಾರ್ಥಿಗಳ ಆದರ್ಶದ ವಿಕಾಸ

ಬೆಳಗಾಂವಿ ನಗರದಲ್ಲಿ ಸಾರ್ವಜನಿಕ ಸತ್ಕಾರ್ಯದಲ್ಲಿ ತೊಡಗಿದ ಹಲವಾರು ಸಂಸ್ಥೆಗಳಿವೆ. ಅವುಗಳಲ್ಲಿ ಕಣ್ಮುಂದೆ
ಎದ್ದು ಕಾಣುವ ಸಂಸ್ಥೆಗಳಿಗಿಂತಲೂ ಎಲೆಗಳ ಮರೆಯಲ್ಲಿ ಅರಳಿ ತಮ್ಮ ಸುವಾಸನೆಯಿಂದಲೇ ತಮ್ಮ ಅಸ್ತಿತ್ವವನ್ನು ಸಾರುತ್ತಿರುವ
ಹೂಗಳಂತಿರುವ ಸಂಸ್ಥೆಗಳೇ ಹೆಚ್ಚಾಗಿರುವವೆಂಬಂತೆ ತೋರುತ್ತದೆ. ಅಂಥವುಗಳಲ್ಲಿ ಪರಮಪೂಜ್ಯ ಶ್ರೀಮನ್ನಾಗನೂರು
ಸ್ವಾಮಿಗಳು ನಡೆಸುತ್ತಿರುವ ವಿದ್ಯಾರ್ಥಿ ಪ್ರಸಾದ ನಿಲಯವು ಅಗ್ರಗಣ್ಯವಾಗಿರುವದೆಂದು ಹೇಳಲು ಯಾವ ಅಭ್ಯಂತರವೂ
ಇರುವದಿಲ್ಲ.

ವಿದ್ಯಾರ್ಥಿ ಪ್ರಸಾದ ನಿಲಯವು ಜವಾಹರಲಾಲ ಮೆಡಿಕಲ್ ಕಾಲೇಜಿನ ಮುಂಭಾಗದಲ್ಲಿ ರಚಿತವಾಗಿರುವ ಭವ್ಯವಾದ
ಕಟ್ಟಡದಲ್ಲಿ ಇದೀಗ ನೆಲೆಸಲಿರುವ ಸಂದರ್ಭವು ಅದರ ಸೌಭಾಗ್ಯದ ಒಂದು ಶುಭಲಕ್ಷಣವೆಂದು ಭಾವಿಸಬೇಕು. ಜೊತೆಗೆ ಅದು
ಅದರ ಪ್ರಗತಿಶೀಲ ಮುನ್ನಡೆಯ ಲಕ್ಷಣವೂ ಅಹುದು. ಆದರೆ ಈ ಪ್ರಸಾದ ನಿಲಯದ ನನ್ನ ಪರಿಚಯವು ಅದಕ್ಕಿಂತಲೂ
ಎಷ್ಟೋ ವರ್ಷ ಮುಂಚಿನದು. ಅಧಿಕೃತವಾಗಿ ಕೆಲವೊಂದು ಸಲ ನಾನು ಒಂದೆರಡು ವರ್ಷಗಳ ಹಿಂದೆ ಅದನ್ನು ಸಂದರ್ಶಿಸುವ
ಪ್ರಸಂಗವು ಬಂದಿದ್ದರೂ ಅನಧಿಕೃತವಾಗಿ ಎಷ್ಟೋ ವರ್ಷಗಳಿಂದಲೂ ಈ ನಿಲಯವನ್ನು ನಾನು ಸಂದರ್ಶಿಸುತ್ತ ಬಂದಿರುವೆನು.
ಈ ಹತ್ತು ವರ್ಷಗಳಿಂದ ಪ್ರತಿವರ್ಷ ನಾಡಹಬ್ಬದ ಸಂದರ್ಭದಲ್ಲಿಯಂತೂ ತಪ್ಪದೇ ಒಮ್ಮೆಯಾದರೂ ಅಲ್ಲಿಯ ಕಾರ್ಯಕ್ರಮ
ಗಳಲ್ಲಿ ಭಾಗವಹಿಸುವ ಪ್ರಸಂಗವನ್ನು ನಾನು ತಪ್ಪಿಸಿರಲಿಲ್ಲವೆಂದರೆ ತಪ್ಪಾಗಲಾರದು.

ಈ ಪ್ರಸಾದ ನಿಲಯವು ಸಾರ್ವಜನಿಕ ಸಂಸ್ಥೆಯೆಂದು ಮೇಲೆ ಹೇಳಲಾಗಿದೆ. ನೂರಾರು ವಿದ್ಯಾರ್ಥಿಗಳು ಒತ್ತಟ್ಟಿಗೆ
ಸೇರಿ ಒಂದೇ ಕುಟುಂಬದಂತೆ ವರ್ತಿಸುತ್ತಿರುವದು ಸಾಮಾನ್ಯ ವಿಷಯವಲ್ಲ. ಇಂಥ ಸಂಸ್ಥೆಯ ಆರ್ಥಿಕ ಸಂಘಟನೆ ಎಷ್ಟು
ಪ್ರಯಾಸದ್ದಾಗಿರುವುದೋ ಸಾಮೂಹಿಕ ಸಂಘಟನೆಯೂ ಅಷ್ಟೇ ಪ್ರಭಾವಯುಕ್ತವಾಗಿರಬೇಕಾದುದೂ ಸಮಂಜಸತನದ್ದಾಗಿರು
ವದು. ಅಂತೆಯೇ ಇದು ಒಂದು ಜಾತೀಯ ಅಥವಾ ಮತೀಯ ಸಂಸ್ಥೆಯಾಗಿರದೆ ಸರ್ವಜಾತಿಯ ಹಾಗೂ ಸರ್ವಮತೀಯ
ಸಂಕಲಿತ ಸಂಸ್ಥೆಯಾಗಿರುವದು. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಈ ವಿದ್ಯಾರ್ಥಿ ನಿಲಯದೊಳಗೆ ಎಲ್ಲ ಜಾತಿಯ ಹಾಗೂ
ಎಲ್ಲ ಮತೀಯ ವಿದ್ಯಾರ್ಥಿಗಳು--- ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅತಿಶೂದ್ರ (ಹರಿಜನ) ರೂ ಅದೇ ಪ್ರಕಾರ ಶೈವ
ವೈಷ್ಣವ, ಜೈನ, ಮುಸಲ್ಮಾನ, ಕ್ರೈಸ್ತ, ವೀರಶೈವರೂ ಆಗಾಗ್ಗೆ ಸಂಕಲಿತವಾಗಿರುವದು ಕಂಡುಬರುವದು. ಇದರ ಆರ್ಥಿಕ
ಸಂಘಟನೆಯಲ್ಲಿ ಶ್ರೀಮನ್ನಾಗನೂರ ಸ್ವಾಮಿಗಳ ಅದ್ಭುತ ಸಾಧನೆಯು ಕಂಡುಬರುವಂತೆ ಅದರ ಸಾಮಾಜಿಕ ಸಂಘಟನೆ
ಯಲ್ಲಿ ಅವರ ಹಾಗೂ ಅವರ ಶಿಷ್ಯರಿಂದ ಶ್ರೀ ಪ್ರಭುದೇವರ ಮಹಾಪ್ರಭಾವಯುಕ್ತವಾದ ಪವಾಡವೂ ಕಂಡುಬರುವ
ದೆಂದರೆ ಅತಿಶಯೋಕ್ತಿಯಾಗಲಾರದು. ಈ ನಿಲಯದ ಶಾಖೆ ವಿದ್ಯಾರ್ಥಿನಿಯರ ನಿಲಯವು ಒಂದು ಇದೆ ಎಂದರೆ, ಈ ಪ್ರಸಾದ
ನಿಲಯದ ವ್ಯಾಪ್ತಿಯು ಎಷ್ಟು ವಿಶಾಲವಾಗಿದೆ ಎಂಬುದನ್ನು ಲಕ್ಷ್ಯಕ್ಕೆ ತಂದುಕೊಳ್ಳಬಹುದು.

ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸಾಧನೆಯಲ್ಲಿ ವಿದ್ಯಾರ್ಥಿ ನಿಲಯಗಳ ಪಾತ್ರವು ಮಹತ್ವದ್ದಾಗಿರುವದು. ವಿದ್ಯಾರ್ಥಿ
ನಿಲಯಗಳು ಹಲವು ಪ್ರಕಾರದವು ಇರುವವು. ಉದಾಹರಣೆಗಾಗಿ ವಿದ್ಯಾಲಯಗಳು ತಮ್ಮ ವಿದ್ಯಾರ್ಥಿಗಳ ಅನುಕೂಲತೆಗಾಗಿ
ಏರ್ಪಡಿಸಿರುವ ವಸತಿಗೃಹ ಹಾಗೂ ವಿದ್ಯಾರ್ಥಿ ನಿಲಯಗಳು ಒಂದು ಪ್ರಕಾರದವುಗಳಾಗಿದ್ದರೆ ವ್ಯಾಪಾರಿ ಸಂಸ್ಥೆಗಳು (ಹೊಟೇಲುಗಳು) ಹಾಗೂ ಸ್ವಾಮಿಗಳು
ಏರ್ಪಡಿಸಿರುವ ನಿಲಯಗಳು ಮತ್ತೊಂದು ಪ್ರಕಾರದವಾಗಿರುವವು. ಇವೆರಡು ಪ್ರಕಾರದ
ನಿಲಯಗಳ ಉದ್ದೇಶಗಳೊಳಗಿನ ವ್ಯತ್ಯಾಸವನ್ನು ಎತ್ತಿತೋರಿಸಬೇಕಾಗಿಲ್ಲವಷ್ಟೇ? ಇವುಗಳಲ್ಲದೆ, ಹಲವಾರು ಜಾತಿಯ
ಸಂಸ್ಥೆಗಳು ಏರ್ಪಡಿಸಿರುವ ವಿದ್ಯಾರ್ಥಿ ನಿಲಯಗಳೂ ಇರುವವು. ಅವುಗಳ ಉದ್ದೇಶಗಳು ಭಿನ್ನವಾಗಿರುವವು. ಇವೆಲ್ಲವುಗಳಿಗೆ
ಸಮಭಾಜಕವಾಗಿ ವಿದ್ಯಾರ್ಜನೆಯ ಅನುಕೂಲ್ಯವೆಂಬ ಸಮಾನಾಂಶವು ಹೊರಡಬಹುದಾದರೂ ಪ್ರಸಾದ ನಿಲಯದೊಳಗೆ
ಅಡಕವಾದ ಸಾಮಾನ್ಯ ಭಾಗ್ಯವು ಇವೆಲ್ಲವುಗಳಿಗೆ ಮೀರಿ ವಿದ್ಯಾರ್ಥಿಗಳ ಮಹತ್ತರವಾದ ವ್ಯಕ್ತಿತ್ವವನ್ನು ರೂಪಿಸುವದರಲ್ಲಿ
ಮಹತ್ವವಾದ ಪಾತ್ರವನ್ನು ವಹಿಸಬಹುದು.

ಒತ್ತಾಯದ ಪ್ರಾಥಮಿಕ ಶಿಕ್ಷಣದಿಂದ ದೇಶದಲ್ಲಿ ವಿದ್ಯಾಪ್ರಸಾರವು ಪ್ರಾರಂಭವಾಗಿರುವದು ಭಾರತೀಯ ಜನಾಂಗದ
ಅಭ್ಯುದಯದ ಒಂದು ಶುಭ ಲಕ್ಷಣವಾಗಿರುವದು. ಇದರ ಜೊತೆಗೆ ಉಚ್ಚ ಶಿಕ್ಷಣ ಪ್ರಸಾರದ ಅನುಕೂಲತೆಗಳೂ ವ್ಯಾಪಕವಾಗಿರು
ವದರಿಂದ ಇಪ್ಪತ್ತರವರೆಗಿನ ವಯಸ್ಸಿನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲತೆಯೂ ಅವಶ್ಯಕವಾಗಿರುವದು. ಅದರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲ್ಲಿಯೂ ಸಾಮಾನ್ಯವಾಗಿ ಹದಿಮೂರರಿಂದ ಹದಿನಾರು ವಯಸ್ಸಿನ ಹಾಯಸ್ಕೂಲ ವಿದ್ಯಾರ್ಥಿಗಳಿಗೂ ಹದಿನಾರರಿಂದ ಇಪ್ಪ ವಯಸ್ಸಿನ ಕಾಲೇಜ ವಿದ್ಯಾರ್ಥಿಗಳಿಗೂ ವಿಶೇಷವಾಗಿ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಆಶ್ರಯವೆಂದು ವಿದ್ಯಾರ್ಥಿ ನಿಲಯ ಮಹತ್ವದ ಸ್ಥಾನವನ್ನು ಅಲಂಕರಿಸಿರುವವು. ಈ ಸ್ಥಾನದ ಮಹಾತ್ಮೆಯು ಅಲ್ಲಿ ನೆಲೆಸಿದ ವಿದ್ಯಾರ್ಥಿಗಳ ಭಾವೀ ಜೀವ ಸ್ಥಿರವಾಗಿ ನೆಲೆಗೊಳ್ಳುವದು ಎಂಬುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ.

ಪ್ರಾಚೀನ ಸಂಸ್ಕೃತಿಯ ಜೀರ್ಣೋದ್ಧಾರಕ್ಕಿಂತಲೂ ಆಧುನಿಕ ಸಂಸ್ಕೃತಿಯ ಸಂಪನ್ನತೆ ಹಾಗೂ ಸಮಸ್ತ ಪುರೋಗಾಮಿತ್ವವು ಇಂದಿನ ಶಿಕ್ಷಣದ ಪ್ರಧಾನವಾದ ಧ್ಯೇಯವಾಗಿರಬೇಕೆಂಬುದನ್ನು ಮರೆಯಲಾಗದು. ಆ ದೃಷ್ಟಿಯ ಭಾರತೀಯ ಸಂವಿಧಾನವು ಪ್ರಮುಖವಾದ ಹೆಜ್ಜೆಗಳನ್ನಿಟ್ಟಿರುವದು. ಸ್ವಾತಂತ್ರ್ಯ, ಸಮತಾ, ಬಂಧುಭಾವ, ನ್ಯಾಯವಾದಿತ್ವ ವಾಮನಾವತಾರದ ತ್ರಿಪಾದಗಳಂತೆ ಸಂವಿಧಾನವು ವ್ಯಾಪಿಸಿರುವ ಚತುಷ್ಪಾದಗಳಾಗಿರುವವು. ಮತ್ತು ಸಂವಿಧಾ ನದ ಪ್ರದಾನವೇ ವ್ಯಕ್ತಿ ಸ್ವಾತಂತ್ರ್ಯವಾಗಿರುವದರಿಂದ ಹಳೆಯ ಎಷ್ಟೋ ಕಲ್ಪನೆಗಳನ್ನು ಕಳಚಿ ಹೊಸ ಚಿಲಕತ್ತುಗ ತೊಡುವ ಹಾಗೂ ಹೊಸ ಸೃಷ್ಟಿಯಲ್ಲಿ ಅವುಗಳನ್ನು ಸಮರ್ಪಕವಾಗಿ ಪ್ರಯೋಜನಗೊಳಿಸುವ ತಂತ್ರಗಳನ್ನೂ ಆಧು ಶಿಕ್ಷಣವು ರೂಢಿಸಬೇಕಾಗಿರುವದು. ವಿದ್ಯಾರ್ಥಿ ನಿಲಯಗಳು ಆ ರೂಢಿಯನ್ನು ದೃಢಪಡಿಸುವ ಗರಡಿಯ ಮನೆಗಳ ಬೇಕಾಗಿರುವದು.

ಪಿತ್ರಾರ್ಜಿತ ಆಳಿಕೆಯನ್ನು ಪ್ರಜಾಪ್ರಭುತ್ವವು ಮನ್ನಿಸುವದಿಲ್ಲ. ಆದೇ ಸಂವಿಧಾನವು ನಮ್ಮ ದೇಶದಲ್ಲಿ ಮೊದಲನೆಯ ಹೆಜ್ಜೆ, ಅಂದರೆ ಹುಟ್ಟಿನಿಂದ ಶ್ರೇಷ್ಠತೆಯನ್ನು ಮೆರೆಸುವದು ಇನ್ನುಮುಂದೆ ಸಾಧ್ಯವಿಲ್ಲ. ಶ್ರೇಷ್ಠತೆಯನ್ನು ವ್ಯ ವಿಕಾಸದಿಂದಲೇ ಸಾಧಿಸಬೇಕು. ಅದು ವಿದ್ಯಾಭಾಸದ ಬಲದಿಂದಲೇ ಸಾಧ್ಯವಾಗುವದು. ಇಂಥ ಅಭ್ಯಾಸಕ್ಕೆ ಸಮಾನವಕಾ ಬೇಕು. ಇಂಥ ಅವಕಾಶವನ್ನು ಒದಗಿಸುವದೂ ವಿದ್ಯಾರ್ಥಿ ನಿಲಯಗಳ ಒಂದು ಮಹತ್ವವಾದ ಕಾರ್ಯವಾಗಿರುವದು. ಉತ್ತ ವಾದ ಅಭ್ಯಾಸ ಬಲದಿಂದ ಒಂದು ಅಪ್ರತಿಮವಾದ ಸಾಮಾಜಿಕ ಅಂತಃಪ್ರಜ್ಞೆಯು ಪ್ರಾಪ್ತವಾಗುವದು. ಸಾಮಾಜಿಕ ಅಂ ಪ್ರಜ್ಞೆಯು ಪ್ರಜ್ವಲಿತವಾದ ಆರಿಂದುಂಟಾಗುವ ದೇದೀಪ್ಯವಾದ ದೀಪ್ತಿಯು ಸಮಾಜದ ಅಂತರಾತ್ಮನನ್ನು ಉದ್ದೀ ಗೊಳಿಸುವದಲ್ಲದೆ ಪ್ರಜಾಸತ್ತೆಯ ಅಂತಃಸತ್ವವನ್ನು ಶಾಶ್ವತವಾಗಿ ಉಜ್ವಲಗೊಳಿಸುವದು. ಇಂಥ ಸತ್ವಪೂರ್ಣವಾ ಕರ್ತೃತ್ವವನ್ನು ವಿದ್ಯಾರ್ಥಿನಿಲಯಗಳು ಕೈಕೊಳ್ಳಬೇಕಾಗಿರುವದು.

ಇತರ ವಿದ್ಯಾರ್ಥಿ ನಿಲಯಗಳಿಗೂ ಪ್ರಸಾದ ನಿಲಯಗಳಿಗೂ ಒಂದು ಮಹತ್ತರವಾದ ಅಂತರವಿರುವದು. ಆದೇ ಪ್ರಸಾದ ನಿಲಯಗಳು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಸಲುವಾಗಿ ಕೇವಲ ಆಶ್ರಯಸ್ಥಾನಗಳಾಗಿರುವದಿಲ್ಲ. ಅಲ್ಲಿ ಅವ ದೊರೆಯುವ ಪ್ರಸಾದವು " ಲಿಂಗಮುಖದಿಂದ ಬಂದ ಪ್ರಸಾದವು " ಗುರುಕರುಣೆಯಿಂದ ಪಡೆದ ಪ್ರಸಾದವು. ಆ ಸದ್ಗುರು ಆದರ್ಶವು ಸದಾ ಸರ್ವದಾ ಅಲ್ಲಿ ನೆಲೆಸಿರುವ ವಿದ್ಯಾರ್ಥಿಗಳ ಕಣ್ಮುಂದೆಯೇ ಕಟ್ಟಿರುವದು. ಗುರುವು ಶಿವಭಾವ ಸಂಪ ನಾಗಿರುವಾಗ ಅದಕ್ಕಿಂತ ಹೆಚ್ಚಿನ ಆದರ್ಶವು ಪ್ರಜಾಸತ್ತೆಗೆ ದೊರೆಯಲಾರದು. ಯಾಕೆಂದರೆ ಬಸವಣ್ಣನವರು ಅನ್ನು " ಶಿವಾಚಾರವೆಂಬುದೊಂದು ಬಾಳ (ಖಡ್ಗದ) ಬಾಯಿಧಾರೆ. ಲಿಂಗಮೆಚ್ಚಬೇಕು ಜಂಗಮಮೆಚ್ಚಬೇಕು. ಪ್ರಸಾದಮ ತನ್ನಲ್ಲಿ ಸ್ವಾಯತವಾಗಿರಬೇಕು. ಬಿಟ್ಟಬೇಕಾದರೆ ಮೆಚ್ಚ ನಮ್ಮ ಕೂಡಲಸಂಗಮದೇವ. " ಅಲ್ಲದೆ ಪ್ರಸಾದದ ಮಹಿಮೆ ಹೀಗಿದೆ. ಬಸವಣ್ಣನವರ ಮಾತಿನಲ್ಲಿಯೇ ಅದನ್ನು ಹೇಳಬೇಕಾದರೆ " ತ್ರಿವಿಧ ಪ್ರಸಾದವೆಂದೆಂಬದು ಅದೆಂತಹುದೋ ಶುದ್ಧ ಪ್ರಸಾದ ಲಿಂಗದದು ಸಿದ್ಧ ಪ್ರಸಾದ ಜಂಗಮದದು ಪ್ರಸಿದ್ಧ ಪ್ರಸಾದ ಗುರುವಿನದು ಇಂತೀ ತ್ರಿವಿಧ ಒಂದಾದ ತೋರಾ ಕೂಡಲಸಂಗಮದೇವಾ " ಇಂಥ ತ್ರಿವಿಧ ಒಂದಾದವರು ತಮ್ಮ ಸಮ್ಮುಖದಲ್ಲಿಯೇ ನಿಂತು ಪ್ರಸಾದ ನೀಡುತ್ತಿದ್ದ ಅದನ್ನು ಸೇವಿಸಿ ಅವರ ಅತ್ಯುಚ್ಚವಾದ ಆದರ್ಶದಲ್ಲಿ ತಮ್ಮ ವ್ಯಕ್ತಿತ್ವದ ವಿಕಾಸವನ್ನು ಮಾಡಬೇಕೆನ್ನುವ ಸದಾವಕಾ ಪ್ರಸಾದ ನಿಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾತ್ರವೇ ದೊರೆಯುತ್ತಿರುವದು ಅವರ ಸೌಭಾಗ್ಯವೆಂದೇ ಎನ್ನಬೇ ಯಾಕೆಂದರೆ ಪ್ರಜಾಸತ್ತೆಯ ಅಂತಃಸತ್ವಕ್ಕೆ ಸಾತ್ವಿಕತೆಯ ಅಧಿಷ್ಠಾನವೂ ಸಾಮರ್ಥ್ಯವೂ ಅತಃಏವ ದೈವೀ ಪ್ರೇರಣೆಯ ಅಂಥ ಪ್ರಸಾದದಿಂದಲೇ ಪ್ರಾಪ್ತವಾಗುವದು. ವಿದ್ಯಾರ್ಥಿಗಳ ವಿದ್ಯಾಭ್ಯಾಸವು ಇಂಥ ದೈವೀಶಕ್ತಿಯ ಸಾಕ್ಷಾತ್ಕಾರಕ್ಕಾಗಿ ಇರಬೇಕಾಗಿರುವದು. ಇಂದಿನ ವಿದ್ಯಾರ್ಥಿಗಳು ನಾಳೆ ಜಗತ್ತಿನ ಪ್ರಜೆಗಳಾದಾಗ ಇಂದಿನ ಅವರ ಅಂತಃಸತ್ವವೇ ನಾ ಅವರ ಸತ್ವವಾಗಿ ಇಂದಿನ ಸ್ವ (ಮನೋ) ರಾಜ್ಯವು ನಾಳಿನ ಸುರಾಜ್ಯವಾಗಿ ಇಂದಿನ ಸುವಿಚಾರಗಳೇ ನಾಳಿನ ಸ್ವಧರ್ಮವಾ ಜೀವನದ ವಿಕಾಸಕ್ರಮದಲ್ಲಿ ಇಂದಿನ ಆದರ್ಶ ಆಕಾಂಕ್ಷೆ ನಿಷ್ಠಾವಂತಿಕೆಗಳು ಕ್ರಮವಾಗಿ ನಾಳಿನ ಸದಾಚಾರ ಸಹಜೀ ಮತ್ತು ಸೌಹಾರ್ದತೆಯ ಮಾನವ ಕುಸುಮಗಳನ್ನು ಅರಳಿಸುವ ದೀಕ್ಷೆಯಲ್ಲಿ ತೊಡಗಿದ್ದುದಾದರೆ, ಅಂಥ ಜೀವನ ವಿಕಾಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ಮಹತ್ವನಾದ ವೈಶಾಲ್ಯವೂ ಪರಿಪೂರ್ಣತೆಯೂ ಒಡಮೂಡತೊಡಗುವದು; ಹಾಗು ಭಗವತ್ಪಾದ ಆದ್ಯ ಶಂಕರಾಚಾರ್ಯರು ಹೇಳಿರುವಂತೆ

" ಮಾತಾಚ ಪಾರ್ವತೀದೇವೀ
ಪಿತಾದೇವೋ ಮಹೇಶ್ವರಃ
ಬಾಂಧವಾಃ ಶಿವಭಕ್ತಾಶ್ಚ
ಸ್ವದೇಶೋಭುವನತ್ರಯಮ್ "

ಇಂಥ ವಿಶಾಲವಾದ ಮನೋಭಾವವು ಪ್ರಾಪ್ತವಾಗುವದು. ನಮ್ಮ ಶಿಕ್ಷಣಕ್ರಮವು ಇಂಥ ವಿಶಾಲವಾದ ಮನೋಭಾವವನ್ನು ರೂಪಿಸಲಿ; ನಮ್ಮ ವಿದ್ಯಾರ್ಥಿ ನಿಲಯಗಳೂ ಪ್ರಸಾದ ನಿಲಯಗಳೂ ಇಂಥ ವಿಶಾಲ ಮನೋಧರ್ಮವನ್ನು ಪ್ರಚೋದಿಸುವಂತಾಗಲಿ. " ವಸುಧೈವ ಕುಟುಂಬಕಂ " ಎಂಬ ಸನಾತನ ಧರ್ಮ ಪಥದಲ್ಲಿ ಧ್ಯೇಯವು ಅವರ ದೃಷ್ಟಿ ಪಥದಲ್ಲಿ ಹೊಳೆಯುತ್ತಿರಲಿ. ಪುರುಷಾರ್ಥಗಳ ಪವಿತ್ರ ಸಾಧನೆಗಾಗಿಯೇ ಅವರ ಪೌರುಷವ ಪರೀಘವೂ ಪರಮೋತ್ಕರ್ಷವೂ ಪರಿಪೂರ್ಣವಾಗಿ ಪಸರಿಸಲಿ. ಮಾನವೈಕ್ಯದ ಸ್ವಸ್ತಿಗೂ ಮಾನವತಾ ಧರ್ಮದ ನಾಂದಿಗೂ ಅವರ ಅಂತಃಕರಣ ಮಿಡಿಯುವಂತಾಗಲಿ. ವಿಶಾಲ ಧರ್ಮದ ವಿಶ್ವಸಂಗೀತದಲ್ಲಿ ಸದಾಚಾರ ಸಂಪನ್ನವಾದ ಅವರ ಸತ್ಕೃತಿಗಳು ವೀಣಾವಾದನದಂತೆ ಸಕಲ ಮಾನವರ ಹೃದಯಗಳನ್ನು ಚೇತರಿಸುವಂತೆ ಆಗಲಿ. ವಿಶೇಷವಾಗಿ ಶ್ರೀಮನ್ನಾಗನೂರು ಸ್ವಾಮಿಗಳ ಪ್ರಸಾದ ನಿಲಯದ ವಿದ್ಯಾರ್ಥಿಗಳಲ್ಲಿ ಹೊಸಯುಗದ ಈ ಅತ್ಯುತ್ತಮವಾದ ಶಿವಾಚಾರವು (ಅಂದರೆಯೇ Modern democratic way of living) ಪರಿಪೂರ್ಣವಾಗಿ ರೂಪುಗೊಳ್ಳಲಿ ಎಂದು ನಾನು ಹೃತ್ಪೂರ್ವಕವಾಗಿ ಹಾರೈಸುವೆನು.

ವಿದ್ಯಾರ್ಥಿ ನಿಲಯದೊಳಗಿನ ವಯೋಮಾನವು ೧೩ ರಿಂದ ೧೬ ಅಥವಾ ೧೬–೨೦ ಇರುವದೆಂದು ಮೇಲೆ ಹೇಳಿದೆಯಷ್ಟೆ ? ವಯೋಮಾನದ ಈ ಅವಧಿಯು ಶೈಶವ ಮತ್ತು ವಯಸ್ಕ ಈ ಅವಸ್ಥೆಗಳ ನಡುವಿನ ಬೆಳವಣಿಗೆಗೆ ಒಳಪಟ್ಟಿರುವದು ಮನಃಶಾಸ್ತ್ರೀಯ ದೃಷ್ಟಿಯಿಂದಲೂ ಅದು ಬಹು ಮಹತ್ವದ ಕಾಲವು. ಯಾಕಂದರೆ ಈ ಕಾಲಾವಧಿಯಲ್ಲಿ ಪರಿಪಕ್ವವಾದ ಮಾನವತೆಗೆ ಆವಶ್ಯಕವಾಗಿ ಬೇಕಾಗುವ ಎಷ್ಟೋ ಗುಣಗಳು ಪಕ್ವತೆಯನ್ನು ಪಡೆಯುವವು. ಉತ್ತಮ ಆಹಾರವು ದೇಹವನ್ನು ಸಜ್ಜುಗೊಳಿಸುವಂತೆ ಉತ್ತಮ ಆದರ್ಶವು ಅಂತರ್ಮನಸ್ಸನ್ನು ಈ ಅವಧಿಯಲ್ಲಿ ಹವಣುಗೊಳಿಸುವದು. ಅಂತೆಯೇ ಯಾವ ಸಂಕುಚಿತ ಮನೋಭಾವಕ್ಕೂ ಆಸ್ಪದ ಕೊಡದೆ ವಿಶಾಲವಾದ ಮನೋಭಾವಗಳನ್ನೇ ಬೆಳೆಸುವ ಆದರ್ಶಗಳನ್ನೇ ಈ ವಯೋಮಾನದ ಅವಸ್ಥೆಯಲ್ಲಿ ವಿದ್ಯಾರ್ಥಿಗಳ ಮುಂದೆ ನಿಚ್ಚಳವಾಗಿ ಇಡಬೇಕಾಗುವದು. ಆದುದರಿಂದ ವಸತಿಗೃಹಗಳಲ್ಲಿ ಕೆಲವೊಂದು ವಿಶೇಷ ಏರ್ಪಾಡುಗಳನ್ನು ಮಾಡುವದು ಆವಶ್ಯಕವಾಗಿರುವದು. ಅಂಥ ಎರಡು ಸೂಚನೆಗಳನ್ನು ನಾನು ಇಲ್ಲಿ ಮಾಡಬಯಸುವೆನು.

ಮೊದಲನೆಯದಾಗಿ ಪ್ರಸಾದ ನಿಲಯದಲ್ಲಿ ಒಂದು ವ್ಯಾಯಾಮ ಶಾಲೆ ಬೇಕು. ಅದು ಶಾರೀರಿಕ ಶಿಕ್ಷಣಕ್ಕಾಗಿ, ಕೇವಲ ದೇಹ ದಾರ್ಢ್ಯವು ಅದರ ಧ್ಯೇಯವಾಗಿರದೆ, ಶಿಸ್ತು, ಸಂಯಮ, ಆದರ್ಶ ಜೀವನಗಳಿಗೆ ಅಲ್ಲಿಯ ಶಿಕ್ಷಣವು ಮೀಸಲಾಗಿರಬೇಕು. ಕುಸ್ತಿ, ಬೈಠಕ, ಸೂರ್ಯ ನಮಸ್ಕಾರಗಳು, ಯೋಗಾಸನಗಳು, ಬ್ರಹ್ಮಚರ್ಯ ಸಾಧನೆ ಇತ್ಯಾದಿ ಶರೀರ ಸಂಪತ್ತಿನ ಅಭ್ಯಾಸವು ಅಲ್ಲಿ ಸಾಗಬೇಕು. ಅದಕ್ಕಾಗಿ ಒಬ್ಬೊಬ್ಬರು ಸಮರ್ಥ ಶಿಕ್ಷಕರಿರುವುದು ಒಳಿತು. ಆತ್ಮಸಂಯಮನಕ್ಕೂ ಯೋಗಾಭ್ಯಾಸಕ್ಕೂ ಅವರಿಂದ ಪ್ರೋತ್ಸಾಹನವು ದೊರೆಯುವಂತಾಗಬೇಕು.

ಎರಡನೆಯದಾಗಿ ಪ್ರಸಾದ ನಿಲಯದಲ್ಲಿ ಒಂದು ಗ್ರಂಥಾಲಯವಿರಬೇಕು. ಆರಿಸಿದ ಅತ್ಯುತ್ತಮ ಗ್ರಂಥಗಳು ಅಲ್ಲಿ ವಿಪುಲವಾಗಿ ವಿದ್ಯಾರ್ಥಿಗಳಿಗೆ ಓದಲು ದೊರೆಯುತ್ತಿರಬೇಕು. ತಮ್ಮ ಪಠ್ಯ ಪುಸ್ತಕಗಳಲ್ಲದೆ ಪ್ರತಿಯೊಂದು ಅಯನ (ಟರ್ಮದಲ್ಲಿ) ತೀರ ಕಡಿಮೆ ಎಂದರೆ ಇಂತಿಷ್ಟು ಪುಟಗಳಷ್ಟು ಪುಸ್ತಕಗಳನ್ನು ಓದಲೇಬೇಕೆಂಬ ನಿರ್ಬಂಧವು ಇರಬೇಕು. ವಿಷಯ ಸಂಗ್ರಹದಲ್ಲಿ ವೈವಿಧ್ಯತೆಬೇಕು. ವೈಪುಲ್ಯವೂ ಬೇಕು. ಓದಿದ ವಿಷಯಗಳ ಸರಿಯಾದ ತಿಳಿವಳಿಕೆಯುಂಟಾಗುವ ಬಗೆಗೆ ಚರ್ಚಾಕೂಟಗಳ ಏರ್ಪಾಡು ಆಗಬೇಕು. ವಿಚಾರ ಶಕ್ತಿಯನ್ನು ಬೆಳೆಸಲು ವಿಮರ್ಶೆ ಚರ್ಚೆಗಳು ತೀರ ಆವಶ್ಯಕ. ಆದರಿಂದಲೇ ವಿಮರ್ಶಾತ್ಮಕ ವಿಚಾರಗಳ ಬೆಳವಣಿಗೆಯುಂಟಾಗುವದು. ಪ್ರಜಾಸತ್ತೆಯಲ್ಲಿ ತಿಳುವಳಿಕೆ ಹಾಗೂ ವೈಚಾರಿಕ ವಿಮರ್ಶೆ ಇವುಗಳಿಗೆ ತುಂಬಾ ಪ್ರಾಶಸ್ತ್ಯವಿದೆ ಎಂಬುದನ್ನು ಲಕ್ಷದಲ್ಲಿಟ್ಟುಕೊಂಡು ಈ ವಿಷಯಗಳ ಕಡೆಗೆ ಹೆಚ್ಚಿನ ಗಮನವನ್ನೀಯಬೇಕಾಗುವದು. ಭಾಷಣ ಲೇಖನಗಳಿಗೆ ಇದರಿಂದ ಉತ್ತೇಜನವೂ ದೊರೆಯುವದು.

ಜ್ಞಾನ ವಿಜ್ಞಾನಗಳು ಜೊತೆಜೊತೆ ಬೆಳವಣಿಗೆಯಾಗಬೇಕು. ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಯಲ್ಲಿ ಇವುಗಳ ವಿಷಯವಾಗಿ ಸಮತೋಲನವು ಕಂಡು ಬರುವದು ಆವಶ್ಯಕವಾಗಿರುವದು. ಆದುದರಿಂದಲೇ ಸಾಹಿತ್ಯದ ಅಭ್ಯಾಸವೂ ವಿಜ್ಞಾನದ ತಿಳುವಳಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಯೂ ಜೊತೆ ಜೊತೆಯಾಗಿ ಸಾಗಬೇಕು. ಕಾವ್ಯ-ಸಾಹಿತ್ಯ, ಜ್ಞಾನ-ವಿಜ್ಞಾನ ಇವುಗಳ ಪರಿಜ್ಞಾನವು ಪ್ರತಿಯೊ ವಿದ್ಯಾರ್ಥಿಗೂ ಸಮರ್ಪಕ ರೀತಿಯಿಂದ ಉಂಟಾದಾಗಲೇ ಅವನು ಆಧುನಿಕ ಜಗತ್ತಿನಲ್ಲಿ ಜೀವಿಸಲು ಅರ್ಹನಾಗುವ ಮುಖಂಡನಾಗಬೇಕಾದರಂತೂ ಅವನ ಅರ್ಹತೆಯು ತುಂಬಾ ಮೇಲ್ಮಟ್ಟದ್ದಾಗಬೇಕಾಗುವದು.

ಇವೆಲ್ಲವುಗಳಿಗೆ ಮಿಗಿಲಾಗಿ ಮತ್ತೊಂದು ಮಹತ್ವದ ವಿಷಯವು ಉಂಟು. ನಮ್ಮ ದೇಶದಲ್ಲಿ ಆ ವಿಷಯ ಅಷ್ಟೊಂದು ಪ್ರಾಶಸ್ತ್ಯವು ದೊರೆತಿಲ್ಲ. ನಮ್ಮ ಶಿಕ್ಷಣವಂತೂ ಅದನ್ನು ಗಮನದಲಿಟ್ಟುಕೊಂಡಿರುವದಿಲ್ಲ. ಆ ವಿಷಯವೆಂದ ಆತ್ಮವಿಕಾಸ— Spiritual development. ಆದರ ಸಾಧನೆ ಪ್ರಾರ್ಥನೆಯಿಂದ ಆಗಬೇಕು. ಅದಕ್ಕಾಗಿ ಒಂ ಪ್ರಾರ್ಥನಾಲಯವು ಬೇಕು. ನಿಜವಾದ ಆತ್ಮೀಯ ಪ್ರಾರ್ಥನೆಗೂ ಭಕ್ತಿಭಾವಯುಕ್ತವಾದ ಧ್ಯಾನ ಚಿಂತನಗಳಿಗೆ ಅಲ್ಲಿ ಅ ಕಾಶವಿರಬೇಕು. ಮೇಲಾಗಿ ಸಕಲ ಧರ್ಮ ಮತ ಪಂಥಗಳ ಅನುಯಾಯಿಗಳು ಒತ್ತಟ್ಟಿಗೆ ಸೇರಿ ಆಧ್ಯಾತ್ಮ ಚಿಂತನೆಯಲ್ಲಿ ಸ ನ್ವಯ ಸಾಧಿಸುವ ವಿಧಾನವು ಮಾನವೀಯತೆಯನ್ನೇ ಗುರುತಿಸುವ ಹೊಸ ಸಂವಿಧಾನವು ಬಳಕೆಯಲ್ಲಿ ಬರಬೇಕು. ಮಹಾ ಗಾಂಧಿಜೀಯವರು ತಮ್ಮ ಆಶ್ರಮವಾಸಿಗಳಿಗೆ ಯಮ ನಿಯಮಗಳಿಗೆ ಬುನಾದಿಯಾಗಿ ಹಲವಾರು ವ್ರತಗಳನ್ನು ಬೋಧಿಸಿದ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹ ಸ್ವದೇಶಿ, ಅಸ್ಪೃಶ್ಯತಾ, ನಿವಾರಣೆ ಇವು ತಮ್ಮ ಆಶ್ರಮವಾಸಿಗ ಅವರು ವಿಧಿಸಿದ ವ್ರತಗಳು. ಜೊತೆಗೆ ಸರ್ವಧರ್ಮ ಸಮಭಾವ ಇದು ಆಧ್ಯಾತ್ಮಿಕ ಬೆಳವಣಿಗೆಗಾಗಿ ಅವರು ವಿಧಿ ಮಾನದಂಡವು. ಪ್ರಸಾದ ನಿಲಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಇಂಥ ಮಾನದಂಡಗಳನ್ನು ತಮ್ಮ ಜೀವನದಲ್ಲಿಯ ಅಳವಡಿಸಿಕೊಂಡದ್ದಾದರೆ ಅವರ ಜೀವನ ಸಾಧನೆ ಮಹತ್‌ಸಾಧನೆಯಾಗುವದರಲ್ಲಿ ಯಾವ ಸಂದೇಹವೂ ಇರಲಾರದು.

ಡಾ. ಸದಾನಂದ ನಾಯಕ
ಎಮ್. ಎ., ಪಿ. ಎಚ್‌ಡಿ.

ಬರುವದೇನುಂಟೊಮ್ಮೆ ಬರುವಕಾಲಕೆ ಬಹುದು
ಬಯಕೆ ಬರುವದರ ಕಣ್ಣಿನ್ನೆ ಕಾಣೋ
ಅರಿಯದಾ ಹವಣಿಕೆಯು ಜೀವ ಜೀವನ ಲೀಲೆ
ದೇವ ದೇವನ ಗೂಢವಿಧಿಯು ಕಾಣೋ.

ದೇವ ಲೀಲೆಯೊ ಕಾಣೆ ಕರ್ಮಜಾಲವೊ ಕಾಣೆ
ಅದು ನಮ್ಮ ಬುದ್ಧಿಯಾಚೆಗಿನ ಮಾತು
ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು
ಭವದಲ್ಲಿ ಕಾಣೆ ಮನಗಂಡ ಮಾತು.

— ಮಧುರಚೆನ್ನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗ ಮೂರು

ಕಾವ್ಯಸೌರಭ



ವಿವಿಧ ಕವಿಗಳಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂರನೆ ಗರಿ

ಧರೆಗಿಳಿದ



CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರು ಲಿಂಗ ಜಂಗಮ ಪ್ರಾರ್ಥನೆ.

ರಾಗ—ಶಂಕರಾಭರಣ ಆದಿತಾಳ

ನಮೋ ನಮೋ ಗುರು ಲಿಂಗ ಜಂಗಮಕೆ
ನಮೋ ನಮೋ ಶಿವಶರಣ ಸಂತತಿಗೆ ॥ ಪ ॥

ಅಷ್ಟಾವರಣವೆ ಅಂಗವಾಗಿ
ಪಂಚಾಚಾರವೆ ಪ್ರಾಣವಾಗಿ
ಷಟ್‌ಸ್ಥಲ ತತ್ತ್ವವೆ ಆತ್ಮವಾಗಿ
ಅರಿತಾಚರಿಸಿದ ಮಹಿಮರ ಚರಣಕೆ

ಲಿಂಗವಿಡಿದು ಭೃತ್ಯಾಚಾರ ಭಕ್ತಿಯಲಿ
ನಿರ್ಮಲ ಕಾಯಕ ದಾಸೋಹದಲಿ
ತನುಮನಧನ ಗುರುಲಿಂಗಜಂಗಮಕೆ
ಅರ್ಪಿಸಿ ನಲಿವ ಸದ್‌ಭಕ್ತರ ಚರಣಕೆ

ಆಯತ ಸ್ವಾಯತ ಸನ್ನಿಹಿತಗಳ
ಅರ್ಚನ ಅರ್ಪಣ ಅನುಭವದಿಂದಲಿ
ನಿತ್ಯಶರಣರಸುಭಾವ ಸಂಗದಲಿ
ನಿಂದಶಿವಾನುಭವಿಗಳ ಸಿರಿಚರಣಕೆ

ಷಟ್‌ಸ್ಥಲ ಧ್ವಜವಂದನೆ

ರಾಗ—ಮಲಯಮಾರುತ ಆದಿತಾಳ

ಶರಣು ಶರಣು ಶಿವಶರಣ ಬಾವುಟ ॥ ಪ ॥
ಶರಣು ಶಾಂತಿ ಷಟ್‌ಸ್ಥಲದ ಬಾವುಟ ॥ ಅ ॥

ಜೀವಭಾವ ಶಿವಭಾವದಂತರವ
ತೀವುತಾರು ಸೋಪಾನವೇರುವ
ಭಕ್ತಮಹೇಶಪ್ರಸಾದಿ ಪ್ರಾಣಲಿಂಗಿ
ಶರಣ ಐಕ್ಯ ಚಿನ್ಹಾಂಕಿತ ಬಾವುಟ

ಭಕ್ತಿ ಸ್ಥಲದಿ ನಿಂದೈದು ಸ್ಥಲಗಳ
ಕೂಡಿ ನಡೆದ ಷಡ್‌ಭಕ್ತಿ ಮಾರ್ಗವ
ತೋರಿಸಮು ಸಮುಚ್ಚಯವೆಂದೆನಿಸುವ
ಸಾಮರಸ್ಯ ಶಿವಶಕ್ತಿ ಸಂಪುಟ

ಏರಿ ಇಳಿವ ಇಳಿದೇರುವ ಷಟ್‌ಸ್ಥಲ
ಯೋಗದಿಂದ ಭುವಿದಿವಿಯ ಸಂಚರಿಪ
ಜೀವ ಶಿವರ ನಿಜಮಾರ್ಗಮೊಂದೆನಿಸಿ
ಸಾರುವಮಳ ಸೂತ್ರಾಂಕಿತ ಬಾವುಟ

ವೀರಶೈವಗುರು ಪಂಚಾಚಾರ್ಯರು
ಅಲ್ಲಮಾದಿಚರಲಿಂಗ ಪುಂಗವರು
ಭಕ್ತಿನಿಲಯ ಬಸವಾದಿ ಪ್ರಮಥರು
ಎತ್ತಿ ಮೆರೆದವರ ಭಕ್ತಿಯ ಬಾವುಟ

ಕೆ. ದೊಡ್ಡನಗೌಡ
ಜೋಳದರಾಶಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಟ್ಟಭವಿ

ಕಟ್ಟಿ ಕೊಂಡವರು ಎತ್ತಿ ಗೂಟಕ್ಕೆ ನೇತುಹಾಕಿದರು
ನೆಲೆಗೆಟ್ಟಲಿಂಗ ತೂಗಾಡುತ್ತಿತ್ತು ಗೂಟದಾಸರೆಗೊಂಡು
ಕಾಟಕ್ಕೆ ಕಟ್ಟಿಕೊಂಡವರಿಗೆ ಭಕ್ತಿಯಮಾಟವೆಂತಪ್ಪುದೊ ?
ಒಲವಿಲ್ಲದ ಸತಿಯ ಸಂಸಾರದಂತೆ ನೆಲೆಗೆಟ್ಟಿತ್ತು
ಇಂತಪ್ಪ ಕೆಟ್ಟಭವಿಗಳ ಹೀನಬಾಳಿಗಿಂತ
ಹುಟ್ಟು ಭವಿಗಳ ಬಾಳೆಲೇಸು ಕಂಡ್ಯಾರಾಮೇಶ.

ಗುರು ಜಂಗಮ

ಧರ್ಮಕ್ಕೆಂದು, ದಾಸೋಹಕ್ಕೆಂದು, ಕಾಲೋಚಿತನೆಪಂಗಳೊಡ್ಡಿ
ಸದ್ಭಕ್ತರ ಭಿಕ್ಷೆಯಂ ಕೊಂಡು ತನ್ನೊಡಲಪೊರೆವ ಸೋಹಂಭಾವಿಗಳನೇನೆಂಬೆನಯ್ಯಾ
ಗುರುವೆಂದರಿಯರು, ಲಿಂಗವೆಂದರಿಯರು, ಜಂಗಮದೆಂತೆಂಬುದನರಿಯರು
ಗುರುಲಿಂಗ ಜಂಗಮವೆತಾವೆಂಬಹಂಕಾರದಿಂದಂದಣವನೇರಿ
ಮೆರೆವವರನೋಡಿ ಬೆಚ್ಚಿ ಬೆರಗಾದೆನಯ್ಯಾ
ಇಂತಪ್ಪರ ಎತ್ತಿಕೊಂಡಾಡುವ ಭಕ್ತರ, ಹತ್ತಿ ಮೆರೆದಾಡುವ ಗುರುಜಂಗಮರ

ಅಜ್ಞಾನದಧಟಂಗೆ ಅಷ್ಟಾವರಣ ಅದಿರಿತ್ತು,
ಪಂಚಾಚಾರ ಪಲ್ಲಟಿಸಿತ್ತು, ಷಡುಸ್ಥಲ ಸಮಾಧಿಗಟ್ಟಿತ್ತು
ಇಂತೆಲ್ಲ ಶರಣಧರ್ಮಾಪಚಾರವ ಕಂಡು ಸದಾಚಾರ ಸದ್ಭಕ್ತರ ಎದೆಬಿರಿದಿತ್ತು ನೋಡಾ
ಲಿಂಗಗುಣಗಳಮರೆದು ಅಂಗಗುಣಗಳ ಮೆರೆವ ಗುರುಜಂಗಮರ ನಾನೊಲ್ಲೆ
ನೀನಿಕ್ಕಿದ ಭವದಲ್ಲಿರುವೆನಲ್ಲದೆ ಇಂತಪ್ಪ ಲಾಂಛನ ಧಾರಿಗಳ
ಮರುಳಾಟದೊಳಗೆನ್ನನಿಕ್ಕದಿರುತಂದೆ ಪರಮಗುರು ರಾಮೇಶ.

ನಿಜದರಿವು

ಅರಿತೆವಾವೆಂಬಿರಿ, ಅರಿತುದೇನೆಂಬುದ ಪೇಳಿರಿ ?
ನೀವರಿತ ಅರಿವು ನಿಮ್ಮದೆ ? ಅನ್ಯರದೆ ? ಯಾರದೆಂಬುದನೋಡಿರೆ
ವೇದ ಶಾಸ್ತ್ರಾಗಮ ಪುರಾಣಗಳನೋದಿ ನುಡಿವಿರಿ ಆನುಡಿ ನಿಮ್ಮದೆ ? ಆಯರಿವು ನಿಮ್ಮದೆ?
ಅನ್ಯರರಿವಿನ ಅರಿವು ನಿಮ್ಮರಿವದೆಂತಹುದು ?
ನಿಮ್ಮರಿವಿನಿಂದ ನೀವರಿತಲ್ಲದೆ ನಿಮ್ಮರಿವಾಗದು
ಬರಿದೆ ಮರುಳಾಟವಾಡದೆ ಭಕ್ತಿಯಲಿ
ರಾಮೇಶನರಿವಿಡಿದು ಸ್ವಯವಾಗಿರಯ್ಯಾ.

ವಚನಕಾರ
ಕೆ. ದೊಡ್ಡನಗೌಡ.
ಜೋಳದರಾಶಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂಕ್ಷ್ಮ ಸೌರಭ

ಸುಳಿವ ಗಾಳಿಯ ಪರಿಮಳಿಸಿಹುದು
ಯಾವ ತೋಟದ ಸೌರಭ !
ಅದನು ಸೂಸುತಲಿರುವನಾವನೊ
ಚಿತ್ತ ಪೃಥ್ವೀ–ವಲ್ಲಭ ?

ಕಣ್ಣಿನೆವೆ ತೆರೆದಂದೆ ತೆರೆಯಿತೆ
ಭಾವ ಲೋಕದ ನಂದನ ?
ತುಂಬುತಿರುವುದೆ ಅಂದಿನಿಂದಲೆ
ಅನು–ಅನುಭವದ ಚಂದನ

ತಾಯ ಒಲವದು ತಾನೆ ತೀಡಿತೆ
ಮೊತ್ತ ಮೊದಲಿನ ಕಂಪನು !
ಅವಳುಸಿರು ಉಣಿಸಿತ್ತೆ ಜೀವಕೆ
ಕಂಪು ಬೆರೆದಿಹ ತಂಪನು

ಬಳಿಕ ತೀಡಿರಬಹುದು ಪೃಥಿವೀ
ಮಾತೆಯಂಗದ ಪರಿಮಳ
ಚೆಲ್ಲವರಿಸುತ ಸುತ್ತ ಚೆಲುವನು
ತೂಗಿ ರಾಗದ ಹೂಗಳ

ಎಂತೊ ಸುಳಿದಿರೆ ರಸನಿಮಿಷದಲಿ
ಸುಮನ ತಾರಾ ಲೋಕಕೆ
ಚಿಕ್ಕೆ ಚಂದ್ರರ ತಿಳಿಯ ನಗೆಯೇ
ಮಧುರವಾಯಿತೆ ಹೃದಯಕೆ

ದಿನ ದಿನದ ಸಜ್ಜನರ ಸಂಗದಿ
ಭಾವ ಬೆರೆದನು ಭಾವದಿ
ತಾನೆ ಸಂಗ್ರಹವಾಗ ದೇನದು
ಶೀಲ ಸೌಗಂಧದ ನಿಧಿ

ತ್ಯಾಗ ಜೀವನದಲ್ಲಿ ಜೀವವ
ತೆಯ್ದ ಶರಣರ ಸನ್ಮನ
ಸೂಸಿಹುದು ಸಂಸ್ಕೃತಿಯ ಸೌಸವ
ತುಂಬಿಕೊಳ್ಳುವ ದಿನ ದಿನ

ಬೆಳೆವ ಬಾಳಿಗೆ ಸವಿ ಸುರಿಯುತಿದೆ
ಸದುವಿನಯ ಸಚ್ಚಂದನ
ಬಗೆಯಲೇತಕೆ ಬೇರೆ ಲೋಕವ
ಇಲ್ಲೆ ಅರಳಿದೆ ನಂದನ.

—ಡಿ. ಎಸ್. ಕರ್ಕಿ

ಕನ್ನಡಿಗರ ಗುರು

ಪಲ್ಲಕ್ಕಿಯನೇರಲಿಲ್ಲ ನೀವು-
ಮೆರವಣಿಗೆಯ ಕೋರಲಿಲ್ಲ;
ಗಾದಿಗೊರಗಿ ಕೂಡಲಿಲ್ಲ ನೀವು-
ಮೃಷ್ಟಾನ್ನವನುಣ್ಣಲಿಲ್ಲ.
ಬಂಗಾರವ ಬೇಡಲಿಲ್ಲ ನೀವು-
ಸಿಂಗಾರವ ಬಯಸಲಿಲ್ಲ.
ಕೀರ್ತಿಶನಿಯ ಬೆನ್ನ ಹಿಂದೆ
ಎಂದೆಂದೂ ಅಲೆಯಲಿಲ್ಲ.

ದೀನ ದಲಿತ ಜನತೆಯಲ್ಲಿ
ಒಂದಾದಿರಿ ನೀವು;
ಬಡಮಕ್ಕಳ ಸೇವೆಯಲ್ಲಿ
ಮುಂದಾದಿರಿ ನೀವು.

ನಾಗನೂರು ಹೆಸರಾಯಿತು
ನಿಮ್ಮ ಪಾದ ಸ್ಪರ್ಶದಿಂದ;
ಬೆಳಗಾವಿಯು ಕುಸುರಾಯಿತು
ನಿಮ್ಮ ಪ್ರೇಮ ವರ್ಷದಿಂದ.
ಕನ್ನಡಿಗರ ಸ್ವಾಮಿಯಾಗಿ
ಹುನುಮಂತನ ಬೀದಿಯಲ್ಲಿ
ನಿಂತ ವೀರಭದ್ರ !
ಗಡಿನಾಡಿನ ರುದ್ರ !

ನಿಮ್ಮ ನೇತ್ರ ದೀಪ್ತಿಯಿಂದೆ,
ನಿಮ್ಮ ತಪಃಶಕ್ತಿಯಿಂದೆ,
ಸ್ವಾರ್ಥರಹಿತ ದುಡಿಮೆಯಿಂದೆ
ಜನ ಕೂಡಿತು, ಹಣ ಕೂಡಿತು,
ಭವ್ಯ ನಿಲಯ ಮೈದಳೆಯಿತು.

ನಮಸ್ಕಾರ ನಮಸ್ಕಾರ
ಕನ್ನಡಿಗರ ಗುರುವಿಗೆ !
ನಮಸ್ಕಾರ ನಮಸ್ಕಾರ
ಬಡ ಜನತೆಯ ಗುರುವಿಗೆ !
ಬಡ ಮಕ್ಕಳ ಗುರುವಿಗೆ !

– ಬಸವರಾಜ ಕಟ್ಟೀಮನಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಾದ-ಕಾಯ !

(೧)

ನಾನಿರ್ದೆಯಜ್ಞಾತ-ತಿಮಿರ-ಗರ್ಭದಿ, ಗುರುವೆ,
ನಿನ್ನ ಮನದಾಳವೇ ಅರಿಯದಾಕಾಂಕ್ಷೆಯೊಲು !

ಉಗಿಬಂಡಿಯೊಂದಲ್ಪ-ಘಟನೆ ದೈವೀ-ವರವೆ ?
ತ್ವತ್ಪ್ರಾಣ-ಲಿಂಗ-ಸೂತ್ರದೊಳೆನ್ನ ನೀ ಸೆಳೆದೆ !
ಅಂತರದ ತೆರೆ ಸರಿದು, ನಿನ್ನಡಿಗೆ ನಾನೊಲಿದೆ,
ಓ ವಿರಾಡ್ವಾತ್ಸಲ್ಯ-ದರ್ಶನಾಪೇಕ್ಷೆಯಲಿ !

ದರ್ಶಿಸಿದೆ ! ಸ್ಪರ್ಶಿಸಿದೆ ಗುರು-ಕೃಪಾ-ನೇತ್ರದಲಿ !
ವರ-ಪ್ರಸಾದದಿ ಪೊರೆದೆ ಕಾರುಣ್ಯ-ಪಾತ್ರದಲಿ !

ಕದಿರೊಂದೆ ಸಾಕು, ಕಾರ್ಗತ್ತಲೆಯ ಚದುರಿಸಲು !
ಕಿಡಿಯೊಂದೆ ಸಾಕು, ಭವ-ಕಾನನವನುರಿಸಲು !
ಕಣ್ಣೊಂದೆ ಸಾಕು, ಭೂ-ಗಗನವನೆ ಸೆರೆಗೆಯ್ಯೆ !
ಕೃಪೆಯೊಂದೆ ಸಾಕು, ಬಾಳ್ಬೇಗೆಯನೆ ಬೇರ್ಗೊಯ್ಯೆ !

ಅಣುವಣುವಿನಲಿ ಮಹವು, ಅಲ್ಪಾಲ್ಪದಲಿ ಭೂಮ
ಪ್ರಸ್ಫುಟಿಸಿ, ಶಿವಮಹೋದ್ಧೇಶಕಣಿಯಹುದಮನು !

(೨)

ಅಡಿಗೆರಗುತಡಿಹುಡಿಯ ನಿಟ್ಟಿಸಿಯೆ ನಿಟ್ಟಿಸಿದೆ !
ಹುಡಿಯೆ ಗುಡಿಗಟ್ಟಿಯುಸುರಿತು, ಮುಡಿಯ ಬಾಗಿಸಿವೆ !

ನೆನಹು ಮತ್ತೇಳ್ದು ಮೈ ಕಿವಿಯಾಗಿಯಾಲಿಸಿತು !
ಹುಡಿಯ ಒಂದೊಂದೆ ನುಡಿ ಹೃದಯವನೆ ಕೀಲಿಸಿತು !

" ಶ್ರೀ ಪರಮ-ಸದ್ಗುರು-ಕೃಪಾ-ಪ್ರಸಾದದ ಬೀಜ,
ನಿಸ್ಸ್ವಾರ್ಥ-ತ್ಯಾಗ-ವೈರಾಗ್ಯ-ಸಂಪತ್ತೇಜ-
ದಲಿ ಮಿಡಿದು, ಸುದೃಢ-ಸಂಯಮಶೀಲ-ಪ್ರಖರೋಜ-
ವನೆ ಕುಡಿದು, ಬೆಳೆಬೆಳೆದು, ಬೆಳಬೆಳಗಿ ಸುರ-ಭೂಜ-
ವದೊ ಸದಾಶಿವ-ಚಿಂತನಾ-ನಂದನದಿ ಮೊಳೆತು

ಪೂತು ಪಣ್ತಂತಿರ್ಪ ರುದ್ರಾಂಬೆಯೊಡಲಿಂದೆ,
ಪೊಡವಿಗವತರಿಸಿತ್ತು ಶಿವಕೃಪೆಯ ಮಡಿಲಿಂದೆ,

ಹೃನ್ನೇತ್ರ ವಿಸ್ಫುರಿಸೆಯಕ್ಕರೆಯೆ ಶಿಶುವಾಗಿ,
ಓ ಪ್ರಸಾದದ ಮಹಿಮೆಯೆಲ್ಲ ಕೈವಶವಾಗೆ,
ಇಹ-ಪರದ ಕಲ್ಯಾಣ-ಸಂಪದಕೆ ಬಗೆಯೋತು !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೩)

" ಜೋಳಿಗೆಯು ! ಜೋಳಿಗೆಯು ! ಇದೊ ಇದೀ ಜೋಳಿಗೆಯು !
ಲೋಕ-ಸಂಗ್ರಹ-ಶೇಷ-ಕುಂಡಲದ ಹೇಳಿಗೆಯು !

ಋಷಿ-ಮೌನಿ-ಯತಿ-ಸಾಧು-ಸಂನ್ಯಾಸಿಯೋಳಿಗುಂ,
ಜವ್ವನವ ಒಪ್ಪಳಿದು ಮುಪ್ಪಿಡಿದ ಸೂಳೆಗುಂ,
ವಿಕಲಾಂಗ-ಭಿಕ್ಷುಕಾಲಸ-ಗಣದ ಬಾಳಿಗುಂ,
ಬೇಕಿದುವೆ ! ಇದೆ ಬೇಕು, ತತ್ಕ್ಷಣದ ಗೋಳಿಗುಂ !

ತ್ಯಾಗಿ-ಕರದಲಿ ವಿಶ್ವ-ಕಲ್ಯಾಣದೇಳಿಗೆಯು !
ಸೋಗಿ-ಕೈಯಲಿ ಸ್ವಾರ್ಥ-ಸಾಧನೆಯ ಜಾಳಿಗೆಯು !
ಇಂತು ಜೋತಾಡಿ ಯುಗಯುಗ-ಕಥಾ-ಪಾತ್ರದಲಿ
ಇಂತು ನೇತಾಡಿ ಯುಗಯುಗ-ವ್ಯಥಾ-ಸೂತ್ರದಲಿ

ತನ್ನ ಪಾರಂಪರ್ಯವನೆ ಕಾಯ್ದುಕೊಂಡುಳಿದು
ಬಂದಿಹುದು, ಯುಗಯುಗಾವಶ್ಯಕತೆಯಲ್ಲಿಳಿದು !
ಸ್ವರ್ಗ-ನರಕಗಳಿಲ್ಲಿಯುಯ್ಯಲೆಯನಾಡುತಿವೆ !
ಇದನೆ ಪಿಡಿವನ ಮನೋವೃತ್ತಿಯನೆ ತೀಡುತಿವೆ !

(೪)

" ಇಂತು ಜೋಳಿಗೆವಿಡಿದು ರುದ್ರಾಕ್ಷಿಯಾ ಮಠಕ್ಕೆ-
ಅಲ್ಲಮ-ಪ್ರಭು,-ಸಿದ್ಧರಾಮ-ಸ್ಥಾಪಿತ ಮಠಕೆ,
ರುದ್ರಾಂಬಿಕಾ-ಪುತ್ರ, ತ್ಯಾಗ-ಸೇವಾ-ಸತ್ರ

ಬಂದನೇಳನೆಯುತ್ತರಾಧಿಕಾರಿಯು ಆಗಿ !
ಶಿವಯೋಗ-ಮಂದಿರದಿ ಶಿವಯೋಗದಲಿ ಬಾಗಿ,
ಪೂರ್ವಾಶ್ರಯವ ನೀಗಿ, ಪುನರ್ಜಾತನೆಯಾಗಿ,

ಗುರು-ಲಿಂಗ-ಜಂಗಮರ ಸಹವಾಸದಲಿ ಮಾಗಿ
ಹದಗೊಳಿಸಿದನು ಬಗೆಯ ಭೂಮಿಕೆಯ ಸುಚರಿತ್ರ !

ಶರಣ-ಜೀವನದಲ್ಲಿ ಕರಣಗಳ ಕಿರಣಿಸುತೆ-
ಶರಧಿ-ಜೀವನದಲ್ಲಿ ತೊರೆ ಬಾಳ ಮರಣಿಸುತೆ,
ವ್ಯಕ್ತಿ-ವ್ಯಕ್ತಿಯಲಿ ಶಿವ-ಶಕ್ತಿಯನೆಯನುಭವಿಸಿ
ದೃಷ್ಟಿ-ದೃಷ್ಟಿಯಲಿ ಶಿವ-ಸೃಷ್ಟಿಯನೆಯನುಗೊಳಿಸಿ

ವಸುಧೈವ-ಕೌಟುಂಬಿಕಂ ತಾನು ಹೊಳೆದಿಹನು !
ದಾಸೋಹ-ಭಾವದಲಿ-ಸೇವೆಗಿಳೆಗಿಳಿದಿಹನು !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೫)

" ವಾಣಿ-ವೀಣೆಯ ಮಧುರ ಮಂಜುಳ ನಿನಾದದಲಿ
ಅರಿಹೊಟ್ಟೆ ಬರಿಹೊಟ್ಟೆಯವರಾರ್ತನಾದವಲ !

ಬೆರೆದು, ಸ್ವಾಮಿಯ ಹೃದಯವನೆ ಮಿಡಿದು ಕಡೆದಿತ್ತು
ಅವ್ಯಕ್ತ-ವಿಷ್ಣಲತೆ-ಯೊಳಬಗೆಯ ಜಡಿದಿತ್ತು !

ಘೋರಾಂಧಕಾರದಲಿ ಬರಿ ' ಬರಿ 'ಯನಪ್ಪಿರುವ
ನಿಟ್ಟುಸಿರೆಯುಸಿರಾದನಗ್ನ-ಬಾಲಕ-ಕೋಟಿ !

ಅಜ್ಞಾನ-ತಿಮಿರದಲಿ ದಾರಿಯನೆ ತಪ್ಪಿರುವ
ಕಣ್ಣುಗುರುಡು, ಬರಿಕೊರಡು ಬಾಲಕರು ಶತ-ಕೋಟಿ !

ಕಾರಿರುಳ ಹುತ್ತಿನಿಂ ಕಾಳೋರಗವು ಎದ್ದು
ಹೆಡೆ ಬಿಚ್ಚಿ, ಕಚ್ಚಿಳಿಯ ವಿಷಕಾರಿದಂತಾಯ್ತು !

ಕಾಳಾಂಧಕಾರ-ಕಾಳಿಂದಿಯಲಿ ಮುಗಿಬಿದ್ದು
ಕುರುಡಜಗ ಪಾತಾಳಕೋ ಜಾರಿದಂತಾಯ್ತು !

ನಿರ್ಲಿಪ್ತನೂ ದುಃಖ-ಲಿಪ್ತ-ತಪ್ತನು ಆದ !
' ಹಾ ! ಸಮಾಜವೆ ! ' ಎಂದು ಶೋಕ-ಭಾರದಿ ಸೀದ !

(೬)

" ಓ ಅನ್ನಪೂರ್ಣಾಂಬೆ, ನೀ ಮೊದಲು ಕೃಪೆಯಾಗು !
ತನು-ಮನಃ ಪ್ರಾಣ-ಚೈತನ್ಯ-ಸ್ಪಂದನ ಲೀಲೆ,
ಸುಖ-ಶಾಂತಿ-ಸಂತುಷ್ಟಿ-ಸಂಪುಷ್ಟಿಗಳ ಮಾಲೆ,
ಶಕ್ತಿ-ಸಾಹಸ-ಬುದ್ಧಿ-ಸಿದ್ಧಿಃವಿಕರ್ಸ-ಶೀಲೆ,
ಜ್ಞಾನ-ವಿಜ್ಞಾನ-ನಾನಾ-ಕಲಾ-ಗುರುಃಕೀಲೆ,
ಹರಿತ-ಸುಫಲ-ಸ್ವಸ್ಯ-ರಸ-ರಾಜಿ-ಶ್ರೀಶೈಲೆ,
ವಿಶ್ವೋಪಕೃತಿ-ನಿರಂತರ-ದಾನ-ವರ-ಲೋಲೆ,

ತ್ವರೆಮಾಡು ! ತ್ವರೆಮಾಡು !! ನೀ ಮೊದಲು ಕೃಪೆಯಾಗು !
" ಅನ್ನ-ದೇವರ ಮುಂದೆ ಇನ್ನು ದೇವರು ಉಂಟೆ ? "
ಅನ್ನವಿಲ್ಲದೆ ಜಗದ ಬಾಳು ಬದುಕುವದುಂಟೆ ?

ಶ್ರೀ-ವಾಣಿ-ಸತ್ಕೃಪೆಗೆ ನಿನ್ನ ಕೃಪೆ ಶ್ರೀಕಾರ !
ಭೋಗ-ಯೋಗದ ಬಲಕು ನಿನ್ನ ಬಲವಾಧಾರ !

ಅದಕಕ್ಷಯ-ಪ್ರಸಾದವೆಯಾಗಿ ಮೈದೋರು !
ತಾಯೆ, ಬೆಳಕಲಿ ಕ್ಷುಧಿತ-ಕುಲಕೆ ನೀ ಕೃಪೆಬೀರು !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೭)

" ಸ್ವಾಮಿಯುತ್ಕಟ-ಹೃದಯ-ಸಂಕಲ್ಪ-ಪ್ರಾರ್ಥನೆಯು
ರೋದೋಂತ ಪರ್ವಿದುದು! ದಿಗ್ದೇಶವೆಲ್ಲವೂ
ರೋಮ-ಹರ್ಷಿತಮಾಗಿ ತರತರಂಬೋಗಿಹುದು!
ಈ ವಸುಂಧರೆಯೆದೆಯು ಹಿಗ್ಗಿ ಬಾಯ್ದೆರೆದಿಹುದು!

ಸ್ವಾಮಿಯಂತಸ್ತಪದ ಚೇತನೆಯು ಪ್ರಾರ್ಥನೆಯ
ಬೆಂಬತ್ತಿಯವಿರತಂ ಭೂಕೋಶವೆಲ್ಲವೂ
ಹಸ್ತವಶಮುಪ್ಪಂತೆಯಿಡಿನಾಡನಲೆದಿಹುದು!
ಗೊ-ಗಣವು ಸ್ವಾಗತಿಸಿ ಶ್ರೀಸುಧೆಯ ಕರೆದಿಹುದು!

ಆ ಅನ್ನಪೂರ್ಣಾಂಬೆ ಪಚ್ಚ ಪಸುರಿನೊಳೆಸೆದು
ದಾನಕರ-ಕೋಟಿಯಲಿ ಧಾನ್ಯ-ರಾಶಿಯನೆರೆದು
ಹರಿಸಿಹಳು! ಶಿವನಿಗರ್ಪಿತ-ರಾಶಿ-ಪಾಕವದು

ಸ್ವಾಮಿಯುಜ್ವಲ-ತಪಸ್ಕಾಯದಲಿ ನೆರೆ ಹರಿದು
ಪರಮಾಕ್ಷಯ-ಪ್ರಸಾದವೆಯಾಯ್ತು ತಾನೊಸೆದು!
ಮಣಿದಿತ್ತು ಲೋಕವದು ! ತಣಿದಿತ್ತು ನಾಕವದು !

(೮)

" ಇಂತಾ ಪ್ರಸಾದ-ಕಾಯನು ಹಿಡಿದ ಜೋಳಿಗೆಯು
ಕೋಟಿ-ಕರಗಳ ಶಕ್ತಿ, ಕೋಟಿ-ದಾನದ ಕೇಂದ್ರ,
ಹೃದಯ-ಹೃದಯಂಗಳಾ ಸಾಮರಸ್ಯದ ಸಾಂದ್ರ

ತಾನಾಗಿ ಪರಿಣಮಿಸಿದುದು ಲೋಕದೇಳಿಗೆಯು !
ಹಸಿದ ಬಡ ವಿದ್ಯಾರ್ಥಿ-ಗಣವಿಲ್ಲಿ ನೆರೆದಿಹುದು
ಶಾರದೋಪಾಸನೆಗೆ ನೂರ್ನೂರು ಸಂಖೆಯಲಿ

ತಣಿದೀ ಪ್ರಸಾದ-ಕೃಪೆಯಿಂ, ಸ್ವಾಮಿಯಂಕೆಯಲಿ !
ಉತ್ಕರ್ಷ-ಹರ್ಷ-ವರ್ಷವು ಧಾರೆಗರೆದಿಹುದು !

ಈ ಪ್ರಸಾದದ ಹೃದಯ-ವಲಯವೇ ಇಂದಿಲ್ಲಿ
ಸತ್ಪ್ರಸಾದದ ನಿಲಯವಾಗಿ ಶೋಭಿಪುದಿಲ್ಲಿ !

ಓ ವಿರಾಟ್-ಪುರುಷ-ಮುಖದಿಂ ಪರಂಪರೆಯಾಗಿ
ನುಗ್ಗಿ ಬಹ ವಿದ್ಯಾರ್ಥಿ-ಗಣಕೆ ಮಂಗಲ ಧಾಮ,

ಸುಜ್ಞಾನ-ಭೂಮ, ಕೈವಲ್ಯ-ನಿರವಯ-ವ್ಯೋಮ
ತಾನಾಗಿ, ಮೆರೆಯುತಿದೆ ಸ್ವಾಮಿ-ತಪಕೊರೆಯಾಗಿ !

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೯)

ಇನ್ನುಮಿನ್ನೂಯಿನ್ನು ಸ್ವಾಮಿ-ತಪವುಗಿದಿಲ್ಲ !
ಅವರ ಹೃಚ್ಚೈತನ್ಯವೂ ಕಾಲ ತೆಗೆದಿಲ್ಲ !
ನವ್ಯ-ಭವ್ಯವುದಾಗಿಯಿಂದೇಳ್ದ ನಿಲಯವೂ

ನಾಳೆ ಕಿರಿದಪ್ಪುಬಹುದಿಡಿಕಿರಿದ ವಿದ್ಯಾರ್ಥಿ-
ನಿಕರಕ್ಕೆ ! ದಾನಿಗಳ ಬಾಳ್ಗೆ ತೆರೆ ಬಿದ್ದಿಲ್ಲ !
ಸಹಕರಿಪ ಭಕ್ತ-ಸಂತತಿಗು ಕೊನೆಯಾಗಿಲ್ಲ !
ಇಲ್ಲ ! ಲಯಿಸಿಲ್ಲ ಸದುದಾರಿಗಳ ವಲಯವೂ !

ನಾಳೆಯೂ ಪೂರ್ತಿಯೇಂ, ಇಂದು ಕಾಣುವ ಪೂರ್ತಿ ?
ಓ ಸದುದ್ದೇಶ-ಸಂಭವ-ಮಹಾ-ಕಾರ್ಯಕ್ಕೆ
ಕೊನೆ ಪೂರ್ತಿಗಳೆಯಿಲ್ಲ ! ಲೋಕವಿಸ್ತಾರಮಿದು
ಲೋಕೋಪಕಾರಿಯಹ ಕಾರಣದಿ ! ಓ ಗೆಳೆಯ,
ಸಾರ್ವಕಾಲಿಕ-ಸಾರ್ವಜನಿಕಮಿದು, ನಮ್ಮಿಳೆಯ

ಸರ್ವಕಾಲದ ಜನಕೆ ಬೇಕೆನಿಪ ಕಾರಣದಿ !
ಅದಕಂತ್ಯಪೂರ್ತಿಗಳೆಯಿಲ್ಲವೀ ಕಾರ್ಯಕ್ಕೆ !

(೧೦)

" ಅಂತ್ಯಪೂರ್ತಿಗಳಿಲ್ಲದೀ ಮಹಾಕಾರ್ಯವನು
ಹಮ್ಮಿ ನಿಂತಿಹನಿಲ್ಲಿ ಮಹಾಸ್ವಾಮಿ ಘನ-ತಪಕೆ !
ಅವನು ಹಚ್ಚಿದ ಮಹಾ-ಕಾರುಣ್ಯ-ಚಿಜ್ಜ್ಯೋತಿ
ಬೆಳಗುವದಹರ್ನಿಶಂ ನಿರ್ವಾತ-ಮೌನದಲಿ !
ಸೋಂಕುತಾ ಜ್ಯೋತಿಯುಸಂಖ್ಯ ಹೃದಯ-ಪ್ರಣತಿ
ಗಳು ಮುಂದುವರಿದಿಹವು, ಸ್ವಾಮಿಯೌದಾರ್ಯವನು
ಮುಂದಿರಿಸಿ, ಶ್ರೀಶಾರದಾನುಗ್ರಹದ ತಪಕೆ,
ಬೆಳಗುತೊಳಗೊಳಗೆಯಂತರ್ಮುಖ-ಧ್ಯಾನದಲಿ !
ಇಂತೀ ಪ್ರಸಾದ-ಕಾರ್ಯ ಮಹಾ ಮಣಿಹಮಿದು.
ಸುಪ್ರಸಾದದ ವ್ಯಾಪ್ತಿ-ದೀಪ್ತಿಗಳ ಕಂಡರಿದು
ಬಾಯ್ದೆರೆದು ಮೌನದಲಿ ನಿಂತಿಹುದು ಬಗೆ-ಬೆರಗು !
ಶ್ರೀಕೃಪಾಶೀರ್ವಾದ-ಸುಪ್ರಸಾದವ ಪಡೆದು,
ಪಡೆ ಪುನರ್ಜನ್ಮವನು, ಪೂರ್ವಾಶ್ರಯವ ತೊಡೆದು !
ಪೊಡಮಡುತೆ ಮುಡಿಬಾಗುತಡಿಗೆರಗು ! ನೆರೆ ಕರಗು "

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೧೧)

ನಿಂತೆಯೇ ನಿಂತಿರ್ದೆ ಹುಡಿಸುಡಿಗೆ ಕಿವಿಗೊಟ್ಟು!
ಬಾಹ್ಯ ಪ್ರಪಂಚವನೆ ಮರೆದಲ್ಲಿ ಮನವಿಟ್ಟು!

ಇಂತು ನುಡಿದಾ ಹುಡಿಯು ಭಕ್ತಿಯಲಿ ಕಂಪಿಸಿತು!
ಕಣಕಣವು ಸ್ವಾಮಿಯಡಿಯೆಡೆಗೆ ತಾ ತವಕಿಸಿತು!

" ಏಕಿಂತು ತವಕವೋ ! ಏಕಿನಿತು ಆತುರವೊ !
ಕಂಪಿಸುವೆ! ಸ್ಪಂದಿಸುವೆ! ಒಳಗಾವ ಕಾತರವೊ? "

ಎಂಬೆನ್ನ ಪ್ರಶ್ನೆಗಾ ಹುಡಿಯು ಚಣ ತಡಿಯಿತ್ತು!
ಭಕ್ತಿಯಾವೇಶದಲಿ ಕಂಪಿಸುತೆ ನುಡಿಯಿತ್ತು!

" ಸುಕ್ಷೇತ್ರ–ತೀರ್ಥ–ಪರಮಾರ್ಥಗಳು ಇವರಡಿಯು!
ವೈಕುಂಠ-ಕೈಲಾಸವೆಲ್ಲವೂ ಇವರಡಿಯು !

ಸದ್ಭಕ್ತಿ-ಶಕ್ತಿ-ಮುಕ್ತಿಗಳೆಡೆಯು ಇವರಡಿಯು !
ಸ್ಪರ್ಶ-ಮಣಿ ಇವರಡಿಯು ! ಹರ್ಷಖಣಿ ಇವರಡಿಯು! "

ಎಂದು, ಮತ್ತವರಡಿಯ ಸೇರಿ ಹುಡಿ, ಹುಡಿಯಾಯ್ತು !
' ನಾನು ' ಮೆಲ್ಲವು ಲಯಿಃಸಿಯವರಡಿಯ ಹುಡಿಯಾಯ್ತು!

ಈಶ್ವರಿ ಸಣಕಲ್ಲ

ಕರ್ಮಯೋಗಿ

ಕಾರುಣ್ಯವೇ ಕರುಳ ಕಕ್ಕುಲತೆಯಲಿ ಕರಗಿ
ತ್ಯಾಗ ಸೇವಾ ಭಾವ ಮೈದಾಳಿತೆಂಬಂತೆ
" ಶಿವಬಸವ " ಶುಭನಾಮ ಕಲ್ಯಾಣಧಾಮ.
ನವ ಜೀವನೋದಯಕೆ ನಾಂದಿಯಾಗಿ
ದೀನ ದಲಿತರ ಸೇವೆ ಜನ್ಮದಾ ಗುರಿಯೆಂದು
ಸರ್ವೋದಯವೆ ಸಿದ್ಧಿ, ನಿಜಮೋಕ್ಷವೆಂದು
ನಾಡ ಬಡ ಹಸುಳೆಗಳನೆತ್ತಿ ಮುದ್ದಾಡಿ
ನಾಡಿನುದ್ಧಾರಕ್ಕೆ ದೇಹ ತೇಯ್ದಿಹ ಯೋಗಿ !
ಕಾಡು ಬೀಡುಗಳಲ್ಲಿ ತಿರಿದು ಭಿಕ್ಷೆಯ ಬೇಡಿ
ಹೃದಯ ಮಂಥನಗೈದು ಹಾಲಾಹಲವನೀಂಟಿ
ಎದೆಯ್ಮಹಾಲನ್ನೂಡಿ ಸರ್ವರಿಗೂ ತಾಯಾಗಿ
ತ್ಯಾಗ ಯೋಗಕೆ ಸಂದ ಕರ್ಮಯೋಗಿ !
ಎಂಥ ತ್ಯಾಗದ ತೀರ್ಥವದು ನಿಮ್ಮ ಎದೆಯು
ಎಂಥ ನೇಹದ ನಿಧಿಯು ಓ ನಿಮ್ಮ ಬಗೆಯು !

– ಎಸ್. ಡಿ. ಇಂಚಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೆನಕೆ

" ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ
ಬನವಾಸಿ ದೇಶಮಂ"
ಎಂದ ಪಂಪನ ಧೀರ ಘೋಷಣೆಯ ಮಾರ್ನುಡಿದು
ಬೆಳಗಾವಿ ದೇಶಮಂ ನಾಂ ನೆನೆಯುತಿರುವೆ !
ಎಲ್ಲಿದ್ದರೂ ಸರಿಯೆ, ಎಂತಿದ್ದರೂ ಸರಿಯೆ
ಎಳೆತನದ ಗೆಳೆತನದ ಮಧುರ ಸ್ಮೃತಿಗಳ ನಿಧಿಯು
ಎಂದು ತೀರದ ಬುತ್ತಿಯೆಂಬುದನು ಮರೆಯೆ !

ಅಲ್ಲಿ, ಆ ನಗರದಲಿ ಪಶ್ಚಿಮದ ತುದಿಯಲ್ಲಿ
ತಲೆಯೆತ್ತಿ ನಿಂದಿರುವ ಶಾಲೆ ಕಾಲೇಜುಗಳ ಹರಕೆ ಹೊತ್ತು
ಬೆಳೆದು ಬಂದವರಿಂದು ಮರೆಯಲುಂಟೇ ತಾಯ ಕೈಯ ತುತ್ತು ?
ಒಂದೊಂದು ನೆನಹಿನೊಳು ಒಂದೊಂದು ಅನುಭವವು
ಚಿತ್ರ ಚಿತ್ರಾಕಾರವಾಗಿ ಮನದುಂಬುವುದು ಎಲ್ಲಿದ್ದರು,
ಹುಡುಗತನವನ್ನುಳಿದು ಯಾವ ಹಂತದ ಮೇಲಿದ್ದರು !

ಕೋಟೆಯೊಳಗಿನ ಹಸಿರು ಗಿಡಮರದ ತಂಪಿನೊಳು
ಕುಳಿತು ಓದಲು ಹೋಗಿ
ಸೊಂಪು ನಿದ್ದೆಯ ಹೊಡೆದು ಬಂದವರು ನಾವು !
ಲಕ್ಷ್ಮೀಟೇಕಡಿ ದಿಬ್ಬದ ಕಡೆಗೆ ಸಂಚರಿಸ ಹೋದವರು
ನಿವೃತ್ತ ಮುದಿಜನರು ಜೊತೆಯಾಗಿ ಬರುವುದನು
ಕಂಡು ಗೇಲಿಯ ಮಾಡಿ ನಕ್ಕವರು ನಾವು !
ಶಾಲೆ–ಕಾಲೇಜಿನಲಿ ಪಾಠಗಳ ಪಡೆದವರು
ಪೀ–ಟೀ ಎಂದರೆ ಬರಿಯ ' ಟೀ ' ಒಂದೆ ಸಾಕೆಂದು
ಆಟ ತಪ್ಪಿಸಿ ಗೇಟು ದಾಟಿದವರು !

ನಾಟ್ಯ-ಭಾಷಣ--ಕವನ-ಯಾವ ಸ್ಪರ್ಧೆಯೆ ಇರಲಿ,
ನಾ ಮುಂದೆ ನೀ ಮುಂದೆ ಎಂದು ಮುಂದಾದವರು
ಸೋತರೂ ಸೋಲುಮೊಗ ಹಾಕದೆಯೆ ನಲಿದವರು
ಅಂದು ಬಿತ್ತಿದ ಬೆಳೆಯ ಸುಗ್ಗಿ ಮಾಡುತ್ತಿಹೆವು
ಇಂದು ಹಿಂದಿನದೆಲ್ಲ ನೆನೆದು ನೆನೆದು !
ನಾಡು ತೋರಿದ ದಾರಿ ಹಿಡಿದು ನಡೆದು !!

— ಬಿ. ಎ. ಸನದಿ

ನೀ ಮೊದಲು ತೊಲಗು

ಓ ಜಡತೆ ! ನೀ ಮೊದಲು ಇಲ್ಲಿಂದ ತೊಲಗು
ಎಲ್ಲಾದರೂ ಎಚ್ಚರಾಗದೊಲು ಮಲಗು.
ತಳವೂರಿ ಕುಳಿತಲ್ಲಿ ಕಿತ್ತಲಾಗದ ಹುದಿಲು
ಅದಕೆಂದೆ ಹೇಳುವೆನು ನೀ ಮೊದಲು ಕದಲು.
ನಿನ್ನ ನೆರಳಿಗೆ ಬುದ್ಧಿಯಾಗುವುದು ಮಸಕು
ಹೊದೆಯುವುದು ಉಸಿರುಗಟ್ಟುವ ಗಡಸು ಮುಸುಕು
ಪ್ರಾಣದುತ್ಸಾಹಕ್ಕೆ ಬಿಗುಮಾನ ಬೇಡಿ
ಒಂದಡಿಯ-ನಿಡದಂತೆ ಮಲಗುವುದು ಗಾಡಿ
ಹೆಪ್ಪುಗಟ್ಟುವುದಾಗ ಮೈ-ರಕ್ತ ತಡೆದು
ಕಣ್ಣು ರೆಪ್ಪೆಯ ಹೊತ್ತು ಏದುವುದು ಕೆಡೆದು
ಮೋಡ ಬಯಲಾದೊಡನೆ ಬೆಳಕಿನೈಸಿರಿ ಜೋಡು
ರವಿಕಿರಣ ಕತ್ತಲೆಯ ಮೊತ್ತಕ್ಕೆ ಕೇಡು.
ಕರೆಯದಿದ್ದರೂ ಹೆರರ ಮನೆಗೇಕೆ ಬರುವೆ ?
ಕದತೆರೆದು ನೀನೇಕೆ ಒಳನುಗ್ಗುತಿರುವೆ ?
ನಿನ್ನ ಆಸರದಲ್ಲಿ ರೋಗರುಜೆ ಜಾತ್ರೆ
ನೋವು ನರಳಿಕೆಗಳಿಗೆ ಮೈಯೊಂದು ಪಾತ್ರೆ.
ಜಡದ ಕಗ್ಗತ್ತಲೆಗೆ ಕಾವು ಬಲ ಬೆಳಕು
ಇಂಗುವವು ತಾವಾಗಿ ಹೊಸಕಾಯಿ ಹುಳುಕು.
ನನ್ನ ಮೈಗಿಂಬಿರಲಿ ತುಸು ದೂರ ನಿಲ್ಲು
ಉಸಿರು ಕಟ್ಟಿಸಬೇಡ ಕಮರುವುದುಹುಲ್ಲು
ಬಣ್ಣ ಬಣ್ಣದ ಹೊದಿಕೆ ನಾ ಚೆಲ್ಲಿಕೊಟ್ಟು
ಹಾಯಾಗಿ ನಿಲ್ಲುವೆನು ಮೈ ಚೆಳಿಯಬಿಟ್ಟು
ನನಗೆ ಬೇಡಾದವರ ಸಹಿಸುವಳೇ ತಾಯಿ
ಬಲಿತು ಹಣ್ಣಾಗುವುದೆ ಹೀಚುಮಿಡಿಕಾಯಿ
ಮುಗಿದು ಹೋಗಲಿ ಇಂದೆ ಈ ನಿನ್ನ ಸ್ನೇಹ
ಒಲವಿನಾರತಿಗೆರೆವೆ ತಿಳಿಯಾದ ನೇಹ
ಆರದಾರತಿಹಚ್ಚಿ ಶಿವನಡಿಯ ಮುಂದೆ
ಕಣ್ಣು ಪಿಳುಕಿಸಿ ನಲಿವೆ ನಿಶ್ಚಯಕೆ ಬಂದೆ
ಓ ಹೊರಡು ! ತೀರ ಹಳೆಗೆಳೆತನಕೆ ಶರಣು
ಬಿಡೆಯಕ್ಕೆ ಬೀಳುವುದು ಮರಣಕ್ಕೆ ಹವಣು.
ಓ ! ಜಡತೆ, ನೀ ಮೊದಲು ಇಲ್ಲಿಂದ ತೊಲಗು
ಎಲ್ಲಾದರೂ ಎಚ್ಚರಾಗದೊಲು ಮಲಗು

ಸಿಂಪಿ ಲಿಂಗಣ್ಣ, ಚಡಚ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಯೋತಿ ಬೆಳಗುತಿದೆ ಬೆಳಗಾವಿಯಲ್ಲಿ!

ಸ್ಫಟಿಕದ ಘಟದಂತೆ ಒಳಹೊರಗೆ ಒಂದಾಗಿ
ಅಂತರಂಗದ ಜ್ಯೋತಿ ಬಹಿರಂಗದಲಿ ಬೆಳ ಬೆಳಗಿ,
ನಿತ್ಯ ನೂತನವಾಗಿ, ಸಚ್ಚಿದಾನಂದ ಮೂರ್ತಿಯಾಗಿ,
ಅದೊ ನೋಡು ನೋಡಲ್ಲಿ ! ಬೆಳಗುತಿದೆ ಬೆಳಗಾವಿಯಲ್ಲಿ !!

ಶಿವನೆ ಬಸವನೆ ಆದನೋ, ಬಸವ ಶಿವನಾದನೋ !
ಓದಿಗೊತ್ತು; ಕೇಳಿಗೊತ್ತು; ಆದರೇನಿಲ್ಲಿ,
ಅವರೀರ್ವರೊಡಗೂಡಿ ಒಂದಾದರೆಂಬುದನು ನೋಡಿಗೊತ್ತು,
ಪ್ರತಕ್ಷ ಚಿತ್ತದಲಿ ಅಚ್ಚೊತ್ತಿದಂತಿರ್ದ ಪರಶಿವನ ಮೂರ್ತಿಯದು,
ಕಣ್ಮುಂದೆ ಕಟ್ಟುತಿದೆ ಶ್ರೀ ! ಶ್ರೀ ! ಶ್ರೀ !
ಶಿವಬಸವಸ್ವಾಮಿಗಳದೊ ! ನಾಗನೂರ ಶ್ರೀಗಳದೊ ! ನಮೋ ನಮೋ !!

ಮಾತು ಮೌನದಲಡಗಿ ಮೌನವೇ ನಾದಗೊಂಡಿಹುದಿಲ್ಲಿ !
ಇಲ್ಲಿ, ಈ ಜ್ಯೋತಿರ್ಲಿಂಗದಲ್ಲಿ !!
'ಲಿಂಗಮಧ್ಯೆ ಜಗತ್ ಸರ್ವಂ' ಎಂಬು ಕೇಳಿದ್ದೆ, ಅದು ಹೇಗೆ ಎಂದಿದ್ದೆ !
ಇದೋ ಇಲ್ಲಿ ಈ ದಿವ್ಯ ಜ್ಯೋತಿಯಲ್ಲಿ, ಈ ಲಿಂಗದಲ್ಲಿ
ಇನ್ನೂರು ಮುನ್ನೂರು ದೀಪ್ತಿಗಳು ಬೆಳಗುತಿವೆ ಈ ದೇಹ ದೇಗುಲದಲ್ಲಿ !

ಎಂದೊ ಕಂಡಿಹ ಕನಸು ಇಂದು ನನಸಾಗಿಹುದು,
ಎಂದೊ ಬಿತ್ತಿದ ಬೀಜ ಇಂದು ಮರವಾಗಿಹುದು.
ಚಿಕ್ಕ ಮಕ್ಕಳ ಕಂಡು ನಕ್ಕಿರೊಮ್ಮೆ ! 'ಆ ಹೃದಯಗಳು
ಮೃದು ಹೃದಯಗಳು, ಅಲ್ಲಿ ದೇವನಿಹನೆಂದಿರಿ;'
ಆ ಭಾವದಲಿ ಅಂದು ಮಕ್ಕಳಲಿ ದೇವರನು ಕಂಡಿರಿ.

ಅಂತೆಯೇ ಅವರ ತಾಯಿಯಾದಿರಿ; ಪೂಜೆ ಪ್ರಾರಂಭವಾಯ್ತು.
ಸೇವೆ ಜೀವನ ಧ್ಯೇಯವಾಯ್ತು ! ಮಕ್ಕಳ ಪ್ರೇಮ ಮೊದಲಾಯ್ತು.
'ದಾಸೋಽಹಂ' ಎಂದಿರಿ ದೀನ ದಲಿತರ ಕಂಡು ಮಮ್ಮಲನೆ ಮರುಗಿದಿರಿ.
ಅನ್ನ ದಾನಕ್ಕಿಂತ ಇನ್ನು ದಾನವದುಂಟೆ? 'ಎದೆಯ ದನಿ ಧರ್ಮನಿಧಿ'
ಎದೆ ಕರಗಿ ನೀರಾಯ್ತು; ಬಡಮಕ್ಕಳನ್ನೆತ್ತಿ ಕಣ್ಣೀರನೊರಿಸಿದಿರಿ.

ತಾಯ್ಗುರುಳಿನಿಂದೆತ್ತಿ ಮಕ್ಕಳನು ಉದ್ಧರಿಪ ಹೊಣೆ ಹೊತ್ತಿರಿ;
ಪರುಷ ಹಸ್ತವು ಮುಟ್ಟೆ ಪ್ರಸಾದವಾಯಿತು ಅನ್ನ;
ಪ್ರಸಾದ ಬಲದಿಂ ಪುಷ್ಟಿಗೊಂಡಾ ಅನ್ನ, ಜ್ಞಾನದಲಿಳಿಯಿತು.
ಪ್ರಸಾದ ನಿಲಯವು ಜ್ಞಾನ ಸತ್ರವದಾಯಿತು.
ಜ್ಞಾನ ದಾಸೋಹದಲಿ ಅನುಭವ ಬೆರೆತು ಬಿನ್ನಣವಾಯಿತು.
ಪ್ರಸಾದ ಮಂದಿರ, ಜ್ಞಾನಮಂದಿರ ಅನುಭವದ ಮಂದಿರವೆ ತಾನಾಯ್ತು.
ಶರಣಜನ ಸಂಸ್ಕಾರವಾಯಿತು, ತತ್ವ ಮಂಥನ ನಡೆಯಿತು.
'ಇಲ್ಲಿ ಸಲ್ಲುವರಲ್ಲಿ ಸಲ್ಲುವರೆಂಬ' ಮಾತೇ ಲಿಂಗ ಜ್ಯೋತಿಯದಾಯಿತು.
ಲಿಂಗ ಲಿಂಗದ ಮಧುರ ಮಿಲನವೆ ಸಮರಸದ ಸಂಗೀತ ಹಾಡಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂತರಂಗದ ಪ್ರೇಮ ಉಕ್ಕಿ ಇಂತು ಮಂಟಪ ಪೂಜ್ಯವಾಯಿತು.
ಅನುಭವದ ಮಂಟಪ ಮೇಲೆ ಎದ್ದಿತು, ಬೆಳಗಾವಿ ಬೆಸ್ಪನೆ ಬೆಳಗಿತು.
ಇಂತು ಇದುವೇ ಶಿವನ ಸೃಷ್ಟಿ; ಅಣ್ಣಬಸವನ ದಿವ್ಯದೃಷ್ಟಿ,
ಶಿವಬಸವ ಸ್ವಾಮಿಗಳ ಸಮರಸದ ಸೃಷ್ಟಿ.

ಕನ್ನಡ ಕಳಕಳಿಯು ಬೆಳಗುತಿಹುದಿಲ್ಲಿ,
ಭಾರತದ ಭಾವೈಕ್ಯ ಮೆರೆಯುತಿಹುದಿಲ್ಲಿ,
ವಿಶ್ವ ಬಾಂಧವ್ಯದಾಗರವು ತಾನು ! ಇದೊ ಪ್ರಸಾದ ನಿಲಯ !!
ಬೆಳಗಾವಿಗಿದು ಕೈಗನ್ನಡಿ ! ಕನ್ನಡದ ಸಂಸ್ಕೃತಿಯ ಕೈಪಿಡಿಯು !
ಬೆಳೆವ ಬೆಳಗಾವಿಯನೆ ಬೆಳಗುವ ಬೆಳ್ಳನೆಯ ಬೆಳಕು !
ಸತ್ಯ ಸೌಂದರ್ಯಗಳ ನಿತ್ಯ ಪ್ರತಿಬಿಂಬಿಸುವ ಸ್ತುತ್ಯ ಕಾಣಿಕೆಯು !
ಭಕ್ತಿ ಭಾವಗಳನ್ನು ಎತ್ತರಿಸಿ ಬಿತ್ತರಿಸಿ ಮಾನವೀಯತೆಯನ್ನೆ
ನೆಲೆಗೊಳಿಸಿ ನಿಲ್ಲಿಸುವ ನಿಜದ ನಿಲಯ !

ಕೃತಿಯು ಮಾತನಾಡುವುದಿಲ್ಲ, ಕರ್ತೃ ಮೌನಿ.
'ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದಿಳಿತಂದ ಶಿವನು !'
'ಕತ್ತಲೆಯ ಪಾಳೆಯವ ರವಿಯು ಹೊಕ್ಕಂತಾಯ್ತು !'
ಮುಕ್ತಿಪಥರೆಡು ದಾರಿದೀಪವಾಯ್ತು.
'ತನುವೆಲ್ಲ ಸ್ವಯಂಲಿಂಗ, ಮನವೆಲ್ಲ ಚರಲಿಂಗ,
ಭಾವವೆಲ್ಲವು ಮಹಾಘನದ ಬೆಳಗು;'

ನಿಮ್ಮ ಈ ಉನ್ನತ ಮಹೋನ್ನತದ ನಿಲವಿಂಗೆ ಶರಣು ! ಶರಣು !!
ಜಯ ಜಯತು ಜಯತು ಚಿಚ್ಛಕ್ತಿ ಕಾಯಂಗೆ,
ಜನಮನವ ಬೆಳಗಿದೀ ಜನತಾ ಜನಾರ್ದನಂಗೆ,
'ಹೆಜ್ಜೆ ಹೆಜ್ಜೆಗೆ ನಮಗೆ ನಡೆಗಲಿಸಿ, ನುಡಿಗಲಿಸಿದೀ' ವಿದ್ಯಾರ್ಥಿ ಪ್ರೇಮಿಗೆ
ಹಿರಿದು ಕಿರಿದೆನ್ನದೆಯೆ ಸಮರಸದ ಸಂಗೀತ ಪಾಡುತಿಹ,

ಅಮರ ಶ್ರೀ ನಾಗನೂರ ಶ್ರೀಗಳಿಗೆ !
ಶಿವಬಸವ ಸ್ವಾಮಿಗಳಿಗೆ !! ನಮೋ ನಮೋ ! ನಮೋ ! ನಮೋ !!
ಜಯ ಜಯತು ಜಯತು ! ಜಯ ಜಯತು ಜಯತು !!

— ವ್ಹಿ. ಕೆ. ಕರಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀನ ದೇವೋ ಭವ !!

ಶರಣ ಸಂತ ದಾಸರಿರ್ದ
ಧಗಣಿಯೊಳಗೆ ದಾರಿ ತಪ್ಪಿ
ಶರಣಮಾರ್ಗ ತೊರೆದು ನಾವು ಎತ್ತನಡೆದೆವೊ ॥
ಗುಡುಗು ಸಿಡಿಲು ಮುಗಿಲಿನಲ್ಲಿ
ನಡುಗುತಿರುವ ಭೂಮಿತಾಯಿ
ಕಡೆಗೆ ತಾನು ಮನುಜ ಭಾರ ತಾಳದಾದಳು ॥೧॥

ಜಲವು ನೆಲವು ನಮ್ಮದೆಂದು
ಛಲದಿ ಬಲದಿ ಮನುಜ ಕುಲಕ್ಕೆ
ಕಾಲರಾಗಿ ಕುಹಕತನದಿ ಬದುಕುತಿರುವೆವು ॥
ಇಂದ್ರಲೋಕ ಚಂದ್ರಲೋಕ
ನೊಂದು ಬಿಡದೆ ಸುತ್ತುಹಾಕಿ
ಅಂದವಾದ ಹೃದಯ ಲೋಕ ಮರೆತುಬಿಟ್ಟೆವು ॥೨॥

ಹರಕು-ಮುರುಕ ಗುಡಿಸಲೊಳಗೆ
ತಿರುಪೆಯಿಂದ ತಂದ ರೊಟ್ಟಿ
ಬೆರಸಿ ತಿಂದು ಕಾಲಕಳೆವ ಜನರ ನೋಡುವಾ ॥
ಕೂಸು-ಕುನ್ನಿಗಳಿಗೆ ಅರ್ಧ
ಹಾಸಿ ಹೊಚ್ಚಿ ಹರುಕುಬಟ್ಟೆ
ಗಾಸಿಯಾಗಿ ಬಳಲುವವರ ಸೇವೆಮಾಡುವಾ ॥೩॥

ದೀನದಲಿತ ಪತಿತರಲ್ಲಿ
ಹೀನ ಜನರ ಸೇವೆಯಲ್ಲಿ
ಜೇನುಹರಿಸಿ ಸವಿಯ ಬೆರಿಸಿ ನಾವು ಬಾಳುವಾ ॥
ಇದ್ದ ತಿನಿಸು-ಉಣಿಸನೆಲ್ಲ
ಶುದ್ಧಮನದಿ ಹಂಚಿತಿಂದು
ಬುದ್ಧ-ಬಸವರಂಥ ಬಾಳು ಮತ್ತೆ ಬೆಳಗುವಾ ॥೪॥

ಸತ್ಯಪ್ರೇಮ ಸೇವೆ ತ್ಯಾಗ
ನಿತ್ಯ ನಮ್ಮ ಮಂತ್ರವಾಗಿ
ಮರ್ತ್ಯದಲ್ಲಿ ಬಾಳಿ ನಾವು ಧನ್ಯರಾಗುವಾ ॥
ನಮ್ಮ ನಾವು ಒಳಗೆ ನೋಡಿ
ನೆಮ್ಮದಿಯಲಿ ಬಾಳಗಾಗಿ
ಧರ್ಮದುದಯದಿಂದ ಲೋಕ ನಾಕವಲ್ಲವೆ ॥೫॥

ಈಶ್ವರ ಕಾಪಸೆ

ಮತಿಯೇ ಗತಿ.

ವಿದ್ಯಾರ್ಥಿ ಪ್ರಸಾದ ನಿಲಯ,
ಬೆಳಗಾಂವಿ.

ನಾಡ ತಬ್ಬಲಿಗಳ್ಗೆ ತವರಾಗಿ ತಾಯಾಗಿ
ಬಡತನದ ಕೂಪದಿಂದೆತ್ತಿ ಎದೆಗಪ್ಪಿ
ಮೊಲೆಯೂಡಿ ನಡೆಗಲಿಸಲೆಂದು ವೈವೆತ್ತ
ಜ್ಯೋತಿ ತಾಬೆಳಗುತಿದೆ ನಾಡ ನಡುಮನೆಯಲ್ಲಿ
ಜೀವ ರಸವನ್ನೆರೆದು ಆತ್ಮಪ್ರಣತಿಯನಿತಿ !
ತ್ಯಾಗದಂತಃಕರಣದರುಣಕಿರಣಂಗಳ್ಗೆ
ನಾಡನಂದನವನದನಂತ ನವಕುಸುಮಗಳ್
ಪರಿಮಳಿಸಿ ಸೌರಭವ ಸೂಸುತಿವೆ ತಾಯಡಿಗೆ

ಇದುವೆ ಸಗ್ಗಂ ಯೋಗಸೌಭಾಗ್ಯ ಸುಂದರ
ಇದುವೆ ಸುವಿಧಾನಂ ಶರಣ ಸಂಗ ಪ್ರಸಾದಂ
ಇದು ತ್ಯಾಗದಾನಂದದನುಭಾವ ಸಂಸ್ಕೃತಿ
ಇದುವೆ ಕಾಯಕ ನೀತಿ, ಮಾನವೀಯತೆ ಪ್ರೀತಿ !
ಮಾನವನೆ ಮಹಾದೇವ ! ಮನೆ ದೇವ ಮದಿರಂ
ಮಾನವ್ಯ ಸೇವೆಯೇ ಶುಭಕರಂ ಶಿವಯೋಗಂ !

ಎಸ್. ಡಿ. ಇಂಚಲ

ನಾನು ನೀನು

ನನ್ನ ನಿನ್ನ ನಡುವೆ ನೀಲ-
ನೆಲಾಜಲಾ ಎಂಬರು
ನಿನ್ನ ಇರವ ತಿಳಿಯ-ದಿರುವ
ಇವರು ಶುದ್ಧ ಹುಂಬರು.

ನನ್ನ ನಿನ್ನ ನಡುವೆ ತೆಳುವ-
ತಿಳಿವು ತೆರೆ ಎಂದರು
ಕಾಣದಿರುವ ಇವರ ಕಣ್ಣು
ಚಷ್ಮಕೊಂಡೆ ನಂಬರು.

' ಮಗು ' ಬಿರಾದಾರ
ಗುಲಬುರ್ಗಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸದ್ಗುರು ಶಿವಬಸವ

ಕರಿನಾಡಿನಡಿವ್ಯಾಗ ಸಿರಿನೋಡ ಎಂಥದು !
ಹರಮೂರ್ತಿ ಗುರುವಾಗಿ ಬಂದಾನ । ನಮಗೆಲ್ಲ
ಹರಿಸಿ ಹರುಷವ ನೀಡೂದಕ ॥೧॥

ಬೆಳಗಾವಿ ನೆಲದಾಗ ಬೆಳಗಾಯ್ತು ನಾಗನೂರ
ಬೆಳಕಾಗಿ ಮೂಡ್ಯಾನ ಜಗದಾಗ । ಅಜ್ಞಾನ
ಕಳೆದು ಸುಜ್ಞಾನ ಬೀರಾಕ ॥೨॥

ಸಂಸಾರ ಸಾಗರದಿ ದೆಸೆ ದಿಕ್ಕುಗಾಣದೆ
ಗಾಸಿಯಾಗುವ ಜನಕೆ ಶಶಿಮೌಳಿ । ತಾನಾಗಿ
ಶಿಶುವಾಗಿ ಭೂಮಿಗಿಳಿದಾನ ॥೩॥

ಶಿವಯೋಗ ಮಂದಿರದ ಕೀರ್ತಿಯ ಕಳಸಾಗಿ
ಶಿವನಾಮದೊಳಗ ತಾನಾಗಿ । ಭವದಾಗ
ಶಿವನ ಕಿಂಕರರು ನಡೆದಾನ ॥೪॥

ಹಾನಗಲ್ಲದ 'ಶ್ರೀ' ಯ ಸಾನಿಧ್ಯ ಪಡೆದಾನ
ಹನಿ ಹನಿಯ ಹಾಲ ಕುಡಿದಾನ । ಜಗದಾಗ
ಹಾಲಿನ ಹೊಳೆಯ ಹರಿಸ್ಯಾನ ॥೫॥

ಬಡತನದ ಬಿಸಲಾಗ ಬಳಲಿ ಬೆಂಡಾಗಿರುವ
ನಾಡಿನ ಬಾಳ ಕುಡಿಗಳಿಗೆ । ನನಗುರುವು
ನೀಡ್ಯಾನ ನೆರಳ ಅಸುಗಾಲ ॥೬॥

ಸರಸೋತಿ ಕೂಸಾಗಿ ಸೇವೆ ಸಲಿಸುವಂಥ
ಸರುವರಿಗೂ ನೆರವ ನೀಡ್ಯಾನ । ನಾಡೊಳು
ಅರುವಿನ ತೊರೆಯ ಹರಿಸ್ಯಾನ ॥೭॥

'ಶಿವಬಸವ' ನೆಂದರ ಸಾವು ನೋವುಗಳಿಲ್ಲ
ಭವದಾಗ ಭವಣಿ ತಾಸಿಲ್ಲ । ಎಲೆಮನವೆ
ಶಿವಬಸವ ನಾಮ ನೆನಿಬೇಕ ॥೮॥

ಈಶ್ವರ ಕಾಪಸೆ (ಲೋಣಿ)
ಗಳತಗಿ

ಕಾಯಕಯೋಗಿ

ಕರ್ಮ ಧರ್ಮಗಳೊಂದಪೂರ್ವಕ್ಷೈಸಂಗಮದಲ್ಲಿ
ಧರ್ಮ ಪ್ರಗತಿಯ ಸುಗಮ ಸಾರವಿಲ್ಲಿ
ಸರ್ವೋದಯಕೆ ನಾಂದಿ ನಿನದಿಸುತ್ತಿದೆ ಇಲ್ಲಿ
ಸಾಮಾನ್ಯತಾ ಸಿರಿಗೆ ಎಲ್ಲ ಸಡಗರವಿಲ್ಲಿ

ಪರಿ ಪರಿಯ ಪಾತ್ರಗಳ ನಾಡುತಿಹರವರು
ಹರಿಯುವಾ ಮನಕೆ ಕಡಿವಾಣ ಹಾಕಿಹರು
ಪರಿಪರಿಯ ಶುಚಿ ರುಚಿಗೆ ವೇದ್ಯರಾಗಿಹರು
ಹರಿಯುವಾ ಜಲದಂತೆ ಶುದ್ಧರಾಗಿಹರು

ಸ್ವಾಮಿಗಳ ಎಚ್ಚತ್ತ ನಿಲುವು ತೋರುವುದಿಲ್ಲಿ
ಮಿತಗತಿಯಲ್ಲಿ ಸಾಗಿಹರು ಪ್ರಗತಿ ಪಥದಲ್ಲಿ
ಕಲಿಯುವಾ ಹಸುಳೆಗೆ ಹಾಲುಣಿಸುತಿಹರಿಲ್ಲಿ
ನಲಿಯುವಾ ನಿಲಯವು ನಿಂತಿದೆ ಹೆದ್ದಾರಿಯಲ್ಲಿ

ದಕ್ಷತೆಯು ಬೆಳಗುತಿದೆ ಬಾಳಿನಾಗಸದಲ್ಲಿ
ಅಕ್ಷಯವು ಸೌಭಾಗ್ಯ ಲಕುಮಿ ಕರುಣೆಯಲಿ
ರಕ್ಷಣೆಯ ನೀಡುವರು ಭಾವ ಜೀವಗಳಲ್ಲಿ
ಅಕ್ಷರದಿ ಶಿವಬಸವರೆನಿಸಿಹರು ನಿಜದಲ್ಲಿ

ವಿವಿಧ ಮತ ಪಂಥಗಳು ಇಲ್ಲಿ ಸಂಗಮದಲ್ಲಿ
ಸರ್ವಧರ್ಮಗಳೆಲ್ಲ ಒಂದುಗೂಡಿಹವಿಲ್ಲಿ
ಇವುಗಳೆಲ್ಲಕೆ ಮೂಲ ಬಿಂಮು ದಯೆಯಲ್ಲಿ
ಭಾವೈಕ್ಯದೋರುವದು ಮನದ ಮಂದಿರದಲ್ಲಿ

ಅಜಾತ ಶತ್ರುವು ಇವರು ನಡೆನುಡಿಗಳಲ್ಲಿ
ಅವರ ವಿಜಯದ ಭೇರಿ ಮೊಳಗಿದೆ ಬೆಳಗಾವಿಯಲ್ಲಿ
ಮನಬಿಚ್ಚಿ ಮನಮೆಚ್ಚಿ ನಿಲಯಕಟ್ಟಿಹರಿಲ್ಲಿ
ಆ ನಾಮ ಶುಚಿಯಾಗಿ ಶೋಭಿಸಿದೆ ತ್ರಿಕರಣದೆದೆಯ

ಕುದುರಿತೊ ಕುಡಿ ಬೆಳಕು ಭವಿಷ್ಯತ್ತಿಗಾಗಿ
ತೋರುತಿದೆ ನಡೆನುಡಿಗಳು ದಾರಿ ದೀಪವಾಗಿ
ಕರೆಯುತಿದೆ ಮಾನವ್ಯ ಪ್ರೀತಿ ನಮಗಾಗಿ
ತರುತಲಿದೆ ಸಂತತವು ಸುಖ ಜೀವಕಾಗಿ

— ಡಿ. ಎಸ್. ಭಿಡೆ
ಬೆಳಗಾವಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಯೋಗಿಗೆ ಶರಣು !

ಕನ್ನಡದ ನಾಡಿನಲಿ ಕರುಣೆಯೇ ಮೈದಳೆದು
ಅವತರಿಸಿ ಬಂದಿಹುದು ನೋಡಬನ್ನಿ
ಕರುಣಾಳು ಶಿವಬಸವ ಶಿವಯೋಗಿ ಸನ್ನಿಧಿಗೆ
ವಿನಯದಲಿ ಶಿರಬಾಗಿ ಶರಣು ಎನ್ನಿ

ಸತ್ಯ ಶಾಂತಿಯ ನಗೆಯ ಮುಗುಳು ಮಲ್ಲಿಗೆಹೂವು
ನಿತ್ಯ ಮುಖವನು ಬೆಳಗಿ–ಅರಳುತಿಹುದು
ಹೊಳೆವ ಕಂಗಳಕಾಂತಿ ಶಿವನ ಕರುಣೆಯ ಕಿರಣ
ದಿವ್ಯ ತೇಜವ ತುಂಬಿ ತುಳುಕುತಿಹುದು

ನಾಡು ನುಡಿಗಳ ಸೇವೆ ನಿನ್ನ ಜೀವನದುಸಿರು
ಭಕ್ತಿ-ಶಕ್ತಿಯ ನಾಡಿ ಮಿಡಿಯುತಿಹುದು
ತ್ಯಾಗ-ಯೋಗದ ಬಲವು ನೇಮ-ನಿತ್ಯದ ನಿಲವು
ಶರಣವಾಣಿಯ ಸತ್ಯ ಬೆಳಗುತಿಹುದು

ಓ ! ಎನ್ನ ಸದ್ಗುರುವೆ ಚಿನ್ಮಯದ ಚಿತ್ಕಳೆಯೆ
ಸರ್ವರನು ಕಾಪಾಡು ಪೂಜ್ಯ ತಂದೆ
ಕನ್ನಡದ ಚಿನ್ನರಿಗೆ ದಿವ್ಯ ದೀಕ್ಷೆಯನಿತ್ತು
ಕನ್ನಡವ ಉದ್ಧರಿಸಿ ಬೆಳೆಸ ಬಂದೆ

" ಚೆಲುವ ಚಿನ್ನರ ಪೂಜೆ ಆತ್ಮಲಿಂಗದ ಪೂಜೆ "
ಎನುವ ತತ್ವದ ತಿರುಳು ತಿಳಿಸುತಿರುವಿ
" ವೀರಶೈವರ ಧರ್ಮ ವಿಶ್ವಧರ್ಮದ ಮರ್ಮ "
ಎಂಬ ಹಿರಿಮೆಯ ತೋರಿ ಸಾರುತಿರುವಿ

ಜ್ಞಾನದಾಸೋಹವನು ನಿತ್ಯ ನಡೆಸುವ ವ್ರತಕೆ
ಚಿಕ್ಕ ಜೋಳಿಗೆಯೊಂದೆ ನಿನ್ನ ಬಲವು
ಪುಟ್ಟ ಜೋಳಿಗೆಯಲ್ಲಿ ದಿವ್ಯ ಅಕ್ಷಯ ಪಾತ್ರೆ
ಜಗವ ತಣಿಸುವ ಆತ್ಮ ಬಲದ ಛಲವು

ಕನ್ನಡದ ಗಡಿಯಲ್ಲಿ ದಿವ್ಯ ಭವನವ ಕಟ್ಟಿ
ಹೊನ್ನ-ರನ್ನಿನ ಕಣಜ ತುಂಬುತಿರುವಿ
" ಜಯಜಯತು ಕನ್ನಡವೆ ಜಯವಾಗಿ ಬಾಳೆಂದು "
ನೂರೊಂದು ಹರಕೆಯನು ನೀಡುತಿರುವಿ.

ಗುರುಪಾದಸ್ವಾಮಿ ಹಿರೇಮಠ
ಹಿರೇಸಂದಿಹಳ್ಳಿ

ಮೌನಯೋಗಿ

ಶಿವನ ಆಣತಿಯಾಂತು ಭುವಿಯಪಾವನಗೈಯೆ
ಅವತರಿಸಿ ಬಂದಿರ್ದ ಬಸವನಂದು
ಶಿವನೊಲುಮೆಯಲಿ ತಾನೆ ಬಸವನೋಜವು ಸೇರಿ
' ಶಿವಬಸವ ' ಪೆಸರಿನಿಂದೆಸೆವರಿಂದು
ಹೆಸರಿಗೂ ಹುಸಿಯಿಲ್ಲ ಆಸೆ ಆಮಿಷವಿಲ್ಲ
ಲೇಸಸಾಧಿಸೆ ಜಗಕೆ ಸಾಧನೆಯದೆಲ್ಲ
ಎಸೆವ ಕಾಯಕತತ್ವ ಹಾಸು ಹೊಕ್ಕಾಗಿರಿಸಿ
ಪಸರಿಸುತ್ತಿಹರಿಂದು ಎಣ್ದೆಸೆಯೊಳೆಲ್ಲ
ಜ್ಞಾನಬಲದಿಂದಲ್ತೆ ಮಾನವನು ಮಿಕ್ಕೆಲ್ಲ
ಪ್ರಾಣಿಕೋಟಿಗೆ ಮಿಗಿಲು ಎಂಬುದೆನಿಸಿ
ದೀನದಲಿತಗಿರುವ ಜ್ಞಾನ ದಾಹವನಿಂದು
ಅನ್ನದಾಸೋಹದಿಂ ನಿತ್ಯವೂ ತಣಿಸಿ
ಕರ್ಮಕರ್ತವ್ಯಗಳೆ ಧರ್ಮವೆಂದಿರಿ ನೀವು
ನಿಮ್ಮ ನಿರ್ಮಲ ನೀತಿ ಅದುವೆ ಧರ್ಮ
ನಮ್ಮ ನಿಮ್ಮದು ಎಂಬ ಹೆಮ್ಮೆ ಹಿರಿಮೆಯನುಳಿದು
ಹಮ್ಮಿದಿರಿ ಲೋಕಹಿತ ನಿಷ್ಕಾಮಕರ್ಮ
ಮಾತನಾಡದೆ ಎಲ್ಲ ಸಾಧಿಸುವಯೋಗಿ
ನೀತಿಗೇ ನೆಲೆಯಾಗಿ ಹೊಳೆವ ಭಾನು
ಮಾತು ಎನಿತೂ ಹೊಲ್ಲ ಮಾಡುವದೇ ಜೀವನವು
' ಮಾತು ಬೆಳ್ಳಿಯಾದರೆ ಮೌನ ಬಂಗಾರ ' ವೆಂಬುದನು
ತಿಳಿದು ನಡೆವುದೆ ತಮ್ಮ ನಿಜಧರ್ಮ

ತಲ್ಲೂರ ಹೊಂಡಪ್ಪ ನಾಗನೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವ್ಯ ಭಾರತ

ಪಂಪ ಕಂಪನಿಯ ಪಂಪು ಸೆಟ್ಟು ಬದಲಿಸಿ
ಭರ ಭರ ಕಪ್ಪು ಹೊಳೆ ಜಗ್ಗಿ ಚೆಲ್ಲುವ ಅತ್ಯಾಧುನಿಕ ಎಂಜಿನ್ನು
ಘಮ ಘಮ ಪರಿಮಳಿಸಿದ್ದು ಕಗ್ಗಾಡು-ಕರಲು ನೆಲ
ಉದ್ದಗಲಕ್ಕೂ ಹಿಗ್ಗಿ ಹತ್ತು ಹರದಾರಿ
ಛತ್ರ ಚಾಮರ ಬೀಸಿ ಉಕ್ಕಿಸಿತು ಸೊಕ್ಕಿನ ಪಯಿರು
ಕಾಳು ಒಕ್ಕಿದ್ದಕ್ಕಿಂತ ದುಪ್ಪಟ್ಟಷ್ಟು.
ಪ್ರತಾಪ ಕೋಪ ರಸರಸ ಕುದಿವ ಕಾವ್ಯ ಬುರುಜಿಗೆ
ಬೆಂಕೆಯಿಟ್ಟು ಭುಗಿಲೆನ್ನುವಗ್ನಿಯಲ್ಲಿ ಬೇಯಿಸಿಕೊಂಡು
ತಿಂದು ತಯಾರಾದದ್ದು ಬ್ರೆಡ್ಡು, ಬೇಳೆ, ಸೆಂಗ.
ಉಳ್ಳೇಗಡ್ಡಿ ಸಿಪ್ಪೆ ತಿಪ್ಪೆಯಲಿ ಹೊರಳುರುಳಾಡಿ
ಗಡ್ಡೆ-ಗೆಣಸು ಮೆದ್ದಷ್ಟು ಒಳಗೊಳಗೆ ಕಟುಕಿ
ನಾಲ್ಕೂ ಕಾಲಿಂದ ಕೆದರಿ ಚೆಲ್ಲಿದಳು ಪಾಂಚಾಲಿ
ಯುದ್ಧವೆನ್ನುವ ಅಗ್ನಿಕುಂಡಲಾವ.
ಒಣಗಿ ತಾರಾದ ತಂತಿಯಾದ ಮುಳ್ಳಾದ ಮುಡಿಯ
ರಕ್ತದೆಣ್ಣೆಯಲ್ಲಿ ತೋಯ್ಯಿಸಿಕೊಂಡರೂ ರಕ್ಕಸಿಯಲ್ಲ.
ಕಥೆಗೆ ಗತಿ ಬಂದ ಹೊತ್ತಿನಲಿ
ಬುರು ಬುರು ಹೊತ್ತಿ ಹೋ ಎಂದಿತು ಬುರುಜು
ಸಹಕುಟುಂಬ ಪರಿವಾರ ಸಹಿತ ಧೀರ ಪಾಂಡವರು
ಮೈಸುಟ್ಟು ಕರಚಿಕೊಂಡರು
ಹೇ! ಮುಕುಂದ ಮುರಲೀಧರ ಕಾಯೋ ಎಂದು
ಮುಂದಾಗುವ ದುರಂತವನ್ನೆಂದೋ ಅರಿತಿದ್ದ ಕೃಷ್ಣ
ರಾಧಾಭುವನದಲಿ ಕುಳಿತು ಕಾಫಿ ಗಿಟ್ಟಿಸುತ್ತಿದ್ದ
ಗುಳು ಗುಳು ನಗುತ್ತಿದ್ದ ತನ್ನಷ್ಟಕ್ಕೆ ತಾನು
ತಪ್ಪಿಸಿಕೊಂಡದ್ದಕ್ಕೆ ಇತಿಶ್ರೀಯ
ಪರಲೋಕವಾಸಿಗಿದ್ದ ದುರ್ಯೋಧನ
ನಾರದನಿಂದ ಈ ಸಮಾಚಾರ ಕೇಳಿದವನೆ
ಟೆಲಿಫೋನಿನಲ್ಲಿ ಖೊಳಖೊಳನೆ ನಕ್ಕು
ಮಿಠಾಯಿ ಪೇಢೆ ಹಂಚಲುದ್ಯುಗಿಸಿದ.
ಅಷ್ಟರಲಿ ತಮ್ಮನ ಮೇಲೆ ಹಾಕಲ್ಪಟ್ಟಿದ್ದ ಮಾನಹಾನಿಯ
ಖಟ್ಲೆ ರದ್ದಾದ ಸುದ್ದಿ ತಂದನೊಬ್ಬ ದೂತ.
ಏಕಪಕ್ಷೀಯ ಸಾಕ್ಷಿ ಪುರಾವೆಯನಲ್ಲಗಳೆದು ಕೋರ್ಟು
ದುರ್ಯೋಧನ ಸುಯೋಧನ ಎಂದು ವರ್ಣಿಸಿ
ಕಾರಸ್ಥಾನವನೆತ್ತಿ ಖಂಡಿಸಿ,
ವಾರೆಂಟು ಹೊರಡಿಸಿ–ಕೃಷ್ಣನಿಗೆ
ಆಜನ್ಮ ಕಾರಾಗ್ರಹವಾಸ ವಿಧಿಸಿತು.
೪೨೦ ನಂಬರು ಕೂಗಿದಾಗೆಲ್ಲ
ಓ ಎನ್ನುತ್ತಾನೆ ಅವನು.

—ಬುದ್ದಣ್ಣ ಹಿಂಗಮಿರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀನಲ್ಲದೆಯೇ ನಾನೆಲ್ಲಿ !

(ಬಾನುಲಿ ಕೃಪೆಯಿಂದ)

ನೀ ಎಲ್ಲೆಲ್ಲಿ
ನಾ ಅಲ್ಲಲ್ಲಿ
ನೀನಿಲ್ಲದಯೇ ನಾನೆಲ್ಲಿ ?

ಹೂವಿನ ಹುಡಿಯೊಳು
ನಾ ಹುದುಗಿರುವೆ
ತಂಬೆಲರಲೆಯೊಳು
ನೀ ನೈ ತರುವೆ

ನೀ ಹಸುರಲಿ ತೂಗುವ
ಶ್ರಾವಣಮಾಸ
ನಾ ನಿರದೆಸೆಯುವ
ಮುಕುಲದ ಹಾಸ

ಮೂಡುವ ಎಳೆರವಿ
ರಶ್ಮಿಯು ನೀನು
ಹಸುರಲಿ ಮೆರೆಯುವ
ಲಕ್ಷ್ಮಿಯು ನಾನು

ನೀಲಾಕಾಶದ
ಛಪ್ಪರ ನೀನು
ಇಳಿಬಿಟ್ಟಿಹ ಮಣಿ
ಚುಕ್ಕಿಯು ನಾನು

ನೀ ತಿಂಗಳ ಕಡಲಿನ
ತಿಳಿನಗೆ ಮಿಂಚು
ಹೊಳೆಯುತ ಮಿನುಗುವ
ನಾ ಅಲೆ ಅಂಚು

ಒಲವಿನ ಸಾಗರ
ದಾಗರ ನೀನು
ನಲಿನಲಿ ದೀಜುವ
ನಾ ಮಃಂ.ಮೀನು

ನೀ ತಾಯಿಯ ಅಕ್ಕರೆ
ಜೋಗುಳ ಹಾಡು
ನಿದ್ದೆಗೆ ಎಳೆಸುವ
ಮಗು ನಾ ನೋಡು

ನೀ ಎಲ್ಲೆಲ್ಲಿ
ನಾ ಅಲ್ಲಲ್ಲಿ
ನೀನಿಲ್ಲದಯೇ ನಾನೆಲ್ಲಿ ?

ರಾಜಶೇಖರ ಕರ್ಕಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರೆಡೆಗೆ ತಾಯೆ?

(ತಾಯಿ–ಮಗುವಿನ ಸಂವಾದ)

ಮೌನವೇಕೆ ಮನದಭಾವ ತಿಳಿಸು ಎನಗೆ ತಾಯಿಯೆ ।
ಜೇನು ಸವಿವ ಸುಖದ ದಿನದಿ ಒಯ್ವಿಯೆಲ್ಲಿ ದೇವಿಯೇ ?
ಒಲ್ಲೆನೆಂಬೆ ಬಂದ ಜನಕೆ ಬೆಲ್ಲದಿನಿಯ ಮಾತಿಗೆ ।
ಬಲ್ಲ ಎಲ್ಲರೊಡನೆ ನೀಡು ಸೇವೆ ಹಸಿದ ನಾಡಿಗೆ ॥
ಪೇಳೆಯೆನಗೆ ದುಗುಡ ಮನದ ನಾಡನೀತಿಯೊಲ್ಲೆಯೆ ?
ಜೊಳ್ಳು ಮಾತು ಹಾಳು ಎಂದೆ? ನಲ್ಲನಾಡು ಕಂಡಿಯೆ ?
ಕಂದ ಕೇಳು ಇಟ್ಟಸದವ ಕಿತ್ತಿಹಿಂದೆ ಪೋಪುದೇ ? ।
ಮುಂದ ಮುಂದ ನಡಿಗೆ ನಡೆದು ಕಾಂಬೆನೆನ್ನ ಭಾಸದೆ ॥
ತಾಣ ಪೇಳು ತಿಳಿಯದಂತೆ ಒಯ್ಯುಬೇಡ ಅಡವಿಗೆ ।
ಜಾಣತನಕೆ ಒಯ್ವೆ ಸ್ಥಾನವೇಕೆ ಚಿಂತೆಗೆ ॥
ಬಾರ! ಕಂದ ಸುರಿವ ಸುಧೆಯ ತೋರ್ಪೆನಯ್ಯ ಮಂದಿರ ।
ಕರುಣೆ ಮೂಡಿ ಧರಣಿಗಿಳಿದು ಹೊಂದಿರೂಪ ಸುಂದರ ॥
ಯಾವ ರೂಪು ಚೆಲುವುಗೊಂಡು ಯಾವ ತಾರೆ ಮೂಡಿದೆ? ।
ಯಾವ ಪರಮಸ್ಥಾನವದುವೋ ಜೀವ ಬೆಲ್ಲ ಮಾಳ್ಪುದೇ ॥
ರೂಪವದುವೇ ಭಾವ ಪ್ರಾಣ ಆತ್ಮಲಿಂಗದೈಕ್ಯವೋ ।
ತಾಪ ಕಳೆವುದದುವೇ ಕ್ಷೇತ್ರ ತತ್ವಜೀವಭಾವವೋ ॥
ಕಾಯ ಮಾತ್ರವಲ್ಲವದುವು ಜೀವಮೂರ್ತರೂಪವೋ ।
ಕಾಯ ಜೀವವಾಗಿ ಭಾವಗೂಡಿ ರೂಪ ಮೆರೆದವೋ ! ॥
ಕಾಯ ಕರ್ಮ ಕರಣ ಮದವ ಕಳೆಯಲಿರುವ ಯೋಗಿಯೋ ।
ಕಾಯ ಪ್ರಾಣ ಭಾವಲಿಂಗ ಕರಸ್ಥಲದ ಕರುಣೆಯೋ ॥
ಮೂರು ಮಲವ ಕಳೆದು ಭೇದವಳಿದು ಶಿಷ್ಯನಂಗದಿ ।
ತಾರೆಯಂತೆ ಮಿಂಚಿ ಬೆಳಕ ನೀವುದೀ ಸ್ಥಾನದಿ ॥
ಭಾವಭ್ರಮೆ ಜ್ಞಾನ ವಿಸ್ಮೃತಿ ಕಳೆವ ಪ್ರಭೆಯ ರೂಪವೋ ।
ಆವ ರೀತಿ ಮನದ ದುಗುಡ ಕಳೆವುದೆಂಥ ಗೂಢವೋ ॥
ನೋಡು ತೆರೆದು ಕಣ್ಣು-ಮನವ ತಪದ ನಿಧಿಯ ಚರಣವ ।
ಜೋಡಿಸಯ್ಯ ಕರದಯುಗವ ಬಾಗಿ ನೀಡು ದೇಹವ ॥
ಕಾಣದುದನು ತಿಳಿಸಿ ಘನದ ಘನಕೆ ಒಯ್ವಸ್ವಾಮಿಯ ।
ತಾಣವಿದು ಪ್ರಸಾದ ನಿಲಯ ಕುಮಾರದೇವಸ್ವಾಮಿಯ ॥
ಆಹ! ಮನವು ತಣಿಯಿತಮ್ಮ ಕಾಣೆನೇಕೆ ಸ್ವಾಮಿಯಾ ।
ಹಾ ಹುಸಿಯ ದೇಹದಂಭ ಕಳೆದು ನೋಡು ಯೋಗಿಯಾ॥
ಶಿಷ್ಯ ಶ್ರೀನಾಗನೂರು ಶಿವಂಬಸವ ದೇವನೆ ।
ಪುಷ್ಯ ತಾರೆ ವೈಮೆವೆತ್ತ ಜ್ಞಾನಿ ಕರುಣಿ ದಿವ್ಯನೆ ॥
ನಿರ್ವಿಕಾರ ಮಂತ್ರಪೂತವಮರಕೀರ್ತಿ ದೈವವೇ ।
ಸರ್ವಜನದ ತಾಪಹಾರಿ ಬೆಳಕನೀವ ಪುಣ್ಯವೇ ॥
ಧನ್ಯನಾದೆ! ಕಂದ ಎನ್ನ ಭಾವವರಿತುಕೊಂಡೆನೀ ।
ಮಾನ್ಯ ಶ್ರೀ ಶಿವಬಸವ ದೀಸ ದೇವ ಅರಿಯೊ ನೀ ॥

—ಕೇದನೂರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗ ನಾಲ್ಕು

ಸಮಾಜ, ಸಾಹಿತ್ಯ, ಸಂಸ್ಕೃತಿದರ್ಶನ

ವಿವಿಧ ಲೇಖಕರಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈರಾಗ್ಯನಿಧಿ

ಹಾನಗಲ್ಲ ಕುಮಾರ ಸ್ವಾಮಿಗಳು.

ಈ ಶತಮಾನದ ಪೂರ್ವಾರ್ಧದಲ್ಲಿ ವೀರಶೈವ ಸಮಾಜ ತನ್ನ ಅಪೂರ್ವವಾದ ಸಂಸ್ಕೃತಿ, ಸಂಸ್ಕಾರ, ಆಚಾರ-ವಿಚಾರಗಳನ್ನು ಕಳೆದುಕೊಂಡು, ಯಾವ ಯಾವದೋ ದಾರಿಯನ್ನು ಅನುಸರಿಸುವ ಸ್ಥಿತಿಯಲ್ಲಿತ್ತು. ವಿಶ್ವಮಾನ್ಯವಾಗಬಲ್ಲಂಥ ಭವ್ಯ ಸಂಸ್ಕೃತಿಯ ಧರ್ಮದ ಹಿರಿಮೆಯನ್ನು ಪಡೆದ ಈ ಜನಾಂಗ ಸಂಕುಚಿತ ಮನೋಭಾವನೆಗೆ ಮಾರುಹೋಗಿ ತನ್ನ ಭವ್ಯ ಪರಂಪರೆಯನ್ನು ಮರೆಯಲಿತ್ತು. ಹನ್ನೆರಡನೆಯ ಶತಮಾನದಲ್ಲೂ ಹೀಗೆಯೇ ಇತ್ತು. ಪರಸ್ಪರ ದ್ವೇಷ, ಜಾತಿ ಪಂಥಗಳಲ್ಲಿ ಜಗಳಗಳು, ನಡೆಯೊಂದು, ನುಡಿಯೊಂದು, ಆಚಾರಕ್ಕೂ, ವಿಚಾರಕ್ಕೂ ಸಂಬಂಧವಿಲ್ಲದ ಬದುಕು. ಜೀವನವೇ ಅಪಹಾಸ್ಯಕ್ಕೀಡಾದ ಸ್ಥಿತಿ. ಆಗ ಇವಕ್ಕೆಲ್ಲ ಪರಿಹಾರ ನೀಡಿ, ಜನ ಉದಾತ್ತವಾದ ದಾರಿಯಲ್ಲಿ ಶಿವ ಮೆಚ್ಚುವ ರೀತಿಯಲ್ಲಿ ಜೀವನ ಸಾಗಿಸುವಂತೆ ಮಾಡಿದಾತ ಕೂಡಲಸಂಗಮನಾಥನ ಪರಮಭಕ್ತ, ಅಪಾರಕಾರುಣ್ಯ ಶರಧಿ ಬಸವಣ್ಣ ಕೂಡಲಸಂಗಮನ ಸಾಕ್ಷಿಯಾಗಿ ವಿಶ್ವದಲ್ಲಿಯೇ ನಡೆಯಲಾರದಂತಹ, ಮಹೋನ್ನತವಾದಂತಹ ಮಾನವ ಜೀವನದ ಹಿತಕ್ಕಾಗಿ ಕ್ರಾಂತಿಯೆನ್ನಸಗಿದನು ಭಕ್ತಿ ಭಂಡಾರಿ ಬಸವಣ್ಣ.

ಬಸವಣ್ಣನ ಈ ಪವಿತ್ರ ದಾರಿಯನ್ನು, ಬೆಳಕಿನ ದಾರಿಯನ್ನು ಈ ಶತಮಾನದ ಪೂರ್ವಾರ್ಧದಲ್ಲಿ ಜನ ಬದುಕಲೆಂದು, ಹಿತವಾಗಿಪ್ಪ-ಶಿವಂಗೆ ಪ್ರಿಯವಾಗಿಪ್ಪ ಜೀವನ ನಡೆಸಲೆಂದು ತಂದಾತ ಪರಮ ವೈರಾಗ್ಯನಿಧಿ ಹಾನಗಲ್ಲ ಕುಮಾರ ಸ್ವಾಮಿಗಳು. ಈ ದಾರಿ ಕಂಡು ಹಿಡಿಯಲು, ಅವರು ಪಟ್ಟ ಪರಿಶ್ರಮ, ಅವರು ಮಾಡಿದ ತಪಸ್ಸು ಅಪಾರ ಜನ ಜೀವನದಲ್ಲಿ ಹೊಸ ಮನ್ವಂತರ, ಹೊಸ ಚೇತನ ತಂದವು. ಸಮಾಜಕ್ಕೆ, ನಾಡಿಗೆ ತಾವು ಜೀವನದುದ್ದಕ್ಕೂ ತಪಸ್ಸುಮಾಡಿ ಪಡೆದ ಸಿದ್ಧಿಯನ್ನು ತಾಯವಾತ್ಸಲ್ಯದಿಂದ ಸಮಾಜ ಶಿಶುವಿಗೆ ನೀಡಿ, ಅದು ಆರೋಗ್ಯವಾಗಿರುವಂತೆ, ಸುಖವಾಗಿ ಬೆಳೆಯುವಂತೆ ಶ್ರಮಿಸಿದರು. ಯಾರೂ ಮಾಡಲಾರದ, ಆ ಕಾಲದಲ್ಲಿ ಇನ್ನುಳಿದವರಿಗೆ ಅಸಾಧ್ಯವಾದ, ಅದ್ಭುತವಾದ ಈ ಕೆಲಸ ಮಾಡಿದರೆಂದೇ ಕುಮಾರ ಸ್ವಾಮಿಗಳು ಹಾನಗಲ್ಲ ಈಯೋಗಿ ನಾಡಯೋಗಿಯಾದರು, ಯುಗಪುರುಷರಾದರು.

ಈ ಯೋಗಿ ಪುಂಗವ ಪ್ರಕೃತಿಪ್ರಿಯ, ಸಂಗೀತಪ್ರಿಯ, ಕಾವ್ಯಪ್ರಿಯ ಎಲ್ಲಕ್ಕೂ ಹೆಚ್ಚಾಗಿ ಮಾನವತಾಪ್ರಿಯ. ಈತ ತುಳಿದ ನೆಲ ಪಾವನವಾಯಿತು, ನಿಂತ ನೆಲ ಪುಣ್ಯಕ್ಷೇತ್ರವಾಯಿತು. ಆಡಿದ ಮಾತು ಮಂತ್ರವಾಯಿತು, ನೋಡಿದ ನೋಟ ಶಿವನ ಕೂಟವಾಯಿತು. ಶ್ರೀಗಳು ನಡೆದಲ್ಲೆಲ್ಲ ಬೆಳಕಿನ ಹೆಜ್ಜೆ ಮೂಡಿದವು. ಜ್ಞಾನಕ್ರಿಯೆಯಾಯಿತು, ಕ್ರಿಯೆಜ್ಞಾನವಾಯಿತು.

ಜ್ಞಾನ ಹಾಗೂ ಕ್ರಿಯೆಗಳ ಸಾಮರಸ್ಯಗೊಳಿಸಿದ ಈ ಮಹಾಪುರುಷ ಕನ್ನಡ ನಾಡಿನ ಸಾಂಸ್ಕೃತಿಕ ಕೇಂದ್ರವಾದ ಧಾರವಾಡ ಜಿಲ್ಲೆಯಲ್ಲಿರುವ ಜೋಯಿಸರ ಹಳ್ಳಿಯಲ್ಲಿ ಕ್ರಿ. ಶ. ಸಾವಿರದ ಎಂಟುನೂರ ಅರವತ್ತೇಳರಲ್ಲಿ ಜನ್ಮತಾಳಿದರು.

ಜೋಯಿಸರ ಹಳ್ಳಿ ಬಹು ಚಿಕ್ಕ ಗ್ರಾಮ. ಇಲ್ಲಿ ಸಾಲಿಮಠದ ಬಸವಯ್ಯ, ನೀಲಮ್ಮ ಎಂಬ ಹೆಸರಿನ ದಂಪತಿಗಳು ಶಿವಪೂಜಾ ತತ್ಪರರು, ಲಿಂಗ ನಿಷ್ಠಾಪರರು, ಆಚಾರಶೀಲರು. ಬಡತನವನ್ನೇ ಬಳುವಳಿಯಾಗಿ, ಭಾಗ್ಯವಾಗಿ ಪಡೆದಿದ್ದರೂ ಅವರ ದಾಂಪತ್ಯ ಜೀವನ ಉದಾತ್ತವಾದುದಾಗಿತ್ತು, ಅನುಕರಣೀಯವಾಗಿತ್ತು.

ಇಂಥ ದಂಪತಿಗಳಿಗೆ ಶಿಶುವಾಗಿ ಜನಿಸಿ ಅಜ್ಞಾನದ ಕತ್ತಲೆ ಕಳೆಯಲೆಂದು ಬಂದ ಸೂರ್ಯನಾಗಿ ಬೆಳಗಿದ ಕುಮಾರಯೋಗಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದು ಈ ವಿಜ್ಞಾನಯುಗ ನಂಬಲು ಹಿಂಜರಿಯುವಂತಹ, ಪವಾಡವೆನ್ನುವಂತಹ, ಘಟನೆಗಳು ಹಲವಾರು ಇವೆ. ಈ ಯೋಗಿಯ ಜನನಕ್ಕೆ ಹಿನ್ನೆಲೆಯಾಗಿ, ತಾಯಿ ನೀಲಮ್ಮನವರು ಕನಸಿನಲ್ಲಿ ಮಾಹೇಶ್ವರನನ್ನು ಕಂಡರು. ಆತ ತನ್ನ ಕೈಯಲ್ಲಿದ್ದ ಪುಷ್ಪವನ್ನು ಆಶೀರ್ವದಿಸಿ, ಅದಕ್ಕೆ ಬದಲಾಗಿ ಸುಕುಮಾರನನ್ನು ಬೇಡಿದ. ಅದಕ್ಕೆ ತಾಯಿ ದೇವಮಾನವನನ್ನು ಜಗತ್ತಿಗೆ ನೀಡಲಿದ್ದ ತಾಯಿ " ಆಗಲಿ " ಎಂದಳು, ಲೋಕ ಕಲ್ಯಾಣವೇ ಮಾತೆಯ ಕಾರ್ಯ ತಾನೆ!

ಒಂದು ಮಂಗಲಗಳಿಗೆಯಲ್ಲಿ ಮಗುವಿನ ಜನನವಾಯಿತು. ಹನ್ನೊಂದನೆಯ ದಿನ ಮುತ್ತೈದೆಯರೆಲ್ಲ ಸೇರಿ ಜೋಗುಳ ಪಾಡಿದರು, ಲೋಕೋತ್ತರನಾದ ಮಗುವನ್ನು ತೊಟ್ಟಿಲದಲ್ಲಿರಿಸಿ, ಸದಾಶಿವ ಎಂದು ನಾಮಕರಣವೂ ಆಯಿತು.

ಮಕ್ಕಳೊಂದಿಗೆ ಬೆಳೆದ, ಆತನ ಆಟಪಾಟಗಳಲ್ಲಿ ಆತನದೇ ವೈಶಿಷ್ಟ್ಯ. ಗೋಲಿಯಾಟದಲ್ಲಿಟ್ಟ ಆತನ ದೃಷ್ಟಿ ಮುಂದೆ ದೃಷ್ಟಿಯೋಗವಾಯಿತು. ಮನೆ ಅಂಗಳದಲ್ಲಿ ತನ್ನ ಸಮವಯಸ್ಸಿನವರೊಂದಿಗೆ ನಿಂತಿರುವಾಗ, ಆಡುವಾಗ ನೋಡಿದ ಡೊಂಬರಾಟ ಅವರ ಹಠಯೋಗಕ್ಕೆ ಕಾರಣವಾಯಿತು.

ಆರನೆಯ ವರುಷದಲ್ಲಿ ಒಂದು ಒಳ್ಳೇ ಮುಹೂರ್ತದಲ್ಲಿ ತಂದೆ–ತಾಯಿ ಅಕ್ಷರಾಭ್ಯಾಸಕ್ಕೆ ಆರಂಭಿಸಿದರು, ಸದಾಶಿವನ ಅಭ್ಯಾಸ ಅಜ್ಜಂದಿರಾದ ಶ್ರೀ ಕೊಟ್ರಪ್ಪಯ್ಯನವರ ಶಾಲೆಯಲ್ಲಿಯೇ ನಡೆಯಿತು.

ಜನರಿಂದ ಕಿಕ್ಕಿರಿದು ತುಂಬಿದ ಮನೆಗೆ ಬಡತನವೇ ದಾಳಿಯಿಕ್ಕಿರುವಾಗ ಸದಾಶಿವನ ಅಭ್ಯಾಸ ನಿರಾತಂಕ ವಾಗಿ ಸಾಗಲು ಸಾಧ್ಯವಾಗಲಿಲ್ಲ. ಬಡತನದ ಬೇಗೆ ಸದಾಶಿವನ ವಿದ್ಯೆ ಮುಂದುವರೆಯುವಂತೆ ಮಾಡಲಿಲ್ಲ. ಆಗ ನಡೆದ ಒಂದು ಘಟನೆಯಿಂದ ನೋವು ಅನುಭವಿಸಿದ ಸದಾಶಿವಯ್ಯನವರು ಆ ಊರಿನಿಂದ ಕಜ್ಜರಿ ಗ್ರಾಮಕ್ಕೆ ಬಂದರು, ಅಲ್ಲಿ ಯಾರ ಯಾರದೋ ಪರಿಚಯ ಹೆಚ್ಚಿಸಿಕೊಂಡು ಅಭ್ಯಾಸ ಮುಂದುವರಿಸಿದರು. ಸಮಗ್ರ ನಾಲ್ಕು ವರುಷ ಉತ್ತಮ ರೀತಿಯಲ್ಲಿ ಪಾಸಾಗುತ್ತ ಅಭ್ಯಾಸ ಮುಂದುವರಿಸಿ ಮುಲ್ಕಿ ಪರೀಕ್ಷೆಗೆ ಕುಳಿತರು; ಪಾಸಾಗಲಿಲ್ಲ. ಅದರಿಂದ ಮನಸ್ಸಿಗೆ ನೋವಾಗಿ ತಾಯಿಯವರ ತವರೂರಾದ ಲಿಂಗದ ಹಳ್ಳಿಗೆ ಬಂದು, ಒಂದು ಖಾಸಗಿ ಶಾಲೆಯನ್ನು ಆರಂಭಿಸಿ, ತಾವೇ ಶಿಕ್ಷಕ ರಾಗಿ ಶಾಲೆ ನಡೆಸಿ ಬಡ ವಿದ್ಯಾರ್ಥಿಗಳಿಗೆ ಪುಕ್ಕಟೆ ವಿದ್ಯಾದಾನ ಮಾಡತೊಡಗಿದರು.

ಆದರೆ ಇದು ಯಾವುದರಿಂದಲೂ ಅವರ ಜ್ಞಾನ ದಾಹ ಹಿಂಗಲಿಲ್ಲ. ಅದೇ ಊರಿನಲ್ಲಿದ್ದ ಸಮಾಳದ ಬಸವಪ್ಪಯ್ಯನವರಿಂದ ಶ್ರೀ ನಿಜಗುಣರ ಸಾಹಿತ್ಯ, ವೇದಾಂತ ಅಭ್ಯಾಸ ಆರಂಭಿಸಿದರು. ವೇದಾಂತದ ಅರಿವು, ಇಷ್ಟ–ಪ್ರಾಣ–ಭಾವಲಿಂಗಗಳ ಸೂಕ್ಷ್ಮ ಪರಿಚಯ ನೀಡುವ ಹಲವಾರು ಗ್ರಂಥಗಳ ಅಧ್ಯಯನ ಮಾಡಿದರು. " ಕೈವಲ್ಯ ಪದ್ಧತಿ " ಅವರ ಬಾಳನ್ನು ಇನ್ನೂ ಉದಾತ್ತಗೊಳಿಸಿತು. ಲಿಂಗ ಪೂಜೆಯಲ್ಲಿ ಅವರು ನಿರತರಾದರೆ ಬಾಹ್ಯಲೋಕದ ಪ್ರಜ್ಞೆಯೇ ಇರುತ್ತಿರಲಿಲ್ಲ. ನಿಜಗುಣರ ಗ್ರಂಥಗಳ ಅಧ್ಯಯನ ಮನಃಪೂರ್ವಕದಿಂದಾಗಿ ಅವರಲ್ಲಿ ವೈರಾಗ್ಯಬೆಳೆಯಿತು. ಚಿಕ್ಕ ವಯಸ್ಸಿನಲ್ಲಿಯೇ ಅವರು ಕಾಮ, ಕ್ರೋಧ, ಮೋಹ, ಮದ, ಮತ್ಸರಗಳನ್ನು ಮೀರಿನಿಂತ ಮಹಿಮರಾದರು.

ತನ್ನ ತವರು ಮನೆಯಲ್ಲಿದ್ದ ಮಗನ ವಿಷಯ ತಿಳಿದು ತಾಯಿ ಬಂದು ಮದುವೆಗೆ ಒತ್ತಾಯ ಮಾಡಿದಾಗ ತಾಯಿಗೆ ಹಲವು ರೀತಿಯಲ್ಲಿ ಹೇಳಿ, "ಸಂಸಾರ ನಮಗೆ ಸಲ್ಲದು, ಚಿರಂತನವಾದ, ಲೋಕಹಿತಾರ್ಥವಾದ ಪ್ರಪಂಚಕ್ಕೆ ನಾನು ನನ್ನನ್ನೇ ಅರ್ಪಿಸಿಕೊಳ್ಳಬೇಕೆಂಬ ಸಂಕಲ್ಪ ಮಾಡಿದ್ದೇನೆ; ನೀನು ಆಶೀರ್ವದಿಸು" ಎಂದು ಹೇಳಿ, ತಾಯಿಯನ್ನು ಸಮಾಧಾನಪಡಿಸಿ ಆ ಸ್ಥಳದಿಂದ ಅವರು ಹೊರಟು ಹೋಗುತ್ತಾರೆ.

ತಾಯ ಸಾಮೀಪ್ಯವಿನ್ನೂ ಬೇಕು–ಎನ್ನುವ ವಯಸ್ಸಿನಲ್ಲಿಯೇ ಸದಾಶಿವಯ್ಯನವರು, ವೀರವಿರಾಗಿಯಾಗಿ ಒಮ್ಮೆಲೆ ಎಲ್ಲ ಮೋಹವನ್ನೂ ತೊರೆದು ಸಮಾಜ ಪುರುಷನಾಗಲು ಹೊರಡುತ್ತಾರೆ. ಲಿಂಗದ ಹಳ್ಳಿ ಬಿಟ್ಟು ಹುಬ್ಬಳ್ಳಿಗೆ ಬಂದು ಆರೂಢರಲ್ಲಿ ವೇದಾಂತ ಅಧ್ಯಯನ ಮುಂದುವರಿಸುತ್ತಾರೆ. ವೇದಾಂತದ ಅಭ್ಯಾಸಿಯಾಗಿಯೂ ವೇದಾಂತಿಯಾಗ ಲಿಲ್ಲ. ಇಷ್ಟಲಿಂಗದ ಬಗೆಗೆ ಭಕ್ತಿ ತೋರಿಸದ ಆರೂಢರಬಗೆಗೆ ಸದಾಶಿವಯ್ಯನವರಿಗೆ ಶ್ರದ್ಧೆ ಸಾಲದು. ಶಿವಯೋಗದ ಬಗೆಗೇನೇ ಹೆಚ್ಚು ಆಸಕ್ತಿಯಿರಿಸಿಕೊಂಡ ಸ್ವಾಮಿಗಳು ಎಮ್ಮಿಗನೂರು ಜಡೆಸಿದ್ಧರಬಳಿಗೆ ಹೋದರು. ಅಲ್ಲಿ ಅವರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಹಾರ ದೊರಕಿತು, ಮನಸ್ಸಿಗೆ ಶಾಂತಿ ಲಭಿಸಿತು. ಅಲ್ಲಿಯೇ ಸದಾಶಿವಯ್ಯನವರ ತೇಜಃಪುಂಜ ವ್ಯಕ್ತಿತ್ವವನ್ನು, ಸಿದ್ಧಿಯನ್ನು ಕಂಡ ಜಡೆಸಿದ್ಧರು ಅವರನ್ನು 'ಶಿವಯೋಗಿ' ಎಂದು ಕರೆದರು. ಈ ಶಿವಯೋಗಿಯ ಶಿವಯೋಗ ಎಳಂದೂರ್ರು ಬಸವಲಿಂಗ ಸ್ವಾಮಿಗಳಲ್ಲಿ ಪೂರ್ಣತೆ ಪಡೆಯಿತು. ಬಸವಲಿಂಗ ಸ್ವಾಮಿಗಳು ಶಿಷ್ಯನಲ್ಲಿ ಅಗಾಧವಾದ ಶಕ್ತಿಯನ್ನು ಕಂಡು ಬಹುವಾಗಿ ಮೆಚ್ಚಿದರು. ತಮ್ಮಲ್ಲಿದ್ದುದನ್ನೆಲ್ಲ ಆತನಿಗೆ ಧಾರೆಯೆರೆದರು.

ಗುರು ಶಿಷ್ಯರಿಬ್ಬರೂ ಸೇರಿ ನಾಡಸಂಚಾರಮಾಡಿ ಭಕ್ತರಿಗೆ ಸದ್ಬೋಧೆಯನ್ನು ಮಾಡಿದರು. ಸಂಚಾರದಲ್ಲಿರುವಾಗಲೇ ಶ್ರೀ ಬಸವಲಿಂಗ ಸ್ವಾಮಿಗಳವರಿಗೆ ದೇಹಾಲಸ್ಯವಾಯಿತು. ಆಗ ಸದಾಶಿವಯ್ಯ ಸ್ವಾಮಿಗಳು ಚಿಂತಿತರಾದರು. ಇದನ್ನು ಕಂಡ ಗುರುಗಳು ಶಿಷ್ಯನನ್ನು ಪಕ್ಕಕ್ಕೆ ಕರೆದು ಧೈರ್ಯ ಹೇಳುತ್ತ–ನಿನ್ನಲ್ಲಿ ಯೋಗಶಕ್ತಿಯಿದೆ, ವಿರತಿಯಿದೆ, ನೀತಿಯಿದೆ, ಕಾರ್ಯದಕ್ಷತೆಯಿದೆ, ಧೈರ್ಯದಿಂದ ಈ ಸಮಾಜ ಶಿಶುವನ್ನು ಜೋಪಾನಮಾಡಲು ಸಿದ್ಧನಾಗು–ಎಂದು ಆಶೀರ್ವದಿಸಿ, ಅನುಗ್ರಹಿಸಿ ಲಿಂಗೈಕ್ಯರಾದರು. ಆ ಗುರುವಿನ ಅನುಗ್ರಹವೇ ಪರಮಾರ್ಥ ಸಂಪತ್ತೆಂದು ಸ್ವೀಕರಿಸಿದರು ಸದಾಶಿವಯ್ಯ ಸ್ವಾಮಿಗಳು.

ಅಲ್ಲಿಂದ ಮುಂದೆ ನಿಜಗುಣರ ತಪೋಭೂಮಿಯಾದ ಶಂಭುಲಿಂಗನ ಬೆಟ್ಟದಲ್ಲಿ ಬಂದು ಸ್ವಾಮಿಗಳು ಗವಿಯೊಂದರಲ್ಲಿ ಕೆಲಕಾಲ ಇದ್ದು ಸಮಾಜ, ನಾಡು, ದೇಶದ ಹಿತಕ್ಕಾಗಿ ಬೇಕಾದ ತಪಃಸಿದ್ಧಿಯನ್ನು ಸಂಪಾದಿಸಿದರು. ಒಂದು ಮಂಗಲ ಬೆಳಗಿನಲ್ಲಿ ಸದಾಶಿವಯ್ಯ ಸ್ವಾಮಿಗಳು ತಾವು ಪಡೆದ ತಪಸ್ಸಿನ ಸಿದ್ಧಿಯನ್ನು ಸಮಾಜಕ್ಕೆ ನೀಡಲೆಂದು ಗವಿಬಿಟ್ಟು ಹೊರಹೊರಟರು.

ಅವರು ಹೋದಲ್ಲೆಲ್ಲ ಶಿಷ್ಯಕೋಟಿ ಬೆಳೆಯಿತು. ಅವರ ಮಾತು ಮುತ್ತು–ರತ್ನ. ನಡೆ–ನುಡಿ ಶಿವ ಮೆಚ್ಚುವ ತೆರದಿ. ಸ್ವಾಮಿಗಳು ಜನರ ಮನದಲ್ಲಿ ವಿರಾಜಮಾನರಾದರು. ಅವರು ತುಳಿದ ನೆಲ ಪಾವನ ಕ್ಷೇತ್ರವಾಯಿತು. ಹೀಗೆಯೇ ನಾಡನ್ನೆಲ್ಲ ಸಂಚರಿಸುತ್ತ ಸೊರಬ ಪ್ರಾಂತಕ್ಕೆ ಬಂದರು. ಅಲ್ಲಿಯ ಭಕ್ತರ ಇಚ್ಛೆಯಂತೆ ಸ್ವಾಮಿಗಳು ಕೆಲಕಾಲ ಅಲ್ಲಿಯೇ ನೆಲಸಿದರು.

ಹಾನಗಲ್ಲ ಮಠಾಧಿಪತಿಗಳಾಗಿದ್ದ ಶ್ರೀ ಮ. ನಿ. ಪ್ರ. ಸ್ವ. ಫಕೀರ ಸ್ವಾಮಿಗಳವರು ತುಂಬ ವಯೋವೃದ್ಧರಾಗಿದ್ದರು, ಆಗ ಅವರು ಸಮರ್ಥ ಉತ್ತರಾಧಿಕಾರಿಯ ದಾರಿ ಕಾಯುತ್ತಿದ್ದರು. ಆ ಕ್ಷಣದಲ್ಲಿಯೇ ಸೊರಬ ಪ್ರಾಂತದಲ್ಲಿದ್ದ ಸದಾಶಿವಯ್ಯನವರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು ಮಠಾಧಿಪತಿಯಾಗಲು ಆಜ್ಞಾಪಿಸಿದರು. ಆಗ ಇವರು ಮಠಾಧಿಪತ್ಯ ತಮಗೆ ಬೇಡವೆಂದು ಹೇಳಿದರೂ ಸ್ವಾಮಿಗಳು, ಭಕ್ತರು, ಕೇಳಲಿಲ್ಲ. ಶ್ರೀ ಮ. ನಿ. ಪ್ರ. ಸ್ವ. ಫಕೀರ ಸ್ವಾಮಿಗಳ ಹಾಗೂ ಭಕ್ತರ ಒತ್ತಾಯಕ್ಕಾಗಿ ಮಠಾಧಿಪತ್ಯ ಒಪ್ಪಿಕೊಂಡರು. ಆ ಮಠದ ಅಧಿಕಾರ ವಹಿಸಿಕೊಂಡನಂತರ ಸದಾಶಿವಯ್ಯ ಸ್ವಾಮಿಗಳು ಹಾನಗಲ್ಲ ಕುಮಾರ ಸ್ವಾಮಿಗಳಾದರು. ಇಲ್ಲಿಂದಲೇ ಅವರ ಭವ್ಯಜೀವನದ ಆರಂಭವಾಗುತ್ತದೆ. ಹಾನಗಲ್ಲಿನಲ್ಲಿ ಆರಂಭಿಸಿದ ಪಾಠಶಾಲೆಯಿಂದ ಅವರಿಗೆ ತೃಪ್ತಿಯಾಗಲಿಲ್ಲ. ಸಮಾಜದ ನಾಡಿನತಮಸ್ಸಿಗೆ ಜ್ಯೋತಿ ಮುಟ್ಟಿಸಬೇಕೆಂದು ಬಯಸಿ ಆ ದಾರಿಯಲ್ಲಿ ಕಾರ್ಯೋನ್ಮುಖರಾದರು. ವೀರಶೈವ ಮಹಾಸಭೆಯೆಂಬ ಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಮುಖಾಂತರ ವೀರಶೈವಧರ್ಮದ ಸರ್ವತೋಮುಖ ಏಳ್ಗೆಯ ಕಾರ್ಯಕೈಕೊಂಡರು.

ನಾಡನ್ನೆಲ್ಲ ಸಂಚರಿಸಿ ಅಲ್ಲಲ್ಲಿ ಸಭೆ, ಸಮ್ಮೇಳನಗಳನ್ನು ನಡೆಸಿ, ಪಾಠಶಾಲೆ, ಉಚಿತ ಪ್ರಸಾದನಿಲಯ, ವಾಚನಾಲಯಗಳನ್ನು ಸ್ಥಾಪಿಸಿ, ಸಂಶೋಧನ ಕೇಂದ್ರಗಳನ್ನು ಕಟ್ಟಿ ಸಮಾಜದಲ್ಲಿ ಹೊಸಬೆಳಕನ್ನು, ಹೊಸದೃಷ್ಟಿಯನ್ನು ತರಲು ಪ್ರಯತ್ನಿಸಿದರು. ಈ ನಾಡಿನ ಸಂಸ್ಕೃತಿ, ಇತಿಹಾಸ, ಸಾಹಿತ್ಯದಬಗೆಗೆ ಮಹಾಸ್ವಾಮಿಗಳವರಲ್ಲಿ ಅಪಾರ ಅಭಿಮಾನವಿತ್ತು.

ನಾಲಂದ ವಿಶ್ವವಿದ್ಯಾಲಯದ ಮಾದರಿಯಲ್ಲಿ ಒಂದು ಸಂಸ್ಥೆ ಸ್ಥಾಪಿಸಿ ಅದರ ಮುಖಾಂತರ ವೀರಶೈವ ಸಂಸ್ಕೃತಿ, ಇತಿಹಾಸ, ಸಾಹಿತ್ಯ, ಧರ್ಮದ ಏಳ್ಗೆಗೈಯಬೇಕೆಂದು, ಪ್ರಕೃತಿ ಸೌಂದರ್ಯದ ನೆಲೆವೀಡಾದ ಮಾಮರ, ನೇರಿಳೆ, ಮುತ್ತುಗದ ಮರಗಳ ನೆರಳ 'ಬಯಲಿ'ನಲ್ಲಿ ಜುಳುಜುಳು ಎಂದು ಸದಾನಿನದಿಸುವ ಮಲಪ್ರಭಾ ನದಿಯಬಳಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

“ **ಶಿವಯೋಗಮಂದಿರ** ” ಸ್ಥಾಪಿಸಿದರು ಶ್ರೀಗಳು. ಈ ಮಾತಿಗೆ ಇಂದು ಸುಮಾರು ಅರವತ್ತು ವರುಷಗಳಾಗುತ್ತ ಬಂದವು. ಶಿವಯೋಗಮಂದಿರ–ಶ್ರೀಗಳವರ ಅದ್ಭುತ ಕಲ್ಪನೆಯೊಂದು ಸಾಕಾರಗೊಂಡ, ಸಿದ್ಧಿತಾಳಿದ ಸತ್ಯ. ಶಿವಯೋಗ ಮಂದಿರ–ಸ್ವಾಮಿಗಳ ಪೂರ್ಣಯೋಗದ ಫಲ. ಶಿವಯೋಗಮಂದಿರ–ಸುಂದರ ಕಾವ್ಯ. ತಂಗಾಳಿ ಸೂಸುತಿದೆ ಇಲ್ಲಿ, ತನಿಗಂಪು ತೀಡುತಿದೆ, ಕೂಹೂ ಽ ಕೂಹೂಽ ಎಂದು ಕೂಗುವ ಕೋಗಿಲೆಗಳ ಮಧುರಧ್ವನಿ ಇಲ್ಲಿದೆ. ನೂರಾರು ವಟುಗಳು ಕಾವಿಲಾಂಛನವ ತೊಟ್ಟು, ತಪದಲ್ಲಿ, ಪೂಜೆಯಲ್ಲಿ, ಕಾಯಕದಲ್ಲಿ ನಿರತರಾಗಿರುವ ದೃಶ್ಯ, ನೂರಾರು ಹಸುಗಳು, ವಟುಗಳು, ವೀರವಿರಾಗಿಗಳ ಸಲುಹುವ ಪುಣ್ಯವ್ರತ ಕೈಕೊಂಡಿವೆ ಇಲ್ಲಿ. ಬಿಲ್ವವೃಕ್ಷಗಳ ಸಾಲುಸಾಲು, ಒಂದೆಡೆ ಪವಿತ್ರ ಭಸ್ಮ ಸಿದ್ಧಗೊಳಿಸುವ ಕಾಯಕ, ಇನ್ನೊಂದೆಡೆ ಪುರಾತನ ಗ್ರಂಥಗಳ ಸಂಶೋಧನ ಕೇಂದ್ರದಲ್ಲಿ ನಿರತರಾಗಿಹ ಪಂಡಿತರು, ಸಂಶೋಧಕರು, ಇವೆಲ್ಲವಕ್ಕೂ ಸೂತ್ರಧಾರಿಗಳಾಗಿ, ಶಕ್ತಿಯಾಗಿ, ಚೇತನಸ್ವರೂಪರಾಗಿ ನಿಂತವರು ಪರಮಪುರುಷ ಕುಮಾರ ಸ್ವಾಮಿಗಳು.

ನುಡಿದಂತೆ ನಡೆದು, ತಮ್ಮ ಅಪಾರಶಕ್ತಿಯಿಂದ, ಯೋಗದ ಬಲದಿಂದ ನಾಡಿನ ಜನಮನ–ಗೆಲಿದರು, ಅವರ ಬದುಕನ್ನು ಹದಗೊಳಿಸಿದರು. ಅವರು ಸಂಗ್ರಹಿಸಿ ಇಂದು ಶಿವಯೋಗ ಮಂದಿರದ ಸಂಶೋಧನ ಶಾಖೆಯಲ್ಲಿರಿಸಿರುವ ಪುರಾತನ ತಾಡೋಲೆ ಗ್ರಂಥಗಳು ನಾಡಿನ ಸಂಶೋಧಕರಿಗೆ ಆಹ್ವಾನ ನೀಡುತ್ತಲಿವೆ.

ನಮ್ಮ ನಾಡಿನಲ್ಲಿ ಸಂಗೀತ ಪ್ರಸಾರವಾಗಿದ್ದರೆ, ಅದಕ್ಕೊಂದು ಗೌರವಸ್ಥಾನ ಲಭಿಸಿದ್ದರೆ ಅದು ಶ್ರೀಗಳವರ ಪುಣ್ಯಪ್ರಭಾವದಿಂದ. ಆ ಪ್ರಭಾವಳಿಯಲ್ಲಿ ಬೆಳೆದ ಉಭಯಗಾಯನವಿಶಾರದರೂ, ತಪಸ್ವಿಗಳೂ ಆದ ಲಿಂಗೈಕ್ಯ ಪಂಡಿತ ಪಂಚಾಕ್ಷರಿ ಗವಾಯಿಗಳು ಕರ್ನಾಟಕದಲ್ಲಿ ಸಂಗೀತಕ್ಕೆ ಜೀವತುಂಬಿದರು. ಸಂಗೀತ, ಸಾಹಿತ್ಯ, ಸಂಸ್ಕೃತಿ, ಧರ್ಮ–ಈ ಎಲ್ಲದರ ಉದ್ಧಾರಕ್ಕೆ, ಬೆಳವಣಿಗೆಗೆ ಕಾರಣಕರ್ತರಾದರು ಯುಗಪುರುಷ ಕುಮಾರ ಶಿವಯೋಗಿಗಳು.

ಶ್ರೀಗಳವರು ಪಾದವಿರಿಸಿದ ನೆಲವೆಲ್ಲ ಪಾವನವಾಯಿತು; ಅವರು ನುಡಿದುದೆಲ್ಲ ಮಂತ್ರವಾಯಿತು, ನಡೆದಲ್ಲೆಲ್ಲ ಬೆಳಕಿನ ಹೆಜ್ಜೆ ಮೂಡಿದವು. ಆ ದಿವ್ಯ ಬೆಳಕಿನಲ್ಲಿ ಅಸಂಖ್ಯಾತ ಯತಿವರೇಣ್ಯರು, ಕವಿಗಳು ಪಂಡಿತೋತ್ತಮರು, ಸಂಗೀತ ಸುಧಾಕರರು ಮೈದಳೆದರು.

ಆ ಪಾವನ ಬೆಳಕು ಇಂದು ಆ ಪರಶಿವನ ಚಿತ್ಕಳೆಯೊಂದಿಗೆ ಒಂದಾಗಿದ್ದರೂ ಆ ಬೆಳಕಿನಲ್ಲಿ ಮೂಡಿಬಂದ ಬೆಳಕಿನ ಅಸಂಖ್ಯಾತ ಶಿಶುಗಳು ಈ ನಾಡಿನ ಜನಮನವನ್ನು ಕಲ್ಯಾಣದತ್ತ ನಡೆಯಿಸಿಕೊಂಡು ಹೋಗುತಿವೆ. ಹಾನಗಲ್ಲ ಶ್ರೀಗಳ ಚಿರಂತನ ಇರುವಿಕೆಗೆ ಇದಕ್ಕಿಂತ ಸಾಕ್ಷಿ ಇನ್ನೇನು ಬೇಕು? ಅವರು ಪರಮಪುರುಷರು, ಪಾವನ ಚರಿತರು, ಸಕಲ ಸಚ್ಚಿದಾನಂದ ಭರಿತರು.

ಈ ಮಹಾಮಹಿಮರ ಸನ್ನಿಧಾನದಲ್ಲಿ ಪರಮಭಕ್ತಿಯಿಂದ ನಡೆದು, ಸೇವೆಗೈದು ಸಾರ್ಥಕ್ಯಪಡೆದ ಪುಣ್ಯಜೀವಿಗಳಲ್ಲಿ ನಾಗನೂರ ರುದ್ರಾಕ್ಷಿಮಠದ ಅಧ್ಯಕ್ಷರಾದ ಶ್ರೀ ಮ. ನಿ. ಪ್ರ. ಸ್ವ. ಶಿವಬಸವ ಮಹಾಸ್ವಾಮಿಗಳೂ ಒಬ್ಬರು. ಗುರುಗಳ ಆದರ್ಶ–ಉದ್ದೇಶಗಳ ಸಾಫಲ್ಯತೆಯಲ್ಲಿ ಕಾರ್ಯನಿರತರಾಗಿರುವ ಪೂಜ್ಯ ನಾಗನೂರ ಶ್ರೀಗಳು ಈನಾಡಿನ ವಿದ್ಯಾಕ್ಷೇತ್ರದಲ್ಲಿ ಶಾಲೆಗಳನ್ನು ಕಟ್ಟಿ, ಉಚಿತ ಪ್ರಸಾದನಿಲಯಗಳನ್ನು ನಡೆಯಿಸಿ ಅಪಾರಸೇವೆ ಸಲ್ಲಿಸುತ್ತಿದ್ದಾರೆ. ಇಂದು ಆರೇಳು ಲಕ್ಷ ರೂಪಾಯಿ ಬೆಲೆಬಾಳುವ ವಿದ್ಯಾರ್ಥಿನಿಲಯಕಟ್ಟಿ ಅದಕ್ಕೆ “ ಕುಮಾರೇಶ್ವರ ಪ್ರಸಾದನಿಲಯ ” ಎಂದು ಹೆಸರಿಟ್ಟು ಗುರುಗಳ ಪುಣ್ಯಸ್ಮರಣೆಗೆ ಸ್ಮಾರಕವಾಗಿಸುತ್ತಿದ್ದಾರೆ. ಈ ಸ್ತುತ್ಯಕಾರ್ಯದಿಂದಾಗಿ ನಾಗನೂರ ಶ್ರೀಗಳು ನಾಡಕೃತಜ್ಞತೆಗೆ ಪಾತ್ರರಾಗಿದ್ದಾರೆ. ಶ್ರೀ ಶಿವಯೋಗಿ ಪೂಜ್ಯ ನಾಗನೂರ ಶ್ರೀಗಳವರಿಗೆ ಆಯುರಾರೋಗ್ಯ ಭಾಗ್ಯನೀಡಿ ಅವರಿಂದ ಇನ್ನೂ ಇಂಥಕಾರ್ಯಗಳು ಅನೇಕಾನೇಕ ಆಗುವಂತೆ ಶ್ರೀ ಕುಮಾರೇಶ್ವರನು ಕರುಣಿಸಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ

ಲೇಖಕರು— **ಪಂಚಾಕ್ಷರಿ ಹಿರೇಮಠ**, ಧಾರವಾಡ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂರ್ಯ ಸಿಂಹಾಸನಾಧೀಶ್ವರ

ಪ್ರಕೃತಿ ಪ್ರಭಾವ

" ಪಂಚಮಹಾಭೂತ ಶರೀರಿ ಸಮವಾಯಃ ಪುರುಷಃ "

ಪಂಚ ಮಹಾಭೂತಾತ್ಮಕವಾದುದು ಈ ಶರೀರ. ಈ ಶರೀರದೊಡನೆ ಸಮವಾಯ ಸಂಬಂಧವುಳ್ಳವನು ಶರೀರಿ. ಈ ಶರೀರಕ್ಕೆ ಪುರುಷನೆಂದು ಹೆಸರು. ನಿಖಿಲಾಂಗ ನಿವಾಸನು.

ಶರೀರವು ಪ್ರಕೃತಿಗೂ ಶರೀರಿಗೂ ಆತ್ಯಂತಿಕ ಸಂಬಂಧವಿದೆ. ಶರೀರವ್ಯಷ್ಟಿ ಪ್ರಕೃತಿ, ಪಂಚಮಹಾಭೂತಾತ್ಮಕ ಸೃಷ್ಟಿ ಸಮಷ್ಟಿ ಪ್ರಕೃತಿ; ಈ ಸಮಷ್ಟಿ ಪ್ರಕೃತಿಯಲ್ಲಿರುವವನು ಪರಮಪುರುಷನು ಸರ್ವಭೂತಾದಿವಾಸನು.

ವ್ಯಷ್ಟಿ ಪ್ರಕೃತಿಯಿಂದ ಪುರುಷ ಪ್ರಜ್ಞೆಯುಂಟಾಗುತ್ತದೆ. ಸಮಷ್ಟಿ ಪ್ರಕೃತಿಯಿಂದ ಪರಮ ಪುರುಷ ಯುಂಟಾಗುತ್ತದೆ. ಪ್ರಜ್ಞೆಮಾತ್ರವಲ್ಲ, ಪರಮಾನಂದವೂ ಉಂಟಾಗುತ್ತದೆ.

ಮಾನವನ ಮನಸ್ಸಿನಮೇಲೆ ಮೊದಲಾಗುವದು ಪ್ರಕೃತಿಯ ಪ್ರಭಾವ. ವ್ಯೋಮ, ಸೋಮ, ಸೂರ್ಯ, ತಾರಾಮಂಡಲ, ಮೇಘಮಂಡಲ, ವಾಯು, ತೇಜ, ಜಲ, ನೆಲ, ಮಳೆ, ಬಿಸಿಲು, ಬೆಟ್ಟ, ಕೆರೆ, ತೊರೆ, ಗಿಡಬಳ್ಳಿ, ಮುತ್ತು, ರತ್ನ ಹೀಗೆ ಬಗೆಬಗೆಯಾಗಿ ಚೆಲುವಾಗಿ ತೋರುತ್ತದೆ ಈ ಪ್ರಕೃತಿ. ತನ್ನ ಸೌಂದರ್ಯ ಮಾಧುರ್ಯಗಳಿಂದ ಮನಸನ್ನು ಆಕರ್ಷಿಸುತ್ತದೆ.

ನೆಲದ ಉಪಕಾರ ಅಷ್ಟಿಷ್ಟಲ್ಲ. ಧರಣಿ ಎಂಬ ಹೆಸರನ್ನು ಸಾರ್ಥಕಗೊಳಿಸಿದೆ. ಎಲ್ಲವನ್ನು ಧಾರಣಮಾಡಿ, ಗಡ್ಡೆ-ಗೆಣಸು, ಹೂವು-ಹಣ್ಣು, ಚಿನ್ನ-ರನ್ನ ಮುಂತಾದವುಗಳಿಗೆ ಆಶ್ರಯವಾಗಿ ವಸುಮತಿ, ವಸುಂಧರಾಯೆನಿಸಿದೆ. ಅಶನ, ವಸನ, ವಾಸಗಳಿಂದ ಸರ್ವಪ್ರಾಣಿಗಳನ್ನು ಪೋಷಿಸಿ " ಅವನಿ " ಎನಿಸಿದೆ. ಎಲ್ಲ ಪ್ರಾಣಿಗಳು ಎಲ್ಲ ಮಾನವರು ಮಾಡುವುದನ್ನೆಲ್ಲ ಸಹಿಸುವದರಿಂದ " ಸರ್ವಂ ಸಹಾ " ಎನಿಸಿದೆ. ಈ ಪೃಥ್ವಿಯ ಸಂಬಂಧ ಷಟ್‌ಸ್ಥಲದಲ್ಲಿ ಭಕ್ತಾಂಗೆನಿಸಿದೆ. ಭಕ್ತನಿಗೂ ಈ ಎಲ್ಲ ಗುಣಗಳಿರಬೇಕು; ಈ ಎಲ್ಲ ಧರ್ಮಗಳಿರಬೇಕು, ಆದ್ದರಿಂದ ಅವನು ಎಲ್ಲಕ್ಕೂ ಆಧಾರನಾಗಿರು ತ್ತಾನೆ. ಗಂಧ ಘ್ರಾಣಗಳು ಪಾರ್ಥಿವಾಂಶಗಳು.

ನೀರಿನ ಹಿರಿಮೆ ಚಿಕ್ಕದ್ದಲ್ಲ, ನೀರಿಲ್ಲದೆ ಜೀವನವಿಲ್ಲ-ಅಂತೆಯೇ ಅದು 'ಜೀವನ', ಎಂದು ಹೆಸರಾಂತಿದೆ. ರಸಗಳಿಗೆಲ್ಲ ಮೂಲವಾಗಿದೆ, ನೀರಡಿಕೆಯನ್ನು ತೀರಿಸುತ್ತದೆ, ಕೊಳೆಗಳನ್ನೆಲ್ಲ ತೊಳೆಯುತ್ತದೆ. ' ಆಪೋ ವಾ ಇದಂ ಸರ್ವಂ ' ಎಲ್ಲವೂ ಜಲಮಯ. ಇದರ ಸಕೀಲ ಸಂಬಂಧ ಮಾಹೇಶ್ವರನಿಗಿದೆ. ಮಾಹೇಶ್ವರನು ಜನತೆಯ ಜೀವನಕ್ಕೆ ಜಲದಂತೆ ಎಲ್ಲ ಬಗೆಯಲ್ಲಿಯೂ ಆಧಾರನಾಗಿದ್ದಾನೆ. ಮುಮುಕ್ಷುಗಳ ಆಧ್ಯಾತ್ಮ-ದಾಹವನ್ನು ತೀರಿಸುತ್ತಾನೆ. ರಸ-ರಸನೆ ಗಳು ಜಲಾಂಶಗಳಾಗಿವೆ. ಪಿಂಡಾಂಡದಲ್ಲಿ ರಸ ಪ್ರಧಾನವಾಗಿ ಜಲದ ಕೆಲಸವನ್ನು ಮಾಡುತ್ತಿದೆ.

ಅನ್ನ ನೀರುಗಳಿಂದ ಬರುವ ಜಾಡ್ಯತೆಯನ್ನು ಹೋಗಲಾಡಿಸುತ್ತದೆ. ತೇಜ, ಅಗ್ನಿಯು ಚಂದ್ರ ಸೂರ್ಯರಾಗಿ ಲೋಕದಲ್ಲಿ ತುಂಬಿದ ಅಂಧಃಕಾರವನ್ನು ಅಳಿಸುತ್ತದೆ. ಚಂದ್ರ-ಸೂರ್ಯರು ಪ್ರಾರ್ಥಿವ ಸಸ್ಯಗಳನ್ನು ಪಕ್ವಗೊಳಿಸಿದರೆ ಅಗ್ನಿ ಮಾನವರು ಮಾಡುವ ಪಾಕ ಕ್ರಿಯೆಗೆ ಸಹಾಯಕವಾಗಿದ್ದಾರೆ. ಇದಕ್ಕೂ ಪ್ರಸಾದಾಂಗನಿಗೂ ನಿಕಟಸಂಬಂಧ. ಅಗ್ನಿ ಮಾನವರು ಮಾಡುವ ಪಾಕ ಕ್ರಿಯೆಗೆ ಸಹಾಯಕವಾಗಿದ್ದಾರೆ. ಇದಕ್ಕೂ ಪ್ರಸಾದಾಂಗನಿಗೂ ನಿಕಟಸಂಬಂಧ. ಬ್ರಹ್ಮಾಂಡದ ಕತ್ತಲನ್ನು ರವಿ ಕಳೆದು ಪ್ರಸನ್ನಗೊಳಿಸುವಂತೆ ಪಿಂಡಾಂಡದ ಕೊಳೆಯನ್ನು ಕಳೆದು ಪ್ರಸನ್ನವಾಗಿಸುತ್ತಾನೆ. ಪ್ರಸಾದಿ, ನೇತ್ರರೂಪಗಳು, ತೇಜಾಂಶಗಳು. ತೇಜದ ಎಲ್ಲ ಕಾರ್ಯಗಳನ್ನು ಮಾಡುತ್ತವೆ. ಜೀವನಕ್ಕೆ ಪ್ರಧಾನವಾಗಿವೆ. ಕಣ್ಣಿಲ್ಲದ ಬಾಳು-ಬೀಳು, ರೂಪಿಲ್ಲದ ಮಾಟ ಬರಡು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಗ್ನಿ–ಸೂರ್ಯರ ಬಿಸಿಯನ್ನು ನಿವಾರಿಸುತ್ತದೆ ವಾಯು, ಪ್ರಾಣಶಕ್ತಿಯಾಗಿದೆ ವಾಯು, ಸರ್ವ ಸಂಚಲನ ಶೀಲವಾಗಿದೆ ವಾಯು. ಪ್ರೇರಕ ಮತ್ತು ವಾಹಕವಾಗಿರುವದು ವಾಯು-ಇದಕ್ಕೂ ಪ್ರಾಣಲಿಂಗಕ್ಕೂ ಸಮವಾಯ ಸಂಬಂಧ ವಿದೆ. ಈತನು ಹೃದಯ–ಮನಸ್ಸಿನ ಬಿಸಿಯನ್ನು ನಿವಾರಿಸುತ್ತಾನೆ, ದೇಹದಾದ್ಯಂತ ಚೇತನವನ್ನುಂಟುಮಾಡುತ್ತಾನೆ. ಪ್ರಾಣಲಿಂಗ್ಯನು. ಸ್ಪರ್ಶಸ್ಪರ್ಶಗಳು, ಪವನಾಂಶಗಳು, ಇವುಗಳ ಅವಶ್ಯಕತೆಯನ್ನು ಬೇರೆಹೇಳಬೇಕಿಲ್ಲ. ಸ್ಪರ್ಶಜ್ಞಾನವಿಲ್ಲ ದಿದ್ದರೆ ಜೀವನವೆ ಇಲ್ಲ. ಸುಖದುಃಖಗಳ ಅನುಭೂತಿ ಇರುವದಿಲ್ಲ.

ಎಲ್ಲಕ್ಕೂ ಅವಕಾಶವನ್ನು ಕೊಡುತ್ತದೆ ಆಕಾಶ, ಆಶ್ರಯದಾಯಿ ಆಕಾಶ, ನಿರ್ಲಿಪ್ತ ಸ್ವಭಾವವುಳ್ಳದ್ದು ಆಕಾಶ. ನಿರ್ಮಲವಾದುದು ಆಕಾಶ; ಶಬ್ದಶ್ರೋತೃಗಳು ಆಕಾಶಾಂಶಗಳು ಆ ಪರವಸ್ತುವಿಗೂ ಬಯಲು, ಆಕಾಶ, ನಿರವಯಲು ಎಂದು ಹೆಸರು. ಇದರಿಂದ ಆಕಾಶಕ್ಕಿರುವ ಅಗ್ಗಳಿಕೆ ಅರಿಕೆಯಾಗುತ್ತದೆ. ಆಕಾಶ ತತ್ವದವನು ಶರಣ, ಲಿಂಗಶಕ್ತಿ, ಲಿಂಗಕಳೆ, ಲಿಂಗಗುಣಗಳಿಗೆ ಲಿಂಗನಾದಕ್ಕೆ ತನ್ನಲ್ಲಿ ಅವಕಾಶಕೊಡುತ್ತಾನೆ ಶರಣ. ಸಕಲ ಜೀವಾತ್ಮರಿಗೆ ಲೇಸನೆ ಬಯಸುತ್ತಾನೆ ಶರಣ ಪ್ರಕೃತಿಯು ಎದುರಾಳಿಯಲ್ಲ, ಕೇಡಾಳಿಯಲ್ಲ. ಲಿಂಗದೊಡನೆ ಬೆರೆಯಲು ಸಹಾನುಭೂತಿಯುಳ್ಳ ಒಡನಾಡಿನ ಸಂಗಾತಿಯೆಂದು ಭಾವಿಸುತ್ತಾನೆ. ಶರಣ ವ್ಯಷ್ಟಿ ಸಮಷ್ಟಿರೂಪ ಈ ಉಭಯಾತ್ಮಕ ಪ್ರಕೃತಿ ಬ್ರಹ್ಮಾತ್ಮಸ್ವರೂಪವೆಂದು ಭಾವಿಸುತ್ತಾನೆ ಶರಣ. ಪ್ರಕೃತಿಯೇ ಅಂಗ. ಪ್ರಕೃತಿಯೊಳಗಿರುವ ಆತ್ಮವೇ ಲಿಂಗ; ಪ್ರಕೃತಿ ಪುರುಷರಿಗೆ ಸತಿ–ಪತಿ ಸಂಬಂಧವಿದೆ, ಸಮರಸಯೋಗವಿದೆ. ಅಂತೆಯೇ "ಮಾಯಾಂತು ಪ್ರಕೃತಿಂವಿದ್ಯಾತ್ ಮಾಯಿನಾಂತು ಮಹೇಶ್ವರಂ", ಎಂದು ಸಾರಿದೆ ಶೃತಿ. ಪ್ರಕೃತಿಯಿಲ್ಲದೆ ಅವ್ಯಕ್ತಮಯನೂ ಅಖಂಡ ತೇಜೋ ಮಯನೂ ಆದ ಆತ್ಮನು–ದೃಷ್ಟವ್ಯನಾಗಲಾರ, ಶ್ರೋತವ್ಯನಾಗಲಾರ, ಮಂತ್ರವ್ಯನಾಗಲಾರ. ಪ್ರಕೃತಿ–ಪುರುಷರು ಭಿನ್ನಭಿನ್ನ ವಸ್ತುಗಳು; ಪರಸ್ಪರ ಉಪಕಾರೋಪಕಾರಕರು. ಅಂತೆಯೇ ಪ್ರಕೃತಿ ಷಟ್‌ಸ್ಥಲ ಸಿದ್ಧಾಂತದಲ್ಲಿ "ಸ್ವಭಾವ" ವೆನಿಸಿದೆ. ಪುರುಷ 'ಸಹಜ' ನೆನಿಸಿದ್ದಾನೆ. ಸ್ವಭಾವವಿಲ್ಲದೆ ಸತ್ಯತೆ ಸಿದ್ಧಿಸದು; ಚಿದಾನಂದತೆ ಪ್ರಕಾಶಿಸದು, ಪ್ರಾಪ್ತವಾಗದು.

ಪ್ರಕೃತಿರೂಪ ಸ್ವಭಾವ ಪ್ರಭಾವನ್ನು ಕಂಡುಕೊಂಡರು ಷಟ್‌ಸ್ಥಲ ಬ್ರಹ್ಮಿಗಳು; ಘನಲಿಂಗ ಚಕ್ರವರ್ತಿಗಳು, ಪ್ರಕೃತಿಯಲ್ಲಿ ಪುರುಷನನ್ನು ಲೌಕಿಕದಲ್ಲಿ ಪರಮಾರ್ಥವನ್ನು ಆದಿಯಲ್ಲಿ ಅನಾದಿತ್ವವನ್ನು ಅನಾದಿಯಲ್ಲಿ ಆದಿಯನ್ನು ತಮ್ಮ ಮಹಾನುಭಾವದಿಂದ ಮನಗಂಡರು. ಸರ್ವವನ್ನು ಸಮಗಾಣುವ ಷಟ್‌ಸ್ಥಲ ಜೀವನ, ಸರ್ವಸೌಲಭ್ಯ–ಜೀವನ, ಸರ್ವಾತ್ಮ ಭಾವ ಜೀವನ, ಸೊಗಸಿನ ಸಂಪೂರ್ಣ ಜೀವನ ಎಂಬುದನ್ನು ಉದಹರಿಸಿ ಉಪದೇಶಿಸಿದರು.

ಭಾವಕ್ಕೆ ಭಾಷೆ, ಭಾಷೆಗೆ ಲಿಪಿ, ಅರ್ಥಕ್ಕೆ ಪದ ಹೇಗೋ ಹಾಗೆ ಪುರುಷನಿಗೆ ಪ್ರಕೃತಿ, ಪ್ರಕೃತಿಗೆ ಪುರುಷ, ಪ್ರಕೃತಿಯನ್ನು ವಿಕೃತಿಗೆ ಬಿಡದೆ ಸಂಸ್ಕೃತಿಗೆ ತರುತ್ತದೆ ಷಟ್‌ಸ್ಥಲ. ದರ್ಶನ ಅಂತೆಯೇ ಅದು ಜೀವನ ಸಿದ್ಧಾಂತ.

ಪ್ರಕೃತಿ ತ್ರಿಗುಣಮಯಿ, ವಿಕಾರಿ ಎಂದು ಹೇಳುವದುಂಟು. ಪ್ರಕೃತಿ ತ್ರಿಗುಣಮಯಿಯಾದರೂ ಕೇವಲ ವಿಕಾರಿಯಲ್ಲ, ವಾಸ್ತವವಾಗಿ ಅದು ಅವಿಕಾರಿ. ಸನ್ನಿವೇಶವನ್ನು ಅನುಸರಿಸಿ ವಿಷಯ ವ್ಯಾಸಂಗದಲ್ಲಿ ವಿಕಾರಿಯಾಗುವ ದುಂಟು. ಇದನ್ನು ತಡೆಯುವರು ಪುರುಷ ಧರ್ಮ.

ಎರಡನೆಯದಾಗಿ ತ್ರಿಗುಣಗಳಿಗೆ ಎರಡು ಮುಖಗಳುಂಟು; ವಿಕಾರಿ ತ್ರಿಗುಣಗಳು, ಅವಿಕಾರಿ ತ್ರಿಗುಣಗಳು– ಎಂದು. ಅವಿಕಾರಿ ತ್ರಿಗುಣಗಳಿಲ್ಲದಿದ್ದರೆ ಕಾಯಕವೇ ಕೈಲಾಸವಾಗದೆ ಹೋಗಬೇಕಾದೀತು; ನಿದ್ರೆಯೇ ಸಮಾಧಿಯಾಗದೆ ಇರಬೇಕಾದೀತು. 'ಶರಣ ನಿಡ್ದೆಗೈದೆಡೆ ಸಮಾಧಿಕಾಣಿರೋ;' ಎಂಬ ಮಾತಿಗೆ ಅರ್ಥವೇನು ?

ಪ್ರಕೃತಿಯನ್ನೆ ಷಟಸ್ಥಲ ಜ್ಞಾನಿಗಳಾದ ಶಿವಾಚಾರ್ಯರು ಆದಿಶಕ್ತಿಯೆಂದು ಕರೆದಿಗ್ದಾರೆ. ಈ ಆದಿಶಕ್ತಿಯನ್ನೇ ಸಾಂಖ್ಯರು ಪ್ರಕೃತಿಯೆನ್ನುವರು, ಅದ್ವೈತಿಗಳು ಮಾಯೆಯೆನ್ನುವರು, ತಾಂತ್ರಿಕರು ಪರಾಶಕ್ತಿಯೆನ್ನವರು, ಪೌರಾಣಿಕರು ತ್ರಿಪುರ ಸುಂದರೀ, ರಾಜೇಶ್ವರಿ ಎಂದು ಹೇಳುವರು. ಇವೆಲ್ಲವೂ ಪ್ರಕೃತಿ ಸ್ವರೂಪಗಳೇ ಆಗಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಅನಾದ್ಯನಂತ ಕಾಲದಲ್ಲೆಲ್ಲ ಪ್ರಕೃತಿಯಲ್ಲಿ ಸಂತತವಾಗಿ ಕಾಣಬರುವ ಪ್ರಾಣಶಕ್ತಿಯ ರಹಸ್ಯವನ್ನು ಆಲೋಚಿಸುವದೇ ಸಾಕು, ಪ್ರಕೃತಿಯಲ್ಲಿ ಅಭಿವ್ಯಕ್ತವಾಗಿರುವ ಅದ್ಭುತವಾದ ಬಂಧನಶಕ್ತಿಯ ಅತ್ಯಲ್ಪ ಭಾಗವನ್ನೇ ತಿಳಿದು ಮನನ ಮಾಡುತ್ತಿರುದದೇ ನನಗೆ ತೃಪ್ತಿಕರವಾಗಿದೆ " ಎಂದು ವೈಜ್ಞಾನಿಕ ವಿದ್ವಾಂಸರಲ್ಲಿ ಪ್ರಸಿದ್ಧನಾದ ಡಾ. ಆಲ್ಬರ್ಟ ಐನಸ್ಟೀನ್‌ನು ಹೇಳಿ ಪ್ರಕೃತಿಪ್ರಭಾವವನ್ನು ಈ ಎರಡೇ ನುಡಿಗಳಲ್ಲಿ ಎತ್ತಿ ತೋರಿಸಿದ್ದಾನೆ. ಪ್ರಕೃತಿಯನ್ನು ಬಿಟ್ಟರೆ ಯಾವ ಸಂಸ್ಕೃತಿಯಿರದು, ಯಾವ ಕಲಾಕೃತಿಯಿರದು. ಪ್ರಕೃತಿಯೇ ದೃಶ್ಯ, ಜಗತ್ತಿನ ಉತ್ತಮ ಕಲಾಕೃತಿ. ಅದನ್ನು ನೋಡುವಲ್ಲಿ ಬಳಸಿಕೊಳ್ಳುವುದೆ ಕಲೆ. ಪ್ರಕೃತಿಯಿಲ್ಲದಿದ್ದರೆ ಪುರುಷನು ಏನನ್ನೂ ಮಾಡಲಾರನು. 'ಯಾವ ಆಕೃತಿಯೂ ಇರದು. ಕಲಾವಂತನ ಕೈಯಲ್ಲಿ ಕಣ್ಣಿನಲ್ಲಿ ಪ್ರಕೃತಿಯೇ ಪ್ರಕೃಷ್ಟವಾದ ಕೃತಿ; ಪ್ರಬುದ್ಧವಾದ ಕೃತಿ.

ಓಂ ಶಾಂತಿಃ

ಲೇಖಕರು— ಶ್ರೀ. ಜ. ಚ. ನಿ.

ಶಿಕ್ಷಣದ ಗೊತ್ತುಗುರಿಗಳು.

ಪರಮಪೂಜ್ಯ ತಪಸ್ವಿ ಮಹಾರಾಜ – ಶ್ರೀ ಶ್ರೀಕುಮಾರ ಸ್ವಾಮಿಗಳು, ತಪೋವನ ಧಾರವಾಡ.

ಜೀವನವು ಅನಾದಿ ಪ್ರವಾಹರೂಪವಾಗಿರುವದರಿಂದ ಅದನ್ನು ವ್ಯಾಖ್ಯಾನಿಸುವದು ದುಷ್ಕರವು; ಹಾಗೆಯ್ಕೆ ಜೀವನದ ತತ್ವಪ್ರತಿಪಾದನೆಗೈಯುವ ಶಿಕ್ಷಣವಾದರೂ ಸುಕರವಲ್ಲ. ಅದನ್ನು ನಾವು ವಿವರಣೆಯಿಂದ ತಿಳಿದುಕೊಳ್ಳ ಬೇಕೆಂದು ಆರಂಭದಲ್ಲಿಯೇ ಹೇಳಿಬಿಡುತ್ತೇನೆ. ವಿಚಾರ ಸೌಕರ್ಯಕ್ಕಾಗಿ ಜೀವನವನ್ನು ಸೇಂದ್ರಿಯ, ನಿರೀಂದ್ರಿಯವೆಂದು ವಿಭಾಗಿಸುವದುಂಟು; ಆದರೆ ಜಗದೀಶಚಂದ್ರ ಭೋಸರ ಪ್ರಯೋಗದಿಂದ ಈ ವಿಭಾಗವು ಕೃತಕವೆಂದು ಕಂಡುಬಂದೀತು. ಜೀವನವು ಯಾವಹಂತಿನಲ್ಲಿಯೆ ಇರಲಿ, ಯಾವ ಕ್ಷೇತ್ರವನ್ನೇ ಬಳಸಿರಲಿ ಅವುಗಳಿಗನುಸಾರವಾಗಿ ಜೀವನದಲ್ಲಿ ಸಂವೇದನೆಯು ಇದ್ದೇ ಇರುವದು. ತೀರಕೆಳಗಿನ ಸ್ತರಗಳಲ್ಲಿ ಎಂದರೆ ಖನಿಜವರ್ಗ, ಸಸ್ಯವರ್ಗಗಳಲ್ಲಿ ಆ ಸಂವೇದನೆಯನ್ನು ಪ್ರಕಟಗೊಳಿಸುವ ಇಂದ್ರಿಯ ಅಭಿವ್ಯಕ್ತಿಯು ಮಾತ್ರ ಜೀವನದಲ್ಲಿ ಇರಲಿಕ್ಕಿಲ್ಲ. ಇದರಿಂದ ಜೀವನದಲ್ಲಿ ಸಂವೇದನೆಯೇ ಇಲ್ಲವೆಂದರ್ಥವಲ್ಲ. ಜೀವನವು ಯಾವಾಗಲೂ ಸಂವೇದನೆಯಿಂದ, ಅರುಹಿನಿಂದ ಬೆರೆತುಕೊಂಡಿರುವದು. ಪ್ರಗತಿಗನುಗುಣವಾಗಿ ಜೀವನದಲ್ಲಿ ಅರುಹು ಪರಿಸ್ಫುಟಗೊಳ್ಳುವದು. ಹೀಗೆ ಜೀವನವು ಪ್ರವಾಹರೂಪದಿಂದ ಮುಂದುವರಿದ ಹಾಗೆಲ್ಲ ಜೀವನದಲ್ಲಿಯ ಅರುಹು ಅಥವಾ ಸಂವೇದನೆಯು ಉಳಿದ ಪ್ರಾಣಿಗಳಿಗಿಂತ ಮಾನವನಲ್ಲಿ ಹೆಚ್ಚು ಪ್ರಮಾಣದಿಂದ ಪ್ರಕಟವಾಗುವದು. ಮಾನವನಾದರೂ ಆ ಸಂವೇದನೆಯ ನೆರವಿನಿಂದ ಆ ಅರುಹಿನ ಬಲದಿಂದ ತನ್ನ ಸುತ್ತುಮುತ್ತಲಿನ ಸನ್ನಿವೇಶಗಳನ್ನು ಮಾರ್ಪಡಿಸುತ್ತ, ಇಲ್ಲವೆ ಆ ಸನ್ನಿವೇಶಗಳಿಗೆ ತಾನು ಹೊಂದಿಕೊಳ್ಳುತ್ತ, ಹಿಂದಿನವರ ಅನುಭವಗಳನ್ನು ಪಡೆದುಕೊಂಡು, ತನ್ನ ಜೀವನದಲ್ಲಿ ಹೊಸ ಅನುಭವಗಳನ್ನು ಮುಡಿದುಕೊಂಡು ನವನವೋನ್ಮೇಷ ಶಾಲಿನಿಯಾದ ಜೀವನದ ಜಟಿಲ ಸಮಸ್ಯೆಗಳನ್ನು ಬಿಡಿಸಲಿಕ್ಕೆ ಹೆಣಗುತ್ತಾನೆ. ಈ ಪ್ರಯತ್ನದಲ್ಲಿ ಮಾನವನಿಗೆ ಭೌತಿಕ ಸನ್ನಿವೇಶಗಳ ಸಂಪರ್ಕದ ಜೊತೆಗೆ ಸಾಮಾಜಿಕ ಸನ್ನಿವೇಶಗಳ ಸಂಪರ್ಕವೂ ಆಗುತ್ತದೆ. ಭೌತಿಕ ಸನ್ನಿವೇಶಗಳಂತೆ ಸಮಾಜವು ಅವನ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆದುದರಿಂದ ಇತರ ಪ್ರಾಣಿವರ್ಗಕ್ಕಿಲ್ಲದ ಹಲಕೆಲವು ಅವಶ್ಯಕತೆಗಳು ಅವನಿಗೆ ಅನಿವಾರ್ಯವೆನಿಸಿವೆ. ಅವುಗಳಲ್ಲಿ ಶಿಕ್ಷಣವೂ ಒಂದು.

ಮಾನವನಿಗೆ ಲಭಿಸಬಹುದಾದ ಶಿಕ್ಷಣವು ಎರಡು ವಿಧವಾಗಿದೆ. ಮೊದಲನೆಯದಾಗಿ ವ್ಯಕ್ತಿಗೆ ಸಮಾಜ ಸಂಪರ್ಕದಿಂದ ನಿಸರ್ಗದ ಸನ್ನಿವೇಶದಿಂದ ದೊರೆಯುವ ಅನಿರೀಕ್ಷಿತ ಅನುಭವ—ಇದುವೆ ಅನಿಚ್ಛಾಪೂರ್ವಕ ಶಿಕ್ಷಣ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(involuntary education) ಎರಡನೆಯದಾಗಿ ಪ್ರಯತ್ನಪೂರ್ವಕವಾಗಿ ದೊರೆಯುವ ಅನುಭವ. ಇದುವೆ ನಿರೀಕ್ಷಿತವೂ ಉದ್ದೇಶಪೂರ್ವಕವೂ ಆದ ಶಿಕ್ಷಣ (Vountary education) ನಾಗರಿಕ ಜೀವನದ ಪ್ರಭಾತ, ಸಮಯದಲ್ಲಿ ಮಾನವ ಶಿಕ್ಷಣವು ಸ್ವಾಭಾವಿಕವೂ ಅನಿರೀಕ್ಷಿತವೂ ಅನಿಚ್ಛಾಪೂರ್ವಕವೂ ಆಗಿದ್ದಿತು. ಆಗ ಮಕ್ಕಳು ತಮ್ಮ ತಾಯಿ-ತಂದೆಗಳು, ಅಣ್ಣ-ತಮ್ಮಂದಿರು, ಓರಿಗೆಯ ಗೆಳೆಯರು, ಗುರು-ಹಿರಿಯರು ಆಡುವ ಮಾತುಗಳನ್ನು, ಮಾಡುವ ಕೆಲಸವನ್ನು ಅನುಕರಿಸುತ್ತಿದ್ದರು. ಸಮಾಜ ಜೀವನವು ತೀರ ಶೈಶವಾವಸ್ಥೆಯಲ್ಲಿದ್ದುದರಿಂದ ಇಂತಹ ಅನುಕರಣ ಪ್ರಧಾನವಾದ ಶಿಕ್ಷಣವು ಆಗಿನಕಾಲಕ್ಕೆ ಸಾಕೆನಿಸುತ್ತಿತ್ತು; ಆದರೆ ಬರಬರುತ್ತ ಸಮಾಜ ಜೀವನವು ಬಹುಮುಖವಾಗಿ ಬೆಳೆದು ಅನುಭವದ ಎಳೆಗಳು ನೀಳವಾದಂತೆ ಆ ಅನುಕರಣ ರೀತಿಯ ಸ್ವಾಭಾವಿಕ ಶಿಕ್ಷಣ ಸಾಲದಾಯಿತು. ನಾಗರಿಕತೆಯು ಚಿಗುರೊಡೆದು ಪಲ್ಲವಿಸಿ ಫಲದ್ರೂಪವಾದಂತೆ ಪರಿಪರಿಯಾದ ಅನುಭವಗಳನ್ನು ಮಾನವನು ಅಂಗವಿಸಿಕೊಳ್ಳಲೆಂದು ಪ್ರತ್ಯೇಕ ಸಂಸ್ಥೆಗಳು ಅಸ್ತಿತ್ವದಲ್ಲಿ ಬಂದವು. ಈ ಸಂದರ್ಭದಲ್ಲಿ ಕೆಲವರು ಶಿಕ್ಷಣವನ್ನೇ ತಮ್ಮ ವೃತ್ತಿಯನ್ನಾಗಿ ಅವಲಂಬಿಸಿದರು. ಇದರಿಂದಾಗಿ ಶಾಲೆಗಳೂ, ಉಪಾಧ್ಯಾಯ ವೃತ್ತಿಯೂ ಕುಡಿಚಾಚಿದವು. ಸಮಾಜದ ಸಂಸ್ಕೃತಿ ಸಂಪ್ರದಾಯಗಳನ್ನೂ ತಾವು ಬೆಳೆದುಬಂದ ಸನ್ನಿವೇಶಗಳಿಂದೊಗೆದ ಅನುಭವ ಸಾರವನ್ನೂ ಮಕ್ಕಳಿಗೆ ಉದ್ದೇಶಪೂರ್ವಕವಾಗಿ ಬೋಧಿಸುವ ಏರ್ಪಾಟವು ನಡೆಯಿತು. ಆದರೆ ಬರಬರುತ್ತ ಶಾಲೆಗಳಲ್ಲಿ ಕೊಡತಕ್ಕ ಶಿಕ್ಷಣದ ವಿಷಯಗಳನ್ನು ಸಮಾಜವೆ ನಿರ್ಧರಿಸತೊಡಗಿತು. ಹೀಗೆ ಸಮಾಜದ ಕಟ್ಟುನಿಟ್ಟುಗಳಿಗೊಳಗಾದ ಶಿಕ್ಷಣವು ಜೀವನದಿಂದ ಪ್ರತ್ಯೇಕವಾಗುತ್ತ ಬಂದು ಜೀವನದ ನಿಜವಾದ ಅನುಭವಗಳಿಗೂ ಶಾಲೆಗಳ ಕಾರ್ಯಕ್ರಮಗಳಿಗೂ ಭೇದವು ಹೆಚ್ಚತೊಡಗಿತ್ತು, ಪುಸ್ತಕಗಳ ಮುಖಾಂತರ ದೊರೆಯುವ ಶಿಕ್ಷಣವು ಏಕದೇಶಿಯವಾಯಿತು. ವ್ಯಕ್ತಿಯ ಮುನ್ನೋಟದ ಜೀವನಕ್ಕೆ ಸಹಾಯ ನೀಡಲಾರದ ಶಿಕ್ಷಣ ಮಾತ್ರ ಶಾಲೆಯಲ್ಲಿ ದೊರೆಯುವಂತಾಗಿ ಜೀವನದ ಅವಶ್ಯಕತೆಗೂ ಶಿಕ್ಷಣಕ್ಕೂ ಸರಿಯಾದ ಸಂಬಂಧವನ್ನು ಕಲ್ಪಿಸುವ ಕಾರ್ಯವು ಎಲ್ಲ ಶಿಕ್ಷಣ ತಜ್ಞರಮುಂದೆ ನಿಂತಿರುವ ಮಹಾಸಮಸ್ಯೆಯಾಗಿದೆ.

ಶಿಕ್ಷಣ ಕಾರ್ಯಕ್ಕೆ ಜೀವನ ತತ್ವದ ಪರಿಚಯವು ಅತ್ಯಗತ್ಯವಾದುದರಿಂದ ಆ ತತ್ವದ ಸ್ವರೂಪವೆಂತಹದು ಅದಕ್ಕೂ ಶಿಕ್ಷಣಕ್ಕೂ ಯಾವಬಗೆಯ ಹತ್ತುಗಡೆಯನ್ನು ಎತ್ತಿಹೇಳಬೇಕು ಎಂಬ ಪ್ರಶ್ನೆಗಳು ಹುಟ್ಟುತ್ತವೆ. ತತ್ವದರ್ಶನ ಜೀವನದ ಗುಟ್ಟು-ಗುರಿಗಳನ್ನೂ ಅದರ ದೃಷ್ಟಿ ಧ್ಯೇಯಗಳನ್ನೂ ತೋರಿಸುವದಾದರೆ ಶಿಕ್ಷಣವು ಆ ಗುರಿಯನ್ನು ಆ ಧ್ಯೇಯವನ್ನು ಮುಟ್ಟುವ ಮಾರ್ಗವನ್ನು ತೋರಿಸುವದು. ಅನಾದಿ ಪ್ರವಾಹರೂಪವಾದ ಜೀವನದಲ್ಲಿ ನಿರ್ದಿಷ್ಟ ಗೊತ್ತುಗುರಿಗಳಿಲ್ಲದಿದ್ದರೂ, ಆ ಪ್ರವಾಹವನ್ನು ತನಗೆ ಒಗ್ಗುವಷ್ಟು ಒಳಗೊಳ್ಳುವ ಮಾನವಜೀವನದಲ್ಲಿ ಮಾತ್ರ ನಿಶ್ಚಿತ ಧ್ಯೇಯವನ್ನು ಆ ಧ್ಯೇಯಕ್ಕಾಗಿ ಹೋರಾಡುವ ಹುಮ್ಮಸ್ಸನ್ನು ಕಾಣಬಹುದು. ಇನ್ನು ಮಾನವ ಜೀವನದ ಹೆಗ್ಗುರಿಯೆಂದರೆ ನಿಜವಾದ ಮಾನವತೆಯನ್ನು ಪ್ರಕಟಗೊಳಿಸುವದು-ದಾನವವೃತ್ತಿಯನ್ನಲ್ಲ. ಇಂತಹ ಮಾನವತೆಯಿಂದ ನಾಗರಿಕತೆ ನಿರ್ಮಾಣವಾಗುವದು. ಈ ಕಾರ್ಯಸಾಧನೆಗೆ ಶಿಕ್ಷಣವೆ ರಾಜಮಾರ್ಗ. ನಮ್ಮ ನಾಗರಿಕತೆ ನಿರ್ಮಾಣವಾಗಿರುವದು ನಮ್ಮ ಹಿಂದಿನವರ ಅನುಭವದಿಂದಲೇ. ಇಂದಿನ ನಾಗರಿಕತೆಯೆಂದರೆ ಹಿಂದಿನವರೆಲ್ಲರ ಜೀವನದ ಕಾಣಿಕೆಯಷ್ಟೆ, ಬಹುಕಾಲದಿಂದ ಬೆಳೆದುಕೊಂಡು ಬಂದಿರುವ ನಾಗರಿಕತೆಯು ಅವಿಚ್ಛಿನ್ನವಾಗಿರಬೇಕಾದರೆ ಇಂದಿನವರ ಅನುಭವ ಮುಂದಿನವರ ಹಸ್ತಗತವಾಗುತ್ತಿರಬೇಕು. ನಾಗರಿಕತೆಯಾದರೂ ಜೀವನದಂತೆ ಪ್ರವಾಹರೂಪವಾಗಿ ನಿರರ್ಗಳವಾಗಿ ಹರಿಯಬೇಕು. ನಾಗರಿಕತೆಗೆ ತಡೆಯುಂಟಾಗಿ ಅದು ಹರಿಗಡಿಯದಂತೆ ನೋಡಿಕೊಳ್ಳುವದು ಶಿಕ್ಷಣದಹೊಣೆ. ಆದುದರಿಂದ ಸಮಾಜ ಜೀವನದಲ್ಲಿ ಶಿಕ್ಷಣ ತಜ್ಞರು ಶಿಕ್ಷಕರು ಅದೆಂತಹ ಹೊಲಬಿನ ಹಾಗು ಹೊಣೆಗಾರಿಕೆಯ ವ್ಯಕ್ತಿಗಳೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಶಿಕ್ಷಣ ಸಾಧನಗಳಲ್ಲಿ ಶಾಲೆ, ಕಾಲೇಜುಗಳೆ ಪ್ರಧಾನವಾದರೂ ಅವಷ್ಟೇ ಶಿಕ್ಷಣ ಸಾಧನೆಗಳೆಂಬ ನಂಬಿಗೆ ಜನರಲ್ಲಿ ಬೇರೂರಿದೆ. ಅದೇಕೆ ? ವಿದ್ಯಾರ್ಥಿಗಳಲ್ಲಿ ಕಂಡುಬರಬಹುದಾದ ನ್ಯೂನತೆಗಳಿಗೆಲ್ಲ ಶಾಲೆ ಕಾಲೇಜುಗಳೆ ಕಾರಣವೆನ್ನುವ ಮನೋಭಾವ ಬೆಳೆದು ಬಂದಿದೆ. ಆದರೆ ಮಕ್ಕಳ ಶಿಕ್ಷಣ ಕಾರ್ಯವನ್ನು ನೆರವೇರಿಸುವ ಇತರ ಸಂಘ-ಸಂಸ್ಥೆಗಳೂ ಇವೆ, ಎಂಬುದನ್ನು ಅರಿತರೆ ಸಾಕು. ವಿದ್ಯಾರ್ಥಿಗಳು ಪಾಠಶಾಲೆಯಲ್ಲಿರುವ ಸಮಯವಾದರೂ ಎಷ್ಟು ? ದಿನದ ಒಂದು ಕಾಲು ಭಾಗಮಾತ್ರ ಅಲ್ಲವೆ! ಉಳಿದ ಮುಕ್ಕಾಲು ಭಾಗವನ್ನು ತಾಯಿ-ತಂದೆಗಳೊಡನೆಯೂ ಸಮಾಜದ ಇನ್ನಿತರ ಸನ್ನಿವೇಶಗಳೊಡನೆಯೂ ಕಳೆಯುವನು. ಎಂದ ಮೇಲೆ ಆ ಸನ್ನಿವೇಶಗಳು ವಿದ್ಯಾರ್ಥಿಯ ಬೆಳವಣಿಗೆಯಮೇಲೆ ಪಾಠಶಾಲೆಗಳಷ್ಟೆ ಇಲ್ಲವೆ ಇನ್ನೂ ಹೆಚ್ಚಾಗಿಯೆ ಪ್ರಭಾವವನ್ನು ಬೀರುವದಿಲ್ಲವೆ ? ಜೀವನವೆ ಒಂದು ಬಗೆಯ ಶಿಕ್ಷಣವೆಂದ ಮೇಲೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವನ ಕಾರ್ಯಕಲಾಪಗಳನ್ನು ರೂಪಿಸಲೆಳಸುವ ಇತರ ಸಂಘ-ಸಂಸ್ಥೆಗಳೂ ಶಿಕ್ಷಣ ಸಾಧನಗಳಾಗುವದಿಲ್ಲವೆ? ಹಾಗಾದರೆ ಶೈಕ್ಷಣಿಕ ಹೊಣೆಗಾರಿಕೆಯನ್ನು ಹೊತ್ತ ಇತರ ಸಂಘ-ಸಂಸ್ಥೆಗಳಾವವು? ನಾಟಕ, ಚಲನಚಿತ್ರ, ಪತ್ರಿಕೆ, ಪುಸ್ತಕ ಭಾಂಡಾರಗಳು, ಪ್ರದರ್ಶನಾಲಯಗಳು, ರೇಡಿಯೊ-ಬಾನುಲಿ ಇವಲ್ಲದೆ ಕುಟುಂಬದ ಪರಿವಾರವೂ ಮಠಮಾನ್ಯಗಳೂ, ಗುಡಿಗುಂಡಾರಗಳೂ, ರಾಜಕೀಯ ಪಕ್ಷಗಳೂ ಇವೆಲ್ಲವು ವಿದ್ಯಾರ್ಥಿಗಳ ಮೇಲೆ ಪರಿಣಾಮವನ್ನುಂಟು ಮಾಡುವದಿಲ್ಲವೆ? ಅವರ ಸ್ವಭಾವವನ್ನು ತಿದ್ದಿ ತೀಡಲು ಅವರ ವಿಚಾರ ಸರಣಿಗೆ ಒಪ್ಪು-ಓರೆಗಳನ್ನು ನೀಡಲು ಇವು ಕಾರಣಗಳಾಗುವದಿಲ್ಲವೆ? ಎಂದ ಮೇಲೆ ಶಿಕ್ಷಣ ಕ್ಷೇತ್ರವು ಬರಿಯ ಶಾಲೆ, ಕಾಲೇಜುಗಳಿಗಷ್ಟೆ ಪರಿಮಿತವಾಗಿಲ್ಲ. ಅದು ಇಡಿಯ ಜೀವನವನ್ನು ಹಾಸುಹೊಕ್ಕಾಗಿ ಬಳಸಿಕೊಂಡಿದೆ. ಸರಕಾರವು ಸಂಘ-ಸಂಸ್ಥೆಗಳಿಗಿಂತ ಅಧಿಕವಾದರೂ ಸಮಾಜ ಜೀವನಕ್ಕಿಂತ ಹೆಚ್ಚಿನದಲ್ಲ. ಸರಕಾರವು ಅಥವಾ ರಾಜ್ಯವ್ಯವಸ್ಥೆಯು ಸಮಾಜ ಜೀವನದ ಏಳಿಗೆಗಾಗಿ, ಉನ್ನತಿಗಾಗಿ ನಿರ್ಮಿತವಾದ ಸಾಧನವೆ ಹೊರತು, ಸಮಾಜಕ್ಕಿಂತ ದೊಡ್ಡದಾದ ಸಂಘ ವಿಶೇಷವಲ್ಲ. ಜಾತಿಯ ದಳ್ಳುರಿಯು ದಳವೇರಿ ರಾಷ್ಟ್ರವನ್ನು ತುಂಡುಮಾಡಿ, ನಾಡನ್ನು ದುಃಖ ದುಮ್ಮಾನಗಳಿಗೆ ಈಡು ಮಾಡಿದುದರಿಂದ ಜಾತೀಯತೆಯನ್ನು ಹೊಡೆದು ಓಡಿಸಿ ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕೆಂಬ ಭಾರತ ಸರಕಾರದ ಮನೀಷೆಯು, ಅದರ ಪ್ರಯತ್ನವು ಸ್ತುತ್ಯವಾಗಿದೆ. ಆದರೆ ಜಾತೀಯತೆಯು ಬರಿಯ ಧಾರ್ಮಿಕ ಕ್ಷೇತ್ರವನ್ನಷ್ಟೆ ಬಳಸಿರದೆ ರಾಜಕೀಯ ಕ್ಷೇತ್ರದಲ್ಲಿಯೂ ತನ್ನ ಬಿಡಾರವನ್ನು ಬಿಟ್ಟಿದೆಯೆಂಬುದನ್ನು ನೆನೆದರೆ ಅದನ್ನು ಅಲ್ಲಿಂದಲೂ ಓಡಿಸಬೇಕು. ಈ ಜಾತೀಯತೆಯನ್ನು ಹೊಡೆದೋಡಿಸುವ ಭಾರವು ಬರಿಯ ಸರಕಾರವನ್ನೆ ಅವಲಂಬಿಸಿಲ್ಲ, ಅದು ಹೆಚ್ಚಾಗಿ ಸಮಾಜವನ್ನೂ ಅವಲಂಬಿಸಿದೆ. ಯಾವ ಪಕ್ಷ-ಪಂಗಡಗಳಿಗೂ ಅಂಟಿಕೊಳ್ಳದೆ ಸತ್ಯ ನಿಷ್ಠುರವಾಗಿ, ಸೌಜನ್ಯಮಯವಾಗಿ ಶಿಕ್ಷಣ ಕ್ಷೇತ್ರವು ಸಮಾಜಕ್ಕೂ, ಸರಕಾರಕ್ಕೂ ಮಾರ್ಗದರ್ಶನ ಮಾಡುವಂತಾಗಬೇಕು. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಸತ್ಪ್ರಜೆಗಳಾಗಿ ಬಾಳಲು ಅನುಕೂಲವಾಗುವಂತಹ ಶಿಕ್ಷಣವನ್ನು ಸರಕಾರವು ಕೊಡಬೇಕು. ಸರ್ವರ ಸುಖ-ಶಾಂತಿಗಳ ಸಾಧನೆಯೆ ಪ್ರಜಾಸತ್ತಾತ್ಮಕ ಸಮಾಜದ ಮೂಲಮಂತ್ರವಾದ್ದರಿಂದ ವಿದ್ಯಾರ್ಥಿಗಳಲ್ಲಿ ಆ ದೃಷ್ಟಿಯನ್ನು ಬೆಳೆಸಬೇಕು. ಪ್ರಜಾಸತ್ತಾತ್ಮಕ ದೃಷ್ಟಿ ಕೇವಲ ಸರಕಾರದ ರಚನೆಗೆ ಮಾತ್ರ ಅನ್ವಯಿಸತಕ್ಕದ್ದಲ್ಲ. ಮಾನವನ ಕಲ್ಯಾಣಸಾಧನೆಗೆ ದುಡಿಯುತ್ತಿರುವ ಎಲ್ಲ ವ್ಯಕ್ತಿಗಳ ಸಂಘ-ಸಂಸ್ಥೆಗಳ ಆಚರಣೆಯಲ್ಲಿಯೂ ಅದು ಮೂಡಿಬರಬೇಕು. ಜಾತಿ, ಕುಲ, ಗೋತ್ರ ಜನಾಂಗಗಳ ಭಿನ್ನ ದೃಷ್ಟಿಯ ಜಂಜಡವಿಲ್ಲದ ಶಿಕ್ಷಣ ಕ್ಷೇತ್ರದಲ್ಲಿಯಂತೂ ಈ ಪ್ರಜಾಸತ್ತಾತ್ಮಕ ದೃಷ್ಟಿಯು ಓತಪ್ರೋತವಾಗಿ ಪ್ರಾದುರ್ಭವಿಸಬೇಕು. ಆದರೆ 'ಎಲ್ಲವನ್ನೂ ಸರಕಾರವೆ ಮಾಡಲಿ' ಎಂಬ ಬಲ್ಲತನವು ಬೆಲೆ ಬಾಳದ ಮಾತು. ಆದರಿಂದ ಸರಕಾರವು ಸರ್ವಾಧಿಕಾರಿಯಾದೀತು! ಸರಕಾರವು ಸರ್ವಾಧಿಕಾರಿಯಾಗದಂತೆ ನೋಡಿಕೊಳ್ಳುವ ಹೊಣೆ ಸಮಾಜದಲ್ಲಿಯ ಉಳಿದ ವರ್ಗಗಳಿಗಿಂತ ಶಿಕ್ಷಕವರ್ಗದ ಮೇಲೆ ಹೆಚ್ಚಾಗಿದೆ. ಸಮಾಜದ ಮುಂದಾಳುಗಳಾದರೂ ಶಿಕ್ಷಣರಂಗದ ಪಾವಿತ್ರ್ಯವನ್ನು ಕಾಪಾಡಲಿಕ್ಕೆ ಕಟಿಬದ್ಧರಾಗಬೇಕು.

ಜೀವನವು ಪ್ರಗತಿಪರವಾಗಿರುವಂತೆ ಅದನ್ನು ಪ್ರತಿಫಲಿಸುವ ಶಿಕ್ಷಣವಾದರೂ ಪ್ರಗತಿಪರವಾಗಿರಬೇಕು. ಪರಂಪರಾಗತ ವಿದ್ಯೆಯನ್ನು ಕಲಿಸುವದಷ್ಟೆ ಶಿಕ್ಷಣದ ಧ್ಯೇಯವಲ್ಲ. ಆದರ್ಶ ದೃಷ್ಟಿ, ವಾಸ್ತವ ದೃಷ್ಟಿ ಇಲ್ಲವೆ ಇವೆರಡರ ಮಧ್ಯಸ್ಥವಾದ ಉಪಯುಕ್ತ ದೃಷ್ಟಿ-ಹೀಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ಶಿಕ್ಷಣರಂಗವನ್ನು ನೋಡಿದರೂ ಸಾಲದು. ಶಿಕ್ಷಣವು ಆಯಾ ಯುಗಧರ್ಮವನ್ನು ಅರಿತು ಆ ಯುಗಪ್ರಧಾನವಾದ ಗುಣಗಳನ್ನು ಅರಗಿಸಿಕೊಳ್ಳಬೇಕು. ಬೆಳಕು (ಜ್ಞಾನ) ಯಾವ ನಿಟ್ಟಿನಿಂದಲೇ ಬರಲಿ ಆದನ್ನು ಅಂಗೀಕರಿಸಲು ಸದಾಸಿದ್ಧವಿರಬೇಕು. ನಾವು ಬಾಳುತ್ತಿರುವ ಈ ಯುಗದಲ್ಲಿ ಜನಜೀವನವು ಹಿಂದಿಗಿಂತಲೂ ವೇಗವಾಗಿ ಮುಂದುವರೆಯುತ್ತಿದೆ. ನಮಗೂ ನಮ್ಮ ಹಿಂದಿನವರಿಗೂ ಹಲವು ದೃಷ್ಟಿಗಳಲ್ಲಿ ತುಂಬ ಭಿನ್ನತೆ ಕಂಡುಬರುತ್ತದೆ. ಇಂದಿನವರಾದ ನಮ್ಮಲ್ಲಿ ಯಾವ ವಿಷಯವನ್ನು ನಂಬಬೇಕಾದರೂ ಅದನ್ನು ಮನ-ಬುದ್ಧಿಗಳು ಒಪ್ಪುವಂತೆ ಪ್ರಯೋಗಗಳಿಂದ ಪರಿಶೀಲಿಸಿ ನೋಡುವ ವೈಜ್ಞಾನಿಕ ಮನೋಭಾವವು ಬೆಳೆದು ಬರುತ್ತಲಿದೆ. ಯಂತ್ರದ ಬಲದಿಂದ ಪ್ರಕೃತಿಯಲ್ಲಿ ಅಡಗಿದ ಶಕ್ತಿಯನ್ನು ಹೊರಗೆಡಹಿ ಮಾನವನು ಅದನ್ನು ಲಾಭದಾಯಕವಾಗಿ ಉಪಯೋಗಿಸಿಕೊಂಡು ಔದ್ಯೋಗಿಕ ಪ್ರಗತಿಯನ್ನು ಪಡೆಯುತಲಿದ್ದಾನೆ. ಹಬ್ಬಿಹರಿವರಿದ ಮಾನವ ಸಮಾಜದ ಸುಖಶಾಂತಿಗಾಗಿ ಆಡಳಿತವು ಅವಶ್ಯಕವಷ್ಟೆ? ಅಂತಹ ಆಡಳಿತಕ್ರಮವು ಪ್ರಜಾಸತ್ತಾತ್ಮಕ ಪದ್ಧತಿಯದಿರಬೇಕೆಂಬ ಮನೋಭಾವನೆ ಜನತೆಯಲ್ಲಿ ಮೂಡತೊಡಗಿದೆ. ರಾಜ್ಯದಾಡಳಿತದಲ್ಲಿ ಸಮಾಜದ ಎಲ್ಲ ವ್ಯಕ್ತಿಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಭಾಗವಹಿಸಬೇಕೆಂಬ ಬಯಕೆಯೂ ಬೆಳೆಯತೊಡಗಿದೆ. ವ್ಯಕ್ತಿಯ ಆಶೆ ಆಕಾಂಕ್ಷೆಗಳೂ ಅಭಿಪ್ರಾಯ ಅಭಿಮತಗಳೂ ಸಮಾಜ ನಿರ್ವಹಣದಲ್ಲಿಯೂ ಆಡಳಿತ ಕ್ರಮದಲ್ಲಿಯೂ ಪ್ರತಿಬಿಂಬಿಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೇಕೆಂಬ ಸಮಾನತೆಯ ತತ್ವದೃಷ್ಟಿ ತಲೆದೋರುತ್ತಲಿದೆ, ಅದೇ ತತ್ವದೃಷ್ಟಿ ಜೀವನದ ಮಿಕ್ಕೆಲ್ಲ ಕ್ಷೇತ್ರಗಳನ್ನು ಆವರಿಸ ಹತ್ತಿದೆ. ಹೀಗೆ ವೈಜ್ಞಾನಿಕದೃಷ್ಟಿ, ಔದ್ಯೋಗಿಕ ಪ್ರಗತಿ, ಪ್ರಜಾಸತ್ತಾತ್ಮಕ ಜೀವನ ಇವು ಇಂದಿನ ಪ್ರಪಂಚದ ಪ್ರಧಾನ ಗುಣಗಳು. ಇಂತಹ ಪರಿವರ್ತನ ಸಮಯದಲ್ಲಿ ಬಾಳಬೇಕಾಗಿರುವ ವಿದ್ಯಾರ್ಥಿಗಳು ಇಂದಿನ ಸಮಾಜ ಯಾವ ತತ್ವದೃಷ್ಟಿಯನ್ನು ನಂಬಿ ಮುಂದುವರೆಯುತ್ತಿದೆಯೋ ಆ ತತ್ವದೃಷ್ಟಿಯಲ್ಲಿಯೇ ಅವರು ಶಿಕ್ಷಣ ಪಡೆಯಬೇಕು. ಸಮಾಜದ ಆರ್ಥಿಕ, ನೈತಿಕ, ಧಾರ್ಮಿಕ ಸಮಸ್ಯೆಗಳು ಆ ದೃಷ್ಟಿಯಲ್ಲಿಯೇ ಇತ್ಯರ್ಥವಾಗಬೇಕು. ಮಾನವನ ಜ್ಞಾನದ ಬೆಳವಣಿಗೆಗೂ ಸಮಾಜದ ಕಲ್ಯಾಣ ಸಾಧನೆಗೂ ವಿದ್ಯಾರ್ಥಿಗಳು ನೆರವಾಗುವಂತೆ ಅವರಿಗೆ ಪ್ರೋತ್ಸಾಹ ದೊರೆಯಬೇಕು. ನಾಡು ಉದ್ಯೋಗಕ್ಷೇತ್ರದಲ್ಲಿಯೂ ಕಲಾಪ್ರಪಂಚದಲ್ಲಿಯೂ ಮುಂದುವರಿಯುವಂತೆ ಅವರು ತಮ್ಮ ಕಾಣಿಕೆಯನ್ನು ಸಲ್ಲಿಸಲು ಶಕ್ತರಾಗಬೇಕು. ಪ್ರಜಾಸತ್ತಾತ್ಮಕ ಸಮಾಜದ ಸತ್‌ಪ್ರಜೆಗಳಾಗಿ ಬಾಳಿಬೆಳಗುವದಕ್ಕೆ ಅವರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ನಮ್ಮ ಮಕ್ಕಳು ನಮ್ಮ ವಿದ್ಯಾರ್ಥಿಗಳು ಪ್ರಗತಿಪರವಾದ ಸಮಾಜದೊಡನೆ ಸಾಗಿಬರುವಂತಾಗಬೇಕು. ಹಾಗೆ ಮಾಡಿದರೆ ಮಾತ್ರ ಸ್ವತಂತ್ರ ಭಾರತದಲ್ಲಿ ಶಿಕ್ಷಣಕ್ಕೆ ನಾವು ಯೋಗ್ಯ ಸ್ಥಾನವನ್ನು ಕೊಟ್ಟಂತಾಗುವದಲ್ಲದೆ ಅದರ ಮಾನವನ್ನು ಕಾಪಾಡಿದಂತಾಗುವದು.

ವ್ಯಕ್ತಿಯ ಸರ್ವತೋಮುಖವಾದ ಎಂದರೆ ಶಾರೀರಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ಅಭಿವೃದ್ಧಿಯೇ ಶಿಕ್ಷಣದ ಗುರಿಯೆಂದು ನಾವು ಸಾಮಾನ್ಯವಾಗಿ ಹೇಳಬಹುದು. ಆದರೂ ಶಿಕ್ಷಣ ತಜ್ಞರು ಅದನ್ನು ಬಗೆಬಗೆಯಾಗಿ ವಿವರಿಸಿರುವರು. ಅವರ ಆ ವಿವರಣೆಯು ಒಮ್ಮೊಮ್ಮೆ ವಿಚಾರಣೀಯವಾಗಿಯೂ ಕಲ್ಪನಾಮಯವಾಗಿಯೂ ಭಾವ ಗಂಭೀರವಾಗಿಯೂ ತೋರಿದರೆ ಮತ್ತೊಮ್ಮೆ ಅವ್ಯವಹಾರಿಕವಾಗಿಯೂ ಕಲ್ಪನಾಮಯವಾಗಿಯೂ ತೋರುವದು. ಅವುಗಳಲ್ಲಿ ಹಲಕೆಲವುಗಳನ್ನಾದರೂ ಪರಿಚಯ ಮಾಡಿಕೊಳ್ಳುವದು ಅವಶ್ಯಕ. 'ರುಸೊ' ಮತ್ತು 'ಪೆಸ್ಟಾಲಜಿ' ಇವರೀರ್ವರು ಮಕ್ಕಳ ಮಾನಸಿಕ ವ್ಯಾಪಾರವನ್ನು ತಿಳಿದು ಮಮತೆಯಿಂದ ಅವರ ಶಿಕ್ಷಣವನ್ನು ಸಾಗಿಸಬೇಕೆಂಬ ಸದ್ಭಾವನೆಯನ್ನು ಜನತೆಯಲ್ಲಿ ಹರಡಿದರು. ಈ ಸದ್ಭಾವನೆಯ ಫಲವಾಗಿ ಶಿಕ್ಷಣವನ್ನು ಮಾನಸಶಾಸ್ತ್ರದೃಷ್ಟಿಯಿಂದ ಅಭ್ಯಸಿಸುವ ರೂಢಿಯು ಕ್ರಮಪ್ರಾಪ್ತವಾಯಿತು. ಶಿಕ್ಷಣದ ಉದ್ದೇಶವು ಬರಿಯ ಆದರ್ಶ ಜ್ಞಾನಾರ್ಜನೆಯಲ್ಲ. ಉಪಯುಕ್ತವಾದ ಜ್ಞಾನಾರ್ಜನೆ. ಮಕ್ಕಳು ಮುಂದೆ ಸಮಾಜದಲ್ಲಿ ಬೆಳೆದು ಜೀವನ ಕಲಹದಲ್ಲಿ ಯಶಸ್ವಿ ರೀತಿಯಿಂದ ಹೋರಾಡಬೇಕಾದರೆ ಅವರಿಗೆ ಉಪಯುಕ್ತ ಜ್ಞಾನದ ಅವಶ್ಯಕತೆಯಿರುವದರಿಂದ ವಿಜ್ಞಾನಶಾಸ್ತ್ರದ ಪರಿಚಯವೆ ಶಿಕ್ಷಣದ ಗುರಿಯೆಂದು 'ಹರ್ಬರ್ಟ ಸ್ಪೆನ್ಸರನು' ಹೇಳಿದನು. ವ್ಯಕ್ತಿಯ ಬುದ್ಧಿಶಕ್ತಿ. ಭಾವಾವೇಶ, ಆತ್ಮಸಂಯಮನ ಇವುಗಳನ್ನು ಸಮಾಜ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ಬೆಳೆಸುವದು ಶಿಕ್ಷಣದ ಗುರಿಯೆಂದು 'ಹಾರ್ನ' ಎಂಬವನು ಹೇಳಿದನು. ಮಾನವನ ಎಲ್ಲ ಶಕ್ತಿಸಾಮರ್ಥ್ಯಗಳೂ ಅಭಿರುಚಿಗಳೂ ಸಮಾನವಾಗಿ ಸಮರಸವಾಗಿ ಬೆಳೆಯುವಂತೆ ಮಾಡುವದೆ ಶಿಕ್ಷಣವೆಂದು 'ಫಿಂಡ್ಲೆ' ಪ್ರತಿಪಾದಿಸಿರುವನು. ತನ್ನ ಪೂರ್ವಜರಿಂದ ಪಡೆದುಕೊಂಡು ಬಂದಿರುವ ಜ್ಞಾನಸಂಪತ್ತನ್ನು ಅನುಭವಿಸುವ ಶಕ್ತಿಸಾಮರ್ಥ್ಯಗಳನ್ನು ವ್ಯಕ್ತಿಗೆ ಕ್ರಮಕ್ರಮವಾಗಿ ನೀಡುವದೆ ಶಿಕ್ಷಣದ ಗುರಿಯೆಂದು 'ಬಟ್ಲರನು' ಹೇಳಿರುವನು. ಶಿಕ್ಷಣದಿಂದ ಮಾನವನಲ್ಲಿ ಅಡಗಿರುವ ಅಮೃತತ್ವವು ಒಡಮೂಡಿ ಅವನ ಆತ್ಮ ವಿರಾಜಿಸುವಂತಾಗಬೇಕೆಂದು 'ಎಚ್, ಜಿ. ವೇಲ್ಸನು' ಹೇಳಿರುವನು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಶಕ್ತಿವಿಶೇಷಗಳನ್ನು ಅಭಿರುಚಿಯನ್ನು ತನಗೆ ಉಚಿತವೆನಿಸುವಂತೆ ಬೆಳಸಿಕೊಂಡು ತನ್ಮೂಲಕ ಮಾನವ ಬಾಂಧವ್ಯದ ತಳಹದಿಯನ್ನು ಹಾಕುವಂತಾಗಬೇಕು. ಎಂದರೆ ವ್ಯಕ್ತಿಯ ಪರಿಪೂರ್ಣವಾದ ವಿಕಾಸವೇ ಶಿಕ್ಷಣದ ಗುರಿಯೆಂದು 'ಟಿ. ಪಿ. ನನ್ನನು' ಸಾರಿರುವನು. 'ಹರ್ಬಾರ್ಟ ಮತ್ತು ಪ್ರೊಬೆಲ್ಲರು' ಆದರ್ಶ ಜ್ಞಾನಕ್ಕೆ ಪ್ರಾಧಾನ್ಯವನ್ನು ಕೊಟ್ಟು, ಅದೇ ಶಿಕ್ಷಣದ ಗುರಿಯೆಂದು ವಾದಿಸಿರುವರು. ವೀರರೂ, ಧೀರರೂ ಸದ್ಭಾವನಾನಿರತರೂ ಪ್ರತಿಭಾಸಂಪನ್ನರೂ ಆದ ವ್ಯಕ್ತಿಗಳನ್ನು ಒಳಗೊಂಡ ಸಮಾಜ ನಿರ್ಮಾಣವೇ ಶಿಕ್ಷಣದ ಗುರಿಯೆಂದು ಬರ್ಟರಾಂಡ ರಸೆಲ್ಲನು ಹೇಳಿರುವನು. ವಿಲಿಯಂ ಜೇಮ್ಸನು ವ್ಯಕ್ತಿಯು ಕಲಿತುದನ್ನು ಅವನು ಬಾಳಬೇಕಾಗಿರುವ ಸಮಾಜ ಸನ್ನಿವೇಶಗಳಿಗೆ ಅನ್ವಯಿಸುವಂತೆ ರೂಢಿಸುವದೇ ಶಿಕ್ಷಣದ ಗುರಿಯೆಂದು ಹೇಳಿರುವನು. 'ಜಾನ್ ಡುಯಿ' ಮತ್ತು ಅವನ ಅನುಯಾಯಿಗಳಾದ 'ಕಿಲ್ ಪ್ರೆಟ್ರಿಕ್' ಮುಂತಾದವರು ಶಿಕ್ಷಣ ಜೀವನಕ್ಕೆ ಸಂಬಂಧಪಟ್ಟದ್ದು. ಆದರಿಂದ ಬಾಳಿನ ಅನುಭವ ದೊರೆತು ಜೀವನ ಉತ್ತಮಗೊಳ್ಳಬೇಕು; ಹೊಸ ಅನುಭವಗಳದ್ನು ಪಡೆದು, ಅವು ಹಳೆಯ ಅನುಭವಗಳೊಡನೆ ಬೆರೆತುಕೊಂಡು, ನಿರಂತರವೂ, ನೂತನವೂ, ಉತ್ತಮವೂ, ಆದ ಜೀವನ ನಿರ್ಮಾಣವಾಗುತ್ತ ಹೋಗಬೇಕು. ಎಂದ ಮೇಲೆ ಯಾವ ಜೀವನದಿಂದ ಬುದ್ಧಿ ಬಲಿತು ಹೃದಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೈಶಾಲ್ಯ ಬೆಳೆದು, ಹೊಸ ಅನುಭವಗಳನ್ನು ಹೆಚ್ಚಿಸಲು ಸಾಧ್ಯವಾಗುತ್ತದೆಯೋ ಅಂಥ ಜೀವನವೆ ನಿಜವಾದ ಶಿಕ್ಷಣ. ಹೊಸ ಹೊಸ ಅನುಭವಗಳನ್ನು ಪಡೆಮ ವ್ಯಕ್ತಿ ಸುಸಂಸ್ಕೃತನೆನಿಸುವಂತೆಯೂ ಅವನು ವ್ಯವಹರಿಸುವ ಸಮಾಜವು ನಿರಂತರ ಪ್ರಗತಿಪಥದಲ್ಲಿ ಮುಂದುವರಿಯುವಂತೆಯೂ ಆಗಬೇಕು. ಎಂದು ಶಿಕ್ಷಣದ ಗುರಿಯನ್ನು ಅವರು ನಿರೂಪಿಸಿರುವರು. ಜಾನ್ ಡ್ಯುಯಿಯ ಪ್ರೊಜೆಕ್ಟ ಪದ್ಧತಿ ಮೂಲಶಿಕ್ಷಣ ಪದ್ಧತಿಗೆ ತೀರ ಸಮೀಪವಾಗಿದೆ. ಎರಡೂ ಪದ್ಧತಿಗಳಲ್ಲಿ 'ಮಾಡಿಕಲಿ' ಎಂಬ ತತ್ವ ಅಡಕವಾಗಿದೆ.

ಕೊನೆಯದಾಗಿ ಶಿಕ್ಷಣದ ದೃಷ್ಟಿ-ಧ್ಯೇಯಗಳು, ಗೊತ್ತುಗುರಿಗಳು ಎಷ್ಟೇ ಸಾಧುವಾಗಿದ್ದರೂ ಅವುಗಳನ್ನು ಸಾಧಿಸುವ ಮಾರ್ಗವು ಉಚಿತವಿಲ್ಲದಿದ್ದರೆ ಎಲ್ಲವೂ ಗಾಳಿಗೋಪುರವಾಗುವದು, ಮನದ ಮಂಡಿಗೆಯಾಗುವದು. ಅಧುನಿಕ ಪ್ರಪಂಚದಲ್ಲಿ ಮಕ್ಕಳ ಮನಸ್ಸಿನ ವ್ಯಾಪಾರವನ್ನು ತಿಳಿದು ಅದರ ಪರಿಚಯದಿಂದ ಶಿಕ್ಷಣ ಕ್ರಮವನ್ನು ಉತ್ತಮಗೊಳಿಸಲು ಹೊಸ ಹೊಸ ಪ್ರಯೋಗಗಳು ನಡೆಯುತ್ತಲೆ ಇವೆ. ಆ ಪ್ರಯೋಗಗಳ ಪರಿಣಾಮವಾಗಿ ಮನಃಶಾಸ್ತ್ರದ ವಿವಿಧ ಶಾಖೆಗಳಾದ 'ವಾಟಸನ್‌ನ' ವರ್ತನವಾದ, 'ವರ್ದಿಮರನ' ಆಕಾರವಾದ, 'ಸ್ಪಿಯರಮನ್ನನ' ಬುದ್ಧಿಮಾಪಕವಾದ ಹಾಗೆಯೆ ಪ್ರಾಯಿಡ್‌ನ ಮನೋವಿಶ್ಲೇಷಣವಾದವೂ ಶಿಕ್ಷಣ ಕ್ಷೇತ್ರದಲ್ಲಿ ನುಸುಳಿ ಮನಸ್ಸಿನ ರಚನೆ ರುಚಿಗಳನ್ನು ಬಿತ್ತರಿಸುತ್ತಲಿವೆ. ಇದರ ಪರಿಣಾಮವಾದ ಅಮೇರಿಕೆಯಲ್ಲಿಯೂ ಇನ್ನಿತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಹಾಗೆಯೆ ಭಾರತದಲ್ಲಿಯೂ ಶಿಕ್ಷಣದ ಬಗೆಗೆ ಪ್ರಯೋಗಗಳು ನಡೆದಿವೆ. ಹಲವಾರು ಪದ್ಧತಿಗಳು ಶಿಕ್ಷಣರಂಗದಲ್ಲಿ ಇಣಿಕಿ ಹಾಕುತ್ತಲಿವೆ. ಭಾರತದಲ್ಲಿ ಶಿಕ್ಷಣ ಪ್ರಯೋಗವು ಅಷ್ಟೊಂದು ಫಲಪ್ರದವಾಗಿಲ್ಲ. ಹೀಗಾಗಲಿಕ್ಕೆ ಶಿಕ್ಷಣ ಶಾಖೆಯಲ್ಲಿ ಉತ್ತೇಜನವಿಲ್ಲದಿರುವದೇ ಒಂದು ಮುಖ್ಯ ಕಾರಣ, ಇನ್ನು ಮೇಲಾದರೂ ಸರಕಾರದವರು ಶಿಕ್ಷಕರಿಗೆ ಪ್ರಯೋಗ ನಡೆಸಲು ಎಲ್ಲ ವಿಧದ ಸಹಾಯ ಸಹಕಾರಗಳನ್ನು ನೀಡಿ ಉತ್ತೇಜನ ಕೊಡುವದು ಒಳ್ಳೆಯದು.

ಮನದ ಮತ್ಸರವ ಕಳೆದು
ಮನದ ಕೊಳೆಯ ಮೊಳೆಯ ಮೇಲೆ
ಲಿಂಗವ ಕುಳ್ಳಿರಿಸಬೇಕು
ತನುಗುಣವ ಕಳೆದು ಪ್ರಸಾದ ಕಾಯುವ ಮಾಡಬೇಕು
ಧನಗುಣವ ಕಳೆದು ಮಮಕಾಯವೆನಿಸಬೇಕು
ಈ ತ್ರಿವಿಧಗುಣಂಗಳ ಕಳೆದು ತ್ರಿವಿಧ ದಾಸೋಹಿಯಾಗಿರಬೇಕಯ್ಯ
ನಮ್ಮ ಕೂಡಲಚೆನ್ನಸಂಗಮದೇವರಲ್ಲಿ.

— ಬಸವಣ್ಣನವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶರಣಸಾಹಿತ್ಯದ ಕೈಪಿಡಿ.

ಶೂನ್ಯ ಸಂಪಾದನೆ.

ಶರಣಸಾಹಿತ್ಯವೆಂದರೆ ' ಅನುಭವ ಸಾಹಿತ್ಯ ' ವೆಂಬ ಮಾತು ನಿಮಗೆಲ್ಲ ಗೊತ್ತು. ಅನಭಾವವೆಂದರೆ ದೇವನ ಅಥವಾ ದಿವ್ಯದ ಅನುಭವ ಎಂಬ ವಿಷಯ ನಿಮಗೆಗೊತ್ತು. ಈ ದಿವ್ಯ ತನ್ನನ್ನು ಬಿಟ್ಟು ಎಲ್ಲಿಯೋ-ಕೈಲಾಸ-ವೈಕುಂಠ ದಲ್ಲಿ, ಕಾಶಿ, ಮಕ್ಕಾ, ಜರುಸಲೇಮದಲ್ಲಿ, ಮತ್ತೆಲ್ಲಿಯೋ ಇರುವ ದೇವನಲ್ಲ. ' ತನ್ನಬಿಟ್ಟು ದೇವರಿಲ್ಲ, ಮಣ್ಣು ಬಿಟ್ಟು ಮಡಿಕೆ ಇಲ್ಲ '—ಎಂಬ ನಾಣ್ಣುಡಿಯು ಸತ್ಯ ಪರಮಸತ್ಯವೆಂದು ಇಟ್ಟುಕೊಂಡರೆ, ತನ್ನೊಳಗೆ ತಾನೆ ನೋಡಿ, ಚೆನ್ನಾಗಿ ತಿಳಿದುಕೊಂಡರೆ, ಅರಿದು ಅನುಭವಿಸಿಕೊಂಡರೆ ' ಅನುಭಾವ 'ದ ಅರ್ಥ ತನಗೆ ತಾನೇ ವೇದ್ಯವಾಗುತ್ತದೆ. ಈ ಅನುಭವ ಇಲ್ಲವೆ ಅನುಭಾವ ಬುದ್ಧಿಭಾವ, ವೇದಶಾಸ್ತ್ರ, ಕಣ್ಣುಕಿವಿಗಳ ಉಪಾಧಿ ಇಲ್ಲದ ನಿರುಪಾಧಿಕವಾದ ಇರವಿನ ಅನುಭವ. ಅಂತೆಯೇ, ಇಂಥ ದಿವ್ಯಾನುಭಾವವನ್ನು ಕನ್ನಡಿಸುವ ಸಾಹಿತ್ಯಕ್ಕೆ, ಲೌಕಿಕಾನುಭವದ ನೆಲದಮೇಲೆ ನಡೆದಾಡುವ ಬುದ್ಧಿ ಭಾವಗಳಿಂದ ಹೊಮ್ಮುವ ಜ್ಞಾನ ಸಾಹಿತ್ಯ ಮತ್ತು ' ಕಾವ್ಯ ' ಸಾಹಿತ್ಯಗಳಿಂದ ಭಿನ್ನವಾಗಿ, ವಿಲಕ್ಷಣವಾಗಿ ಇರುವ ' ಅಲೌಕಿಕ ' ಅಥವಾ ' ದಿವ್ಯಸಾಹಿತ್ಯ ' ವೆಂದು ನಾವು ಹೆಸರಿಡಬಹುದು. ದೇಶ, ಕಾಲ, ಭಾಷೆಗಳ ಸೀಮೆಯಲ್ಲದೆ, ಇಂಥ ' ದಿವ್ಯ ' ಒಡೆದು ಮೂಡಿರುವ ಸಾಹಿತ್ಯವನ್ನೆಲ್ಲ 'ದಿವ್ಯ ಸಾಹಿತ್ಯ'ವೆಂದು ನಾವು ಕರೆದರೆ ಯಾವ ತಪ್ಪೂ ಅಲ್ಲ. ಮುತ್ತೂ ಇಂಥ ಸಾಹಿತ್ಯದಲ್ಲಿ ಜ್ಞಾನದ ವೈಖರಿ, ಕಾವ್ಯದ ಸೌಂದರ್ಯ ಲೌಕಿಕ ಸಾಹಿತ್ಯಕ್ಕಿಂತ ಮಿಗಿಮಿಗಿಲಾದ ಮಟ್ಟದಲ್ಲಿ ತೋರಿದರೆ, ಅದರಲ್ಲಿ ಆಶ್ಚರ್ಯಪಡಬೇಕಾದ ಕಾರಣವೂ ಇಲ್ಲ.

ವೀರಶೈವ ಶರಣರ ತತ್ವಜ್ಞಾನ ಯೋಗಭಕ್ತಿ ಆಚಾರ ಮುಂತಾದ ವಿಷಯಗಳನ್ನೊಳಗೊಂಡು, ಅವರ ಷಟ್‌ಸ್ಥಲ ಸಿದ್ಧಾಂತದ ಅನುಭಾವವನ್ನು ಪ್ರತಿಪಾದಿಸುವಲ್ಲಿ ಪ್ರಭುದೇವರ 'ಶೂನ್ಯಸಂಪಾದನೆ'ಯ ಮಹತ್ವವನ್ನು ಸಂಪಾದನೆಕಾರರಾದ ಗುಳೂರ ಸಿದ್ಧವೀರಣ್ಣೊಡೆಯರು ಹೀಗೆ ಬಿತ್ತರಿಸುತ್ತಾರೆ.

' ಇದು ಪರಮಗುರು ಪರಮವೀರಶೈವ ಸಿದ್ಧಾಂತ ತತ್ವಜ್ಞಾನ.
ಇದು ವೀರಶೈವಾಚಾರ ಪ್ರತಿಷ್ಠಾಪನಾಚಾರ್ಯ,
ಇದು ದಿವ್ಯ ವೇದಾಂತ ಶಿರೋಮಣಿ,
ಇದು ಸಮಸ್ತ ಶಾಸ್ತ್ರ ಮುಖ್ಯ ಮುಖದರ್ಪಣ.
ಇದು ಮಹಾಜ್ಞಾನ ಪ್ರವರ್ಧನ ಪರಮಾನುಭಾವ ಸಂಬೋಧೆ,
ಇದು ಸರ್ವಾಚಾರಸಂಪನ್ನ ಸಮಾರೂಢ ಸಂಗ್ರಹ.
ಇದು ಪರಮರಾಜಯೋಗ ಸಾಧ್ಯ ಸಂಪಾದನ,
ಇದು ಸಚ್ಚಿದಾನಂದ ನಿತ್ಯ ಪರಿಪೂರ್ಣ ರಸಾಮೃತ ಪ್ರಸನ್ನ ಪ್ರಸಾದ.
ಇದು ಅಜ್ಞಾನ ತಿಮಿರಾಂಜನ ತಂತ್ರವಪ್ಪ
ಪ್ರಭುದೇವರ ಶೂನ್ಯ ಸಂಪಾದನೆ.....................

ಈ ಗ್ರಂಥದ ಇನ್ನೂ ವಿಶಿಷ್ಟತರವಾದ ಮಹತ್ವಾತಿಶಯವನ್ನು ಇನ್ನೂ ಒಂದು ಸಂಗತಿ ಪ್ರಕಟ ಪಡಿಸುತ್ತದೆ. ಈ ಶೂನ್ಯಸಂಪಾದನೆ, ಹೆಸರಿನಲ್ಲಿ ಒಂದೇ ಗ್ರಂಥವೆಂದು ತೋರಿದರೂ, ಇದರ ಭಿನ್ನಭಿನ್ನ ಸಂಕಲನಗಳು ಐದು :

೧ ಶಿವಗಣ ಪ್ರಸಾದಿ ಮಹಾದೇವಯ್ಯಗಳದು.
೨ ಕೆಂಚವೀರಣ್ಣೊಡೆಯರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩ ಹಲಗೆಯ ದೇವರು ಕೆಂಚವೀರಣ್ಣೊಡೆಯರು ಕಲ್ಮೇಶ್ವರ ದೇವರು ಮುಂತಾದವರು ಕೂಡಿ ಸಂಕಲಿಸಿದುದು.

೪ ಗುಮ್ಮಳಾಪುರದ ಸಿದ್ಧಲಿಂಗದೇವರದು ಮತ್ತು

೫ ಗೂಳೂರ ಸಿದ್ಧವೀರಣ್ಣೊಡೆಯರದು.

ಹದಿನೈದನೆಯ ಶತಮಾನದ ಒಳಹೊರಗೆ ಹುಟ್ಟಿದ ಈ ಐದು ಸಂಕಲನಗಳಲ್ಲಿ ಕೆಂಚವೀರಣ್ಣೊಡೆಯರ ಸಂಕಲನ ಇನ್ನೂ ನಮಗೆ ಉಪಲಬ್ಧವಿಲ್ಲದಿದ್ದರೂ, ಉಳಿದ ನಾಲ್ಕು ಸಂಕಲನಗಳು ನಮಗೆ ದೊರೆತಿವೆ. ಪ್ರಭುದೇವರು, ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮಯ್ಯ, ಬಸವಣ್ಣ, ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ, ಮಹಾದೇವಿಯಕ್ಕ ಮುಂತಾದ ಶರಣ ಶರಣೆಯರೊಡನೆ ಶಿವಾನುಭವಗೋಷ್ಠಿ ಮಾಡಿದ 'ಮಹಾಪ್ರಸಂಗ' ವನ್ನು ಚಿತ್ರಿಸುವ ಈ ಗ್ರಂಥದ ತಳಪಾಯ ಶರಣರ ವಚನಗಳು ಮತ್ತು ಕೆಲವೊಂದು ಹಾಡುಗಳು. ಈ ಗ್ರಂಥವನ್ನು ಮೊತ್ತಮೊದಲು ಗ್ರಂಥಿಸಿದವರು ಶಿವಗಣಪ್ರಸಾದಿ ಮಹಾದೇವಯ್ಯಗಳು. ಈ ಮಹಾಗ್ರಂಥವನ್ನು ಅವರು ಹೆಣೆದುದು ಹೇಗೆ? ಹೇಳುತ್ತಾರೆ ಸಿದ್ಧವೀರಣ್ಣೊಡೆಯರು :

'.... ಶ್ರೀಮತ್ ಸಕಲ ಜಗದಾಚಾರ್ಯರುಮಪ್ಪ ಅಲ್ಲಮಪ್ರಭುದೇವರು
ಚೆನ್ನಬಸವರಾಜದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ
ಮಹಾನುಭಾವ ಪ್ರಸಂಗಮಂ ಮಾಡಿದ ಶೂನ್ಯಸಂಪಾದನೆಯ
ಸದ್ಗೋಷ್ಠಿ ಕಥಾಪ್ರಸಂಗವನು, ಮುಕ್ತಮಾಗಿರ್ದ ಶಿವಾದ್ವೈತ
ವಚನಂಗಳನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ,
ಶಿವಗಣಪ್ರಸಾದಿ ಮಹಾದೇವಯ್ಯಗಳು ಮರ್ತ್ಯಲೋಕದ
ಮಹಾಗಣಂಗಳಿಗೆ ಆ ಮಹಾಪ್ರಸಂಗಮಂ ಸಮರ್ಪಿಸಿದಲ್ಲಿ'

ಇಲ್ಲಿ ಒಡೆಯರು ಹೇಳುವಂತೆ ಬಿಡಿ ಬಿಡಿಯಾಗಿದ್ದ ಶರಣರ ವಚನಗಳನ್ನು ಸಂಭಾಷಣೆಯ ರೂಪದಲ್ಲಿ ಹೆಣೆದು, ಚರ್ಚೆಯ ವಿಚಾರಗಳನ್ನು ಒಂದಕ್ಕೊಂದನ್ನು ಪೋಣಿಸಿ 'ಪ್ರಸಂಗ'ವನ್ನು ಮುಂದುವರಿಸುವಲ್ಲಿ ತಮ್ಮದೇ ನಿರ್ಮಾಣವಾದ ಗದ್ಯಭಾಗಗಳನ್ನು ನಡುನಡುವೆ ಸೇರಿಸಿ, ಒಂದು ಜೀವಂತ ದಿವ್ಯಕೃತಿಯನ್ನು ಮಾಡಿದ್ದಾರೆ. ಪ್ರಸಾದಿ ಮಹಾದೇವಯ್ಯಗಳು. ಇಲ್ಲಿ ಬೇರೆ ಬೇರೆ ಉಪದೇಶಗಳ ಅಥವಾ ಅಧ್ಯಾಯಗಳ ವಿಭಾಗವಿಲ್ಲ. ಮತ್ತು ಕಂದಪದ್ಯಗಳೂ ಇಲ್ಲ. ಗ್ರಂಥದ ಆದಿಯಿಂದ ಅಂತ್ಯದವರೆಗೆ ವಚನ ಕ್ರಮಾಂಕಗಳು ಒಂದೇಸವನೆ ಸಾಗಿವೆ. ಆದರೂ ಗ್ರಂಥಾವಲೋಕನದಿಂದ ಬೇರೆ ಬೇರೆ ವಿಷಯ, ಬೇರೆ ಬೇರೆ ಶರಣರೊಡನೆ ಪ್ರಭುದೇವರು ಮಾಡಿದ ಗೋಷ್ಠಿಗನುಃಗುಣವಾಗಿ, ಅಧ್ಯಾಯಗಳು ತಾವೇ ವಿಭಾಗಿಸಿಕೊಳ್ಳುವಂತಿವೆ.

೧೪೩೪ ವಚನಗಳನ್ನು ಒಳಗೊಂಡಿರುವ ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಯ ಸಂಕಲನ ಮಹಾದೇವಯ್ಯಗಳ ಗ್ರಂಥದ ಆನುಪೂರ್ವಿಯನ್ನೇ ಅನುಸರಿಸಿದೆ. ಮಹಾದೇವಯ್ಯಗಳ ಸಂಕಲನದಲ್ಲಿ ಆಯ್ದಕ್ಕಿ ಮಾರಯ್ಯ' ಮೋಳಿಗೆಯ್ಯ, ನುಲಿಯ ಚಂದಯ್ಯ ಮತ್ತು ಘಟ್ಟಿವಾಳಯ್ಯಗಳ ಗೋಷ್ಠಿಯ ಪ್ರಸಂಗವಿಲ್ಲ. ಆದರೆ ಸಿದ್ಧಲಿಂಗದೇವರ ಸಂಕಲನದಲ್ಲಿ ಆಯ್ದಕ್ಕಿ ಮಾರಯ್ಯ ಮತ್ತು ನುಲಿಯ ಚಂದಯ್ಯಗಳನ್ನು ನಾವು ಕಾಣುತ್ತೇವೆ.

ಇನ್ನು......ಶಿವಗಣಪ್ರಸಾದಿ ಮಹಾದೇವಯ್ಯಗಳ ನಿರೂಪವಿಡಿದು ಹಲಗೆಯದೇವರು, ಕಲ್ಲೇಶ್ವರದೇವರು, ನಂಜಯ್ಯದೇವರು, ಕೆಂಚವೀರಣ್ಣೊಡೆಯದೇವರು......ಸೇರಿಸಿದ ಶೂನ್ಯಸಂಪಾದನೆ ವಿಷಯಗಳನ್ನು ಸುದೀರ್ಘವಾಗಿ ಅವಲಂಬಿಸಿಕೊಂಡು, ಒಂದು ಕ್ರಮಬದ್ಧತೆಯನ್ನು, ಒಂದು ಔಚಿತ್ಯ ದರ್ಶನವನ್ನು ಅನುಸರಿಸಿಲ್ಲವಾದ್ದರಿಂದ, ಈ ಗ್ರಂಥಕ್ಕೆ ಒಂದು ಮನ್ನಣೆಯನ್ನು ವೀರಶೈವ ಪಂಡಿತರಾಗಲಿ, ಅನುಭಾವಿಗಳಾಗಲಿ ನೀಡಿದಂತೆ ಕಾಣುವದಿಲ್ಲ ಇಲ್ಲಿಯವರೆಗೆ ಇದರ ಒಂದೇ ಪ್ರತಿ ದೊರೆವುದೇ ಇದಕ್ಕೆ ನಿದರ್ಶನವೆಂದು ಹೇಳಬಹುದು.

CC0. In Public Domain. Jangamwadi Math Collection, Varanasi

ಈ ಎಲ್ಲ ಸಂಕಲನಗಳು ಹುಟ್ಟಲು ಮೂಲ ಆಕರವಾದ ಮಹಾದೇವಯ್ಯಗಳ ಶೂನ್ಯಸಂಪಾದನೆಯು ಸಿದ್ಧರಾಮೇಶ್ವರದೇವರಿಗೆ 'ಉಪದೇಶಕ್ರಮ' 'ದೀಕ್ಷಾಕ್ರಮ' 'ವೀರಶೈವದೀಕ್ಷೆ'ಯ ಸ್ಪಷ್ಟವಾದ ವಿಸ್ತಾರವಾದ ಉಲ್ಲೇಖ ವಿಲ್ಲದುದೇ ಕಾರಣವೆಂದು ನಮಗೆ ಮೇಲೆ ಮೇಲೆ ತೋರಿದರೂ, ಮಹಾದೇವಯ್ಯಗಳ ಅತ್ಯಪೂರ್ವವಾದ, ಉಜ್ವ ಪ್ರತಿಭಾನ್ವಿತವಾದ, ಮನೋಜ್ಞವಾದ 'ಗ್ರಂಥ ಸಂಯೋಜನೆಯೇ' ಹಲಗೆದೇವರು ಮುಂತಾದ ವಿದ್ವಾಂಸ ಅನುಭಾವಿಗ ಹೃದಯವನ್ನು, ಬೇರೆ ಬೇರೆ ರೂಪದಲ್ಲಿ ಶೂನ್ಯಸಂಪಾದನೆಯನ್ನು ಗ್ರಂಥಿಸಬೇಕೆಂದು ಪ್ರೇರಿಸಿದ ಶಕ್ತಿ. ಅಂತರಂಗ ಆ ಪ್ರೇರಣೆಯಂತೆ ಅವರು ತಮ್ಮ ತಮ್ಮ ಕೃತಿಗಳನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ನೀಡಿದರು.

ನಮಗೆ ಈಗ ಉಪಲಬ್ಧವಿರುವ ನಾಲ್ಕೂ ಸಂಕಲನ ಗ್ರಂಥಗಳನ್ನು, ಪರೀಕ್ಷಿಸಿ ನೋಡಿದರೆ, ೩-೪ ಖಚಿತ ವಾದ ಮಾತುಗಳು ಕಂಡುಬರುತ್ತವೆ.

೧ ಈ ಗ್ರಂಥದ ಹೆಸರು : 'ಪ್ರಭುದೇವರ ಶೂನ್ಯಸಂಪಾದನೆ'.

೨ ಈ ಗ್ರಂಥದ 'ಕಥಾನಾಯಕರು' ಅಲ್ಲಮಪ್ರಭುದೇವರು.

೩ ಈ ಪ್ರಭುದೇವರು ಮೊದಲು ತಾವು 'ಶೂನ್ಯ'ವನ್ನು ಸಂಪಾದಿಸಿಕೊಂಡು ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ, ಗೋರಕ, ಮುಕ್ತಾಯಕ್ಕ, ಮಹಾದೇವಿಯಕ್ಕ ಮುಂತಾದ ಶರಣರಿಗೆ 'ಬಯಲ'ನ್ನು ಗಳಿಸಿಕೊಟ್ಟುದೇ ಗ್ರಂಥದ ಮುಖ್ಯ ವಿಷಯ.

೪ 'ಶೂನ್ಯ'ವೆಂದರೆ 'ಅಸತ್ತು', 'ಸೊನ್ನೆ', 'ಇಲ್ಲದ್ದು' ಎಂದರ್ಥವಲ್ಲ. ವೀರಶೈವರ ಸ್ಥಳಕಟ್ಟಿನಲ್ಲಿ ಬರುವ 'ಸರ್ವಶೂನ್ಯ ನಿರಾಲಂಬಸ್ಥಲ', 'ಜ್ಞಾನಶೂನ್ಯಸ್ಥಲ' ಶೂನ್ಯಲಿಂಗಸ್ಥಲ ಎಂದು ಮುಂತಾಗಿರುವ ಸದಗ ಳಿಂದಲೂ, ವೀರಶೈವರ ಅಥವಾ ಶರಣರ ಪರಮಗಮ್ಯವಾದ ಪರವಸ್ತು ಏನೂ ಅಲ್ಲದ ಬಟ್ಟಬಯ ಲಾದರೂ, ಎಲ್ಲವನ್ನು ಒಳಗೊಂಡು, ಎಲ್ಲಕ್ಕೂ ಉಗಮಸ್ಥಾನವಾಗಿ ಇರುವ, ಅನಿರ್ವ ಚನೀಯವಾದ ನಿಷ್ಕಲಲಿಂಗ.

ಇನ್ನುಮೇಲೆ : ತನ್ನಪರಮಗುರುವಾದ ಅನಿಮಿಷಯ್ಯನಿಂದ ಸುಜ್ಞಾನದೀಕ್ಷೆಯನ್ನು ಪಡೆದುಕೊಂಡು 'ಷಡುಸ್ಥಲವು ಷಡಂಗದಲ್ಲಿ ಸಮರಸವನ್ನೈಯ್ದಿ, ಸರ್ವಾಚಾರ ಸಂಪತ್ತು ನಿಃಪತ್ತಿಯಾಗಿ, ಮಹಾಜ್ಞಾನವೆ ತಾನಾಗಿ ನಿಂದ ನಿಜಸ್ಥಲವೆ ಸ್ಥಲವಾಗಿ,........ನಿರಾಶಾಭರಿತವೆಂಬ ಜಂಗಮಸ್ಥಲವನಳವಡಿಸಿ, ನಿಃಶಬ್ದವೆಂಬ ವಚನಾನುಭಾವಮಂ ತನ್ನಾಶ್ರಯಿಸಿದ ಮಹಾನುಭಾವಿಗಳಿಗೆ ನಿರೂಪಿಸಲೆಳಸಿ, ಕಾಯವೆಂಬ ಕಂಥೆಯಧರಿಸಿ, ನಿಂದಲ್ಲಿ ನೆಳಲಿಲ್ಲದೆ, ಸುಳಿದರೆ ಹಜ್ಜೆ ಇಲ್ಲದೆ ಸುಳಿವ ಅಲ್ಲಮಪ್ರಭುರಾಯನ ಜಂಗಮಸ್ಥಲದ ನಿಲುಕಡೆ... ..' ಯನ್ನು, ಪ್ರಭುದೇವರ ಶೂನ್ಯಸಂಪಾದ ನೆಯ ಒಳಗೆ ಪ್ರವೇಶಮಾಡಿ ನೀವೇ ನೋಡಿಕೊಳ್ಳಿ.

ಶೂನ್ಯಸಂಪಾನನೆಯ ಶಬ್ದಗಳಿಂದ ಒಡೆದು ಮೂಡುವ ಪ್ರಭುರಾಯನ ನಿಲವನ್ನು ಮಾನವನ ಕಣ್ಣು ಕಂಡ ರಿಯವು; ಕಿವಿ ಕೇಳರಿಯವು. ನೆಲ! ನಡಿಸಿಕೊಂಡರಿಯದು. ಬಯಲು ಮುಟ್ಟಿಸಿಕೊಂಡರಿಯದು. ಅದಾವುದೋ ದೇಶ, ಕಾಲ, ಜನಾಂಗದ ಸೀಮೆಯಾಚೆ ಮೂಡಿ, ನೆಳಲಿಲ್ಲದೆ ನಿಂತು, ಹಜ್ಜೆಯಿಲ್ಲದೆ ಸುಳಿದು, 'ತನ್ನನಾಶ್ರಯಿಸಿದ ಮಹಾನುಭಾವಿಗಳಿಗೆ,' ಇಂದಿಗೂ, ಎಂದೆಂದಿಗೂ ನಿಃಶಬ್ದದಲ್ಲಿ ವಚನಾನುಭವವನ್ನು ನಿರೂಪಿಸುತ್ತ ಇರುವ ಪರವು ಭವ್ಯದ ಇರವನ್ನು, ಅಲ್ಲಮಪ್ರಭುರಾಯನ ನಿಲವನ್ನು, ಬಯಲುಗಳನು ಸುಳಿವ ಸುಳಿಹನ್ನು ನಿಮ್ಮ ನೀವೇ ನೋಡಿಕೊಳ್ಳಿ.

' ಪ್ರಭುದೇವರ ಶೂನ್ಯಸಂಪಾದನೆ' ಒಂದು ಭಾಷೆಯಲ್ಲ : ಅದು ಒಂದು ಕಾಲಕ್ಕಲ್ಲ, ಒಂದು ಜಾತಿ ಕುಲಕ್ಕಲ್ಲ. ಅದೊಂದು ದಿವ್ಯದ ಸುದ್ದಿ; ಅದೊಂದು ಪರಿಪೂರ್ಣ ನಿತ್ಯದ ವಾರ್ತೆ; ಅದೊಂದು ಬಣ್ಣವಿಲ್ಲದ ಮಾನವ ಹೃದಯದ ಗಂಭೀರ ಮೌನದ ಸಂದೇಶ.

ಲೇಖಕರು—ಪ್ರೊ. ಎಸ್. ಎಸ್. ಭೂಸನೂರಮಠ, ಧಾರವಾಡ.

Digitization by eGangotri and Sarayu Trust. Funding by MoE-IKS

ಶರಣರೂ ಕಲೆಗಳೂ

೧

ಪ್ರಪಂಚಕ್ಕೆ ಬಸವಾದಿ ಶಿವಶರಣರು ಕೊಟ್ಟ ವಿನೂತನವಾದ ಮಹಾಕೊಡುಗೆ ಕಾಯಕ. ಸರ್ವರೂ ಸರ್ವಕಾಲಕ್ಕೂ ಆಚರಿಸಿ, ಇಹಪರವನ್ನು ಸಾಧಿಸಲು ಬರುವ ಈ ಮೌಲ್ಯವನ್ನು ಹಿಂಜಿ ಹಿಂಜಿ ನೋಡಿದರೆ ಅದರ ಘನತೆ ವ್ಯಾಪಕತೆ ಗೋಚರಿಸುವದು. ಲೋಕದ ಸರ್ವ ಅನಿಷ್ಟಗಳನ್ನೂ ಇಲ್ಲವಾಗಿಸಿ, ಸೌಖ್ಯಶಾಂತಿಗಳನ್ನು ಈ ಒಂದು ತತ್ವ ದಿಂದಲೇ ಸಾಧಿಸಲು ಸಾಧ್ಯವಿದೆ.

ಸರ್ವ ವೃತ್ತಿಗಳೂ ಭಾವಶುದ್ಧಿಯಿಂದ ಮಾಡಿದರೆ ಕಾಯಕವೆನಿಸುವುವು. ಕಾಯಕಗಳಲ್ಲಿ ಮೇಲು-ಕೀಳಿಲ್ಲ. ಎಲ್ಲ ಕಾಯಕಗಳೂ ಪವಿತ್ರವಾದುವು. ಎಲ್ಲರೂ ಕಾಯಕಮಾಡಿಯೇ ಜೀವಿಸಬೇಕು. ಭಿಕ್ಷೆ ಬೇಡುವುದು ಶರಣರ ದೃಷ್ಟಿ ಯಲ್ಲಿ ಪಾಪ. ದಾಸೋಹಂಭಾವದಿಂದ ಕಾಯಕ ಮಾಡಬೇಕು. ಕಾಯಕವನ್ನು ಪ್ರೀತಿಸಿ ಅವರಲ್ಲಿ, ತಾದಾತ್ಮ್ಯ ಹೊಂದ ಬೇಕು. ಕಾಯಕದಲ್ಲಿ ಹೆಚ್ಚಿನ ಫಲಾಪೇಕ್ಷೆ ಇಲ್ಲ. ದುಡಿಮೆಗೆ ತಕ್ಕಷ್ಟು ಫಲ, ನಿತ್ಯ ಕಾಯಕ, ನಿತ್ಯ ದಾಸೋಹ ಸೋಮಾರಿತನಕ್ಕೆ ಎಡೆಯಿಲ್ಲ. ‘ ನೇಮದ ಕೂಲಿ ಅಂದಿನ ನಿತ್ಯ ನೇಮದಲ್ಲಿ ಸಂದಿರಬೇಕು. ಸತ್ಯ ಶುದ್ಧ ಕಾಯಕವೇ ದೇವಪೂಜೆ, ಕೈಲಾಸ; ಅದುವೇ ಸರ್ವಸ್ವ.

ಇಂಥ ಕಾಯಕದ ತಳಹದಿಯ ಮೇಲೆ ಶರಣರು ಕಟ್ಟಿದ ಸಮಾಜ ಸ್ವಾವಲಂಬಿಯಾಗಿತ್ತು; ವರ್ಗ, ವರ್ಣ, ಮೇಲು, ಕೀಳು, ಜಾತಿ, ಮತ, ಪಂಥ, ಬಡವ, ಬಲ್ಲಿದ-ಇವುಗಳಿಂದ ದೂರವಾಗಿತ್ತು. ವ್ಯಕ್ತಿಯ ಆತ್ಮೋನ್ನತಿ, ಸಮಾಜದ ಸರ್ವಾಂಗೀಣ ಪ್ರಗತಿ ಎರಡೂ ಒಮ್ಮಿಗ್ರೇ ಸಾಧಿಸುತ್ತಿದ್ದುವು ಶರಣರ ಈ ಸಮಾಜ ವ್ಯವಸ್ಥೆಯಲ್ಲಿ.

ಸತ್ಯ-ಶುದ್ಧ ಆಚರಣೆಯಿಂದ ಸರ್ವ ವೃತ್ತಿಗಳು ಕಾಯಕವೆನಿಸಿದಂತೆ ಸರ್ವಕಲೆಗಳೂ ಕಾಯಕವೆನಿಸಿದುವು. ಕಲೆಗಳನ್ನು ಕಾಯಕಮಟ್ಟಕ್ಕೇರಿಸಿ ಶರಣರು ಅವುಗಳನ್ನು ಉಳಿಸಿ ಬೆಳಿಸಿದರು. ಸಂಗೀತ. ವಾದ್ಯ, ನೃತ್ಯ, ನಾಟಕ, ಗಮಕ, ಹಾಸ್ಯ, ಮುಂತಾದ ಎಲ್ಲ ಕಲೆಗಳಲ್ಲಿಯೂ ಶರಣರು ಬಲ್ಲಿದರಾಗಿದ್ದರು.

ವಚನಗಳಲ್ಲದೆ ಶರಣರು ಹಾಡುಗಳನ್ನೂ ರಚಿಸಿದ್ದಾರೆ. ವಚನಗಳನ್ನು ಮತ್ತು ಹಾಡುಗಳನ್ನು ಅವರು ಸಂಗೀ ತಕ್ಕೆ ಅಳವಡಿಸಿ ಹಾಡುತ್ತಿದ್ದರು. ರಾಗಗಳ ಹೆಸರಿಂದೊಡಗೂಡಿದ ಶಿವಶರಣರ ಎಷ್ಟೋ ಹಾಡುಗಳು ದೊರಕಿವೆ.[1]

“ ಎನ್ನ ಕಾಯವ ದಂಡಿಗೆಯ ಮಾಡಯ್ಯಾ
ಎನ್ನ ಸಿರವ ಸೋರೆಯ ಮಾಡಯ್ಯಾ;
ಎನ್ನ ನರವ ತಂತಿಯ ಮಾಡಯ್ಯಾ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ;
ಬತ್ತೀಸ ರಾಗವ ಹಾಡಯ್ಯಾ,
ಉರದಲೊತ್ತಿ ಬಾರಿಸು ಕೂಡಲಸಂಗಮದೇವಾ ”[2]

ಮೇಲಿನ ವಚನದಿಂದ ಬತ್ತೀಸರಾಗಗಳ ಕಲ್ಪನೆ ಬಸವಣ್ಣನವರಿಗಿತ್ತೆಂದು ವಿದಿತವಾಗುತ್ತದೆ.

“ ದೇಶಾಕ್ಷಿಯಿಲ್ಲದ ರಾಗ, ಉಪ್ಪಿಲ್ಲದೂಟ ಸಪ್ಪೆ ಕಾಣಿರಣ್ಣಾ;
ಅಯ್ಯಾ, ಮಿಕ್ಕಿನರಾಗ, ಶಿವನಲ್ಲದ ದೈವ ಫಲವಿಲ್ಲ ಕಾಣಿರಣ್ಣಾ;
ಅಯ್ಯಾ, ಮಿಕ್ಕಿನ ತುಂಬುರ ನಾರದರು ಶಿವನ ಕೇಳಿಸುವ ರಾಗ
ಮಹಾಲಿಂಗ ಗಜೇಶ್ವರನ ನಚ್ಚಿನ ರಾಗ ”[3]

---

1 ಶ್ರೀ ಎಲ್. ಬಸವರಾಜು ಅವರಿಂದ ಸಂಪಾದಿತವಾದ ‘ಶಿವದಾಸ ಗೀತಾಂಜಲಿ’ ನೋಡಿರಿ.
2 ಶ್ರೀ ಬಸವಣ್ಣನವರ ಷಟ್‌ಸ್ಥಳದ ವಚನಗಳು. (ವಚನ-೫೦೧)
3 ಶಿವದಾಸ ಗೀತಾಂಜಲಿ-ಪ್ರಸ್ತಾವನೆ. ಪುಟ-೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಜೇಶ ಮಸಣಯ್ಯನಿಗೆ "ದೇಶಾಕ್ಷಿರಾಗ" ಅತ್ಯಂತ ಪ್ರೀತಿಯ ರಾಗ. ಉಪ್ಪಿಲ್ಲದ ಸಪ್ಪೆಯೂಟವಿದ್ದಂತೆ ದೇಶಾಕ್ಷಿ ರಾಗವಿಲ್ಲದ ಸಂಗೀತಕೂಟ.

"ಕೋಟ್ಯನುಕೋಟಿ ಜಪವನು ಮಾಡಿ
ಕೋಟಲೆಗೊಳ್ಳಲದೇಕೆ ಮನವೇ ?
ಕಿಂಚಿತ ಗೀತವೊಂದನಂತಕೋಟಿ ಜಪ
ಜಪವೆಂಬುದೇಕೆ ಮನವೇ ?
ಕೂಡಸಂಗನ ಶರಣರ ಕಂಡು
ಆಡಿ, ಹಾಡಿ ಬದುಕು ಮನವೇ ?[1] "

ಜಪಕ್ಕಿಂತ ಗೀತಕ್ಕೆ, ಹಾಡಿಗೆ ಬಸವಣ್ಣನವರು ಕೊಟ್ಟ ಮಹತ್ವ ಈ ವಚನದಿಂದ ತಿಳಿದು ಬರುತ್ತದೆ. ಗೀತ, ಹಾಡು ಇದ್ದಲ್ಲಿ ಸಂಗೀತ, ತಾಳ, ಲಯ ಇಲ್ಲದೆ ಇರುತ್ತದೆಯೇ ? ವಚನ ನುಡಿಯುವುದಕ್ಕಿಂತ ಹೆಚ್ಚಾಗಿ ಶರಣರು ಅವುಗಳನ್ನು ರಾಗಬದ್ಧವಾಗಿ ತಾಳಲಯಗಳಿಂದ ಭಾವಪೂರ್ಣವಾಗಿ ಹಾಡುತ್ತಿದ್ದರು.

ಶರಣರ ಸಂಗೀತಕ್ಕೆ ಭಕ್ತಿಯೇ ತಳಹದಿಯಾಗಿತ್ತು. ಭಕ್ತಿಯಿಲ್ಲದ ರಾಗ ಪರಿಣಾಮ ಮಾಡದು. ಈ ಭಕ್ತಿಯಿಲ್ಲದಾಗ ಶಿವನು "ನಾದ ಪ್ರಿಯನಲ್ಲ".

"ತಾಳಮಾನ ಸರಿಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವರಿಯೆ
ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನುವೊಲಿದಂತೆ ಹಾಡುವೆ[2] "

ತಾಳ, ಓಜೆ, ಬಜಾವಣೆ, ಗಣ–ಇವುಗಳಿದ್ದರೂ ಭಕ್ತಿಯಿಲ್ಲದಿದ್ದರೆ ವ್ಯರ್ಥ. ಭಕ್ತಿಯಿದ್ದ ಹಾಡು "ಕೇಡಿಲ್ಲದ ಹಾಡು". ಈ ಕೇಡಿಲ್ಲದ ಹಾಡನ್ನೇ ಶರಣರು ಹಾಡಿದ್ದು. ಓಜೆ ಬಜಾವಣೆ ಅರಿಯೆನೆಂದು ಹೇಳಿದ ಬಸವಣ್ಣನವರು ಸಂಗೀತಜ್ಞರೆಂದು ಅವರ ಅನೇಕ ವಚನಗಳಲ್ಲಿಯೇ ಕಂಡುಬರುತ್ತದೆ. ಇಲ್ಲಿ ಹೀಗೆ ಹೇಳಿಕೊಂಡುದು ಭಕ್ತಿ, ಒಲುಮೆ ಮುಖ್ಯವೆಂಬುದನ್ನು ಸ್ಪಷ್ಟಪಡಿಸಲು.

(೨)

ಸಂಗೀತದಿಂದ, ವಾದ್ಯವಾದನದಿಂದ ಶಿವನನ್ನೊಲಿಸಿದ ಶರಣರು ಅನೇಕರಿದ್ದಾರೆ : ಸಕಲೇಶ ಮಾದರಸ, ಕಿನ್ನರಿಬ್ರಹ್ಮಯ್ಯ, ರಾಗದ ಸಂಕಣ್ಣ, ಸಿದ್ಧಬುದ್ಧಯ್ಯ, ಭದ್ರಗಾಯಕ, ಕಂಕರಿಕಕ್ಕಯ್ಯ ಮುಂತಾದವರು.

ಶರಣರು ಬಳಸುತ್ತಿದ್ದ ವಾದ್ಯಗಳು, ಅವರ ಹೆಸರಿನೊಂದಿಗೇ ಪ್ರಸಿದ್ಧವಾಗಿವೆ : ಸಕಲೇಶ ಮಾದರಸನ ವೀಣೆ, ಕಕ್ಕಯ್ಯನ ಕಂಕರಿ, ಬಸವನ ದಂಡಿಗೆ, ಬ್ರಹ್ಮಯ್ಯನ ಕಿನ್ನರಿ, ಬಾಹೂರ ಬ್ರಹ್ಮಯ್ಯನ ತಾಳ, ಮಾರಯ್ಯನ ಢಕ್ಕೆ ಮುಂತಾಗಿ.

ಸಕಲೇಶ ಮಾದರಸ :

ಸಕಲೇಶ ಮಾದರಸ ವೀಣೆಯನ್ನು ನುಡಿಸಿ ಶಿವನನ್ನು ಒಲಿಸಿದ ಶರಣ. ರಾಗಕ್ಕೆ ತಕ್ಕಂತೆ, ಹಾಡಿಗೆ ತಕ್ಕಂತೆ, ಭಾವಕ್ಕೆ ತಕ್ಕಂತೆ ರಾವಣವೀಣೆ, ರುದ್ರವೀಣೆ, ಕೂರ್ಮವೀಣೆ, ಕೈಲಾಸವೀಣೆ, ಗೌರೀವೀಣೆ, ಸ್ವಾಯಂಭುವೀಣೆ, ಕಿನ್ನರಿವೀಣೆ, ಪಿನಾಕಿವೀಣೆ, ಆಕಾಶವೀಣೆ, ಬ್ರಹ್ಮವೀಣೆ, ಲಾವಣ್ಯವೀಣೆ, ಸಾರಂಗವೀಣೆ ಮುಂತಾಗಿ ಮೂವತ್ತೆರಡು ವೀಣೆಗಳನ್ನೂ ಆತ ನುಡಿಸುವುದರಲ್ಲಿ ಪ್ರವೀಣನಾಗಿದ್ದ.

1. ಬಸವಣ್ಣನವರ ಷಟ್‌ಸ್ಥಳದ ವಚನಗಳು. (ವಚನ–೨೭೮).
2. ಅದೇ–(ವಚನ–೪೯೬).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಿನ್ನರಿ ಬ್ರಹ್ಮಯ್ಯ :

ಕಿನ್ನರಿ ಬ್ರಹ್ಮಯ್ಯ ಹುಟ್ಟು ಸಂಗೀತಜ್ಞ. ಜನಪದ ಕವಿ. ಸಾವಳಿಗೇಶ ಈತನನ್ನು ಕುರಿತು ಹೀಗೆ ಹಾಡಿದ್ದಾನೆ :

" ಸಂಗೀತ ವಿದ್ಯೆಯದು ಸಂಗಡವೆ ಬಂದದ್ದು
ಲಿಂಗಿಗಳ ಹಿರಿಮೆ ಹಾಡುತಲಿ | ಕಲ್ಯಾಣ
ಲಿಂಗಮಂಟಪವ ಕೂಡಿದನು[1] "

ಕಿನ್ನರಿಯನ್ನು ಹಿಡಿದು ಹಾಡಿ ತ್ರಿಪುರಾಂತಕ ದೇವರನೊಲಿಸಿ ಕೇಡಿಲ್ಲದ ಪದವಿಯನ್ನು ತಾನೂ ಪಡೆದು ಜನಗಳೂ ಆ ಪದವಿಯನ್ನು ಪಡೆಯುವಂತೆ ಸಂಗೀತದಿಂದ ಬೋಧಿಸಿದ :

" ಶಿವಕೊಟ್ಟ ಕಿನ್ನರಿಯ ಭವದೊಳಗೆ ನುಡಿಸುತಲಿ
ಶಿವಬೋಧೆ ಜನಕೆ ಮಾಡುತಲಿ | ಬೊಮ್ಮಯ್ಯ
ಭವಿಗಳಿಗೆ ಊದಿ ಶಿವಮಂತ್ರ[2] "

ರಾಗದ ಸಂಕಣ್ಣ :

ರಾಗದ ಸಂಕಣ್ಣನ ಸಂಗೀತ ಅದ್ಭುತ ಪವಾಡವನ್ನೇ ಎಸಗುತ್ತದೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನ ಆಸ್ಥಾನ ಸಂಗೀತ ವಿದುಷ ಈತ. ನಿತ್ಯ ಆಸ್ಥಾನದಲ್ಲಿ ಹಾಡಿ ಹನ್ನೆರಡು ವರಹಗಳನ್ನು ಪಡೆಯುತ್ತಿದ್ದ. ಆಸ್ಥಾನದ ಇನ್ನಿತರ—ಅದ್ವಿತೀಯರೆಂದೆನಿಸಿದ—ಸಂಗೀತಗಾರರಿಗಿಂತ ವಿಕ್ರಮಾದಿತ್ಯ ಸಂಕಣ್ಣನಿಗೆ ಹೆಚ್ಚು ಗೌರವ ಕೊಡುತ್ತಿದ್ದ. ಅದಕ್ಕೆ ಕಾರಣವೆಂದರೆ : ಸಂಕಣ್ಣನ ಸಂಗೀತ ಭಕ್ತಿಯ ಕಂಪಿನಿಂದ ಕೂಡಿತ್ತು. ಈ ಭಕ್ತಿಯ ಆಧಿಕ್ಯದಿಂದ ಸಂಕಣ್ಣ ಗೌಳದೇಶದ ಗಾಯಕನೊಡನೆ ಸಂಗೀತ ಸ್ಪರ್ಧೆಯಲ್ಲಿ ಗೆದ್ದು ದೊರೆಯಿಂದ 'ನಾಗರಸಾಂಕ' ಎಂಬ ಬಿರುದನ್ನು ಗಳಿಸಿದ.

ಕುಂಬಾರ ಗುಂಡಯ್ಯ :

" ಕಾಯಕವೆ ಶಿವಭಕ್ತಿ ಕಾಯಕವೆ ಶಿವ ಭಜನೆ
ಕಾಯಕವೆ ಲಿಂಗ ಶಿವಪೂಜೆ—ಶಿವಯೋಗ
ಕಾಯಕವೆ ಕಾಯ್ವ ಕೈಲಾಸ "[3]

ಇಂಥ ಕಾಯಕ ಜೀವಿಯಾದಾತ ಕುಂಬಾರ ಗುಂಡಯ್ಯ. ಆತ ತಾನು ಮಾಡಿದ ಮಡಕೆಗಳನ್ನು ಬಾರಿಸಿ ಭಕ್ತಿಯಿಂದ ಕುಣಿಯುತ್ತಿದ್ದ, ಆತನ ಭಕ್ತಿಗೆ, ಆತನ ಮಡಕೆಗಳ ಬಾಜನೆಗೆ ಮೆಚ್ಚಿ ಮಾರುಹೋದ ಶಿವ ಕೈಲಾಸದಿಂದಿಳಿದು ಬಂದು ಎಂದ; ಮಡಕೆಯ ಶಬ್ದಕ್ಕೆ ಕುಣಿಯತೊಡಗಿದ. ಶಿವ ಕುಣಿಯುವದನ್ನು ಕಂಡು ಸಕಲ ದೇವತೆಗಳೂ ಕುಣಿಯತೊಡಗಿದರು.

" ಶಿವನ ಕಂಡಾ ಭಕ್ತಂ ಕುಣಿಯಲು
ಶಿವ ಭಕ್ತನ ಕೂಡಭವಂ ಕುಣಿಯಲು

---

1 ಡಾ. ಗದ್ದಿಗಿಮಠರ ಕನ್ನಡ ಜಾನಪದ ಗೀತೆ : ಹಂತಿಯ ಹಾಡು ಪುಟ ೨೫೫.
2 ,, ,, ಪುಟ ೨೫೭.
3 ಡಾ. ಗದ್ದಿಗಿಮಠರ ಕನ್ನಡ ಜಾನಪದ ಗೀತೆಗಳು ಪುಟ ೩೦೮.

5

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವ ಸ್ಥಾವರ ಜಂಗಮವಾಡಲು......
ಮಡಕೆಯ ಶಬ್ದಕ್ಕಾಡುತ್ತಿರ್ದಂ[1] "

ಸಕಲ ಸಚರಾಚರ ಲಾಸ್ಯಮಯವಾಯಿತು, ತನ್ನ ಕುಣಿತದಿಂದ ಶಿವನನ್ನೂ ಗಣತತಿಯನ್ನೂ ಸಕಲ ಸಚರಾಚರವನ್ನೂ ಕುಣಿಯಹಚ್ಚಿದ ಮಹಾತ್ಮ ಕುಂಬಾರ ಗುಂಡಯ್ಯ.

ಸಕಲೇಶ ಮಾದರಸ ಮತ್ತು ಕಿನ್ನರಿ ಬೊಮ್ಮಯ್ಯ ವಚನಕಾರರಾಗಿದ್ದಾರೆ. ಬಾರಿಸುವುದರಿಂದ, ಹಾಡುವುದರಿಂದ ಸಂಗೀತ ಲೋಕಕ್ಕೆ ಹೊಸ ಕಳೆಯಿತ್ತಂತೆ ಅವರು ವಚನಗಳಿಂದ ಸಾಹಿತ್ಯಲೋಕವನ್ನೂ ಬೆಳಗಿದ್ದಾರೆ, ಶ್ರೀಮಂತಗೊಳಿಸಿದ್ದಾರೆ.

"ಸಕಲೇಶ ಮಾದರಸನ ಅಮೃತವಾಣಿ ಇದು :

ಆಸೆಯಿಂದ ಬಿಟ್ಟು ಕಿರಿಯರಿಲ್ಲ ;
ನಿರಾಸೆಯಿಂದ ಬಿಟ್ಟು ಹಿರಿಯರಿಲ್ಲ;
ದಯೆಯಿಂದ ಬಿಟ್ಟು ಧರ್ಮವಿಲ್ಲ;
ವಿಚಾರದಿಂದ ಬಿಟ್ಟು ಸಹಾಯಗಳಿಲ್ಲ
ಸಚರಾಚರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ. "

ಕಿನ್ನರಿ ಬೊಮ್ಮಯ್ಯನ ಅನುಭವ ವಾಣಿ ಇದು :

"ನಿನ್ನ ಹರೆಯದ ರೂಹಿನ ನುಡಿಯ ಜಾಣಿನ ಚೆಲುವಿನ ಸಿರಿಯ
ಸಂತೋಷದ ಕರಿತುರಗರಥಪದಾತಿಯ ನೆರವಿಯ
ಸತಿಸುತರ ಬಂಧುಗಳ ಸಮೂಹದ
ನಿನ್ನ ಕುಲದಭಿಮಾನದ ಗರ್ವವ ಬಿಡು ! ಮರುಳಾಗದಿರು.
... ...
... ...
ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ ನುಡಿಗೆಡೆಯಿಲ್ಲ.
ಕೇಳೋ ನರನೆ, ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿದೆಯಾದರೆ
ಕೇಡಿಲ್ಲದ ಪದ ದೊರಕೊಂಬುದು, ಮರುಳೆ. "

(೩)

ತೊಗಲುಗೊಂಬೆಯ ಆಟ, ಕಿಳ್ಳಿಕ್ಯಾತರ ಆಟ, ಭೃಂಗಿಯವರ ವಿವಿಧ ವೇಷ, ಡೊಂಬರಾಟ, ಕೋಡಂಗಿಯಾಟ, ಜಾತಿಗಾರ ವಿನೋದಾವಳಿ—ಮುಂತಾದವು ಶುದ್ಧ ಜಾನಪದ ಕಲೆಗಳು. ವಿಚಾರಿಸಿ ನೋಡಿದರೆ ಇವೇ ನಿಜವಾದ ಕಲೆಗಳು; ಇನ್ನುಳಿದ ಕಲೆಗಳಿಗೆ ಇವು ಮೂಲವಾದುವುಗಳು. ಕನ್ನಡ ನೆಲದ ಸತ್ವ, ಗುಣ, ಈ ನಾಡಿನ ಸಂಸ್ಕೃತಿ. ಈ ಕಲೆಗಳಲ್ಲಿ ಅಡಗಿದೆ. ಇಂಥ ಮಹತ್ವವಾದ ಕಲೆಗಳು ಹೊಟ್ಟೆಹೊರೆಯುವ ಸಾಧನಗಳಾಗಿದ್ದುವು. ಜನರ ದೃಷ್ಟಿಯಲ್ಲಿ ಇವು ಅತಿ ಕೀಳೆನಿಸಿದ್ದುವು. ಅತಿಸಾಮಾನ್ಯ ಜನರ ರಂಜನೆಗೆ ವಿಷಯಗಳಾದ ಈ ಕಲೆಗಳು ಅವರನ್ನು ಅಳಿಸಿ, ನಗಿಸಿ, ಹೃದಯಕ್ಕೆ ಸಂಸ್ಕಾರ ಬರಿಸಿ, ಅವರ ಜೀವನ ತಿದ್ದಿ ತೀಡುವಂಥವು. ಆದರೆ ಆ ಕಾಲದಲ್ಲಿ ಇವುಗಳಿಗೆ ದೊರಕಿದ ಸ್ಥಾನ "ಶೂದ್ರತನ".

1 ಡಾ. ಹಳಕಟ್ಟಿ ಸಂಪಾದಿತ ಹರಿಹರನ ರಗಳೆಗಳು ಪುಟ ೨೫೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜನರ ದೃಷ್ಟಿಯಲ್ಲಿ ಕೀಳೆನಿಸಿದ ಈ ಕಲೆಗಳನ್ನು ಶರಣರು ಕಾಯಕಗಳನ್ನಾಗಿ ಆರಿಸಿಕೊಂಡರು. ಇದರಿಂದ ಆ ಕಲೆಗಳಿಗೆ ಹೊಸ ಜೀವ ಬಂದಿತು. ನಾಡಿನಲ್ಲಿ ಜಾನಪದ ಕಲೆಗಳ ಪುನರುಜ್ಜೀವನ ವಾಯಿತು; ಅವು ಹೊಸ ಕ್ಷಿತಿಜವನ್ನು ಪಡೆದುವು. ಜಾನಪದ ಕಲೆಗಳ ಒಂದು ಹೊಸ ಸಂಪ್ರದಾಯವೇ ನಿರ್ಮಾಣ ವಾಯಿತು. ಈ ಸಂಪ್ರದಾಯ ನಿರ್ಮಾಣಕ್ಕೆ ಕಾರಣರಾದವರು : ಢಕ್ಕೆಯ ಮಾರಯ್ಯ, ಬಹುರೂಪಿ ಚೌಡಯ್ಯ, ಕಂಕರೀಕಕ್ಕಯ್ಯ, ಕಲಕೇತ ಬೊಮ್ಮಯ್ಯ, ಸಿದ್ಧದೇವಮ್ಮ, ಶಿವಮಾಯಿದೇವಿ, ವೀರದೇವಮ್ಮ, ಜಕ್ಕೆಯರ ಬ್ರಹ್ಮಯ್ಯ ಮುಂತಾದ ಶರಣರು.

ಢಕ್ಕೆಯ ಮಾರಯ್ಯ :

ಬುಟ್ಟಿಯಲ್ಲಿ ಅಥವಾ ಮೊರದಲ್ಲಿ ಮಾರಿದೇವತೆಯನಿಟ್ಟುಕೊಂಡು, ಉದ್ದವಾದ ಬಾರುಕೋಲಿನಿಂದ ತಮ್ಮ ಮೈಗೆ ಹೊಡೆದುಕೊಳ್ಳುತ್ತ, ಡೊಳ್ಳು ಬಾರಿಸಿ ಕುಣಿಯುತ್ತ ಭಿಕ್ಷೆ ಬೇಡಲು ಬರುವವರಿಗೆ "ಬುರು ಬುರು ಸುಂಕಲಮ್ಮ" ಮತ್ತು "ದುರುಗಮುರಗಿ" ಯವರೆಂದು ಹೆಸರು. ಇವರು ಸಮಾಜದಲ್ಲಿ ಏನೇನೂ ಬೆಲೆಯಿಲ್ಲದವರು; ಹೊಟ್ಟೆಕೂಳಿಗಾಗಿ ಈ ವೃತ್ತಿ ಕೈಕೊಂಡವರು. ಇಂಥದೇ ವೃತ್ತಿಯನ್ನು ಢಕ್ಕೆಯ ಮಾರಯ್ಯ ಕಾಯಕವನ್ನಾಗಿಮಾಡಿಕೊಂಡಿದ್ದ.

ಢಕ್ಕೆಯ ಮಾರಯ್ಯ ಶಂಕರದಾಸಮಯ್ಯನ ಸಮಕಾಲೀನ; ಆತನಲ್ಲಿ ತಲೆದೋರಿದ ಅಹಂಭಾವವನ್ನು ಕಳೆದ ಮಹಿಮ.

ತಲೆಗೆ, ಟೊಂಕಕ್ಕೆ ಬೇವಿನ ಎಲೆಯನ್ನು ಕಟ್ಟಿಕೊಂಡು, ಮೊರದಲ್ಲಿ ಮಾರಿಯ ಮೂರ್ತಿಯನ್ನಿಟ್ಟುಕೊಂಡು, ಡೊಳ್ಳು ಬಾರಿಸುತ್ತ, ಕುಣಿಯುತ್ತ ಢಕ್ಕೆಯ ಮಾರಯ್ಯ ಓಣಿಯಲ್ಲಿ ತಿರುಗುವನು. ಅಲ್ಲಲ್ಲಿ ಮಾರಿಯನ್ನಿಳಿಸಿ, ಕುಣಿದು ಡೊಳ್ಳು ಬಾರಿಸಿ ಶಿವಾನುಭವ ತತ್ವಗಳನ್ನು, ಶರಣರ ಸೂಳ್ನುಡಿಗಳನ್ನು ಜನರೆದೆಗೆ ಇಳಿಸುವನು.

ಢಕ್ಕೆಯ ಮಾರಯ್ಯನ "ಮಾರಿ" ಜ್ಞಾನಶಕ್ತಿಯ ಸಂಕೇತವಾಗಿತ್ತು. ಶರಣನಾದವನು ಇದಿರಿಟ್ಟು ಪೂಜಿಸಬಾರದು. ಆದುದರಿಂದ ಮಾರಿಯನ್ನು ಹೊತ್ತು ತಿರುಗುವುದನ್ನು ಕೆಲವರು ಆಕ್ಷೇಪಿಸಿದರು. ಮಾರಯ್ಯನ ಅಂತಸ್ತನ್ನು ತಿಳಿಯದೆ, ಆಗ ಮಾರಯ್ಯ ಮಾರಿ ಬೇರೆಯಲ್ಲ, ತನ್ನ ಇಷ್ಟಲಿಂಗ ಬೇರೆಯಲ್ಲವೆಂಬುದನ್ನು ತೋರಿಸಲು ಮಾರಿಯನ್ನು ತನ್ನ ಇಷ್ಟಲಿಂಗದಲ್ಲಿ ಅಡಗಿಸಿ, ಆ ಲಿಂಗವನ್ನು ಅಂಗೈಯಲ್ಲಿಟ್ಟು ಮಾರಿಯಂತೆ ಕುಣಿಸಿದನು.

ಶಂಕರ ದಾಸಮಯ್ಯ ಶಿವನಿಂದ ಹಣೆಗಣ್ಣನ್ನು ಪಡೆದಿದ್ದ; ಪರವಾದಿಗಳನ್ನು ಜಯಿಸಿದ್ದ; ಉಜ್ಜಯಿನಿಯ ಮಹಾಕಾಳಿಯಿಂದ ಕೊಡೆವಿಡಿಸಿಕೊಂಡಿದ್ದ; ಇಷ್ಟಲ್ಲದೆ ದೇವರ ದಾಸಮಯ್ಯನ ಅಹಂಭಾವವನ್ನು ಅಳಿಸಿದ್ದ. ಆದರೆ ಇವೆಲ್ಲವುಗಳಿಂದ ತನ್ನಲ್ಲಿಯೇ ಅಹಂಭಾವವನ್ನು ಬೆಳೆಸಿಕೊಂಡಿದ್ದ. ಅದನ್ನು ಢಕ್ಕೆಯ ಮಾರಯ್ಯ ಕಳೆಯ ಬೇಕಾಯಿತು.

ಢಕ್ಕೆಯ ಮಾರಯ್ಯ ಶಂಕರ ದಾಸಮಯ್ಯನ ಅಂಗಳಕ್ಕೆ ಬಂದು ಕುಣಿದು 'ಕಾಯಕ' ಬೇಡಿದ. ಕ್ಷುಲ್ಲಕ ದೈವವಿರೋಧಿ ಶಂಕರದಾಸಮಯ್ಯ ಮಾರಯ್ಯನ ಹೊಳಬರಿಯದೆ ಮಾರಿಯನ್ನು ಸುಡಲು ಹಣೆಗಣ್ಣನ್ನು ತೆರೆದ. ಆದರೆ ಆದುದೇನು ? ಆ ಮಾರಿಕವ್ವೆ ಶಂಕರದಾಸಮಯ್ಯನ ಉರಿಗಣ್ಣನ್ನೇ ನುಂಗಿಬಿಟ್ಟಳು.

ಕೊನೆಗೆ ಶಂಕರದಾಸಮಯ್ಯನಿಗೆ ಢಕ್ಕೆಯ ಮಾರಯ್ಯನ ಕಾಯಕದ ಹೊಲಬು, ಆತನ ನಿಲವು ತಿಳಿಯಿತು; ಮೈತುಂಬಿಕೊಂಡಿದ್ದ ಅಹಂಕಾರ ಮಾಯವಾಯಿತು. ಮಾರಯ್ಯನ ಅಡಿಗೆರಗಿದ. ಆಗ ಆ ಮಾರಿದೇವತೆ ಆತನ ಕಣ್ಣನ್ನು ಉಗುಳಿಬಿಟ್ಟಿತು.

ಈ ಪವಾಡ ಏನೇ ಇರಲಿ, ಕ್ಷುಲ್ಲಕ ದೈವವೆನಿಸಿದ ಮಾರಿಕವ್ವೆಯನ್ನು ಇಷ್ಟಲಿಂಗದ ಪದವಿಗೇರಿಸಿ, ರಿಂಗಣ ಗುಣಿವ, ಡೊಳ್ಳುಬಾರಿಸುವ ಯಾಚಕ ವೃತ್ತಿಯನ್ನು ಕಾಯಕವನ್ನಾಗಿಸಿದ ಪವಾಡ ಹಿರಿದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಢಕ್ಕೆಯ ಮಾರಯ್ಯ ವಚನಕಾರನಿದ್ದಾನೆ. " ಕಾಲಾಂತಕ ಭೀಮೇಶ್ವರಲಿಂಗ " ಎಂಬುದು ಆತನ ಅಂಕಿತ.

ಶರಣರು ತಮ್ಮ ಕಾಯಕವನ್ನು ರೂಪಕಮಾಡಿಕೊಂಡು ತತ್ವ ಹೇಳುವಲ್ಲಿ ಬಲ್ಲಿದರು, ಕಾಯಕವು ಬಾಳನ್ನು ಕೈಲಾಸ ಮಾಡಿದಂತೆ ಸಾಹಿತ್ಯವನ್ನು ರಸಕೈಲಾಸ ಮಾಡಿದೆ. ಮಾರಯ್ಯನ ಈ ವಚನ ನೋಡಿರಿ :

" ಕಾಯವೆಂಬ ಢಕ್ಕೆಯ ಮೇಲೆ
ಜೀವವೆಂಬ ಹಿಡಿ ಚೆಂಡು ಬೀಳೆ
ತ್ರಿವಿಧ ತಾ, ತಾ ಎಂಬಾಸೆ
ಹಿಂ, ಡಿ, ಡಿಂ, ಡಿ ಎನ್ನುತ್ತಿದೆ
ಇಂತೀ ಉಲುಹಿನ ಭೇದದಲ್ಲಿ
ಹೊಲಬುದಪ್ಪದೆ ಗೆಲಬೇಕು–ಕಾಲವೆಂಬ ಮಾರಿಯ
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ "[1]

ಕಾಯಕವೇ ಢಕ್ಕೆ, ಅದರಲ್ಲಿ ಓಡಾಡುವ ಚೆಂಡು ಜೀವ, ಆ ಜೀವದ ಆಸೆ, ಆಕಾಂಕ್ಷೆಗಳು ಅನಂತ; ಅವುಗಳಿಂದ ಪಡುವ ಯಾತನೆಗೆ ಇತಿಮಿತಿಯಿಲ್ಲ. ಈ ಯಾತನೆಯಿಂದ ದೂರಾಗಬೇಕಾದರೆ ಹೊಲಬುದಪ್ಪದೆ ಇರಬೇಕು; ಮಾರಿಯನ್ನು ಗೆಲಬೇಕು. ಬಹು ಸೊಗಸಾದ ಭಾವ ಮೇಲಿನ ವಚನದಲ್ಲಿ ಅಡಗಿದೆ.

" ಆವ ಕಾಯಕದಿಂದಾದಡೂ ಭಾವಶುದ್ಧವಾಗಿ ಮಾಡುವದೇ ಜಂಗಮಪೂಜೆ;
ನಿಯಮ ಕ್ರೀ ತಪ್ಪದೆ ಮಾಡುವುದೇ ದೇವಪೂಜೆ "[2]

ಈ ಮಾತುಗಳು ಕಾಯಕದ ಹಿರಿಮೆಯನ್ನು, ಅರ್ಥವ್ಯಾಪ್ತಿಯನ್ನು ಅರುಹುತ್ತದೆ. ಕಾಯಕದ ವ್ಯಾಖ್ಯೆ ಇದಕ್ಕಿಂತಲೂ ಸುಂದರವಾಗಿ, ಅರ್ಥವತ್ತಾಗಿ ಬೇರೆಲ್ಲಿಯೂ ಕಾಣಬರವುದಿಲ್ಲ.

"... ... ...
... .
ಬಲ್ಲಬಲ್ಲವರೆಲ್ಲರ ತನ್ನಲ್ಲಿಯೇ ಅಡಗಿಸುತ,
ಅರಿದವರೆಲ್ಲರಿಗೆ ದೇವಿಯಾಗಿ,
ಮರೆದವರಿಗೆ ಮಾರಿಯಾಗಿ
ಮೊರದೊಳಗೆ ಕೊಂಡು ಬಂದಿದ್ದೇನೆ– "[3]

ಮಾರಯ್ಯನ ಮಾರಕವ್ವೆ ಇಂಥವಳು. ಅರಿದವರಿಗೆ ದೇವಿ, ಮರೆದವರಿಗೆ ಮಾರಿ. " ಮೊರ ಮೂರು ಕೊಟ್ಟು " ಇವಳನ್ನು ಗೆದೆಯುವದು ಹೇಗೆ ?

" ಢಕ್ಕೆಯ ಧ್ವನಿಗೇಳಿ ಬೆಚ್ಚಿಬೀಳುವುದಕ್ಕೆ ಮುನ್ನವೇ ಕಾಲಾಂತಕ ಭೀಮೇಶ್ವರ ಲಿಂಗವನ್ನು " ಅರಿಯಬೇಕಂತೆ;

1 ಡಾ. ಹಳಕಟ್ಟಿಯವರ ಶಿವಶರಣ ಕಥೆಗಳು ಭಾಗ ೩ ಪುಟ ೧೪೪.
2 ,,
3 ,, ,, ,,
,, ಪುಟ ೧೪೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಮಹಾದೇವನ ಮರೆದವರಿಗೆ
ಮಾಯಾಂಗನೆ ಮಾರಿಯಾದಳು ;
ಸತ್ಕ್ರಿಯ ಸಜ್ಜನ ಯುಕ್ತಿಯಿಂದ
ಸದಾಶಿವನನರಿಯಲಾಗಿ ಉಮಾದೇವಿಯಾದಳು"[1]

ಮಾರಯ್ಯನ ಈ ಮಾತುಗಳು ಸರ್ವಕಾಲಕ್ಕೂ ಸರ್ವರೂ ಅರಿತು ಆಚರಿಸಬೇಕಾದ ಮಾತುಗಳು.

ಬಹುರೂಪಿ ಚೌಡಯ್ಯ

'ಬಹುರೂಪಿ' ಎಂದರೆ ನಟ, ಡೊಂಬ ಎಂದರ್ಥ. ನಾನಾರೀತಿಯ ವೇಷಹಾಕಿ ನಟಿಸುವವರಿಗೆ ಜಾತಿಗಾರರೆಂದೂ ಹೆಸರು. ಚೌಡಯ್ಯ ನಟನೂ, ಡೊಂಬನೂ ಆಗಿದ್ದನು.

ರೇಕಳಿಕೆಯಲ್ಲಿ ಚೌಡಯ್ಯ ಹುಟ್ಟಿ ಬೆಳೆದ. ಜಾತಿಗಾರ ವಿದ್ಯೆ ಅವನು ಬೆಳೆದಂತೆ ಅವನೊಡನೆ ಬೆಳೆಯಿತು. ನೀಲಗಿರಿ ಪ್ರಾಂತದಲ್ಲಿ ಚೌಡಯ್ಯ ಬಹುದಿನಗಳವರೆಗೆ ಬಹುರೂಪಗಳನ್ನಾಡಿದ. ಆತ 'ಶಿವಲೀಲೆ ಆಡಿದರೆ ನಾಡೆಲ್ಲ ಹೂವಾಯ್ತು, ಮೂಡಿ ಶಿವಭಕ್ತಿ ಹಣ್ಣಾಯ್ತು' ಆತನ ಬಹುರೂಪವನ್ನು ಪುರವೆದ್ದು ನೋಡುತ್ತಿತ್ತು, ಪುರವೆದ್ದು ಕೇಳುತ್ತಿತ್ತು.'

ಚೌಡಯ್ಯನ ಕೀರ್ತಿಕೇಳಿ, ಕಾಡಸಿದ್ಧರು, ನಾಡ ಬುಡುಬುಡುಕಿಗಳು, ಶಂಖಯ್ಯಗಳು, ಸುಡುಗಾಡು ಸಿದ್ಧರು ಬಂದರು; ಆತನ ಶಿಷ್ಯರಾದರು. ಆತನ ಮೇಳ ದೊಡ್ಡದಾಯಿತು. 'ಶಿವಮತವ ಹಬ್ಬಿಸಲು, ಶಿವನ ಅಪ್ಪಣೆ ಪಡೆದು, ಶಿವಕಳೆಯೆ ಸಿಡಿದು ಹುಟ್ಟಿದಂತಿದ್ದರು' ಆತನ ಮೇಳದವರು.

ನೀಲಗಿರಿ ಪ್ರಾಂತದ ಕೊಟ್ಟಗಿಯಲ್ಲಿ ಚೌಡಯ್ಯ ಗಾನವಿದ್ಯಾಗಜೇಂದ್ರಸಿಂಹನಾದ ಅಚ್ಯುತನನ್ನು ಮತ್ತು ಭರತವಿದ್ಯಾ ಶರಭಭೇರುಂಡನಾದ ಯಕ್ಷನಾಥನನ್ನು ಸಂಗೀತ ಮತ್ತು ಬಹುರೂಪ ಸ್ಪರ್ಧೆಯಲ್ಲಿ ಜಯಿಸಿದನು. ಆ ಬಳಿಕ ಆತ ಶಿವನ ಪಂಚವಿಂಶತಿ ಲೀಲೆಗಳನ್ನೂ, ಕೋಳೂರು ಕೊಡಗೂಸು, ಮಾದಾರಚೆನ್ನ, ಬಡಿಹೋರಿ ಬೊಮ್ಮಯ್ಯ, ಕಾಲಿಕಾಲಮ್ಮ, ಅಮ್ಮವ್ವೆ ಮುಂತಾದ ಶರಣೆಯರ ಚರಿತ್ರಗಳನ್ನೂ ನಾಟಕಕ್ಕೆ ಅಳವಡಿಸಿ ಪ್ರದರ್ಶಿಸುತ್ತ ಕಲ್ಯಾಣಕ್ಕೆ ಬಂದನು, ಕೊನೆಯವರೆಗೆ ಅಲ್ಲಿಯೇ ಉಳಿದ.

ರೇಕನಾಥಾಚಾರ್ಯ ಚೌಡಯ್ಯನ ದೀಕ್ಷೆಯ ಗುರು; ನಾಗಿನಾಥಾಚಾರ್ಯ ಆತನ ಮೋಕ್ಷದ ಗುರು. ಚೌಡಯ್ಯ ಇಬ್ಬರನ್ನೂ ತನ್ನ ಅಂಕಿತದಲ್ಲಿ ಸೇರಿಸಿ ಅಮರರನ್ನಾಗಿಸಿದ್ದಾನೆ.

ಶಿವಪಾರಿಜಾತ ಮತ್ತು ರಾಮಕ್ರಿಯಾರಾಗ ಕಲೆಯ ಲೋಕಕ್ಕೆ ಚೌಡಯ್ಯನ ಕೊಡುಗೆಗಳು.

ಚೌಡಯ್ಯ ಕುಣಿದು ಹಾಡಿದರೆ ಏನಾಯ್ತು ?

" ಚೌಡಯ್ಯ ರೂಪಗಳ ಆಡಿಕುಣಿಯಲು ಲೋಕ
ನೋಡಿ ಶಿವಮತದ ಬೆಳೆ ಬಂತು | ಜಗವೆಲ್ಲ
ನೀಡಿ ಕಾಯಕಕೆ ಹಣಗೂಡಿ "[2]

ಶಿವನು ಬಂದು ಕೈಲಾಸಕ್ಕೆ ಚೌಡಯ್ಯನನ್ನು ಕರೆಯುತ್ತಾನೆ, ಕೊಡೆ ಹಿಡಿಯುತ್ತೇನೆ ಎನ್ನುತ್ತಾನೆ. ಆದರೆ ಚೌಡಯ್ಯ ಕೊಟ್ಟ ಉತ್ತರವೇನು ?

---

1 ಡಾ. ಹರಳಕಟ್ಟಿಯವರ ಶಿವಶರಣರ ಚರಿತ್ರೆ ಭಾಗ-೩-ಪುಟ-೧೪೭
2 ಡಾ. ಗದ್ದಿಗಿಮಠರ ಜಾನಪದ ಗೀತೆಗಳು ಪುಟ-೨೪೭

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಬೇಡೆನಗೆ ಕೈಲಾಸ, ನೀಡೆನಗೆ ಶಿವಭಕ್ತಿ
ಮಾಡುವೆನು ಸೇವೆ ಶಿವಮತಕೆ ‖ ಶರಣರಿಗೆ
ನಾಡ ಕಾಯಕವೆ ಕೈಲಾಸ "[1]

ನಾಡ ಕಾಯಕವೆಂದರೆ ರಾಷ್ಟ್ರವನ್ನು ಬಲಗೊಳಿಸುವ ಕಾಯಕವೇ ಶರಣರಿಗೆ ಕೈಲಾಸ. ಜಾತಿಗಾರ ಕಲೆಯನ್ನು, ಡೊಂಬರಾಟವನ್ನು ರಾಷ್ಟ್ರವನ್ನು ಕಟ್ಟುವ ನಾಡಕಾಯಕವಾಗಿಸಿದ ಚೌಡಯ್ಯ.

ಚೌಡಯ್ಯ ವಚನ ರಚಿಸಿದ್ದಾನೆ. ಆತನ ಅಂಕಿತ : " ರೇಕಣ್ಣ ಪ್ರಿಯ ನಾಗಿನಾಥ. "

ಎಲ್ಲರಂತೆ ಚೌಡಯ್ಯ ಕಾಯಕದ ರೂಪಕದಿಂದ ಶರಣ ಧರ್ಮವನ್ನು, ತತ್ವಗಳನ್ನು ಲೋಕಕ್ಕೆ ಸಾರಿದ್ದಾನೆ.

ಚೌಡಯ್ಯ ಆಡಿದ ಆಟವೆಂತಹುದು ? ಆದರಿಂದ ಆತ ಕೊಟ್ಟ ಸಂದೇಶವೇನು ?

" ಮೆಟ್ಟದ ಹೆಜ್ಜೆಯ ಮೆಟ್ಟದೆ ಆಡಬೇಕು. "
" ಐವರು ಕಟ್ಟಿದ ಕಟ್ಟಳೆಯ ಮೀರಿ ನಾನಾಡುವೆ ಬಹುರೂಪವ. "
" ಷಡುಚಕ್ರವಳಯದಲ್ಲಿ ನಾನಾಡುವೆ ಬಹುರೂಪ."
" ಉರಿಯುಂಡ ಕರ್ಪೂರದಂತೆ ನಾನಾಡುವೆ ಬಹುರೂಪ." [2]

" ಎಂಬತ್ತು ನಾಲ್ಕು ಲಕ್ಷ ಬಹುರೂಪ
ಚಂದಚಂದದಲ್ಲಿ ಆಡಿ ಬಂಧುಗಳ ಮೆಚ್ಚಿಸಬಂದೆ.
ಅವರು ಬಹುರೂಪದಂದವನರಿಯರು
ರೇಕಣ್ಣ ಪ್ರಿಯ ನಾಗಿನಾಥನಲ್ಲಿ
ಬಹುರೂಪದಂದ ವಿಚ್ಛಂದವಾಯಿತ್ತು. "[3]

ಕಲಕೇತ ಬೊಮ್ಮಯ್ಯ

ಕೋಡಂಗಿಯಾಟವಾಡುವುದು, ಭೃಂಗಿ ಕುಣಿತ ಕುಣಿಯುವುದು–ಭಿಕ್ಷವೃತ್ತಿಗಳಲ್ಲಿ ಇವೆರಡು ಸೇರುತ್ತವೆ. ಇವುಗಳಿಗೆ ' ಕಲಕೇಡ ' ಎಂಬ ಹೆಸರಿತ್ತೆಂದು ತೋರುತ್ತದೆ, ಇದನ್ನು ಬೊಮ್ಮಯ್ಯ ಕಾಯಕವನ್ನಾಗಿ ಮಾಡಿಕೊಂಡಿದ್ದ.

ಕಲಕೇತ ಬೊಮ್ಮಯ್ಯ ಕಲ್ಯಾಣ ಪಟ್ಟಣದಲ್ಲಿ ಹುಟ್ಟಿಬೆಳೆದ. ಬಸವಾದಿ ಪ್ರಮಥರು ಕಟ್ಟಿದ ಅನುಭವ ಮಂಟಪದ ತತ್ವಜಿಜ್ಞಾಸೆಯಲ್ಲಿ ಬೊಮ್ಮಯ್ಯ ಭಾಗಿಯಾಗುತ್ತಿದ್ದ. ಶರಣರ್ತತ್ವಗಳನ್ನೂ ತನ್ನ ಕಾಯಕದ ಮೂಲಕ ಬಿತ್ತರಿಸುತ್ತಿದ್ದ.

ಆತನ ವೇಷ ಭೂಷಣ ಹೀಗಿತ್ತು :

ಮುಂದಲೆಯಲ್ಲಿ ಯಾವಾಗಲೂ ಅಲುಗಾಡುವ ಕೂದಲಿನ ಮುಡಿ, ಹಣೆಯಲ್ಲಿ ವಿಭೂತಿ, ಕಿವಿಯಲ್ಲಿ ಕೆಂದಳಿರು, ಕಾವಿಯ ಉಡುಪು, ಎಡದ ಅಡಿಯಲ್ಲಿ ಅಂದುಗೆ, ಬಲಪಾದದಲ್ಲಿ ಗೆಜ್ಜೆ. ದಕ್ಷನ ತಲೆಯ ಕೋಡಿನ ತೆರದಿ, ತಗರಿನ ಬಲಿದ ಕೊಂಬು ಎಡಗೈಯಲ್ಲಿ; ಬಲಗೈಯಲ್ಲಿ ಬಲವಾದ ಬೆತ್ತ.

ಕಾಲಂದುಗೆ, ಗೆಜ್ಜೆಗಳು ಘಿಲ್‌ಘಿಲ್ ಎಂಬ ಉಲಿಯುತ್ತಿರಲು, ಬಲಗೈಯ ಬೆತ್ತ ತಿರುಹುತ್ತ, ಕೋಡಗದಾಟವನಾಡುತ್ತ, ಭೃಂಗಿಯಂತೆ ಕುಣಿಯುತ್ತ, " ಧರಾರುದ್ರನಿಟಿಲಾಗ್ನಿಯ ಟಗರು ಬಂದ, " ಜಿನಧರ್ಮದ ವಿನಾಶಕ

1 ಡಾ. ಗದ್ದಿಗಿಮಠರ ಜಾನಪದ ಗೀತೆಗಳು–ಪುಟ–೨೯೩.
2 ಸರ್ವಪುರಾತರ ವಚನಗಳು ತಾಳವೋಲೆ ಕಟ್ಟು.
3 ,, ,,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಭದ್ರಮದಕರಿ ಬಂದ ", " ದುಗ್ಗಳವ್ವೆಯ ಮಗ ಬಂದ ", " ಸಂಗಳವ್ವನ ತಮ್ಮ ಬಂದ ", ಅಮ್ಮಗಳಿರಾ, ಅಕ್ಕಗಳಿರಾ " ಎನ್ನುತ್ತ, ಭಕ್ತರನ್ನು ನಗ್ಗಿಸುತ್ತ, ಆ ನಗೆಯಲ್ಲಿ ಶರಣರ ತತ್ವಗಳನ್ನು ಅರಳಿಸುತ್ತ ಮನೆ ಮನೆಗೆ ಹೋಗ್ಗುವನು. ಕಾಯಕದಿಂದ ಬಂದುದರಲ್ಲಿ ತೃಪ್ತನಾಗಿ ಗುರುಲಿಂಗ ಜಂಗಮರ ದಾಸೋಹ ಮಾಡುವನು.

ಕಲ್ಯಾಣದಲ್ಲಿ ಕಿನ್ನರಿ ಬೊಮ್ಮಯ್ಯ ಹೆಸರಾಂತ ಗಾಯಕನಾಗಿದ್ದ. ಆತನ ಭಕ್ತಿ, ಔದಾರ್ಯಗಳು ಮನೆ ಮಾತಾಗಿದ್ದುವು. ಬೇಡಿದವರಿಗೆ ಬೇಡಿದ್ದನ್ನಿತ್ತು ತೃಪ್ತಿಪಡಿಸುವಲ್ಲಿ ಆತ ಬಲ್ಲಿದ.

ಒಮ್ಮೆ ಹರಕೆಯ ಕುರಿಯ ಹಗರಣದಿಂದಾಗಿ ಆತನ ಕೋಪಕ್ಕೆ ಒಬ್ಬ ವಿಟ ಆಹುತಿಯಾಗುತ್ತಾನೆ. ಅರಸನ ಹತ್ತಿರ ದೂರು ಹೋಗುತ್ತದೆ. ಕಿನ್ನರಿ ಬೊಮ್ಮಯ್ಯನ ಮಾತಿಗೆ ಸಾಕ್ಷಿ ಬೇಕಾಗುತ್ತದೆ. ಆಗ ಸಾಕ್ಷಾತ್ ತ್ರಿಪುರಾಂತಕೇಶ್ವರನೇ ಬಂದು ಸಾಕ್ಷಿ ನುಡಿಯುತ್ತಾನೆ. ಆತನ ಹಿರಿಮೆಗೆ :

" ಜೋಡು ಕೈಗಳ ಮುಗಿದು ಹಾಡಿದರು ಜನರೆಲ್ಲ
ನಾಡೊಳಗೆ ಹಿರಿಯ ಶರಣನಡು-ಪಶುಪಕ್ಷಿ
ಕಾಡೊಳಗೆ ಹಾಡಿ ನಲಿದಾಡಿ "[1]

ಈ ಘಟನೆಯಿಂದ ಕಿನ್ನರಿ ಬೊಮ್ಮಯ್ಯನಲ್ಲಿ ಒಂದು ತೆರ ಹಮ್ಮು ಬೆಳೆಯಿತು. ಅದನ್ನು ನಿವಾರಿಸಿದ ಮಹಾತ್ಮ-ಕಲಕೇತ ಬೊಮ್ಮಯ್ಯ.

ಒಬ್ಬ ಬಡವ ಕಿನ್ನರಿ ಬೊಮ್ಮಯ್ಯನಲ್ಲಿಗೆ ಬೇಡಲು ಹೋಗುತ್ತಿರುವುದನ್ನು ಕಂಡು, ಕಲಕೇತಯ್ಯ, " ಆತನೇನು ಕೊಟ್ಟಾನು ? ನಾನು ಕೊಡುವೆ, ತೆಗೆದುಕೋ " ಎಂದು ತನ್ನ ಕೈಯಲ್ಲಿಯ ಕೊಂಬಿನಿಂದ ಹೊನ್ನಿನ ಮಳೆಗರೆದನು. ಅಷ್ಟು ಹೊನ್ನು ಒಯ್ಯಲು ಬಡವನಿಗಾಗಲಿಲ್ಲ. ಆದುದರಿಂದ ಅವನು ಆ ಹೊನ್ನನ್ನೂ ಹೊತ್ತೊಯ್ಯಲು ಸೇವಕರನ್ನು ಕಳಿಸಬೇಕೆಂದು ಬಸವಣ್ಣನವರನ್ನು ಕೇಳಿದನು. ಈ ಸುದ್ದಿ ಕೇಳಿ ಕಿನ್ನರಯ್ಯ ನಾಚಿದ; ಕಲಕೇತಯ್ಯನ ಹತ್ತಿರ ಬಂದು ಆತನ ಅಡಿಗೆರಗಿದ.

ಕಲಕೇತ ಬೊಮ್ಮಯ್ಯ ವಚನ ರಚನೆಯಿಂದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾನೆ. ಆತನ ಅಂಕಿತ : " ಮೇಖಲೇಶ್ವರಲಿಂಗ ".

ತನ್ನ ಕಾಯಕದ ಹೊಲಬನ್ನು ಕಲಕೇತ ಬೊಮ್ಮಯ್ಯ ಕೆಳಗಿನ ವಚನದಲ್ಲಿ ಸೊಗಸಾಗಿ ಹೇಳಿದ್ದಾನೆ :

" ಜಗಕ್ಕಹುದಾದುದನಿತ್ತು
ಜಗಕ್ಕಲ್ಲವಾದುದ ತೊಟ್ಟು
ಜಗ ಹಿಡಿದುದು ಬಿಟ್ಟು
ಜಗ ಒಲ್ಲದುದ ತೊಟ್ಟು
ತಾನರಿದುದ ಮರೆದು, ಆ ಮರವೆಗೊಡಲಾದುದ ಮರೆದು
ಉಭಯದ ಕೋಡ ಕಿತ್ತು
ನಲಿದೊಲವಿನ ಕೊಂಬಿನ ಸಿರಿಗೆಯಲ್ಲಿ ಒಲಿದಾಡುವೀ
ಜಗಭಂಡರಂಗಣದಲ್ಲಿ ತುಳಿದಾಡುತ್ತಲಿರಬೇಕು
ಮೇಖಲೇಶ್ವರಲಿಂಗವನೊಡಗೂಡುತ್ತಲಿರಬೇಕು. "[2]

1 ಡಾ. ಗದ್ದಿಗಿಮಠರ ಕನ್ನಡ ಜಾನಪದ ಗೀತೆಗಳು ಪುಟ ೨೬೦.
2 ಡಾ. ಹಳಕಟ್ಟಿಯವರ ಶಿವಶರಣರ ಚರಿತ್ರೆಗಳು ಭಾಗ ೧ ಪುಟ ೨೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಯಸಿ ಬೇಡಿ ಕಾಯಕ ಮಾಡಬಾರದೆಂದು, ಪ್ರತಿಫಲ ದೊರಕದಿದ್ದರೆ ನಿಂದಿಸಬಾರದೆಂದು ಕಲಕೇತಯ್ಯ ಹೇಳುತ್ತಾನೆ :

" ಬೇಡಲೇತಕ್ಕೆ ಕಾಯಕವ ಮಾಡಿಹನೆಂದು ?
ಕೊಡದೊಡೆ ಒಡಗೂಡಿ ಒಯ್ಯಲೇತಕ್ಕೆ ? "[3]

ಕಂಕರೀ ಕಕ್ಕಯ್ಯ :

' ಕಂಕರೀ '—ಅದೊಂದು ಚೌಡಿಕೆಯಂಥ ವಾದ್ಯ. ಚೌಡಿಕಿಯವರು, ಜೋಗಿತಿಯರು ಕನ್ನಡ ನಾಡಿಗೆ ಪರಿಚಿತರು. ಚೌಡಿಕಿ ಬಾರಿಸಿ, ಹಾಡಿ, ಕುಣಿದು ಭಿಕ್ಷೆ ಎತ್ತುವರು ಇವರು. ಹೆಚ್ಚಾಗಿ ಇವರೆಲ್ಲ ಎಲ್ಲಮ್ಮನ ಭಕ್ತರು.

ಬಸವಣ್ಣನವರ ಕಾಲದಲ್ಲಿ ಕಲ್ಯಾಣದಲ್ಲಿ ಕಕ್ಕಯ್ಯನೆಂಬ ಶರಣನಿದ್ದ. ಆತ ಕಂಕರೀ (ಚೌಡಿಕಿ) ಬಾರಿಸಿ, ಕುಣಿದು, ಶರಣರ ತತ್ವಗಳನ್ನು ಜನರ ಜೀವನದಲ್ಲಿ ಬಿತ್ತುವ ಕಾಯಕ ಕೈಗೊಂಡಿದ್ದ. ಚೌಡಿಕಿ ಬಾರಿಸಿ ಕುಣಿದು ಭಿಕ್ಷೆ ಬೇಡುವ ಕೀಳು ವೃತ್ತಿ ಕಕ್ಕಯ್ಯನಿಂದ ಕಾಯಕದ ಮಟ್ಟಕ್ಕೇರಿತು.

ಒಮ್ಮೆ ಶಿವನಿಗೆ ಕಕ್ಕಯ್ಯನನ್ನು ಪರೀಕ್ಷಿಸುವ ಮನಸ್ಸಾಯಿತು. ನೆರೆ ಜಂಗಮರೂಪು ಧರಿಸಿ ಶಿವ ಧರೆಗಿಳಿದ. ಓಣಿಯೊಂದರಲ್ಲಿ ಕಕ್ಕಯ್ಯ ಕಂಕರೀ ನುಡಿಸುತ್ತ ಹಾಡುತ್ತಿದ್ದ. ಅಲ್ಲಿಗೆ ಜಂಗಮರೂಪಿ ಶಿವ ಬಂದ. ಕಂಕರಿಯ ನಾದಕ್ಕೆ ಮಾರುಹೋಗಿ ಕುಣಿಯತೊಡಗಿದ. ಆ ಜಂಗಮ ಕುಣಿಯುವದನ್ನು ನೋಡಿ ಕಕ್ಕಯ್ಯ ಇನ್ನಷ್ಟು ಸೊಗಸಾಗಿ ಬಾರಿಸ ತೊಡಗಿದ. ಅದಕ್ಕೆ ತಕ್ಕಂತೆ ಶಿವ ಇನ್ನಷ್ಟು ಸೊಗಸಾಗಿ ಕುಣಿಯತೊಡಗಿದ. ಅವರಿಬ್ಬರಲ್ಲಿ ಸ್ಪರ್ಧೆಗೆ ಮೊದಲಾಯಿತು. ಕಂಕರಿಯ ಧ್ವನಿ ಮೇಲುಗೈಯಾಗುವಷ್ಟರಲ್ಲಿ ಶಿವ ವಿನೂತನ ಗತಿಯಿಂದ ನಾಂಟ್ಯವಾಡುತ್ತಿದ್ದ. ಶಿವನ ನಾಂಟ್ಯ (ನಾಟ್ಯ) ಮೇಲಾಗುವುದೇನೋ ಎನ್ನುವಷ್ಟರಲ್ಲಿ ಕಂಕರಿಯ ನಾದಮಾಧುರ್ಯ ವಾತಾವರಣಕ್ಕೆ ಜೋಮು ಹಿಡಿಸುತ್ತಿತ್ತು."

ಹೀಗೆ ಅವರಿಬ್ಬರು ಮೂರು ದಿನ ಹಗಲು-ರಾತ್ರಿ ಸ್ಪರ್ಧೆ ನಡೆಸಿದರು. ಕೊನೆಗೆ ಶಿವನೇ ಸೋತು ಕುಣಿಯ ಲಾರದೆ ನೆಲಕ್ಕೊರಗಿದ. ಆಗ ಕಕ್ಕಯ್ಯ "ಇನ್ನೂ ಕುಣಿಯ ಬಾ" ಎಂದು ಆತನನ್ನು ಹಿಡಿದು ಎಬ್ಬಿಸಹೋದ, ಮೈಯಲ್ಲಿ ಮಿಂಚು ಹರಿದಾಡಿತು.

ಶಿವನು ತನ್ನ ನಿಜರೂಪವನ್ನು ತೋರಿಸಿದ. ಕಕ್ಕಯ್ಯನ ಭಕ್ತಿಗೆ, ಆತನ ಕಂಕರೀ ವಾದನೆಗೆ ಮೆಚ್ಚಿದ.

" ಕಕ್ಕಯ್ಯ, ಈ ಭವದ ಬಾಳು ಸಾಕು, ನಡೆ ಕೈಲಾಸಕ್ಕೆ " ಎಂದ ಶಿವ.

" ಶಿವನೇ ಕೈಲಾಸಕ್ಕಿಂತಲೂ ನಾನು ಬರುವದಿಲ್ಲ. ಇಲ್ಲಿಗುವ ಸುಖ ಅಲ್ಲೆಲ್ಲಿದೆ ? ಇರಲಿ, ಈಗ ನೀನು ನನ್ನ ಕಾಯಕ (ಪ್ರತಿಫಲ) ಕೊಡು; ಮೂರು ದಿನಗಳಿಂದ ನನ್ನ ದಾಸೋಹ ನಿಂತಿದೆ, " ಎಂದ ಕಕ್ಕಯ್ಯ.

" ನಾನು ಮೂರುದಿನ ಕುಣಿದೆ, ನಿಜವಾಗಿ ನೋಡಿದರೆ ನೀನೇ ನನಗೆ ಕಾಯಕ ಕೊಡಬೇಕು," ಶಿವ ಉತರವಿತ್ತ.

ಕಕ್ಕಯ್ಯ ನುಡಿದ :

" ಶಿವನೇ, ನಿನ್ನ ಮಾತನ್ನು ಕೇಳಿ ಶರಣರು ನಗುವರು. "

" ಏಕೆ ? "

" ನಿನಗೆ ಕಾಯಕ ಹೇಗೆ ಸಿಕ್ಕುವದು ? "

" ಏಕೆ ಸಿಕ್ಕಬಾರದು ? "

" ಕಾಯಕ ಸಿಕ್ಕುವುದು ಕೇವಲ ಈ ಭೂಮಿಯಲ್ಲಿ ವಾಸಿಸುವವರಿಗೆ ಮಾತ್ರ. ದೇವಲೋಕದವರಿಗೆ ಎಂದೂ ಕಾಯಕ ಸಿಕ್ಕುವದಿಲ್ಲ. ಏಕೆಂದರೆ ಅವರೆಲ್ಲ ಸೋಮಾರಿಗಳು, ದುಡಿದವರಿಗೆ ತಕ್ಕ ಪ್ರತಿಫಲ. ನೀನು, ನಿನ್ನ ಗಣಗಳು

1 ಡಾ. ಹಳಕಟ್ಟಿಯವರ ಶಿವಶರಣರ ಚರಿತ್ರೆ ಭಾ-೩-ಪುಟ-೧೪೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ದುಡಿದಿದ್ದೀರಿ? ಎಲ್ಲಿ ದುಡಿದಿದ್ದೀರಿ? ತೋರಿಸು. ನೀನೀಗ ಕಾಯಕವೆಂಬ ಪ್ರವಿತ್ರಭಾವನೆಯಿಂದ ಕುಣಿಯಲಿಲ್ಲ, ನನ್ನನ್ನು ಪರೀಕ್ಷಿಸಲು ಕುಣಿದೆ. ಹೀಗಿರಲು ನಿನಗೆ ಪ್ರತಿಫಲವೇಕೆ ? ಕಾಯಕ ತೆಗೆದುಕೊಂಡು ನೀನು ಯಾರಿಗಾಗಿ ದಾಸೋಹ ಮಾಡುವೆ, ನಿನಗೆ ಕಾಯಕವೇ ಬೇಕಾಗಿದ್ದರೆ—ಈ ಭೂಮಿಯಲ್ಲಿ ವಾಸುಮಾಡು; ನಮ್ಮೊಡನೆ ಒಂದಾಗಿರು; ಸತ್ಯಶುದ್ಧನಾಗಿ ದುಡಿ. ಆಗ ನಿನಗೆ ಕಾಯಕದ ಫಲ ದೊರಕುವುದು, ಹೊತ್ತಾಯಿತು; ದಾಸೋಹ ನಿಂತಿದೆ, ನನ್ನ ಕಾಯಕಕ್ಕೆ ಸಲ್ಲಬೇಕಾದುದನ್ನು ಬೇಗ ಕೊಡು. " ಎಂದ ಕಕ್ಕಯ್ಯ.

ಶಿವ ಆತನಿಗೆ ಕಾಯಕ ಕೊಟ್ಟು ಕೈಲಾಸಕ್ಕೆ ಹೋದ. ಕಕ್ಕಯ್ಯ ದಾಸೋಹ ನಡೆಸಲು ಮನೆಗೆ ಹೋದ.

ಈ ಪವಾಡ ಏನೇ ಇರಲಿ, ಇಲ್ಲಿರುವ ತತ್ವಮಾತ್ರ ವಿನೂತನ. ಲೋಕ ಕಲ್ಯಾಣಕಾರಕ; ಆಪ್ಯಾಯನಕರ. ಈ ಭೂಮಿ, ಈ ಸಂಸಾರ, ಈ ಬಾಳಿನ ಬಗ್ಗೆ ಪ್ರೀತಿ, ಗೌರವಗಳು ಬೇಕು. ಅವಿಲ್ಲದಿದ್ದರೆ ಮನುಜ ಬಾಳು ದುರ್ಧರ ವಾಗುವುದು. ಬಾಳನ್ನೂ, ಭೂಮಿಯನ್ನೂ ಪ್ರೀತಿಸಿ ಗೌರವಿಸಲು ಶರಣರು ಜನರಿಗೆ ತಮ್ಮ ನಡೆ–ನುಡಿಯಿಂದ ಕಲಿಸಿ ಕೊಟ್ಟರೆಂಬುದು ಈ ಘಟನೆ ಸಾರಿಹೇಳುತ್ತದೆ. ಶಿವನಾದರೇನು ? ಯಾರಾದರೇನು ? ದುಡಿಯಬೇಕು. ದುಡಿದವ ನಿಗೆ ಪ್ರತಿಫಲ. ಎಂಬ ನೀತಿ ಆರ್ಥಿಕ ವಿಷಮತೆಗೆ ಸರಿಯಾದ ಮದ್ದಾಗಿದೆ,

ವೀರದೇವಮ್ಮ, ಸಿದ್ಧದೇವಮ್ಮ, ಶಿವಮಾಯಿದೇವಿ :

ಈ ಶಿವಶರಣೆಯರು ಶಿವಾನುಭವ ತತ್ವಗಳನ್ನು ಚೆನ್ನಾಗಿ ತಿಳಿದಿದ್ದರು; ಅವುಗಳನ್ನು ತಮ್ಮ ಕಾಯಕಗಳಿಂದ ಪ್ರಸಾರಗೊಳಿಸುತ್ತಿದ್ದರು. ಇವರು ಬಸವಣ್ಣನವರ ಸಮಕಾಲೀನರು, ಕಲ್ಯಾಣ ಪಟ್ಟಣದಲ್ಲಿಯೇ ಹುಟ್ಟಿ ಬೆಳೆದವರು.

ವೀರದೇವಮ್ಮ ಶರಣರ ವಚನಗಳನ್ನು ಭಾವಪೂರ್ಣವಾಗಿ ಓದುವುದರಲ್ಲಿ, ಹಾಡುವುದರಲ್ಲಿ ಪ್ರವೀಣೆ. ಆಕೆ ಮನೆಮನೆಗೆ ಹೋಗಿ ವಚನಗಳನ್ನು ಕೇಳುವವರ ಹೃದಯಗಳಿಗೆ ಅರ್ಥವೇದ್ಯವಾಗುವಂತೆ ಉಗ್ಗಟಿಸುತ್ತಿದ್ದಳು. ಆಕೆಗೆ " ಉಗ್ಗಡಿಸುವ ಕನ್ಯೆ ವೀರಾದೇವಿ " ಎಂದು ಜನ ಕರೆಯುತ್ತಿದ್ದರು.

ಪದ್ಯಗಳನ್ನು ಹಾಡಿ ಮನೆಮನೆ ತಿರುಗಿ ಭಿಕ್ಷೆ ಬೇಡುವ ವೃತ್ತಿಗಳು ಹಲವಿವೆ. ಅಂಥ ವೃತ್ತಿಯನ್ನು ವೀರದೇವಮ್ಮ ಕಾಯಕವನ್ನಾಗಿ ಆರಿಸಿಕೊಂಡಿದ್ದಳು; ಈ ಪದ್ಯಗಳ ಹಾಡುಗಾರಿಕೆ ಮೋಹಕವಾಗಿರುತ್ತದೆ.

ಸಿದ್ಧದೇವಮ್ಮ ಜನಪದ ನಾಟ್ಯದಲ್ಲಿ ಪ್ರವೀಣೆ. ಈ ನಾಟ್ಯಕಲೆಯ ಕಾಯಕದಿಂದ ಅವಳು ಪ್ರಮಥರ ಸಂದೇಶವನ್ನು ನಾಡವರ ಅಂತಃಕರಣಕ್ಕೆ ಮುಟ್ಟಿಸುತ್ತಿದ್ದಳು

ಡೊಂಬರು, ಜಾತಿಗಾರರು, ಭೃಂಗಿಯಪರು ಕುಣಿಯುವುದೇ ಜನಪದ ನಾಟ್ಯ. ಇದನ್ನು ಕಾಯಕವನ್ನಾಗಿಸಿ ದೇವತ್ವದ ಮಟ್ಟಕ್ಕೇರಿಸಿದಳು ಸಿದ್ಧದೇವಮ್ಮ..

ಶಿವಮಾಯಿದೇವಿ ಪುರಾಣ ಮತ್ತು ಕಥೆ ಹೇಳುವದರಲ್ಲಿ ಜಾಣೆ. ಜನಪದ ಕಥೆಗಾರರು, 'ತಂದಾನತಾನ' ದವರು ಕನ್ನಡನಾಡಿನಲ್ಲಿ ಹೆಸರಾದವರು. ಇವರ ಈ ವೃತ್ತಿಯೂ ಹೊಟ್ಟೆಯ ಪಾಡಿಗಾಗಿಯೇ ಇದ್ದುದು. ಈ ವೃತ್ತಿಯು ಶಿವಮಾಯಿದೇವಿಯಿಂದ ಕಾಯಕದ ಪಟ್ಟ ಪಡೆಯಿತು. ಈ ಕಾಯಕದಿಂದ ಶರಣೆ ಶಿವಮಾಯಿ ಶರಣರ ಚರಿತ್ರೆಗಳನ್ನು ಮನನಂಬುಗುವಂತೆ ಹೇಳಿ ಜನರ ನಡೆ–ನುಡಿಗಳನ್ನು ತಿದ್ದುತ್ತಿದ್ದಳು; ಹೊಸ ಬೆಳಕನ್ನು ನೀಡುತ್ತಿದ್ದಳು.

ಸಂಗೀತ, ನೃತ್ಯ, ನಾಟಕ ಮುಂತಾದ ಲಲಿತ ಕಲೆಗಳ ಜೊತೆಗೆ, ಡೊಂಬರಾಟ, ಬಯಲಾಟ, ಜಾತಿಗರಾಟ, ಕಿಳ್ಳಿಕ್ಯಾತರ ಆಟ, ಭೃಂಗಿಕುಣಿತ, ಕೋಡಂಗಿಯಾಟ, ದುರುಗಿಮುರುಗಿ, ಚಾಡಿಕೆ ಬಾರಿಸುವುದು, ಕಥೆ ಹೇಳುವುದು. ಮುಂತಾದ ಜನಪದ ಕಲೆಗಳಿಗೂ, ಕಾಯಕದ ದೀಕ್ಷೆಕೊಟ್ಟರು; ಅವುಗಳನ್ನು ಶಿವಪೂಜೆಯ ಮಟ್ಟಕ್ಕೇರಿಸಿದರು. ಅವುಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಖಾಂತರ ಸಕಲಜೀವರ ಲೇಸ ಬಯಸಿದ ಶರಣರ ತತ್ವಗಳನ್ನು ಜನರ ಬಾಳಿನಲ್ಲಿ ಬಿತ್ತಿ ಬೆಳೆದರು. ಇದರಿಂದ ಅಜ್ಞಾನದ ಕತ್ತಲೆಗೆ ಬೆಳಕಿನಲ್ಲಿ ಪರಿವರ್ತನೆಯಾಗುವ ಭಾಗ್ಯ ದೊರಕಿತು.

ಸಹಾಯಕ ಗ್ರಂಥಗಳು

೧. ಶ್ರೀಬಸವಣ್ಣನವರು : ಷಟ್‌ಸ್ಥಳದ ವಚನಗಳು (ಪ್ರೊ. ಬಸವನಾಳ ಸಂಪಾದಿತ)
೨. ಹರಿಹರ : ಹರಿಹರನ ರಗಳೆಗಳು : (ಡಾ. ಹಳಕಟ್ಟಿ ಸಂಪಾದಿತ ಸಮಾಜ ಪುಸ್ತಕಾಲಯ ಪ್ರಕಟನೆ)
೩. ಡಾ. ಫ. ಗು. ಹಳಕಟ್ಟಿ : ಶಿವಶರಣರ ಚರಿತ್ರೆಗಳು ಭಾಗ ೧
೪. ಡಾ. ಫ. ಗು. ಹಳಕಟ್ಟಿ : ಶಿವಶರಣರ ಚರಿತ್ರೆಗಳು ಭಾಗ ೨
೫. ಡಾ. ಫ. ಗು. ಹಳಕಟ್ಟಿ : ಶಿವಶರಣೆಯರ ಚರಿತ್ರೆಗಳು
೬. ಶಾಂತಲಿಂಗ ದೇಶಿಕ : ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಭಾಗ ೧ ಮತ್ತು ೨ (ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ ಸಂಪಾದಿತ)
೭. ಡಾ. ಗದ್ದಿಗಿಮಠ : ಕನ್ನಡದ ಜಾನಪದ ಗೀತೆಗಳು
೮. ಡಾ. ಎಲ್. ಬಸವರಾಜು : ಶಿವದಾಸ ಗೀತಾಂಜಲಿ
೯. ಶ್ರೀ. ಸಿದ್ದಯ್ಯ ಪುರಾಣಿಕ : ಶರಣ ಚರಿತಾಮೃತ
೧೦. ಸರ್ವಪುರಾತನರ ವಚನಗಳು (ತಾಳೆವೋಲೆ ಗ್ರಂಥ)

ಲೇಖಕರು : ಶಾಂತರಸ ಕಾಯಚೂರು.

“ ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್‌ಭಕ್ತಂಗೆ ಎತ್ತನೋಡಿದಡತ್ತ ಲಕ್ಷ್ಮಿತಾನಾಗಿಪ್ಪಳು
ಮಾದಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ”

“ ಸೋಹಂ ಎಂದಡೆ ಅಂತರಂಗದ ಗರ್ವ
ಶಿವೋಹಂ ಎಂದಡೆ ಬಹಿರಂಗದ ಅಹಂಕಾರ
ಈ ಉಭಯವನಳಿದು ದಾಸೋಹಂಭಾವವನೆ
ಕರುಣಿಸಿ ಬದುಕಿಸಯ್ಯ ಅಖಂಡೇಶ್ವರಾ !

— ಬಸವಣ್ಣನವರು.

ತನ್ನಮುಟ್ಟಿ ನೀಡಿದುದೇ ಪ್ರಸಾದ;
ತನ್ನಮುಟ್ಟದೆ ನೀಡಿದುದೇ ಓಗರ.
ಲಿಂಗಕ್ಕೆ ಕೊಟ್ಟು ಕೊಂಡಡೆ ಪ್ರಸಾದಿ.

— ಪ್ರಭುದೇವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಶರಣರೂ ಸಹಕಾರ ತತ್ವವೂ

ಅನಾದಿಕಾಲದಿಂದಲೂ ಸಹಕಾರ ತತ್ವವು ಸಮಾಜದಲ್ಲಿ ಹೇಗೆ ಓತಪ್ರೋತವಾಗಿ ಹೆಣೆದುಕೊಂಡೇ ಬಂದಿದೆ ಮತ್ತು ಶರಣರು ಹೇಗೆ ಆ ಸಹಕಾರತತ್ವವನ್ನು ಮತ್ತಷ್ಟು ಬಂಧುರಗೊಳಿಸಿದರು ಎಂಬುದನ್ನು ಕುರಿತ ಪದ್ಮಶ್ರೀಗಳ ಸರಳ ನಿರೂಪಣೆ.

ಮಾನವ ಸೃಷ್ಟಿಯಲ್ಲಿ ಕೆಲವು ನಿಗೂಢವಾದ ತತ್ತ್ವಗಳಿವೆ. ಅವನ್ನು ನಿಸರ್ಗದ ನಿಯಮ
(Natural Law) ಎಂದು ಹೇಳುತ್ತಾರೆ.

ಮನುಷ್ಯನೇ ಆಗಲಿ, ಪ್ರಾಣಿಗಳೇ ಆಗಲಿ, ಅವು ಅಭಿವೃದ್ಧಿಯನ್ನು ಹೊಂದಬೇಕಾದರೆ, ಹಾಗೂ ಸುಖ
ಸಂಪತ್ತಿನಿಂದ ಬಾಳಬೇಕಾದರೆ ತಾವು ಒಬ್ಬರಿಗೊಬ್ಬರು ಕೂಡಿ ಬಾಳುವ ಪರಸ್ಪರ ನೆರವಾಗಿ ಜೀವಿಸುವ ಸಹಕಾರ
ಜೀವನ ಅಥವಾ ಒಕ್ಕೂಟದ ಬಾಳುವೆಯನ್ನು ಅಳವಡಿಸಿಕೊಳ್ಳಬೇಕು. ಪ್ರಾಣಿಗಳು ಅಥವಾ ಮನುಷ್ಯರು ಹೀಗಿರ
ಬೇಕೆಂಬುದೇ ಈಶ್ವರನ ಸಂಕಲ್ಪವೆಂದು ತೋರುತ್ತದೆ. ನಮ್ಮ ಲೋಕಾನುಭವದಲ್ಲಿ ಕಾಗೆ, ಕೋಳಿ, ಕುರಿ, ಮೇಕೆ,
ಇರುವೆ, ದುಂಬಿ, ಜಿಂಕೆ, ಆನೆ ಮೊದಲಾದ ಪ್ರಾಣಿಗಳೂ ಪಕ್ಷಿಗಳೂ ತಮ್ಮ ಸುಖದುಃಖಗಳ ಕಾಲದಲ್ಲಿ ಒಟ್ಟಿಗೆ ಕೂಡುವು
ದನ್ನು ನಾವು ನೋಡಿದ್ದೇವೆ. ಎಂಜಲು ಅನ್ನವನ್ನು ಕಂಡಾಗ ಕಾಗೆ ತನ್ನ ಬಳಗವನ್ನೆಲ್ಲಾ ಕೂಡಿಕೊಂಡು ತಿನ್ನುತ್ತವೆ.
ಕೋಳಿ ಗುಟುಕುಕಾಳನ್ನು ಕಂಡಾಗ ತನ್ನ ಕುಲವನ್ನೆಲ್ಲಾ ಕರೆದುಕೊಂಡು ಸೇವಿಸುತ್ತದೆ. ಕೋಳಿ ಗುಟುಕುಕಾಳನ್ನು
ಕಂಡಾಗ ತನ್ನ ಕುಲವನ್ನೆಲ್ಲಾ ಕರೆದುಕೊಂಡು ಸೇವಿಸುತ್ತದೆ. ಒಂದು ಕೋತಿಯನ್ನು ಯಾರಾದರೂ ಹೊಡೆದರೆ ಕೋತಿ
ಗಳ ಗುಂಪೆಲ್ಲಾ ಅದಕ್ಕೆ ನೆರವಾಗುತ್ತದೆ. ಆನೆ, ಜಿಂಕೆ, ಕುರಿ, ಮೇಕೆ ಮುಂತಾದ ಪ್ರಾಣಿಗಳೂ ಕೂಡಿ ಬಾಳುವುದ
ರಲ್ಲಿಯೇ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತವೆ. ಇರುವೆ ಮತ್ತು ಜೇನು ನೊಣಗಳಲ್ಲಿ ಕೂಡ ಶಿಸ್ತು ಮತ್ತು ಸಂಘ ಜೀವನ
ವನ್ನು ಕಾಣುತ್ತೇವೆ. ಈ ನಿದರ್ಶನದಿಂದ ಕೂಡಿಬಾಳುವುದು ಪ್ರಾಣಿಗಳ ನಿಸರ್ಗವಾದ ಗುಣವೆಂದು ನಾವು ಸುಲಭ
ವಾಗಿ ಅರ್ಥಮಾಡಿಕೊಳ್ಳಬಹದು. ಆದ್ದರಿಂದ ಸಹಕಾರ ಜೀವನವು ಮನುಷ್ಯನಿಗೆ ಕೂಡ ಅಗತ್ಯ ಮತ್ತು ಅನಿವಾರ್ಯ
ವೆಂದು ತಿಳಿಯುತ್ತದೆ.

ಮನುಷ್ಯನು ಯಾವ ದೃಷ್ಟಿಯಿಂದ ನೋಡಿದರೂ ಪರಸ್ಪರಾವಲಂಬಿ. ಮಗು ಹುಟ್ಟುವಾಗ ಸೂಲಗಿತ್ತಿಯ
ಸಹಕಾರ ಬೇಕು. ಬೆಳೆದು ದೊಡ್ಡವನಾಗಲು ಪರಸ್ಪರ ಪತಿ-ಪತ್ನಿಯ ನೆರವು ಬೇಕು. ರೋಗಿಯಾದಾಗ ವೈದ್ಯರ
ಹಾಗೂ ದಾದಿಯರ ಸಹಕಾರ ಬೇಕು. ವಿದ್ಯಾಭ್ಯಾಸಕ್ಕೆ ಗುರುವಿನ ಸಹಾಯ ಬೇಕು. ಕಡೆಗೆ ಮರಣಾನಂತರವಾದರೂ
ಸಮಾಧಿಕ್ರಿಯೆಗೆ ನಾಲ್ಕಾರು ಜನರ ಸಹಕಾರ ಬೇಕಾಗುತ್ತದೆ. ಆದುದರಿಂದ ಲೋಕದಲ್ಲಿ ಸುಖವಾಗಿ ಬಾಳಬೇಕೆಂಬ
ಮನುಷ್ಯನು ಸಮಾಜ ಅಥವಾ ಜನಾಂಗದ ಈ ಸಹಕಾರ ತತ್ವದ ಗೊತ್ತು ಗುರಿಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.
ಲೋಕ ಜೀವನದಲ್ಲಿ ಬಹಳವಾಗಿ ಮುಂದುವರಿದಿರುವ ಪಾಶ್ಚಾತ್ಯರು ತಮ್ಮ ಪ್ರತಿಯೊಂದು ಕಾರ್ಯಕಲಾಪಗಳನ್ನೂ
ಸಹಕಾರ ದೃಷ್ಟಿಯಿಂದಲೇ ಮಾಡುತ್ತಾ ಸಂಘ-ಶಕ್ತಿ ಬಲದಿಂದಲೇ ಮುದುವರಿಯುತ್ತಾರೆ. ಈ ಸಹಕಾರ ಜೀವನವನ್ನು
ಚೆನ್ನಾಗಿ ತಿಳಿದು ಆಚರಿಸದೆ ಇರುವುದರಿಂದಲೇ ಭಾರತೀಯರಾದ ನಾವು ಹಲವು ಕ್ಷೇತ್ರಗಳಲ್ಲಿ ಹಿಂದೆ ಬೀಳುತ್ತಿದ್ದೇವೆ.
ಮನುಷ್ಯನು ಸುಖವಾಗಿ ಜೀವಿಸಲು ಅವನಿಗೆ ಒಂದು ಗ್ರಾಮ್ರ ಅಥವಾ ಒಂದು ಪಟ್ಟಣ, ಒಂದು ರಾಜ್ಯ ಮತ್ತು
ಒಂದು ರಾಷ್ಟ್ರ ಇವುಗಳ ಅಗತ್ಯ. ತನ್ನ ಗ್ರಾಮ ಸುಖವಾಗಿದ್ದರೆ ತಾನೂ ಸುಖವಾಗಿರುತ್ತಾನೆ. ಆ ಗ್ರಾಮದಲ್ಲಿ
ಒಂದು ರೋಗ ಅಥವಾ ಒಂದು ಪಿಡುಗು ಬಂದರೆ ಅವನೂ ಅದನ್ನು ಅನುಭವಿಸಬೇಕು. ತಮ್ಮ ಗ್ರಾಮ ಸುಖವಾಗಿ
ದ್ದರೆ ರಾಜ್ಯ ಸುಖವಾಗಿರುತ್ತದೆ. ತಮ್ಮ ರಾಜ್ಯದಲ್ಲಿ ಆಹಾರಾಭಾವ ಮೊದಲಾದ ಕಷ್ಟಗಳು ಬಂದರೆ ಅದರ ಪರಿಣಾಮ
ತಮ್ಮ ಗ್ರಾಮದ ಮೇಲೆಯೂ ಬರುತ್ತದೆ. ನಮ್ಮ ರಾಷ್ಟ್ರ ಸುಖವಾಗಿದ್ದರೆ ನಮ್ಮ ರಾಜ್ಯ ಸುಖವಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಾಹರಣೆಗೆ : ಭಾರತದ ಮೇಲೆ ಶತ್ರು ರಾಷ್ಟ್ರಗಳಾದ ಚೀಣ ಮತ್ತು ಪಕ್ಕದ ಪಾಕಿಸ್ಥಾನ ಯುದ್ಧ ಹೂಡಿದಾಗ ನಮ್ಮ ರಾಜ್ಯ, ಗ್ರಾಮ ಎಲ್ಲವುಗಳ ಮೇಲೆ ಆದರ ಪರಿಣಾಮ ಉಂಟಾಯಿತು ಎಂಬುದು ನಮ್ಮ ಅನುಭವಕ್ಕೆ ಬಂದಿದೆ. ಆದುದರಿಂದ ಜನರು ಪರಸ್ಪರ ಸಹಕಾರದಿಂದ ಎಲ್ಲರ ಹಿತವನ್ನೂ ಗಮನದಲ್ಲಿಟ್ಟುಕೊಂಡು ನಡೆದ ಹೊರತು ಗ್ರಾಮ, ಪಟ್ಟಣ, ರಾಜ್ಯ ಮತ್ತು ರಾಷ್ಟ್ರಗಳು ಎಲ್ಲವೂ ಸುಖವಾಗಿರಲಾರವು.

ಮನುಷ್ಯನ ಉಪಜೀವನಕ್ಕೆ ಹಲವು ಬಗೆಯ ಸಾಧನಗಳು ಬೇಕಾಗುತ್ತವೆ. ಅನ್ನ, ಬಟ್ಟೆ, ದೀಪ, ನೀರು ಮೊದಲಾದವುಗಳೆಲ್ಲಾ ನಮಗೆ ನಿತ್ಯದ ಉಪಭೋಗ ವಸ್ತುಗಳು. ಅನ್ನ ಬೇಕಾದರೆ ವ್ಯವಸಾಯ ಮಾಡಬೇಕು. ಬಟ್ಟೆ ಬೇಕಾದರೆ ಕೈಗಾರಿಕೆ ನಡೆಯಬೇಕು. ಮಗ್ಗದವರು ಶ್ರಮಿಸಬೇಕು. ನೀರು ಬೇಕಾದರೆ ಬಾವಿ, ಕೆರೆ ನಿರ್ಮಿಸಬೇಕು. ದೀಪ ಬೇಕಾದರೆ ಎಣ್ಣೆ ಬತ್ತಿ ಒದಗಿಸಬೇಕು. ಅಥವಾ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬೇಕು. ಈ ಎಲ್ಲ ಸಾಧನಗಳನ್ನು ಒಬ್ಬನೇ ಸಂಗ್ರಹಿಸಲಾಗದು. ಒಂದೊಂದು ಗುಂಪಿನ ಜನ ಒಂದೊಂದು ಕೆಲಸವನ್ನು ವಹಿಸಿಕೊಂಡು ಮಾಡಬೇಕಾಗುತ್ತದೆ. ಈ ಎಲ್ಲ ನಾಡಿನ ಹಿತಕ್ಕೂ ಮಾಡಬೇಕಾಗುತ್ತದೆ. ಹೀಗೆ ಪರಸ್ಪರ ಸಹಕಾರ ಭಾವದಿಂದ ಜನ ಮುಂದುವರಿಯುವುದನ್ನು ರಾಜ್ಯವನ್ನು ನಿಯಂತ್ರಿಸತಕ್ಕ ಸರ್ಕಾರವೆಂಬ ಸಂಸ್ಥೆ ನೋಡಿಕೊಳ್ಳುತ್ತದೆ. ರಾಜ್ಯದ ಆಗುಹೋಗುಗಳೆಲ್ಲಕ್ಕೂ ಆ ಸರ್ಕಾರವೇ ಹೊಣೆಗಾರವೆನಿಸುತ್ತದೆ.

ನಮ್ಮ ನಾಡಿನಲ್ಲಿ ಹಿಂದೆ ಗ್ರಾಮಗಳಲ್ಲಿ ಬಾರಾಬಲೂತಿ ಪದ್ಧತಿ ಜಾರಿಯಲ್ಲಿತ್ತು. ಬಾರಾಬಲೂತಿ ಎಂದರೆ ಜನರ ನಿತ್ಯ ಜೀವನಕ್ಕೆ ಬೇಕಾದ ಕಮ್ಮಾರ, ಕುಂಬಾರ, ಅಗಸ, ನಾಯಿಂದ, ಗಾಣಿಗ, ಚಿಪ್ಪಿಗ, ನೇಯ್ಗೆಯವ, ಜ್ಯೋತಿಷ್ಯ, ವೈದ್ಯ, ಇತ್ಯಾದಿಗಳು ಒಂದು ಗ್ರಾಮವು ಸುಖವಾಗಿರಬೇಕು ಎಂದರೆ ಆ ಗ್ರಾಮದಲ್ಲಿ ಬಾರಾಬಲೂತಿಗಳು ಎಲ್ಲರೂ ಪರಸ್ಪರ ಸಹಕಾರದಿಂದ ಕೆಲಸಗಳನ್ನು ಮಾಡಬೇಕಾಗುತ್ತದೆ. ಇದರಲ್ಲಿ ಯಾರಾದರೊಬ್ಬರು ಕರ್ತವ್ಯ ವಿಮುಖರಾದರೆ ಎಲ್ಲರೂ ಕಷ್ಟಕ್ಕೆ ಸಿಗಬೇಕಾಗುತ್ತದೆ. ಆದುದರಿಂದ ಸಹಕಾರ ಜೀವನವು ತನ್ನ ಇತರರ, ರಾಜ್ಯದ ಮತ್ತು ರಾಷ್ಟ್ರದ ಹಿತಕ್ಕೆ ತಾಯಿಬೇರಿನಂತಿದೆಯೆಂಬುದನ್ನು ನಾವು ಇಲ್ಲಿ ಮನಗಾಣಬಹುದು.

ಇತ್ತೀಚಿನ ಪ್ರಪಂಚದ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಇಂಗ್ಲೆಂಡ್, ಅಮೇರಿಕಾ, ರಷ್ಯ ಜಪಾನ್ ಮೊದಲಾದ ರಾಷ್ಟ್ರಗಳ ಜನಗಳು ಸಹಕಾರ ತತ್ವವನ್ನು ಚೆನ್ನಾಗಿ ಅರಿತು ಅರ್ಥಮಾಡಿಕೊಂಡು ಪ್ರಾಮಾಣಿಕವಾಗಿ, ಕಷ್ಟಾಳುಗಳಾಗಿ ದುಡಿದು ತಮ್ಮ ಮತ್ತು ತಮ್ಮ ರಾಷ್ಟ್ರದ ಏಳಿಗೆಯನ್ನು ಮಾಡಿಕೊಂಡು ಅದರಿಂದಲೇ ಆ ಜನರು ಲೌಕಿಕ ವ್ಯವಹಾರಗಳಲ್ಲಿ ಬಹಳ ಮುಂದುವರಿದಿರುತ್ತಾರೆ.

ಪಾಶ್ಚಾತ್ಯ ರಾಷ್ಟ್ರಗಳ ಪ್ರಭಾವಕ್ಕೆ ಒಳಗಾದ ಆಧುನಿಕ ಭಾರತದಲ್ಲಿ ಕೂಡ ಈ ಸಹಕಾರ ಚಳುವಳಿ ಈಗ ಮುಂದುವರಿಯುತ್ತಿದೆ. ಪರಸ್ಪರ ಸಹಕಾರ ಮಂಡಲಿಗಳು (Co-operative Societies) ಜನರ ವ್ಯಾಪಾರ, ವ್ಯವಸಾಯ, ಮತ್ತು ಕೈಗಾರಿಕೆಗಳಿಗೆ ಉತ್ತಮ ಪರಿಣಾಮ ಬೀರುತ್ತಿವೆ. ಸಾಮೂಹಿಕ ವ್ಯವಸಾಯ ಕ್ಷೇತ್ರವೂ ತಲೆಯೆತ್ತಿದೆ. ಚಿಕ್ಕದೊಡ್ಡ ಕೈಗಾರಿಕಾ ಕ್ಷೇತ್ರದಲ್ಲೂ ಈ ಸಹಕಾರ ತತ್ವ ಹೆಚ್ಚಾಗುತ್ತಿದೆ. ಇದರಿಂದ ನಾಡಿನ ಸಂಪತ್ತು ಅಧಿಕವಾಗಲು ಕಾರಣವಾಗಿದೆ. ಭಾರತ ಪ್ರಭುತ್ವದವರೂ ಮೈಸೂರು ಸರ್ಕಾರದವರೂ ಜನರಲ್ಲಿ ಈ ಪರಸ್ಪರ ಸಹಕಾರ ಬೆಳೆಯಲು ಕಾರಣರಾಗಿದ್ದಾರೆ. ಈಗ ಎಲ್ಲ ಕಡೆ ಸಹಕಾರ ಸಂಘಗಳೂ, ಸಹಕಾರದ ಬ್ಯಾಂಕುಗಳೂ, ಸಹಕಾರದ ಮಳಿಗೆಗಳೂ, ಸರಕಾರದ ನೇತೃತ್ವದಲ್ಲಿ ಆಗಿದ್ದು ಅವುಗಳ ವ್ಯವಹಾರದಿಂದ ಜನಸಾಮಾನ್ಯರಿಗೆ ಬಹಳ ಉಪಕಾರವಾಗುತ್ತದೆ ಎಂಬುದನ್ನು ನಾವು ನೋಡುತ್ತಿದ್ದೇವೆ.

ಕರ್ನಾಟಕದಲ್ಲಿ ಹನ್ನೆರಡನೆಯ ಶತಕದಲ್ಲಿ ಕಲ್ಯಾಣ ಪಟ್ಟಣದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಧರ್ಮ ಕ್ರಾಂತಿಯು ನಾಡಿನಲ್ಲಿ ಆರ್ಥಿಕ, ಸಾಮಾಜಿಕ, ವಾಙ್ಮಯಾತ್ಮಕ, ಮೊದಲಾದ ಹಲವಾರು ಉತ್ಕ್ರಾಂತಿಗಳಿಗೆ ಕಾರಣವಾಯಿತು. ಸಕಲ ಜೀವಾವಳಿಯ ಲೇಸನ್ನೇ ಬಯಸುವ ಶಿವಶರಣರು ಸಮಾನತೆಯ ಆಧಾರದ ಮೇಲೆ ಜನತೆಯ ಅಭ್ಯುದಯವನ್ನು ಸಾಧಿಸಲು ಕಂಕಣಕಟ್ಟಿದರು. ಸರಕಾರಕ್ಕೆ ಸಮಾನತೆಯೇ ಮೂಲಭೂತ ಎಂಬುದನ್ನು

CC0. In Public Domain. Jangamwadi Math Collection, Varanasi

ಅವರು ಚೆನ್ನಾಗಿ ಕಂಡುಕೊಂಡರು. ತರತಮ ಭಾವಗಳುಳ್ಳ ಸಮಾಜದಲ್ಲಿ ಸಹಕಾರ ತತ್ತ್ವವು ಚೆನ್ನಾಗಿ ಬೆಳೆಯದೆಂಬುದು ಶಿವಶರಣರ ಅಭಿಪ್ರಾಯವಾಗಿದೆ.

ಕಲ್ಯಾಣದಲ್ಲಿ ಬಿಜ್ಜಳರಾಜನ ಮಂತ್ರಿಯಾಗಿ ರಾಜ್ಯಭಾರ ಮಾಡುತ್ತಿದ್ದ ಬಸವಣ್ಣನವರು ದಿವ್ಯಜ್ಞಾನಿಗಳಾದ ಪ್ರಭುದೇವರು, ಹಗ್ಗದ ಕೆಲಸ ಮಾಡುತ್ತಿದ್ದ ನುಲಿಯ ಚಂದಯ್ಯ, ಬಿದುರು ಕೆಲಸ ಮಾಡುತ್ತಿದ್ದ ಮೇದರ ಕೇತಯ್ಯ, ಬಟ್ಟೆಯನ್ನು ಒಗೆಯುತ್ತಿದ್ದ ಮಡಿವಾಳ ಮಾಚಯ್ಯ, ರಾಟಿಯನ್ನು ಹೊಡೆಯುತ್ತಿದ್ದ ರೆಮ್ಮವ್ವೆ, ದನಗಳನ್ನು ಕಾಯುತ್ತಿದ್ದ ರಾಮಣ್ಣ, ಕಂಬಳಿಗಳನ್ನು ನೇಯುತ್ತಿದ್ದ ಶಿವನಾಗಮಯ್ಯ, ಮೊಚ್ಚೆಗಳನ್ನು ಹೊಲಿಯುತ್ತಿದ್ದ ಹರಳಯ್ಯ, ಗ್ರಂಥಗಳನ್ನು ರಚಿಸುತ್ತಿದ್ದ ಚೆನ್ನಬಸವಣ್ಣ, ಸಂಗೀತವನ್ನು ಹಾಡುತ್ತಿದ್ದ ಕಿನ್ನರಿ ಬ್ರಹ್ಮಯ್ಯ ಮೊದಲಾದವರೆಲ್ಲರೂ ವಿಶ್ವಶಾಂತಿಗೆ ಸಾಧಕವಾದ, ಸಮಾಜದ ಅಭ್ಯುದಯಕ್ಕೆ ಕಾರಣವಾದ ಸಹಕಾರ ತತ್ತ್ವದ ಆಧಾರದ ಮೇಲೆಯೇ ಅನುಭವ ಮಂಟಪದಲ್ಲಿ ಒಂದೆಡೆ ಕೂಡಿ ತೀರ್ಮಾನುಗಳನ್ನು ಕೈಗೊಂಡು ಕಾಯಕ ತತ್ತ್ವದ ನೆರವಿನಿಂದ ಕಲ್ಯಾಣವನ್ನು ಕೈಲಾಸವನ್ನಾಗಿ ಮಾಡಿದರು. ಸಹಕಾರ ಜೀವನದ ವೈಭವವನ್ನು ಜಗತ್ತಿಗೆ ತಿಳಿಸಿದರು.

ಕಲ್ಯಾಣದಲ್ಲಿ ಬಸವಣ್ಣನವರ ಮಹಾಮನೆಯಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆ ಆಶ್ರಯವನ್ನು ಕೊಡಲಾಗಿತ್ತು " ಭವಿ ಬಿಜ್ಜಳನ ಪದತಲದಲ್ಲಿ ಕುಳಿತು ಸಾವಿರ ಹೊನ್ನಿಗಾಗಿ ತಾನು ಸೇವೆ ಮಾಡುತ್ತಿರುವುದು ತನ್ನೊಬ್ಬನಿಗಾಗಿ ಅಲ್ಲ, ಅದು ಗುರುಲಿಂಗ ಜಂಗಮರ ಸೇವೆಗಾಗಿ" ಎಂದು ಬಸವಣ್ಣನವರು ಒಮ್ಮೆ ಹೇಳಿದ್ದಾರೆ. ಪ್ರಬುದ್ಧರಾದ ಮಾನವರು ಎಲ್ಲರ ಹಿತಕ್ಕಾಗಿ ಬಾಳುವರೆಂಬುನ್ನು ದಿವ್ಯಜ್ಞಾನಿ ಬಸವಣ್ಣನವರು ಚೆನ್ನಾಗಿ ತಿಳಿದಿದ್ದರು. " ಕಾಗೆ ಒಂದು ಅಗಳು ಕಂಡು ಕರೆಯದೆ ತನ್ನ ಕುಲವೆಲ್ಲವನು, ಕೋಳಿ ಗುಟುಕು ಕಂಡು ಕರೆಯದೇ ತನ್ನ ಬಳಗವೆಲ್ಲವನು-ಲೋಭಿಯ ಜೀವನವು ಕಾಗೆ ಕೋಳಿಗಿಂತ ಕರಕಷ್ಟ ಎಂಬ ಅವರ ವಚನಾರ್ಥವನ್ನಿಲ್ಲಿ ನಾವು ಗಮನಿಸಬಹುದು " ಆತ್ಮವತ್ ಸರ್ವಭೂತಾನಿ " "ಸರ್ವಂ ಖಲ್ವಿದಂ ಬ್ರಹ್ಮ" "ಪಂಡಿತಃ ಸಮದರ್ಶಿನಃ" ಇತ್ಯಾದಿ ಶಾಸ್ತ್ರ ವಾಕ್ಯಗಳು ಮನುಷ್ಯನಿಗೆ ಸಮತೆ ಮತ್ತು ಸಹಕಾರದ ತತ್ವವನ್ನು ಬೋಧಿಸತಕ್ಕವುಗಳೇ ಆಗಿವೆ.

ಶಿವಶರಣರು ವೇದಶಾಸ್ತ್ರ ಪುರಾಣಗಳಲ್ಲಿರುವ ಸಮಾನತೆಯ ಗುಟ್ಟು-ಗುರಿಗಳನ್ನೂ ಸಹಕಾರದ ಪ್ರಯೋಜನವನ್ನೂ ತಿಳಿದು, ತಮ್ಮ ಜೀವನದಲ್ಲಿ ಅದನ್ನು ಅಳವಡಿಸಿರುವರು. ಇಂದು ನಾಡಿನಲ್ಲಿ ಸಹಕಾರ ತತ್ತ್ವವನ್ನು ಅನುಷ್ಠಾನಕ್ಕೆ ತರಲಿಚ್ಛಿಸುವವರು ಶಿವಶರಣರ ತತ್ತ್ವಗಳನ್ನು ಬೆಳಕಿಗೆ ತರುವುದು ಅಗತ್ಯವಾಗಿದೆ.

ಭರತ ಖಂಡದ ರಾಜ್ಯಭಾರವು ಇಂದು ಪ್ರಜಾಪ್ರಭುತ್ವ ತತ್ವಗಳ ಆಧಾರದ ಮೆಲೆ ನಡೆಯುತ್ತಿದೆ. ಚುನಾವಣೆಗಳ ಕಾಲದಲ್ಲಿ ಶಾಸಕರಾಗ ಬಯಸುವವರು ಜನರ ಸಹಕಾರವನ್ನು ಬಾಗಿಲು ಬಾಗಿಲಿಗೆ ಬಂದು ಪ್ರಾರ್ಥಿಸುತ್ತಾರೆ. ಈ ಮಾತು ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿಗಳಿಗೂ, ಸಂಘ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಆದ್ದರಿಂದ ಭಾರತದಲ್ಲಿ ಇಂದು ಬಾಳುವ ಪ್ರತಿಯೊಬ್ಬ ಪ್ರಜೆಗೂ ಸಹಕಾರ ತತ್ವವು ಅಗತ್ಯ ಮತ್ತು ಅನಿವಾರ್ಯವಾಗಿದೆ. ಆದ್ದರಿಂದ ಸಹಕಾರ ಜೀವನವು ಇಂದು ಭಾರತದ ಅಭ್ಯುದಯಕ್ಕೆ ಸಂಜೀವನ ಮಾತ್ರೆಯೆನಿಸಿದೆ. ಸುಮಾರು ೮೦೦ ವರ್ಷಗಳ ಮೊದಲೇ ಕರ್ನಾಟಕದ ಶಿವಶರಣರು ತಮ್ಮ ಧರ್ಮ ಕ್ರಾಂತಿಯಲ್ಲಿ ಸಹಕಾರ ಜೀವನವನ್ನು ಜನತೆಗೆ ಮನವರಿಕೆ ಮಾಡಿಕೊಟ್ಟು ಸಮಾಜದಲ್ಲಿ ಸಹಕಾರದ ಹೆಣಿಗೆಯನ್ನು ಬಂಧುರಗೊಳಿಸಿದ್ದಾರೆ.

ಲೇಖಕರು :-ಪಂಡಿತರತ್ನಂ, ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ಬೆಂಗಳೂರು.

Digitization by eGangotri and Sarayu Trust. Funding by MoE-IKS

ಶಿವಯೋಗದಲ್ಲಿ ಷಟ್‌ಸ್ಥಲದ ಸ್ವರೂಪ.

ವೀರಶೈವ ಧರ್ಮವನ್ನು ಪ್ರಾಚೀನಗೊಳಿಸಲು ಇತಿಹಾಸದ ಆಳಕ್ಕೆ ಇಳಿದಂತೆ, ನಮಗಾಗುವ ಅನುಭವ ಧರ್ಮಕ್ಕೆ ಈಗಿರುವ ರೂಪರೇಷೆ, ತತ್ವನಿರೂಪಣೆ ಮತ್ತು ಉನ್ನತಸ್ಥಾನ ಕಂಡು ಬರುವದಿಲ್ಲ. ಮೊಹೆಂಜೊದಾರೊ ಮತ್ತು ಹರಪ್ಪಾ ಅವಶೇಷಗಳ ಸಂಶೋಧನೆಯು ಇತಿಹಾಸಕಾರರನ್ನು ಶೈವಧರ್ಮವು ಕ್ರಿ ಪೂ ೩೦೦ ವರ್ಷಗಳ ಹಿಂದೆ ಬದುಕಿತ್ತು." ಎಂದು ಸಿದ್ಧಿಸಲು ಸಮರ್ಥನನ್ನಾಗಿಸುತ್ತದೆ. ಆಗಮಗಳ ವರೆಗೆ ಶೈವಧರ್ಮವು ಯಾವದೇ ನಿಶ್ಚಿತ ಸ್ಥಿತಿಗೆ ರೂಪಾಂತರವಾದದ್ದು ಕಂಡುಬರುವದಿಲ್ಲ. ಆದರೆ ಆಗಮಗಳಲ್ಲಿ ಶೈವಧರ್ಮದ ತತ್ವಗಳನ್ನು ಮತ್ತು ಆದರ ಆಚರಣೆಯನ್ನು ನಿರೂಪಿಸಲಾಗಿದೆ. ಶಿವನ ಆರಾಧನೆಯೇ ಶೈವರ ಮುಖ್ಯ ಅಂಶವೆಂದು ಹೇಳಬಹುದು. ಆದರೆ ಕರ್ನಾಟಕದ ಅತ್ಯುನ್ನತ ಧಾರ್ಮಿಕ ನಾಯಕನಾದ ಬಸವಣ್ಣ ೧೨ನೆಯ ಶತಮಾನದ ಉತ್ತರ ಭಾಗದಲ್ಲಿ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿ, ಅದಕ್ಕೆ ಹೊಸ ಉಡುಪು ತೊಡಿಸಿ ಜೀವಕಳೆಯನ್ನಿತ್ತನೆನ್ನಬಹುದು.

೧೨ನೆಯ ಶತಮಾನದ ಅತ್ಯುನ್ನತ ಹೆಗ್ಗುರುತಾದ **ಶಿವಾನುಭವ ಮಂಟಪವು** ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಗೆ ನೆಲಗಟ್ಟಾಗಿ, ಜನಸಾಮಾನ್ಯರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಬಡಿದೆಬ್ಬಿಸಿ ಎಲ್ಲ ವಿಧದ ಮೇಲು-ಕೀಳು ಎಂಬ ಭಾವನೆಗಳನ್ನು ತೊಡೆದುಹಾಕಿ, ವೀರಶೈವ ಧರ್ಮಕ್ಕೆ ಪೋಕ್ಷಣೆಯನ್ನಿತ್ತಿತಲ್ಲದೆ ಅದನ್ನು ನಿಶ್ಚಿತ ಮಾರ್ಗದಲ್ಲಿ ನಡೆಸಲು ಮಾರ್ಗದರ್ಶಿಯಾಯಿತು. ಶೂನ್ಯಸಿಂಹಾಸನಾರೂಢರಾದ ಪ್ರಭುದೇವರು, ಬಸವ, ಚೆನ್ನಬಸವಾದಿ ಪ್ರಮಥರು, ಅಕ್ಕಮಹಾದೇವಿಯಾದಿ ಶಿವಶರಣೆಯರು ತಮ್ಮ ವಚನ ಸುಧೆಯನ್ನು ಸಿಹಿಗೊಳದ ಪಾನೀಯದಂತೆ ಜನಸಾಮಾನ್ಯರಿಗೆ ಉಣಿಸಿ, ಧರ್ಮಕ್ಕೆ ನಿರ್ದಿಷ್ಟರೂಪಾಂತರವನ್ನು ಕೊಟ್ಟರು. ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನು ವಚನಾತ್ಮಕವಾಗಿ ಷಟ್‌ಸ್ಥಲವನ್ನು ನಿರೂಪಿಸಿ ವೀರಶೈವ ಧರ್ಮದ ಜೀವಕ್ಕೆ ಆತ್ಮವನ್ನು ತುಂಬಿದನೆನ್ನಬಹುದು. ಷಟ್‌ಸ್ಥಲವು ಲಿಂಗಾಯತರ ಅವಿಭಾಜ್ಯ ಘಟಕವಾಗಿ ಧಾರ್ಮಿಕ ಮತ್ತು ಮಾನಸಿಕ ಕುರುಹಾಗಿ ಮೆರೆಯಿತು.

" Sat-Sthal is very Life and Soul of Lingayat spiritual discipline an d religious practice. To take away Sat-Sthal is to take away very Life and Soul of religion for that alone marks it out from all other religion and markes it a distinct religious entity ".

ಲಿಂಗಾಯತರಲ್ಲಿ ಷಟ್‌ಸ್ಥಲಾತ್ಮಕವಾಗಿ ನೋಡಲಾಗಿ ಶಿವನ ಅಥವಾ ಪರಬ್ರಹ್ಮನ ಕಲ್ಪನೆಯು ಅಮೋಘವಾದದ್ದು. ಪರಮೇಶ್ವರ ಅಥವಾ ಪರಬ್ರಹ್ಮನು ಅನುಪಮ ತೇಜೋಮಯನೂ, ಪರಿಪೂರ್ಣನೂ, ವಿಶ್ವವ್ಯಾಪಿಯೂ ಮತ್ತು ವಿಶ್ವಚೈತನ್ಯನೆಂದು ಹೇಳುತ್ತಾರೆ. ಶಿವ ಮತ್ತು ಜೀವರಲ್ಲಿ ಸಂಬಂಧವನ್ನು ತೋರಿಸುವಲ್ಲಿ ಶಿವಶರಣರ ಬುದ್ಧಿ ಮತ್ತೆಯೂ, ಕಲ್ಪನಾಚಾತುರ್ಯವೂ ಗಮನಾರ್ಹವಾದವುಗಳು. ಶಿವನು ಮಲತ್ರಯಗಳಿಂದ ನಿರ್ಲಿಪ್ತನಾಗಿ ಅಗಣಿತ ಶಕ್ತಿಯನ್ನು ಹೊಂದಿ, ತನ್ನ ಲೀಲೆಯಿಂದ ತನ್ನ ಅರಿವು, ತನ್ನ ಶಕ್ತಿ ಮತ್ತು ಘನತೆಯ ಪರಿಯನ್ನು ತಿಳಿದವನಾದ್ದರಿಂದ ಅವನನ್ನು 'ವಿಮರ್ಶಾಶಕ್ತಿಯುಳ್ಳವನೆಂದು' ಕರೆಯುವರು. ಈ ವಿಮರ್ಶಾಶಕ್ತಿಯಿಂದ ಶಿವನು ಗುರು, ಲಿಂಗ, ಜಂಗಮ ರೂಪನಾಗಿರುವನು. ಇನ್ನು ಜೀವನು ಮಲಯತ್ರಯಗಳಿಂದ ಕೂಡಿರುವನಾದ್ದರಿಂದ ಅವನು ಬಾಹ್ಯಜಗತ್ತಿಗೆ ಹೊಂದಿಕೊಂಡಿರುವನು. ಮತ್ತು ಮಾಯಾಜಾಲದಿಂದ ತನ್ನಾತ್ಮದಯಿರವನ್ನು ಕಳೆದುಕೊಂಡಂತಾಗಿ ಕಾಣಿಸುವನು. ಜೀವನಿಗೆ ತನ್ನಾತ್ಮದಯಿರವನ್ನು ಎತ್ತಿ ತೋರಿಸಲು ಲಿಂಗಾಧಾರಣ ದೀಕ್ಷೆಯೇ ಮುಖ್ಯವಾದದ್ದು. ಲಿಂಗವು ಶಿವಶಕ್ತಿಯ ಅಂಶವಾದ್ದರಿಂದ ಅದು ಜೀವನದಲ್ಲಿಯ ಆತ್ಮವನ್ನು ಮಲತ್ರಯಗಳಿಂದಲೂ ಮತ್ತು ಬಾಹ್ಯಜಗತ್ತಿನ ಪರಿವೆಯಿಂದಲೂ

1. Proffessor Shakhare, " History and Philosophy of Lingayat religon ".

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಮೋಚಿಸಲು ಶಕ್ಯವಾಗಿರುತ್ತದೆ. ಜೀವನು ಒಮ್ಮೆಲೇ ಅಂಗನಾಗಲು ಸಾಧ್ಯವಿಲ್ಲ; ಯಾವಾಗ ಜೀವನು ಲಿಂಗದ ಉಪಾಸಕನಾಗುವನೋ ಆಗ ಅಂಗ ಅಥವಾ ಉಪಾಸಕನೆಂದು ಕರೆಯಬಹುದು.

ಇಲ್ಲಿ ಲಿಂಗಾಯತರ ಮುಖ್ಯ ಉದ್ದೇಶವು ಆತ್ಮವಿಮರ್ಶೆಯೇ ಆಗಿರುತ್ತದೆ. ಪ್ರಜ್ಞೆಪೂರ್ವಕವಾಗಿ ಅರಿತುಕೊಂಡಾಗ ಲಿಂಗ ಮತ್ತು ಅಂಗಗಳಲ್ಲಿ ಯಾವ ಭೇದವೂ ಕಂಡು ಬರುವದಿಲ್ಲ. ಯಾಕಂದರೆ ಲಿಂಗ ಮತ್ತು ಅಂಗಗಳು ಶಿವನ ಶಕ್ತಿಯ ಅಂಶಗಳು. ಆದರೆ ಮಾಯೆಯ ಆವರಣದಿಂದ ಲಿಂಗ ಮತ್ತು ಅಂಗಗಳಲ್ಲಿ ಭೇದವೇರ್ಪಟ್ಟಿದ್ದು, ಆತ್ಮಾನುಭಾವದಿಂದ ಮಾಯೆಯ ಮರವೆಯನ್ನು ಕಳೆದು ಲಿಂಗಾಂಗ ಭೇದವಳಿಸಲೆಂದೇ ಲಿಂಗಾಯತರು ಶಿವಯೋಗದ ಮೊರೆ ಹೋಗಿದ್ದಾರೆ. ಪ್ರಭುದೇವರು ಪರಮಯೋಗದಲ್ಲಿ ವೀರಶೈವ ಷಟ್‌ಸ್ಥಲ ಜ್ಞಾನಕ್ರಿಯೆಯಿಂದ ಲಿಂಗಾಂಗ ಸಂಬಂಧಿಯಾದ ಶರಣನಿಗೆ ಶಿವತತ್ವವು ಘಟಿಸುವದೆಂದು ಲಿಂಗಾಂಗ ಸಾಮರಸ್ಯದ ಮಾರ್ಗವನ್ನು ತೋರಿಸಿದ್ದಾರೆ. [1] ಶ್ರೀ ಕುಮಾರ ಸ್ವಾಮಿಗಳು ವೀರಶೈವರ ಆತ್ಮಾನುಭಾವದ ಉದ್ದೇಶವನ್ನು ಸೂತ್ರವಾಗಿ ಈ ಕೆಳಗಿನಂತೆ ಕಲ್ಪಿಸಿದ್ದಾರೆ. "Linga is representative symbol of all that is high and holy; and Lingayat Religion is a pursuit that is characterised by distinctive faith, Path and philosophy. Its faith is deep rooted in the dillinizaticn:of life, its path is marked by Sat-Sthat-a hierarchy of Six psychological stages, it philosophy is designated as Shaktivishistadvaita".

'ಯೋಗದ' ಶಬ್ದೋತ್ಪತ್ತಿಯನ್ನು ನೋಡಲಾಗಿ ಅದು 'ಯುಜ್' ಶಬ್ದದಿಂದ ಬಂದಿದ್ದು ಒಂದಾಗು ಇಲ್ಲವೆ ಐಕ್ಯವಾಗು ಎಂಬ ಅರ್ಥವನ್ನೀಡುತ್ತದೆ. ಅಂದರೆ ತಾತ್ಕಾಲಿಕವಾಗಿ ಪರಮಾತ್ಮನಿಂದ ಬೇರ್ಪಟ್ಟ ಜೀವಾತ್ಮನು ಯೋಗದಲ್ಲಿ ಮತ್ತೆ ಪರಮಾತ್ಮನೊಂದಿಗೆ ಐಕ್ಯವಾಗಲು ಬಯಸುವದೇ ಯೋಗವೆಂದು ಹೇಳಬಹುದು. ಇಲ್ಲಿ ಪರಮಾತ್ಮ ಮತ್ತು ಜೀವಾತ್ಮಗಳ ಸ್ವರೂಪದಬಗ್ಗೆ ವಿವಿಧ ಶಾಲೆಗಳ ಅರ್ಥವನ್ನು ಸಮರ್ಥಿಸುವದು ಅನವಶ್ಯಕ, ಯಾಕಂದರೆ ನಮಗೆ ಜೀವಾತ್ಮನ ಐಕ್ಯವೇ ಮುಖ್ಯವು ಹೊರತು ಆಯಾ ಶಾಲೆಗಳ ಸಮರ್ಥನೆಗಳನ್ನು ಮಂಡಿಸುವದು ಇಲ್ಲವೆ ಖಂಡಿಸುವದು ಮುಖ್ಯವಲ್ಲ.

ಪಾತಂಜಲಿಯು ವ್ಯಾಖ್ಯಾತ್ಮಕವಾಗಿ ಯೋಗವನ್ನು 'ಚಿತ್ತವೃತ್ತಿ ನಿರೋಧ'ವೆಂದು ಕರೆದಿದ್ದಾನೆ. ಚಿತ್ತ ಇಲ್ಲವೆ ಮಾನಸಿಕ ನಿಯಂತ್ರಣವೇ ಯೋಗದ ಉದ್ದೇಶವೆಂದು ಹೇಳಬಹುದು. ಭಾರತೀಯ ತತ್ವಜ್ಞಾನ ಶಾಲೆಗಳ (School of Indian Philosophy) ಪ್ರಕಾರ ಮನಸ್ಸು ಒಂದು ವಸ್ತುವಾದರೂ ಅದು ಬಹಳ ಸೂಕ್ಷ್ಮ ಮತ್ತು ಆಕಾಶಕ್ಕಿಂತಲೂ ವ್ಯಾಪಕವಾದದ್ದು. ಆತ್ಮವು ಮನಸ್ಸಿನೊಂದಿಗೆ ಜೀವಾತ್ಮದಲ್ಲಿ ಹುದುಗಿದ್ದಾಗ ಅದರ ಪ್ರಭಾವವು ಕಡಿಮೆಯಾಗುತ್ತ ಬಂದಿರುತ್ತದೆ. ಇಲ್ಲಿ ಉಪಮೆಯೊಂದಿಗೆ ವಿವರಿಸಲಾಗಿ ತಿಳಿಗೊಳದ ತಳವು ಆತ್ಮನು ಮತ್ತು ಅದರಲ್ಲಿಯ ಜಲವು-ಮನಸ್ಸು; ಯಾವಾಗ ಜಲವು ಕೆಸರಿನೊಂದಿಗೆ ಬೆರೆತು, ಅಲೆಗಳ ಹೊಡೆತಕ್ಕೆ ವಿಕಾರವಾಗುತ್ತದೆಯೋ ಆಗ ಕೊಳದ ಅಡಿಯು ಕಾಣಿಸುವದು ಅಸಾಧ್ಯವು. ಹೊಯ್ದಾಟವು ಸ್ಥಗಿತ ಹೊಂದಿ ನೀರು ತಿಳಿಯಾದಾಗ ತಳದ ಸ್ವರೂಪವು ನಿಚ್ಚಳಿಸುವಂತೆ, ಮಾನಸಿಕ ಕಾರ್ಯವು ಬಾಹ್ಯ ಪ್ರಚೋದನೆಗಳಿಂದ ನಿರ್ಲಿಪ್ತತೆಯನ್ನು ಹೊಂದಿದಾಗ-ಆತ್ಮವು ತನ್ನ ಪ್ರಭಾವ ಬೀರಲು ಸಮರ್ಥವಾಗಬಹುದು. ಆತ್ಮವು ಪರಮಾತ್ಮನಲ್ಲಿ ಸ್ವಲ್ಪಕಾಲವಾದರೂ ಬೆರೆಯಲು ಅವಕಾಶವಾಗಬಹುದು.

ಶಿವಯೋಗ ಪ್ರದೀಪಿಕೆಯು ಯೋಗಗಳಲ್ಲಿ ಐದು ಪ್ರಕಾರಗಳನ್ನು ಮಾಡುತ್ತದೆ. ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಮತ್ತು ಶಿವಯೋಗ ಹಾಗೂ ಉಳಿದ ಮೊದಲಿನ ಯೋಗಗಳಿಗಿಂತ ರಾಜಯೋಗವು ಉತ್ತಮವಾದದ್ದೆಂದು ಸಾರುತ್ತದೆ. ಆದರೆ ಶಿವಯೋಗ ಪ್ರದೀಪಿಕೆಯ ಭಾಷ್ಯಕಾರರಾದ ಬಸವರಾಧ್ಯರು, ಶಿವಯೋಗ

1 ಶ್ರೀಮಲ್ಲಿಕಾರ್ಜುನ—ಪರಮಯೋಗ ಮಂತ್ರಗೌಪ್ಯ.
2 ಶ್ರೀಕುಮಾರ ಸ್ವಾಮಿಜಿ — History of Philosophy Eastern and Western.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ರಾಜಯೋಗದಲ್ಲಿ ಬಹುಮಟ್ಟಿಗೆ ಸಾಮ್ಯವಿದ್ದರೂ ಕೆಲವು ಮುಖ್ಯ ವ್ಯತ್ಯಾಸಗಳನ್ನು ಎತ್ತಿತೋರಿಸಿ, ಶಿವಯೋಗದ ಘನತೆಯನ್ನು ಹೊಗಳಿದ್ದಾರೆ. ಇಲ್ಲಿ ಶಿವಾನುರಾಗಿ ಜ್ಞಾನಕ್ರಿಯೆಯಿಂದ ಶಿವತತ್ವದೊಂದಿಗೆ ನಿಶ್ಪಾತ್ಮ ಬೆರೆಯುವದೇ ಶಿವಯೋಗವು.

ಶಿವಯೋಗ ಪ್ರದೀಪಿಕೆಯಲ್ಲಿ ಶಿವಯೋಗವು ಈ ಪ್ರಕಾರ ವರ್ಣಿಸಲ್ಪಟ್ಟಿದೆ.

" ಜ್ಞಾನಂ ಶಿವಮಯಂ ಭಕ್ತಿಃ ಶೈವೀ ಧ್ಯಾನಂ ಶಿವಾತ್ಮಕಂ |
ಶಿವವ್ರತಂ ಶಿವಾರ್ಚನೇತಿ ಶಿವಯೋಗ ಹಿ ಪಂಚಧಾ ||

ಈ ಶ್ಲೋಕದಂತೆ ಶಿವಯೋಗವು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ ಮತ್ತು ಶಿವಪೂಜೆಗಳಿಂದ ಕೂಡಿದ್ದಾಗಿದೆ. ಕೊನೆಯದಾದ ಶಿವಪೂಜೆಯು (ಲಿಂಗಾರ್ಚನೆ) ವೀರಶೈವರಲ್ಲಿ ಮಹತ್ವದ ಸ್ಥಾನವನ್ನು ಪಡೆದು ಶಿವಯೋಗದ ಮುಖ್ಯ ಘಟಕ ಮತ್ತು ಗುಣಧರ್ಮವೆನಿಸುತ್ತಿದೆ. ಶಿವಪೂಜೆಯನ್ನು ದೈನಂದಿಕವಾಗಿ ಜೀವನದ ಕೊನೆಯ ವರೆಗೆ ಪರಿಪಾಲಿಸುವದರಿಂದ ತಂತಾನೆ ಶಿವಯೋಗದಲ್ಲಿ ಮಾರ್ಪಾಟವಾಗಿ ಬಿಡುತ್ತದೆ, ಶಿವಯೋಗದಲ್ಲಿ ಉಳಿದೆಲ್ಲ ಯೋಗ ಪ್ರಕಾರಗಳು ಅಡಕವಾಗಿರುವಂತೆ ಶಿವಪೂಜೆಯಲ್ಲಿ ಉಳಿದ ನಾಲ್ಕು ಗುಣಧರ್ಮಗಳು ಸಮ್ಮಿಲನವಾಗಿ ಬಿಡುತ್ತವೆ. ಶಿವಪೂಜೆಯು ಶಿವಯೋಗದಲ್ಲಿ ಮಾರ್ಪಾಡಾಗುವ ಬಗೆಯನ್ನು ಈ ಕೆಳಗಿನಂತೆ ರಸವತ್ತಾಗಿ ಹೇಳಬಹುದು.

1. " Man does what he thinks fit and forms a habit of doing, which cannot be easily given up. Similarly man's oftrepeated acts either by emction or Suggession make a deep impressoin on his mind. This is ' Sanskar '. Every work that we do, every movement of the body, every thought we think leaves such on impression on mind stuff, and even then such impressions are not obvious on the surface. They are sufficiently strong to work bencath the Surface-Sub-Conciously. "—Vivekanand.

ಈಗ ನಾವು ಶಿವಯೋಗದಲ್ಲಿ ಅಥವಾ ಶಿವಪೂಜೆಯಲ್ಲಿ ಅಡಕವಾದ ಅಥವಾ ಕಲಾಪೂರ್ಣವಾಗಿ ಬೆರೆತು ಕೊಂಡ ಷಟಸ್ಥಲವನ್ನು ವಿವರಿಸಲು ಸಮರ್ಥವಾಗಬಹುದು.

ಮಾಯಿದೇವನು ತನ್ನ 'ಅನುಭವ ಸೂತ್ರ'ದಲ್ಲಿ ಸ್ಥಲವೆಂದರೆ ಪರಬ್ರಹ್ಮನೆಂದು ಹೇಳಿ ಶಬ್ದದ ಎರಡೂ ಅಕ್ಷರ ಗಳಿಗೆ ಅರ್ಥವನ್ನು ಕಲ್ಪಿಸಿದ್ದಾನೆ, ಈ ಸೃಷ್ಟಿಯು ಯಾವ ಶಕ್ತಿಯಿಂದ ಉದ್ಭವಿಸಿತೋ ಅದು ' ಸ್ಥ ' ಎಂದೂ ಮತ್ತು ಸೃಷ್ಟಿಯ ಕೊನೆಯ ಗುರಿಯು ಏನನ್ನು ಕೊಡಬಯುಸಿದೆಯೋ ಅದು ' ಲ ' ಎಂದೂ ' ಸ್ಥಲ ' ಶಬ್ದದ ಅರ್ಥವನ್ನು ತಾತ್ವಿಕವಾಗಿ ವಿವರಿಸಿದ್ದಾನೆ. ಪರಬ್ರಹ್ಮನು ತನ್ನ ಅಗಾಧವಾದ ಲೀಲೆಯಿಂದ ಲಿಂಗ ಮತ್ತು ಅಂಗವಾಗಿ ಕಾಣಿಸಿಕೊಂಡು ತನ್ನ ಪರಬ್ರಹ್ಮ ಶಕ್ತಿ ಮತ್ತು ಭಕ್ತಿಯಾಗಿ ಮಾರ್ಪಡಿಸಿದ್ದಾನೆ. ಶಕ್ತಿಯು ಸಂಪೂರ್ಣವಾಗಿ ಶಿವನಿಗೆ ಸೇರಿದ್ದು ಮತ್ತು ಭಕ್ತಿಯನ್ನು ಉಪಾಸನೆಯೆಂದು ಕರೆಯಬಹುದು. ಉಪಾಸನೆಯಲ್ಲಿ ಲಿಂಗವು ಉಪಾಸ್ಯವೂ, ಅಂಗನು ಉಪಾಸಕನೂ ಆಗಿರುತ್ತಾನೆ. ಉಪಾಸನೆಯಲ್ಲಿ ಲಿಂಗಾಂಗ ಭೇದವಳಿದು ಅಡಿಯಡಿಯಾಗಿ ಲಿಂಗಾಂಗ ಸಾಮರಸ್ಯವನ್ನು ಹೊಂದುತ್ತ ಹೋಗುವದೇ ಷಟಸ್ಥಲವು.

ಒಂದು ಸ್ಥಲವು ಲಿಂಗ ಮತ್ತು ಅಂಗಗಳೆಂಬ ಎರಡೂ ಭಾಗಗಳಾಗಿ, ಮತ್ತೆ ಅವುಗಳಲ್ಲಿ ತ್ಯಾಗಾಂಗ ಭೋಗಾಂಗ ಮತ್ತು ಯೋಗಾಂಗಗಳೆಂಬ ಮೂರು ಅಂಗಗಳು; ಅಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳೆಂಬ ಮೂರು ಲಿಂಗಗಳಾತ್ತವೆ.

---

1. " Karmayog. "

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಯೋಗದಲ್ಲಿ ಅಂಗನು ಕರಸ್ಥಲದ ಮಧ್ಯ ಇಷ್ಟಲಿಂಗವನ್ನು ಸ್ಥಾಪಿಸಿಕೊಂಡು ಧ್ಯಾನ, ಧಾರಣ, ಸಮಾಧಿಗಳೆಂಬ ಮೂರು ವಿಧದ ಮಾನಸಿಕ ಗತಿಗಳನ್ನು ಏರುತ್ತ ಲಿಂಗಾಂಗ ಸಂಬಂಧಿಯಾಗುತ್ತಾನೆ. ಇಲ್ಲಿ ಶಿವಯೋಗದ ಬಾಹ್ಯಾಚರಣೆ ಅಥವಾ ದೈಹಿಕ ಕ್ರಿಯೆಗಳಿಗಿಂತಲೂ ಮಾನಸಿಕ ಮಹಿಮೆಯು ಹಿರಿದಾದದ್ದು. ಮಾನಸಿಕ ಅವಧಾನವನ್ನು ಮೂರು ವಿಧವಾಗಿ ವಿಂಗಡಿಸಬಹುದು. ಜಾಗ್ರತಿ, ಬಾಹ್ಯ ಜಗತ್ತಿನೊಡನೆ ಸಂಬಂಧಾವಸ್ಥೆಯಲ್ಲಿರುವುದು. (ವಿಶ್ವಜೀವ); ಸ್ವಪ್ನ—ಕನಸಿನ ಅವಸ್ಥೆಯಲ್ಲಿರುವದು. (ತೇಜಸ್ಸಜೀವ). ಸುಷುಪ್ತಿ—ಸಂಪೂರ್ಣ ನಿದ್ರಾವಸ್ಥೆಯಲ್ಲಿರುವದು. (ಪ್ರಜ್ಞಾಜೀವ).

ಲಿಂಗನು ಜಾಗ್ರತಾವಸ್ಥೆಯಲ್ಲಿ ಅಥವಾವಿಶ್ವಜೀವಾವಸ್ಥೆಯಲ್ಲಿ ಬಾಹ್ಯ ಜಗತ್ತನ್ನು ಅರ್ಥೈಸಿಕೊಂಡು ಅದರಿಂದ ಅಲಿಪ್ತನಾಗಬಯಸುವದರಿಂದ ಅವನನ್ನು ತ್ಯಾಗಾಂಗನೆಂದು ಕರೆಯಲಾಗಿದೆ. ಇಲ್ಲಿ ಇಷ್ಟಲಿಂಗವು ಅವನನ್ನು ಹೊರಜಗತ್ತಿನಿಂದ ಬೇರ್ಪಡಿಸಲು ಸುಲಭವಾಗಿ ಸಹಾಯ ಮಾಡುತ್ತದೆ. ಇಷ್ಟಲಿಂಗದ ಪ್ರಕಾಶದಿಂದ ಅಂಗನ ಬಾಹ್ಯ ಜಗತ್ತಿನ ಮೋಹ ಕಳೆದು ಆಧ್ಯಾತ್ಮಿಕ ಪರಬ್ರಹ್ಮನನ್ನು ಅರಿಯಲು ಅಥವಾ ತನ್ನಾತ್ಮದ ಇರುವನ್ನು ತಿಳಿಯಲು ಮನ ನಿಯಂತ್ರಣ ಮಾಡಲು ಹಚ್ಚುವದೇ ಶಕ್ತಿಯ ಪ್ರತಿರೂಪವಾದ ಭಕ್ತಿಯು. ಈ ಅವಸ್ಥೆಯಲ್ಲಿ ಅಂಗನ ಸಂಪೂರ್ಣ ಮನಸ್ಸೂ, ಇಂದ್ರಿಯಗಳೂ ಹೂರ ಜಗತ್ತನ್ನು ಅಭ್ಯಸಿಸಲು ಅದರ ಸಂಪರ್ಕಕ್ಕಾಗಿ ಹೋರಾಡುತ್ತವೆ. ಅಂಗನು ಬಾಹ್ಯ ಜಗತ್ತಿನ ಜ್ಞಾನದೊಂದಿಗೆ ಇಷ್ಟಲಿಂಗದಲ್ಲಿ ತನ್ನಾತ್ಮದ ಇರವನ್ನು ಅರಿತು, ಅಲಿಪ್ತತೆಯ ಮಾರ್ಗದಲ್ಲಿ ಸ್ವಪ್ನಾವಸ್ಥ ಅಥವಾ ತೇಜಸ್ಸಜೀವನಾವಸ್ಥೆಗೆ ಸಿಲುಕಿ ಮಾನಸಿಕ ಸಂಸ್ಕೃತಿಯಿಂದ ಭೋಗಾಂಗಿಯಾಗಿ ತನ್ನ ಮನೋನ್ನೈರ್ಮಲ್ಯದಲ್ಲಿ ಪ್ರಾಣಲಿಂಗವನ್ನು ಸ್ಥಾಪಿಸುವನು. ಈ ಅವಸ್ಥೆಯಲ್ಲಿ ಬಾಹ್ಯ ಜಗತ್ತಿನಿಂದ ಸಂಪೂರ್ಣವಾಗಿ ಬೇರ್ಪಟ್ಟಿದ್ದರೂ ಸರಮಂಡಲದಿಂದ ನಿರ್ಲಿಪ್ತನಾಗಿರುವದಿಲ್ಲ. ಇದು ಮಾನಸಶಾಸ್ತ್ರದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿರುತ್ತದೆ. ಯಾಕಂದರೆ ಮಾನಸಿಕ ಸಂಸ್ಕೃತಿಯ ಉತ್ಕರ್ಷೆಯು ಪ್ರತಿಯೊಬ್ಬ ಮಾನವನ ಜೀವನದಲ್ಲಿ ಸುಲಭವಾಗಿ ಪರಿಣಮಿಸುವದು ಅಸಾಧ್ಯವು. ಅಂದರೆ ಹೊರ ಜಗತ್ತಿನ ಪ್ರಚೋದನೆಯನ್ನು ಕಳೆದು ಆಂತರಿಕ ಕ್ರಿಯೆಯನ್ನು ಸ್ಥಗಿತಗೊಳಿಸಿ, ಆತ್ಮನಿಗೆ ವಿಶ್ವಾತ್ಮನ ಚಿಂತನೆಗೆ ಎಡೆ ಮಾಡಿಕೊಡುವದು ವೀರಶೈವರಲ್ಲಿ ಗಮನಾರ್ಹವಾಗಿದೆ.

ಆ ಮೇಲೆ ಉಪಾಸಕನಲ್ಲಾಗುವ ಮುಂದಿನ ಮಾನಸಿಕ ಅತ್ಯುನ್ನತ ಮಟ್ಟವನ್ನು ವಿವರಿಸಲು ಭಾಷೆಯು ಹಿಡಿತಕ್ಕೆ ಸಾಲಲಾರದು. ಭೋಗಾಂಗಿಯು ಯೋಗಾಂಗಿಯಾಗಿ ಪರಿಣಮಿಸಿ ಭಾವಲಿಂಗದ ಸಹಾಯದಿಂದ ಸುಷುಪ್ತಾವಸ್ಥೆಯಲ್ಲಿ ಮುಳುಗಿಬಿಡುತ್ತಾನೆ. ತಾತ್ಕಾಲಿಕವಾಗಿ ಬೇರ್ಪಟ್ಟ ಅಂಗನ ಆತ್ಮವು ಅಪರಂಪರವಾದ ವಿಶ್ವಾತ್ಮನಲ್ಲಿ ಹುದುಗಿ ಬಿಡುತ್ತದೆ. ಅಂಗಾಂಗ ಸಾಮರಸ್ಯವನ್ನು ಸಂಪೂರ್ಣ ಆನಂದ ಅಥವಾ ಅಮೋಘ ಶಾಂತಿಯೆಂದು ಕರೆಯಬಹುದು. ಈ ಗಾಢವಾದ ನಿದ್ರಾವಸ್ಥೆಯಲ್ಲಿ ಮಾನಸಿಕ ಕ್ರಿಯೆಗಳು, ಬಾಹ್ಯ ಜಗತ್ತಿನ ವಾಸ್ತವಿಕ ಪ್ರಚೋದನೆಯಿಲ್ಲದೆ ತಮ್ಮಿಂದೆಯಾದ ಒಂದು ಸ್ಥಿತಿಯಲ್ಲಿ ನಡೆದು ಅದರ ಪರಿಣಾಮವನ್ನು ದೇಹದ ಅಥವಾ ಮಾನಸಿಕ ಯಾವದೇ ಭಾಗದ ಮೇಲೆ ಬೀರಲು ಅಸಮರ್ಥವಾಗುತ್ತವೆ. ಆದರೆ ಸ್ವಪ್ನಾವಸ್ಥೆಯಲ್ಲಿ ಮಾನಸಿಕ ಕ್ರಿಯೆಗಳ ಪರಿಣಾಮ ಜೀವಾತ್ಮನಲ್ಲಿ ಉಳಿದು ಮಾನಸಿಕ ಸಂಸ್ಕೃತಿಗಳಾಗಿ ನೆನಸಿದಾಗ ಸ್ಮರಣೆಯ ಪಟಲದ ಮೇಲೆ ನಿಚ್ಚಳವಾಗಿ ತೇಲಿ ಬರುತ್ತವೆ. ಅದ್ದರಿಂದ ಗಾಢವಾದ ನಿದ್ರಾವಸ್ಥೆಯಿಂದ ಬೇರ್ಪಟ್ಟು, ಈ ಅವಸ್ಥೆಯು ಕಳೆದ ಬಳಿಕ ಉಪಾಸಕನು ಏನನ್ನೂ ನೆನಪಿಗೆ ತರಲಾರನು. ಆದರೆ ಶಾಂತಿ ಅಥವಾ ಪ್ರಸನ್ನತೆಯ ಸೂಕ್ಷ್ಮ ಸಂವೇದನೆಯ ಅನುಭವ ಅಚ್ಚಳಿಯದೆ ಉಳಿಯುವದು. ಈ ಅತ್ಯುನ್ನತ ಸ್ಥಿತಿಯು ಆನಂದಮಯವಾಗಿ ಲಿಂಗಾಂಗ ಭೇದವಳಿದು. ಭಕ್ತಿ ಮತ್ತು ಶಕ್ತಿಗಳು ಸಾಮರಸ್ಯವಾಗಿ ಬೆರೆತು ಉಪಾಸಕನು ಕಾರಣ ಶರೀರಿಯಾಗಿ ಪರಿಣಮಿಸುತ್ತಾನೆ. ಲಿಂಗಾಂಗ ಸಾಮರಸ್ಯದ ಸಮಾಧಿಯನ್ನು ಅಕ್ಕಮಹಾದೇವಿ ತನ್ನೊಂದು ವಚನದಲ್ಲಿ ಬಹಳ ಸುಂದರವಾಗಿ ಪ್ರಕಟಿಸಿದ್ದಾಳೆ.

1 ‘‘ ತನು ನಿಮ್ಮ ರೂಪವಾದ ಬಳಿಕ ನಾನಾರಿಗೆ ಮಾಡುವೆ ?
ಮನ ನಿಮ್ಮ ರೂಪವಾದ ಬಳಿಕ ನಾನಾರ ನೆನವೆ ?
ಪ್ರಾಣ ನಿಮ್ಮ ರೂಪವಾದ ಬಳಿಕ ನಾನಾರನಾರಾಧಿಸುವೆ ?

1 ಶಿವಾನುಭವ ಸಂಚಿಕೆ ಸಂ. ಹಳಕಟ್ಟಿ ಫ. ಗು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಯೆ ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ ?
ಚೆನ್ನಮಲ್ಲಿಕಾರ್ಜುನಾ ನಿಮ್ಮಲ್ಲಿ ನೀವಾಗಿ ನಿಮ್ಮಿಂದ
ನಿಮ್ಮ ಮರೆದೆನಯ್ಯ "

ಇನ್ನು ತಾತ್ವಿಕವಾಗಿ ಮೇಲ್ಕಂಡ ಮೂರು ಲಿಂಗಗಳಲ್ಲಿ ಮತ್ತೆ ಎರಡೆರಡು ಭಾಗಗಳನ್ನು ಮಾಡಿದ್ದಾರೆ. ಇಷ್ಟಲಿಂಗದಲ್ಲಿ ಅನುಭಾವಿಕವಾದ ಆಚಾರಲಿಂಗವೂ, ಅನುಭೂತಿಯಾದ ಗುರುಲಿಂಗವೂ, ಪ್ರಾಣಲಿಂಗದಲ್ಲಿ ಪ್ರಕಾಶರೂಪವಾದ ಶಿವಲಿಂಗವೂ, ಯಜನಸ್ವರೂಪವಾದ ಚರಲಿಂಗವೂ; ಆನಂದಮಯವಾದ ಪ್ರಸಾದಲಿಂಗ ಮತ್ತು ಬೋಧಸ್ವರೂಪವಾದ ಮಹಾಲಿಂಗಗಳು ಭಾವಲಿಂಗದಲ್ಲಿ ಅಡಕವಾಗಿದೆಯೆಂದು ತಿಳಿಸಿದ್ದಾರೆ. ಪರಬ್ರಹ್ಮನ ಶಕ್ತಿಯ ರೂಪಾಂತರವು ಭಕ್ತಿಯಾಗಿ ಅಂಗನಲ್ಲಿ ಅಂಕುರಿಸಿದಾಗ ಅದರಲ್ಲಿಯೂ ಆರು ವಿಭಜನೆಗಳನ್ನು ಮಾಡಿ, ಮೇಲಿನ ಆರೂ ಲಿಂಗಗಳಿಗೆ ಬಂಧಿಸಿದ್ದಾರೆ. ಶ್ರದ್ಧಾಭಕ್ತಿಯು ಆಚಾರಲಿಂಗದಲ್ಲಿ ನೆಲೆಯಾದಾಗ ಭಕ್ತಸ್ಥಲವು, ಗುರುಲಿಂಗದಲ್ಲಿ ನಿಷ್ಠಾಭಕ್ತಿಯು ನೆಲೆಯಾದಾಗ ಮಹೇಶಸ್ಥಲವು, ಅವದಾನ ಭಕ್ತಿಯು ಶಿವಲಿಂಗದಲ್ಲಿ ನೆಲೆಯಾದಾಗ ಪ್ರಸಾದಿಸ್ಥಲವು, ಅವಧಾನ ಭಕ್ತಿಯು ಚರಲಿಂಗದಲ್ಲಿ ನೆಲೆಯಾದಾಗ ಪ್ರಾಣಲಿಂಗಿಸ್ಥಲವು, ಪ್ರಸಾದಲಿಂಗದಲ್ಲಿ ಆನಂದ ಭಕ್ತಿಯು ನೆಲೆಯಾದಾಗ ಶರಣಸ್ಥಲವು ಮತ್ತು ಮಹಾಲಿಂಗದಲ್ಲಿ ಸಮರಸ ಭಕ್ತಿ ಬೆರೆತಾಗ ಐಕ್ಯಸ್ಥಲವು ನಿರ್ಮಿತಗೊಳ್ಳುವದು.

ಇನ್ನು ಮಾನಸಿಕ ಗತಿಗೆ ಸಂಬಂಧಿಸುವಂತೆ ಷಟ್‌ಸ್ಥಲದಲ್ಲಿ ಎರಡು ವಿಭಾಗಗಳನ್ನು ಮಾಡಬಹುದು. ೧) ಭಕ್ತ, ಮಹೇಶ ಮತ್ತು ಪ್ರಸಾದಿ, ೨) ಪ್ರಾಣಲಿಂಗಿ, ಶರಣ ಮತ್ತು ಐಕ್ಯ. ಷಟ್‌ಸ್ಥಲಾತ್ಮಕ ಶಿವಯೋಗವು ಮೊದಲಿನ ಭಾಗದಲ್ಲಿ ಕ್ರಿಯಾತ್ಮಕವಾಗಿರುತ್ತದೆ. ಇಲ್ಲಿ ಕ್ರಿಯಾತ್ಮಕವೆಂದೊಡನೆ ಮಾನಸಿಕವಲ್ಲದ್ದು ಅಥವಾ ಭಕ್ತಿಯಿಲ್ಲದ್ದು ಎಂದು ತಿಳಿಯಬಾರದು, ಎರಡನೆಯ ಭಾಗವು ಜ್ಞಾನಾತ್ಮಕವಾಗಿರುತ್ತದೆ. ಆದರೆ ಎರಡೂ ಭಾಗಗಳಲ್ಲಿ ಕ್ರಿಯೆ ಮತ್ತು ಜ್ಞಾನ ಕೂಡಿಕೊಂಡಿದ್ದು ಅವುಗಳ ಪ್ರಮಾಣ ಹೆಚ್ಚುಕಡಿಮೆಯಾಗಬಹುದು. ಕ್ರಿಯೆ ಮತ್ತು ಜ್ಞಾನಗಳು ಅವಿಭಾಜ್ಯ ಮತ್ತು ಅನ್ಯೋನ್ಯವಾದಾಗ ಲಿಂಗಾಂಗ ಸಾಮರಸ್ಯವು ಸುಲಭವಾಗುತ್ತದೆ.

ಮಾನಸ ಶಾಸ್ತ್ರದ ದೃಷ್ಟಿಕೋನದಿಂದ ಮಾನಸಿಕ ಗತಿಯನ್ನು ರಚನಾತ್ಮಕ ಇಲ್ಲವೆ ಕ್ರಿಯಾತ್ಮಕವಾಗಿ ವಿವರಿಸಬಹುದು. ಆದರೆ ಕ್ರಿಯೆ ಮತ್ತು ರಚನೆ ಒಂದಕ್ಕೊಂದು ಸಂಬಂಧ ಪಟ್ಟು ಲಿಂಗಾಂಗ ಸಾಮರಸ್ಯದಲ್ಲಿ ಕ್ರಿಯೆಯು ರಚನೆಯಿಂದ ನಿಧಾನವಾಗಿ ಬೆಳೆದು ಬರಬೇಕು. ಷಟ್‌ಸ್ಥಲವು ಜೀವಾತ್ಮನಿಗೆ ವಿಶ್ವಾತ್ಮನನ್ನು ಹೊಂದುವದನ್ನು ಸುಲಭಸಾಧ್ಯಗೊಳಿಸಲು ಪೂರ್ಣ ಪ್ರಜ್ಞೆಯನ್ನು ನೀಡುತ್ತದೆ. ಉಳಿದೆಲ್ಲ ಶಾರೀರಿಕ ಚಲನವಲನಗಳು ಅನವಶ್ಯಕವು. ಒಂದು ವೇಳೆ ಉಪಯುಕ್ತವೆನಿಸಿದ್ದವಾದರೆ ಅವು ಮಾನಸಿಕ ಗತಿಯನ್ನು ಸ್ಥಿರಗೊಳಿಸಲು ಸಹಾಯಮಾಡಬಲ್ಲವು.

ಷಟ್‌ಸ್ಥಲದ ಕೊನೆಯ ಸ್ಥಿತಿಯಲ್ಲಿ ಭಕ್ತಿ ಮತ್ತು ಜ್ಞಾನಗಳು ಒಂದಕ್ಕೊಂದು ಹೊಂದಿಕೊಂಡು ಸಾಮರಸ್ಯದ ಗತಿಯನ್ನು ತೀವ್ರಗೊಳಿಸುತ್ತವೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಭಕ್ತಿಯು ಶಕ್ತಿಯ ರೂಪಾಂತರವಿದ್ದರೂ ಶಿವಶರಣರು ಅದಕ್ಕೆ ಶಿವ ಮತ್ತು ಶಕ್ತಿಗಿಂತ ಹೆಚ್ಚಿನಸ್ಥಾನವನ್ನು ಕೊಟ್ಟು ಅದನ್ನು ಪುರುಷಕ್ಕೆ ಹೋಲಿಸಿ ಕೊಂಡಿದ್ದಾರೆ. ಅಂದಹಾಗೆ ಶಿವಯೋಗದಲ್ಲಿ ಭಕ್ತಿಯ ಪಾತ್ರವು ಮಹತ್ವವಾದದ್ದು. ಈ ಬಗೆಯಾಗಿ ಶಿವಶರಣರು ಭಕ್ತಿಮಾರ್ಗದಿಂದ ಮುಕ್ತಿಮಾರ್ಗವನ್ನು ಕಂಡುಕೊಂಡು ಅತ್ಯುನ್ನತ ಸ್ಥಾನದಲ್ಲಿ ಮೆರೆದಿದ್ದಾನೆ.

ಲೇಖಕರು : ಶ್ರೀ ಪರ್ವತ ಶಂ. ಹೆಲ್ಯಾಳ, ಎಂ. ಎ ಪುಣೆ-೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೭ ನೆಯ ಶಿವಾನುಭವ ಮಂಟಪ ಬೆಳಗಾಂವಿ.

ಡದಿಂದ ಬಲಕ್ಕೆ:- ೧) ಶ್ರೀ. ಮ. ನಿ. ಪ್ರ. ಸ್ವ. ಶ್ರೀ ಶಿವಬಸವ ಸ್ವಾಮಿಗಳು ನಾಗನೂರು, ೨) ಶ್ರೀ ಮಹಾಂತ ಸ್ವಾಮಿಗಳು ಮುರಗೋಡ,
೩) ಶ್ರೀ ಶಿವಕುಮಾರ ಸ್ವಾಮಿಗಳು ಸಿದ್ಧಗಂಗಾಮಠ, ೪) ಶ್ರೀ ಮೃತ್ಯುಂಜಯ ಸ್ವಾಮಿಗಳು ಧಾರವಾಡ,
೫) ಶ್ರೀ ಮಹಾಂತಯ್ಯ ಸ್ವಾಮಿಗಳು ಧಾರವಾಡ.

ಶ್ರೀ. ನಿ. ಪ್ರ. ಸ್ವ. ಸಚ್ಚಿದಾನಂದ
ಸ್ವಾಮಿಗಳು ಮುರಘಾಮಠ
ಆನಂದಪುರ.

ಶ್ರೀ. ನಿ. ಪ್ರ. ಸ್ವ. ಸಿದ್ಧರಾಮ ಸ್ವಾಮಿಗಳು
ಅಡವಿಮಠ, ಅಂಕಲಗಿ.

ಶ್ರೀ. ನಿ. ಪ್ರ. ಸ್ವ. ಕುಮಾರಸ್ವಾಮಿಗಳು
ಕಲ್ಮಠ, ಸವದತ್ತಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ. ನಿ. ಪ್ರ. ಸ್ವ. ಶಿವಾನಂದ ಸ್ವಾಮಿಗಳು, ಅರಭಾಂವಿ.

ಶ್ರೀ. ನಿ. ಪ್ರ. ಸ್ವ. ಮೃತ್ಯುಂಜಯ ಸ್ವಾಮಿಗಳು,
ಕಿರೀಮಠ, ಸೊಲ್ಲಾಪುರ.

ಶ್ರೀ. ಮ. ನಿ. ಪ್ರ. ಸ್ವ. ಶಿವಲಿಂಗಸ್ವಾಮಿಗಳು,
ಹುಕ್ಕೇರಿಮಠ, ಹಾವೇರಿ.



ಶ್ರೀ. ನಿ. ಪ್ರ. ಸ್ವ. ನೀಲಲೋಚನ ಸ್ವಾಮಿಗಳು, ಹಾರನಹಳ್ಳಿ.

CC0. In Public Domain. Jangamwadi Math Collection, Varanasi

ಹರಿ-ಹರ-ಜಜರತರನ್ನು ಸಮನಾಗಿ ಕಂಡ

'ಅನುಭಾವಿ'—ಶ್ರೀಶರೀಫ ಸಾಹೇಬರು.

[ಕಳೆದ ಶತಮಾನದ ಪ್ರಥಮಾರ್ಧದಲ್ಲಿ ಕನ್ನಡನಾಡಿನಲ್ಲಿ ಜನಿಸಿ, ಜಾನಪದ ಕವಿಗಳಾಗಿ ಕನ್ನಡ ಜನ ಜೀವನ ಬೆಳಗಿದ ಲೋಕಪ್ರಿಯ 'ಅನುಭಾವಿ' ಶ್ರೀಶರೀಫ ಸಾಹೇಬರು ಜಾತಿ, ಮತ, ಪಂಥಗಳ ಸಮನ್ವಯದ ಉಜ್ವಲ ಪ್ರತೀಕವಾಗಿದ್ದಾರೆ. ಅಂಥ ಮಹಾನುಭಾವರು ಉಸುರಿದ ಜೀವನ ದರ್ಶನ ಕುರಿತಾದ ಸ್ಥೂಲ ವಿವೇಚನೆ ಈ ಕಿರು ಲೇಖನ].

ಶರಣರು, ಮಹಾತ್ಮರು, ದೇಶ, ಕಾಲ, ಪರಿಸರಗಳನ್ನು ಮೀರಿ ನಾಡಿನ ಅನೇಕ ಭಾಗಗಳಲ್ಲಿ ನಿಂತು ಧರ್ಮವನ್ನು ಬೆಳಗಿದರು. ಜನರಲ್ಲಿ ದೈವೀ ಜಾಗ್ರತಿಯನ್ನುಂಟು ಮಾಡಿದರು. ಜೀವಾತ್ಮರನ್ನು ಪರಮಾತ್ಮನನ್ನಾಗಿಸುವಂತಹ ಜೀವನ ಮಾರ್ಗವನ್ನು ಅರುಹಿದರು.

ಲೋಕಮಾನ್ಯರಾದ ಏಸು, ಭಕ್ತಿಮಾರ್ಗವನ್ನು ಬೆಳಗಿದ ಬಸವಣ್ಣ, ಮಾಯೆಯ ಹಂಗು ಹರಿದೊಗೆದ ವೈರಾಗ್ಯನಿಧಿ ಪ್ರಭುದೇವರು, ಸ್ವಾನುಭವವನ್ನು ಬೋಧಿಸಿದ ಬುದ್ಧ, ಮಹಾವೀರ ಇವರೆಲ್ಲ ಸತ್ಯ, ಅಹಿಂಸಾ ಮಾರ್ಗಗಳಿಗೆ ನಾಂದಿ ಹಾಕಿಕೊಟ್ಟರು. ಸ್ವಕಾರ್ಯದಲ್ಲಿ ನಿಷ್ಠೆ, ತತ್ಪರತೆಗಳನ್ನು ಕಲ್ಪಿಸಿಕೊಟ್ಟರು. ಪೈಗಂಬರ, ಕಬೀರ, ಗುರುನಾನಕ ಮುಂತಾದವರು, ರಾಮ–ರಹೀಮ ಒಂದೇ ಎಂಬ ಮಾರ್ಗ ತೋರಿದರು. ಪರಸ್ಪರರಲ್ಲಿ ಬಾಂಧವ್ಯವನ್ನು ಹೆಚ್ಚಿಸಿದರು. ಪುರಂದರ ದಾಸಾದಿಗಳಂತಹವರು ಹರಿಹರರಲ್ಲಿ ಅಭೇದತೆಯನ್ನು ಕಲ್ಪಿಸಿ ಜನರಿಗೆ ಮಾರ್ಗಾವಕಾಶ ಮಾಡಿಕೊಟ್ಟರು.

ಸತ್ಯ ಶರಣರು ಮೆಟ್ಟಿದ ಧರೆ ಪಾವನ, ಮಿಂದ ಜಲ ಪಾವನ, ನಡೆದುದು ಸನ್ಮಾರ್ಗ. ಅಂತಹ ಸತ್ಯ ಶರಣರ ಜೀವನಕ್ರಮವನ್ನನುಸರಿಸಿ ನಿಂದು, ಲೋಕದ ಜನತೆಯನ್ನು ಜೀವನ್ಮಾರ್ಗದಿಂದ ಉದ್ಧರಿಸಲೆತ್ನಿಸಿದವರಲ್ಲಿ ಶಿಶುವಿನಹಾಳದ ವರಪುರುಷ ಶ್ರೀಶರೀಫ ಸಾಹೇಬರೂ ಒಬ್ಬರು. ಅವರು ತಮ್ಮ ಜೀವನಾನುಭವದ ಮಾರ್ಗವನ್ನು ದರ್ಶಿಸುತ್ತ, ನಡೆದು, ನಡೆದಂತೆ ನುಡಿದು ಲೋಕವನ್ನು ಪುನೀತಗೊಳಿಸಿದರು, ಪಾವನಗೊಳಿಸಿದರು.

ಧಾರವಾಡ ಜಿಲ್ಲೆಯ ಶಿಶುವಿನಹಾಳವೆಂಬ ಚಿಕ್ಕ ಗ್ರಾಮದಲ್ಲಿ ಮಹಮ್ಮದೀಯರ ಬಡಕುಟುಂಬವೊಂದರಲ್ಲಿ [೩-೭-೧೮೧೯] ಜನ್ಮವೆತ್ತಿ ಸ್ಮಾರ್ತಗುರು ಕಳಸದ (ಪಕ್ಕದ ಒಂದು ಹಳ್ಳಿ) ಶ್ರೀಗುರು ಗೋವಿಂದಭಟ್ಟರಿಂದ ಅನುಗ್ರಹ ಪಡೆದು, ತಾವು ಬೆರೆತು ನಡೆದ ವೀರಶೈವ ತತ್ವದ ಬಳ್ಳಿಯನ್ನು ತಮ್ಮ ತತ್ವಾನುಭವ ಮಂಟಪವನ್ನಾಗಿ ಹೆಣೆದು, ಭವ್ಯವಾದ ಲೋಕಗೋಚರ ಮಹಾಮಂಟಪವನ್ನು ನಿರ್ಮಿಸಿದರು. ಸರ್ವ ಸಮಾಜ, ಧರ್ಮಗಳ ಜನರಿಗೆ ಬೇಕಾಗಬಲ್ಲ ಅನುಭವ ಮರ್ಮದ ಸುಕೃತಿಯನ್ನು ತಿಳಿದುಕೊಳ್ಳುವಂತೆ ಮಾಡಿದರು. ಮಹಮ್ಮದೀಯರಾಗಿ ಜನಿಸಿ ಸ್ಮಾರ್ತ ಗುರುವಿನಿಂದ ಉಪದೇಶ ಪಡೆದು, ವೀರಶೈವ ತತ್ವಮಾರ್ಗವನ್ನನುಸರಿಸಿ, ಬದುಕಿ ಬೆಳಗಾದ ಅವರ ಬಾಳು ಆದರ್ಶಮಯವಾಯಿತು. ವಾಣಿ–ಅಮೃತವಾಣಿಯಾಯಿತು.

ಸಂಸಾರ ಪ್ರಿಯರು :

ಶ್ರೀಶರೀಫರು ಸಂಸಾರಪ್ರಿಯರು, ಆಶಾವಾದಿಗಳು, ಸಂಸಾರದಿಂದ ಸದ್ಗತಿಯುಂಟು, ಈಸಬೇಕು ಇದ್ದು ಜಯಿಸಬೇಕು. ಎಂಬ ತತ್ವ ಪ್ರಣಾಲಿಯಂತೆ ನಡೆದವರು. ಸಂಸಾರವೆಂಬುದು ಮಹಾಕೆಸರು. ಅದರಲ್ಲಿ ಸಿಕ್ಕಿಕೊಳ್ಳದಂತೆ ನಡೆಯುವುದೇ ಜಾಣತನ, ಕುಂಬಾರ ಹುಳುವಿನಂತೆ ಸಂಸಾರದಲ್ಲಿದ್ದುಕೊಂಡೇ ಇಲ್ಲದವರಾಗಿ ಜೀವನ ಸಾಗಿಸಬೇಕು.

Digitization by eGangotri and Sarayu Trust. Funding by MoE-IKS

ಎಂದು ಬೋಧಿಸಿದ ಅವರ ವಾದ ' ಬಳಸಿ ಬ್ರಹ್ಮಚಾರಿ, ಉಂಡುಸವಾಸಿ ' ಎಂಬ ಹಿನ್ನೆಲೆಯದು. ಸಂಸಾರ ಬಂಧನ, ಅದರ ಆಕರ್ಷಣೆ ಕುರಿತು ಅವರು ಕೊಡುವ ದೃಂಷ್ಟಾಂತಗಳು ಬಹು ಮಾರ್ಮಿಕವಾದವುಗಳಾಗಿವೆ.

ಸಂಸಾರವು ಒಂದು ಮೋಜಿನ ಕುದುರೆ, ಹಾವು, ಬೀಸುವಕಲ್ಲು, ಮಹಾಸಂತೆ ಎಂದು ಹೇಳುತ್ತ, ಜೀವವೆಂಬುದು ಒಂದು ಪಕ್ಷಿ, ಆ ಪಕ್ಷಿಯು ಸಂಸಾರದ ಈ ಪಠಾಂಗಣದಲ್ಲಿಳಿದು ಯಾವಾಗ ಹಾರಿಹೋಗುತ್ತದೆ ಎಂದು ಹೇಳುವುದು ಗಹನ ವಿಚಾರ. ಅಂತಹ ಪಕ್ಷಿಯನ್ನು ಚಿತ್ತಬಂದಂತೆ ಗೊತ್ತುಗುರಿಯಿಲ್ಲದೆ ತಿರುಗುವ ಮನೋಕುದುರೆಯ ಮೇಲೆ, ಏರಿಸಿ ಕೈಬಿಟ್ಟರೆ ಅದರ ರಕ್ಷಣೆ ಎಂದಿಗೂ ಸಾಧ್ಯವಿಲ್ಲ. ಆಶೆಯನದಿಯಲ್ಲಿ ಸದಾ ಈಸಬಯಸುವ ಸರ್ವ ವ್ಯವಹಾರ ಮೂಲವಾದ ಚಂಚಲ ಮನಸ್ಸನ್ನು ಅಂಕಿತದಲ್ಲಿರಿಸಿಕೊಳ್ಳಬೇಕು.—" ಹರಿದುಡೂ ಮನಸಿಗೆ ಮೊಚ್ಚಿಲ್ಹೊಡೆದು ನಿಲ್ಲಿಸು ಜಾಣಾ." ಎಂದು ಹೇಳುವ ಅವರ ಮಾತು ಕಟುಸತ್ಯವಾಗಿ ಕಂಡರೂ ಮನಸ್ಸಿನ ವಿಕೃತ ರೂಪವನ್ನು ಎತ್ತಿ ತೋರಿಸುತ್ತದೆ.

ವಾತಾವರಣ ನಿರ್ಮಾಣ :

' ವ್ಯಕ್ತಿ ಪರಿಸರದ ಶಿಶು " (man is a child of the enerronments) ಆತನಿಗೆ ತಕ್ಕ ವಾತಾವರಣವನ್ನು ನಿರ್ಮಾಣ ಮಾಡಿಕೊಟ್ಟಾಗಲೇ ಜೀವನ ಯಾತ್ರ ಸುಗಮವಾಗಿ ಸಾಗಲು ಸಾಧ್ಯ. ಅದಕ್ಕೊಂದು ಸಂಸ್ಕಾರ ಬೇಕು. ಸಂಸ್ಕಾರವೆಂದರೆ ಜೀವನದ ಏಳಿಗೆಯ ಆಂತರಿಕ ಹೊಸ ಮಾರ್ಗ. ಅಂತಹ ಸನ್ಮಾರ್ಗ ತೋರಿಸುವಾತನೇ ಸಮರ್ಥ, ಅವನೆಂದರೆ ಸದ್ಗುರು. ಲೋಕದಲ್ಲಿ ಗುರುರೂಪಕ್ಕಿಂತ ಹಿರಿದಾದ ವಸ್ತು ಯಾವುದೂ ಇಲ್ಲ. ' ನ ಗುರೋರಧಿಕಂ ' ಎಂಬುದು ವೇದವಾಕ್ಯ, ಸರ್ವಸತ್ಯವಾದುದು.

ಗುರುಶಿಷ್ಯಭಾವ :

ಶರೀಫರಿಗೆ ಜೀವನ್ಮುಕ್ತಿಯನ್ನು ತೋರಿದ ಪರಮಗುರು ಕಳಸದ ಶ್ರೀಗೋವಿಂದಭಟ್ಟರು. ಅವರಿಂದಲೇ ದೀಕ್ಷೆಯಾಯಿತು; ಸಂಸ್ಕಾರವಾಯಿತು. ಗುರು ಭವರೋಗ ನಿವಾರಕನು. ಅಂತಹ ಗುರುಗೋವಿಂದರಾಜನು ತನಗೆ ಪರಮಾನಂದ ಬೋಧನೆಮಾಡಿ " ಕರ್ಮಸಾರವ ಕಳೆದು ಹಸನಾಗಿ ಮೂಲ ಮಂತ್ರವ ಹೇಳಿ, ಜನಿವಾರ ಹಾಕಿ, ತನ್ನ ಭವಭಾರ ದೂರಮಾಡಿದರು." ಎಂದು ಹಾಡಿ ಕುಣಿದಿದ್ದಾರೆ. "ಸದ್ಗುರುವಿನ ಹೊರತು ಯಾರೂ ಬೇರೆ ಗತಿಯಿಲ್ಲ" ಎಂಬುದನ್ನು ಎತ್ತಿತೋರಿದ್ದಾರೆ ಈ ಸನ್ನಿವೇಶದಲ್ಲಿ

ಗುರುಬೋಧೆ–ಅಮೃತ :

ಸದ್ಗುರುವಿನ ಗುಲಾಮನಾಗಿ ಕೊನೆಗೆ ಅವನಿಂದ ಪಡೆದ ದಿವ್ಯಮಂತ್ರದ ಮಹಿಮೆಯಿಂದ ಜೀವನವನ್ನು ಬೆಳಗಿಕೊಳ್ಳಬಹುದು, ಎಂದು ಮನಗಂಡ ಶರೀಫರು–ತಮ್ಮ ಆದ್ಯ ಗುರುವಾದ ಶಿಶುನಾಳಧೀಶನ (ಬಸವಲಿಂಗ ಪಂಚಾಕ್ಷರಿ ಮಂತ್ರ) ನಾಮಸ್ಮರಣೆಯ ಮಂತ್ರವನ್ನು ಜಪಿಸಿದರೆ " ಭೋಗ ಸಂಪದ ಸುಖ ದೊರಕುವ"ದೆಂದೂ, ಹೊತ್ತು ಹೋಗದಮುನ್ನ ಮೃತ್ಯುಮುಟ್ಟದಮುನ್ನ ಶಕ್ತಿಕುಂದದಮುನ್ನ ಪರಮಾತ್ಮನನ್ನು ಪೂಜಿಸು ಎಂದು ಹೇಳುವ ಶರಣರ ಮಾತಿನಂತೆ— " ಶ್ರೀಗುರು ಮಂತ್ರವ ಬರೆದೋದಿ ಜಪಿಸಿ, ಆಯುತೀರದ ಮುನ್ನ ಜೀವ ಪರಮಾತ್ಮರನು ಒಂದು ಠಾವಿನಲಿ ಕೂಡಿಸಬೇಕು " ಎಂದು ಆರುಹಿದ್ದಾರೆ.

ಗುರುದೇವನ ಬೋಧೆಯಿಂದಲೆ ಜನ್ಮ ಅರಿವಿನ ಜನ್ಮವಾಗುತ್ತದೆ. ಅಂದಮೇಲೆ ಅದರ ತೂಕತಪ್ಪದಂತೆ ನಡೆಯಬೇಕು. –ಸದ್ಗುರು ಬಿತ್ತಿದ ಬೋಧಾಮೃತವೆಂಬ ಸುಜ್ಞಾನ ಬೀಜದಿಂದ ಬೆಳೆಯುವ ಬೆಳೆಯನ್ನು ಸುಂದರವಾಗಿ ಬೆಳೆಸಬೇಕು. ಅಂತು ಜೀವನಸುಗ್ಗಿ ಹಸನಾಗಬೇಕು ಎಂದು ಅವರು—" ಹರಿವ ಮನವೆಂಬ ಕಳೆಯಸುಟ್ಟು ಸುಗ್ಗಿಯ ಮಾಡೂನು ಬಾರವ್ವಾ ತಂಗೀ " ಎಂದು ಜೀವನ್ಮುಕ್ತಿಯ ಸ್ಥಿತಿಯನ್ನು ಬಹುಮಾರ್ಮಿಕವಾಗಿ ಹೇಳಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮರ್ಪಣಭಾವ :

ಜೀವನದಲ್ಲಿ ಬಡಿವಾರಕ್ಕೆ ಎಡೆಗೊಡದೆ ಬಾಳುವುದೇ ಜಾಣತನ. ದೇಹವನ್ನು ಪರಮಾತ್ಮನ ಸೇವೆಗಾಗಿ ಗುರುಲಿಂಗ ಜಂಗಮರ ಸೇವೆಗಾಗಿ ಮುಡುಪಾಗಿರಿಸಬೇಕು, ಇಲ್ಲದಿದ್ದರೆ ಭವ ತಪ್ಪದು ಎಂದು—"ಲೇಸಿನಿಂದ ಜೀವವಾಸ ವಿರುವ ದೇಹವನ್ನು ಪರಮಾತ್ಮನಿಗೆ ಮೀಸಲಾಗಿರಿಸಿ" ತೋರಿಸಿದರು ಶ್ರೀ ಶರೀಫರು.

ಆಡಂಬರದ ಪೂಜೆಯೂ ಪರಮಾತ್ಮನಿಗೆ ಸಲ್ಲದು. ಅದು ಕೇವಲ ಢಂಬಾಚಾರವೆಂದು ಹೇಳುತ್ತ— ಅಂಥವರನ್ನು ಶರೀಫರು—"ಕಾಮದ ಭ್ರಮೆಯನು ಕಳೆಯದೆ ದೇವರ ಹಣತಿಯ ನೆಕ್ಕುವ ನಾಯಿ" ಎಂದು ನಾಯಿಗೆ ಹೋಲಿಸಿದ್ದಾರೆ, "ಅಂಗ ಲಿಂಗದ ಸುಖ ಸಮರಸವರಿಯದೆ ಮಂಗನ ತೆರದಂತೆ ಅಂಗ ಪೂಜಿಸುವದು ಸರಿಯಲ್ಲ" ಎಂದು ದೂಷಿಸಿದ್ದಾರೆ. "ಜ್ಞಾನ ಖಡ್ಗ ಪಿಡಿದು ಮಾಯೆಯೆಂಬ ಮಲವ ಕಡಿದು ಮೌನವಾಗಿ ಭಜಿಸಿ" ತೋರಿಸಿದ್ದಾರೆ. ಪರಮಾತ್ಮನೆದುರು ಜೀವನ ತಂಬೂರಿ ಸರಿಯಾಗಿ ನುಡಿಯಬೇಕು, ಧ್ವನಿಗೈಯಬೇಕು ಎಂದು—"ಬಾಳಬಲ್ಲವರಿಗೆ ತಂಬೂರಿ ದೇವ ಬಾಳಕ್ಕ ರಚಿಸಿದ ತಂಬೂರಿ..." ಅದನ್ನು ಹಸನಾಗಿ ನುಡಿಸಬೇಕೆಂದು ಹೇಳಿದ್ದಾರಷ್ಟೇ ಅಲ್ಲ ನುಡಿಸಿ ತೋರಿಸಿದ್ದಾರೆ, ಅದರ ಆ ಸುಂದರವಾದ ಧ್ವನಿಯಲ್ಲಿ ಗುರುವಿನ ಅಂತಃಕರಣದ ಅಗ್ಗಳಿಕೆಯನ್ನು ಆನಂದದಿಂದ ಹಾಡಿ ತೋರಿಸಿದ್ದಾರೆ.

ಅವರು ಭೌತಿಕ ಕಾಯವನ್ನು ಬಾಹ್ಯಾಂತರಂಗಗಳೆರಡರಲ್ಲೂ ಪರಿಶುದ್ಧಗೊಳಿಸಿ ಪರಮಾತ್ಮನಿಗೆ ಅರ್ಪಿಸಿದವರು. ಪರಮಾತ್ಮನು ಕಡುಬೆಡಗಿನಿಂದ ಅಡಗಿಕೊಂಡು ಕುಳಿತಿರುವ ಈ ದೇಹಮಂದಿರವನ್ನು ಚನ್ನಾಗಿ ಕಾಯ್ದಿರಿಸಬೇಕು ಎಂದು ಎಚ್ಚರಿಸಿದ್ದಾರೆ. ಶುದ್ಧಾತ್ಮನಾಗಿ—"ಅರಿವುಳ್ಳ ಎಡೆಯನು ಕರದೊಳು ಪಿಡಕೊಂಡು ಪರಮುಕ್ತಿ ಕೊಡುವಂಥ ಕುರುಣಾಸಾಗರನಿಗೆ "ಸರ್ವಸ್ವವನ್ನು ಸಮರ್ಪಿಸಬೇಕೆಂದು ಹೊರಟು—"ಮುಕ್ತಿದಾಯಕ ಶ್ರೀ ಬಾದರ ಲಿಂಗನಲಿ...." ಸೇವೆಗಾಗಿ ತೆರಳಿದ್ದರು. ತಮ್ಮ ಲೇಸೆನಿಸಿದ ಶರೀರವನ್ನು ಶಿಶುನಾಳಧೀಶನ ಸೇವೆಗಾಗಿ ಮೀಸಲಾಗಿರಿಸಿದರು.

ಜೀವ ಜೋಕೆಯಿಂದ ಸಾಗಬೇಕು :

ವಿಷಮ ವಾತಾವರಣದಿಂದ ಪರಿಪೂರ್ಣವಾಗಿ ತುಂಬಿರುವ ಈ ಸಂಸಾರದಲ್ಲಿ ಹೇಗಿದ್ದರೂ ಜನರಿಗೆ ಸರಿಯಿಲ್ಲ, ನೆಮ್ಮದಿಯಿಲ್ಲ. ಕುಹರೆಗಳು ಕುತ್ಸಿತರುಗಳಿಂದ ತುಂಬಿದ ಜಗತ್ತಿನಲ್ಲಿ—

"ಮೂಕನಾಗಿರಬೇಕೋ ಜಗದೊಳು ಜ್ಯೋಕ್ಯಾಗಿರಬೇಕೋ
ಕಾಕು–ಕುಹಕರ ಸಂಗ ನೂಕಿರಬೇಕೋ......ಶ್ರೀ ಶಂಕರಬ್ರಹ್ಮ ತಾನಾಗಿರಬೇಕೋ"—

ಎಂದು ಜೀವನ ಜೋಕೆಯಿಂದ ಸಾಗಬೇಕೆಂದೂ, ಮೂಕನಂತೆ, ಮೌನಧಾರಿಯಾದ ತಪಸ್ವಿಯಂತೆ ಕಾಲಕಳೆಯಬೇಕೆಂದೂ ಸಲಹೆಯಿತ್ತಿದ್ದಾರೆ. ಸಂಸಾರವೆಂಬ ಸಂತೆಯಲ್ಲಿ ಜೀವನ ಬದುಕಿನ ಮುದಕಿ ತಲೆಯಲ್ಲಾಡಿಸುತ್ತ ಚಲಿಸುತ್ತಲಿದ್ದಾಳೆ. ಸಂಸಾರ ಸಂತೆಯ ಮಧ್ಯದಲ್ಲಿಯ ಅಷ್ಟಮದ, ಅರಿಷಡ್ವರ್ಗ, ಷಡಿಂದ್ರಿಯಗಳ ಗದ್ದಲದ ತಾಕಲಾಟದ ನೂಕುನುಗ್ಗಿನಲ್ಲಿ ಸಿಲುಕಿಸಿಕೊಂಡು, ತೊಂದರೆಪಟ್ಟುಕೊಳ್ಳುವ ಅವಳನ್ನು ಕಂಡು ಮರಗಿದ್ದಾರೆ. ಅವಳ ಬುದ್ಧಿಗೇಡಿತನವನ್ನು ಕಂಡು ಮಿಡುಕಿದ್ದಾರೆ. "ಬಿದ್ದಿಯಾಚೆ ಮುದಕಿ...... ಸಂತಿಗದ್ದಲದೊಳಗ್ಯಾತಕ ನಿಂತಿ ವದ್ಯಾಡಿದರೆ ಎಬ್ಬಿಸುವರಿಲ್ಲ ಥೀ ಬುದ್ಧಿಗೇಡಿ ಮುದಕೀ......" ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ಜೋಕೆತಪ್ಪಿದರೆ ಜೀವನಸಂತೆ ಹಸನವಾಗಲಾರದೆಂದು ಅರುಹಿದ್ದಾರೆ.

ಜಾತಿ-ಮತ, ಮಡಿ-ಮೈಲಿಗೆ, ಶೀಲಗಳು

ಕಮಲವು ಕೆಸರಿನಲ್ಲಿದ್ದರೂ, ಪರಮಾತ್ಮನಿಗೆ ಅದು ಪ್ರಿಯವಸ್ತುವಾಗಿದೆ, ನಿವಾಸಸ್ಥಾನವಾಗಿದೆ. ಒಳ್ಳೆಯ ವಸ್ತುನಿಲ್ಲದಿದ್ದರೂ ಸರಿಯೇ. ಸರ್ವಲೋಕಪ್ರಿಯವಾಗುತ್ತದೆ, ಪೂಜ್ಯವಾಗುತ್ತದೆ. ಸಮಾಜದ ಕೊಳೆಯನ್ನು ತೊಡೆದ್ದು ಹಾಕಿ ಹಸನು ಮಾಡಲು ಯತ್ನಿಸಿದ ಮಹಾತ್ಮರು ನಿಜವಾಗಿಯೂ ಕುಲಗೋತ್ರ ವರ್ಣಾದಿಗಳಿಗೆ ದೂರರು. ಅವರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕವೇ ಮನೆ, ಮಾನವ ಸಮಾಜವೇ ಕುಟುಂಬ. ಅವರು ಬೇಕು ಬೇಡಗಳೆಂಬ ಭವಬೀಜಗಳನ್ನು ಸುಟ್ಟುಹಾಕಿ ನಿಂತ ಪುಣ್ಯವಂತರು.

ಮತ, ಧರ್ಮ, ಕುಲಾಚಾರಗಳನ್ನು ಬಹುವಾಗಿ ಕಂಡ ಶ್ರೀ ಶರೀಫರು ಸಮಾಜವನ್ನು ಕಟುವಾಗಿ ಟೀಕಿಸಿದ್ದಾರೆ, ಮರ್ಮವರಿತು ಮಾತನಾಡಿದ್ದಾರೆ. "ಬೋರೆಯೊಳಗ ಮೂರು ಲೋಕ ಹುಟ್ಟಿತು. ಆ ಕುಲ ಈ ಕುಲ ಎಲ್ಲಿತ್ತು" ಎಂದು ಕುಲಾಚಾರಗಳ ರೀತಿಯನ್ನು ಖಂಡಿಸಿ ನುಡಿದಿದ್ದಾರೆ. ಅವುಗಳ ನಿರ್ಮಾಣಕ್ಕೆ ನಾವೇ ಕಾರಣರು. "ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು ಸುಡುವಗ್ನಿಯೊಂದೇ ಇಂತಿರಲು ನಡುವೆ ಕುಲಗೋತ್ರವೆತ್ತ ಣದು" ಎಂಬ ಸರ್ವಜ್ಞ ಕವಿಯ ಮಾತಿನ ಅರ್ಥವ್ಯಾಪ್ತಿಯನ್ನು ಶರೀಫರ ಈ ಪದ್ಯದಲ್ಲಿ ಕಾಣಬಹುದು.

ಲೋಕದ ಚಾಲಕಶಕ್ತಿಗೆ ಪ್ರೇರಕವಾದುದು ತೃಷೆ. ಆದರ ಕಾಂತಿ, ಭ್ರಾಂತಿಗಳಿಗೆ ಆಕರ್ಷಿತಗೊಂಡ ಲೋಕ ಮರುಳಾಗಿದೆ, ಮೂಕವಾಗಿದೆ ಎಂಬದನ್ನು ಅವರ ನುಡಿಯಲ್ಲಿಯೇ ಅರಿಯುವುದು ಸುಂದರ. "ತೊಗಲ ಮಲಿಯಾನ ಹಾಲು ಕುಡಿದು ಶೀಲ ಮಾಡತೀರಿ ಜನರೆಲ್ಲ......" ಎಂದು ಉದ್ಗಾರ ತೆಗೆದು......."ನಾ ಆದರೇನು ನೀ ಆದರೇನು, ಅರಸ ಪ್ರಧಾನಿ ಆದರೂ ತೊಗಲ, ತೊಗಲ ತೊಳಿದು ಕರನೀರ ಮಡಿಯ ಮಾಡಿ ಗುಂಡಿಯಂತೀದೋ ಪಿಕನಾಶಿ, ಗಂಧ ವಿಭೂತಿ ತೊಗಲಿಗೆ ಧರಿಸಿ ಜಾತಿ ಜಾತಿ ಬ್ಯಾರೇ ಎನಿಸಿ......" ಎಂದು ಮಡಿ ಮೈಲಿಗೆಯ ಮರ್ಮವನ್ನು ಬಯಲಿಗೆಳೆದಿದ್ದಾರೆ, ಹೊಲಸಿನ ಸುಂಬಳ ತಿನ್ನುವ ನೊಣದಂತೆ ವಿಷಯ ಸುಖಕ್ಕೆ ಬಳಲುವ ರೀತಿ ಇದ್ದು "ಬಾಯಿಲೆ ಬ್ರಹ್ಮವ ಬೊಗಳಿದರೇನು......" ಛೀ ಮರುಳೇ! ಅದೇತರ ಧರ್ಮ ಅದಾವ ಶೀಲ ಎಂದು ನುಡಿದಿದ್ದಾರೆ. ಪರಮಾತ್ಮನ ಅನುಗ್ರಹ ಎಲ್ಲರಿಗೂ ಒಂದೇ, ಪರಮಾತ್ಮ ನಿರ್ಮಿತ ಪ್ರಕೃತಿ ಕರುಣೆಯು ಎಲ್ಲರಿಗೂ ಒಂದೇ. ಅದರ ಮುಂದೆ ಕುಲದ ತೊಡಕಿಲ್ಲ ಮೈಲಿಗೆಯ ಸೋಂಕಿಲ್ಲ, ಧರ್ಮದ ಜಾಡಿಲ್ಲ ಎಂದು ಹೇಳುತ್ತ "ಬೋಧ ಒಂದೇ, ಬ್ರಹ್ಮನಾದ ಒಂದೇ, ಸಾಧನ ಮಾಡುವ ಹಾದಿಯೊಂದೇ, ತಂದೆ ಸದ್ಗುರುನಾಥ ಎಂದೆಂದಿಗೂ ಒಂದೇ...." ಎಂದು ನುಡಿಯುವ ಶ್ರೀಶರೀಫರ ಅಮೃತವಾಣಿ ಅವರು ತುಳಿದ ಸಮತಾವಾದದ ನೆಲೆಯ ಪ್ರತೀಕವಾಗಿದೆ. ಅದನ್ನು ಎತ್ತಿ ಹೇಳುವುದರ ಜೊತೆಗೆ ಅವರಿಗಿರುವ ಸಮಾಜ ಪ್ರಜ್ಞೆಯನ್ನೂ ಬೆಳಗಿದೆ.

ತ್ರಿಕೂಟ ದರ್ಶನ

ಶ್ರೀ ಶರೀಫರ ವಾಣಿಯಲ್ಲಿ ಮಹಮ್ಮದೀಯ, ವೈದಿಕ ಮತ್ತು ವೀರಶೈವ ದರ್ಶನಗಳ ಸಮ್ಮಿಳನದ ಸರಸ ಸಂಗಮವನ್ನು ಕಾಣಬಹುದು. ಒಂದಕ್ಕೇ ಕಟ್ಟು ಬೀಳದೆ ಅವರು ತ್ರಿದರ್ಶನಗಳನ್ನು ಒಗ್ಗೂಡಿಸಿದ್ದಾರೆ, 'ವೀರಶೈವ'ದ ಅಂಗವಾಗಿ ಬರುವ ಅಷ್ಟಾವರಣಗಳಿಗೆ ಅವರು ತೋರಿದ ಆದರ ಭಕ್ತಿಗಳು ಅವರ ಮೇಲಾದ ವೀರಶೈವ ಸಂಸ್ಕೃತಿಯ ಪ್ರಭಾವವನ್ನು ವ್ಯಕ್ತಪಡಿಸುತ್ತದೆ. ಗುರು, ಲಿಂಗ, ಜಂಗಮ, ಭಸ್ಮ, ಪಂಚಾಕ್ಷರಿ ಮಂತ್ರಗಳಿಗೆ ಅವರಲ್ಲಿ ಹಿರಿಯ ಸ್ಥಾನಗಳು ದೊರೆತಿವೆ. "ವೈ ಜಂಗಮಹೋಕರ ಗಲೀ ಗಲೀ ಫಿರಿಯಾ......" ಎಂಬಲ್ಲಿ, "ಇಷ್ಟಲಿಂಗದ ಅರಿವು ಇಲ್ಲದೆ ಸೃಷ್ಟಿಪಾಲ ಶಿವ ಜಂಗಮಬಿಟ್ಟು, ಬಳಲಿಸಿದರೆ ಕೆಟ್ಟರು ಕುಚೇಷ್ಟರು, ಭ್ರಷ್ಟರು...." ಎಂದು ಹೇಳುವಲ್ಲಿ ಅವರಿಗಿರುವ ಗುರು, ಲಿಂಗ, ಜಂಗಮರ ಬಗೆಗಿರುವ ಅಪಾರ ಭಕ್ತಿ ಎಂತಹದೆಂದು ಮನದಟ್ಟಾಗುತ್ತದೆ. "ಅಲ್ಲಮಪ್ರಭುವಿನ ಗುರುತು ತಿಳಿಯದೆ ಅಲ್ಲಾ ಅಂದರು ಒಂದು ಮಾತಾ..." ಎಂಬ ಅವರ ನುಡಿಯಲ್ಲಿ ಪ್ರಭು ಮತ್ತು ಅಲ್ಲಾ ಇಬ್ಬರೂ ಒಂದೇ ಎಂದು ದೃಢವಾಗಿ ತಿಳಿಸುವ ಮಾರ್ನುಡಿ ಮೊಳಗಿದೆ. "ಸುರಮುನಿ ಹರಗಣ ವರನಂದನಾಥರು ಧರಿಸಿದಾಕ್ಷಣದೊಳು ಮರಣ ವಿಜಯರಾಗಿ ಎರಡೊಂದನಕ್ಷರ ಪ್ರಣವುಡೆ ಭಸಿತವು ಶಿರದೊಳೂರಿದ ಮೇಲೆ ಹರಗಣ ಪದವೀಯುವದು." ಎಂದು ವಿಭೂತಿಯ ಮಹಿಮೆಯನ್ನೂ, "ಶ್ರೀಗುರು ಮಂತ್ರವ ರಾಗದಿ ನುತಿಸಲು ಭೋಗಸಂಪದ ಸುಖವಾಗುವದೋ..." ಎಂಬಲ್ಲಿ ಪಂಚಾಕ್ಷರಿ ಮಂತ್ರದ ಮಹತಿಯನ್ನೂ ಸ್ಪಷ್ಟಪಡಿಸಿದ್ದಾರೆ. ಶ್ರೀಗುರು ಗೋವಿಂದಭಟ್ಟರಿಂದ ಬೋಧ ದೀಕ್ಷೆಯನ್ನು ಪಡೆದ ಶರೀಫರು ತಮಗಾದ ಬ್ರಹ್ಮಜ್ಞಾನದ ರೀತಿಯನ್ನು "ಹಾಕಿದಾ ಜನಿವಾರವಾ ಸದ್ಗುರುನಾಥಾ ನೂಕಿದಾ ಭವಭಾರವಾ" ಎಂದು ಹೇಳಿ ತಾವು ಪಡೆದ ವೈದಿಕ ಸಂಬಂಧವನ್ನು ಪ್ರಕಟಗೊಳಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರದ ಜಂಜಡ ವಸ್ತುಗಳು

ಹೆಣ್ಣು, ಹೊನ್ನು, ಮಣ್ಣು, ಚಂಚಲ ಮನಸ್ಸುಗಳು ಸಂಸಾರದ ಜಡವಸ್ತುಗಳೆಂದೂ ಅಸ್ಥಿರವಸ್ತುಗಳೆಂದೂ ತಿಳಿದ ಶರೀಫರು ಅವುಗಳತ್ತ ಎಂದೂ ಹೊರಳಲಿಲ್ಲ, ಮನಸೋಲಲಿಲ್ಲ. "ಕೆಟ್ಟ ಹೆಣ್ಣು ಇವಳು ಬೆದರಗಡಕಿ..." ಎಂದು ಹೆಣ್ಣಿನ ಚಂಚಲ ಮನೋವೃತ್ತಿಯನ್ನು ಎತ್ತಿತೋರುರಿವರು. "ಒಳ್ಳೇದಲ್ಲ ನಿನ್ನ ಸಲಿಗೀ..." ಎಂದು ಮನಸ್ಸನ್ನು ಸ್ಥಿಮಿತದಲ್ಲಿರಿಸಿಕೊಳ್ಳಲು ಯತ್ನಿಸಿರುವರು. ಲೋಕದ ವ್ಯವಹಾರಕ್ಕೆಲ್ಲ ಮೂಲಶಕ್ತಿಯಾಗಿ ನಿಂತ ಹಣವನ್ನು "ದುಡ್ಡು ಕೆಟ್ಟದು ನೋಡಲೋ......ಹೇಸಿಯಾಗಿ ಸೂಸುವ ದುಡ್ಡು ದೊಡ್ಡ ದೊಡ್ಡವರನ್ನು ಅಡ್ಡ ಬೀಳಿಸುವದು...." ಎಂದು ಹೇಳಿ, ಅದನ್ನು ಕೆರವಿನ ಆಟ್ಟೆಯ ಸಮಾನವಾಗಿ ಕಂಡಿರುವರು. ಜೀವನದಲ್ಲಿ ಅವುಗಳ ಬಳಕೆ ಹಿತವಾಗಿರಬೇಕು, ಮಿತವಾಗಿರಬೇಕು. ಎಂದು ಸೂಚ್ಯವಾಗಿ ಹೇಳಿರುವರು.

ಶರೀಫರ ತಲಬುಗಳು :

ಶರೀಫಸಾಹೇಬರು ಗಾಂಜಾ, ಸರಾಯಿ ಪಾನಮಾಡುತ್ತಿದ್ದರೆಂಬುದು ಪ್ರತೀತಿ. ಇಂದಿನ ಕೆಲವು ಜನ ತಲಬುಗಾರರು ಅಂಥವರ ಹೆಸರಿನಲ್ಲಿ ತಾವೂ ಮದ್ಯಪಾನ, ಸಿದ್ಧಪತ್ರಿಗಳ ಸಂಗವನ್ನು ಪಡೆಯಬಯಸುತ್ತಾರೆಂದರೆ ಅಚ್ಚರಿಯಲ್ಲ. ಆದರೆ ಶರೀಫರು ಸೇವಿಸಿದ್ದು ಸರಾಯಿ ಸಿದ್ಧಿಪತ್ರಿ (ಗಾಂಜಾ) ಗಳನ್ನಲ್ಲ. ಅಷ್ಟೇ ಏಕೆ ? ಅಂಥವರೊಡನೆ ಬಳಕೆಮಾಡುವದೂ ಕೂಡ ಹೇಯವೆಂದೂ ತಿರಸ್ಕರಿಸಿದ್ದಾರೆ. "ಬಿಡದೆ ಸೆರೆ ಸಿಂದಿಯು ತಂದು ಹಿಡಿದು ಬೀಳೂಹಾಂಗ ಕುಡದು ಪುಂಡರಾಗಿ ತಿರುಗುವ ಭಂಗಿ ತಂಬಾಕ ಸೇದುವ, ಮರುಳು ಮಂಗನಂತಹ ಹೇಸಿಕೆಯಿಲ್ಲದ ಜನರಕೂಡ ಹ್ಯಾಂಗ ಬಳಕೀ ಮಾಡಬೇಕಣ್ಣಾ." ಎಂದು ತಮ್ಮ ನುಡಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಸಿದ್ಧಪತ್ರಿ (ಗಾಂಜಾ) ಯನ್ನು ಸೇವಿಸುವವರಿಗೆ—"ವಿಷಯವೆಲ್ಲವ ಸುಟ್ಟು ವ್ಯಸನಕಾಗ್ನಿಯ ಕೊಟ್ಟು ಹಸನಾದ ಹಸರು ತಂಬಾಕದ ಬತ್ತಿಯ ಸೇದು" ಎಂದು ಉಪದೇಶಿಸಿದ್ದಾರೆ. "ಯೋಗಿ ಜನರು ಕಂಡು ಮೂಗು ಮುಚ್ಚಿಕೊಳ್ಳುವಂಥ ಗಾಂಜಿ ತನಗಾಗದು" ಎಂದು ಅದರ ಮರ್ಮವನ್ನರುಹಿದ್ದಾರೆ, ತಮ್ಮನ್ನು ಈ ವಿಷಯದಲ್ಲಿ ಪ್ರಶ್ನಿಸುವ ಅಣ್ಣಗಳಿಗೆ "ತಾನು—ಮನವೆಂಬ ಚಂಚಿಯಲ್ಲಿ ದೀನದೀನಸದ ಪಾತಕವೆಂಬ ಭಂಗಿಯ ಕೂಡಿಸಿ, ನೆನಹಿನ ಚಿಲುಮೆಯ ಮೇಲಿಟ್ಟು, ಬುದ್ಧಿಯೆಂಬ ಬೆಂಕಿಯ ಹಚ್ಚಿ ದಾರಿದ್ರ್ಯವ ಕಳೆಯುವ ಶುದ್ಧ ಜ್ಞಾನದ ಮುದ್ದು ಚಿಲುಮಿಯ ಸೇದಿದೆ" ಎಂದು ಧೈರ್ಯವಾಗಿ ಉತ್ತರಿಸಿದ್ದಾರೆ. ಲೋಕದ ಕಣ್ಣಿಗೆ ಅವರ ಆ ಸ್ವಭಾವಗಳು ಚಟವಾಗಿ ಕಂಡರೆ, ಶರೀಫರ ಆ ಚಟಗಳು ಜೀವನ ಶುದ್ಧಿಯ ಮಾರ್ಗಾವಕಾಶಗಳಾಗಿದ್ದವು.

ಅವರ ಜೀವನ—"ಪವಾಡಶಾಲೆ"

ಶ್ರೀ ಶರೀಫರು ತಮ್ಮ ಜೀವನವನ್ನು ಒಂದು ಕರ್ಮಶಾಲೆಯನ್ನಾಗಿಸಿ, ಅನಂತ ರೀತಿಯ ತಥ್ಯಪೂರ್ಣ ಪವಾಡಗಳನ್ನು ಮೆರೆದರು. ಪವಾಡಗಳೆಂದರೆ ಶರೀಫರ ದೈವೀಶಕ್ತಿಯ ಪ್ರದರ್ಶನವೆಂದೇ ಹೇಳಬೇಕು. ಅನನ್ಯ ಭಕ್ತಿಯಿಂದ ಜಗನ್ಮಾತೆಯನ್ನು ಒಲಿಸಿಕೊಂಡು ಆವಳ ಮುಖಮುಕುರವನ್ನು ಪಡೆದರು. ತಮ್ಮ ಆಂತಃಶಕ್ತಿಯ ಮಹಾಪ್ರಭೆಯಿಂದ ಸೃಷ್ಟಿ ನಿಯಮಗಳನ್ನು ಬದಲಾಯಿಸುವಂತೆ, ಅಮಾವಾಸ್ಯೆಯ ದಿನ ಹುಣ್ಣಿವೆಯ ಚಂದಿರನನ್ನು ತೋರಿಸಿದರು. ಇದ್ದ ಠಾವಿನಿಂದಲೇ ತಮ್ಮ ಬಂಧುಮಿತ್ರರಿಗೆ ಮಕ್ಕಾ ಮದೀನಾಗಳ ದರ್ಶನವನ್ನು ಮಾಡಿಸಿದರು. ಸತ್ತವರನ್ನು ಬದುಕಿಸಿದರು. ನಿಃಶಕ್ತರನ್ನು ಸಶಕ್ತರನ್ನಾಗಿಸಿದರು. ಮಳೆ ಬರಿಸಿ ಜನರ ಮನೆ ಮನೆಗಳನ್ನು ತುಂಬಿದರು. ಈ ರೀತಿಯಾಗಿ ಬಹುಮುಖಗಳಲ್ಲಿ ಹರಿದ ಅವರ ಜೀವನ ದರ್ಶನ ಅನುಪಮವಾಗಿದೆ, ಅದ್ವಿತೀಯವಾಗಿದೆ.

ಪ್ರಕೃತಿಪ್ರೇಮ

ಶ್ರೀಶರೀಫರ ಸಹಾನುಭೂತಿ ಕರುಣೆಗಳ ಪ್ರತೀಕವಾಗಿ ಮಂಗ, ಕುರಿ, ಕೋಳಿ, ಬೆಳವ, ಕಪ್ಪೆ, ನಾಯಿ, ನರಿ ಕುದುರೆಗಳು ಅವರ ಕಾವ್ಯದ ವಸ್ತುಗಳಾಗಿ ಮಾನವ ಲೋಕದ ಅನುವರ್ತಗಳಾಗಿ ಸುಳಿದಿವೆ. ಅವರು "ಭಾವದ ಕುದುರೆ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯನ್ನು ಹತ್ತಿ ಮೆರೆದಿದ್ದಾರೆ. “ ಮನಸ್ಸೆಂಬ ಕುದುರೆ ”ಯನ್ನು ಬೆನ್ನತ್ತಿ ತಿರುಗಿಸಿದ್ದಾರೆ. “ ಅಚ್ಚುತನಿಗೆ ಎಚ್ಚರ ಕೊಟ್ಟಂಥ ಕೋಳಿ ”ಯನ್ನು ಕಂಡು ಹೌಹಾರಿ ನಿಂತಿದ್ದಾರೆ. “ ಲಂಕಾಧಿಪತಿಯ ಸತಿಯಾದ ಕಪ್ಪೆ”ಯನ್ನು ನೋಡಿ ಹರ್ಷಗೊಂಡಿದ್ದಾರೆ. “ ತುಂಗ ರಾಮಾವತಾರವ ಸಿಂಗಾರಗೊಳಿಸಿದ ಮಂಗ”ನನ್ನು ಕಂಡು ಕೌತುಕಗೊಂಡಿದ್ದಾರೆ. “ ಸಂಸಾರವೆಂಬ ಮಾಯೆಯ ಹಳುವಿನಲ್ಲಿ ತಿರುಗುವ ಜೀವನ ಹಕ್ಕಿಯನ್ನು ಕಂಡು ಮರುಗಿದ್ದಾರೆ. “ ಕಾಯದ ಭ್ರಮೆ ಯನ್ನು ಕಳೆಯದೆ ತಾಪಸ ದೇವರ್ಪ್ಪಣೆಯ ನೆಕ್ಕುವ ನಾಯಿ”ಯನ್ನು ಕಂಡು ನಕ್ಕಿದ್ದಾರೆ.

ಜೀವನದರ್ಶನಸಾರ :

ಅವರು ಅನಂತವಾಗಿ ತಿರುಗಿದರು, ಲೋಕಾನುಭವವನ್ನೂ ಸಂಗ್ರಹಿಸಿ, ತಮ್ಮ ಭಾವದ ಮೆರಗು ಕೊಟ್ಟು ಅಮರ ಬೋಧಾಮೃತಧಾರೆಯನ್ನು ಹರಿಸಿದರು. ಸುಂದರ ಸರಳವಾದ ಭಾಷೆ, ಭಾವಗಳಿಂದ ಜಗತ್ತಿನ ನಿತ್ಯಜೀವನಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ನುಡಿದರು. ಅವರ ಆ ವಚನಪ್ರವಾಹ ಅವರ ಆತ್ಮದಿಂದ, ಅಂತರಾಳದಿಂದ ಹರಿದು ಬಂದ ಅಮೃತಗಂಗೆ. ಅವರ ಜೀವನ ಅದೊಂದು ಮಹಾದರ್ಶನ.

ಅಸ್ಥಿರವಾದ ಶರೀರವನ್ನು ಪಡೆದು ಬಂದ ನಾವು ಯಾತ್ರೆಯನ್ನು ಮುಗಿಸಿಕೊಂಡು ಒಂದಿಲ್ಲೊಂದು ದಿನ ಹೋಗಲೇಬೇಕು. ಜೀವಕನ್ನಿಕೆಯು ಜವರಾಯನ ಸೊಸೆ ಅವಳು ಮಾವನ ಮನೆಗೆ ಕಡ್ಡಾಯವಾಗಿಯಾದರೂ ಹೋಗ ಲೇಬೇಕು. ಆ ಮನೆಯ ಸಂಬಂಧ ಎಂದಿಗೂ ಬಿಡಲಾರದ್ದು. ಶರೀಫರು ಅದನ್ನು– “ ಕಂಡವರ ಕಾಲ್ಬಿದ್ದು ಕೈಮುಗಿದು ನಿಂತರ ಗಂಡನ ಮನೆ ನಿನಗ ಬಿಡದವ್ವ ತಂಗೀ...” ಎಂದು ಸಂತೈಸಿನುಡಿದಿದ್ದಾರೆ. ಪಂಚಭೂತನಿರ್ಮಿತ ದೇಹ ಪಂಚ ಭೂತಗಳಲ್ಲಿ ಲೀನವಾಗಲೇಬೇಕು, ಮತ್ತೆ ಮತ್ತೆ ಭವಕೆ ಹುಟ್ಟಿಹುಟ್ಟಿ ಬರುವ ಶರೀರಕ್ಕೆ ಸ್ಥಿರತೆಯೇ ಇಲ್ಲ—“ ಸ್ಥಿರವಲ್ಲ ಕಾಯಾ ಸ್ಥಿರವಲ್ಲಾ ಈ ಅಸ್ಥಿರ ಶರೀರವ ನಂಬಲಿಬ್ಯಾಡಾ—” ಎಂದು ಜೀವನ ಕಾಯದ ಅಸ್ಥಿರತೆಯನ್ನು ನುಡಿದು “ ಮಾಯೆಯನು ಜಯಿಸಿ, ಮರಣವನು ಗೆಲಿದವನೇ ಜೀವನ್ಮುಕ್ತ ” ಎಂದು ಜೀವಾತ್ಮನ ಮುಕ್ತಿಮಾರ್ಗವನ್ನು ಕಲ್ಪಿಸಿ ಕೊಟ್ಟು, “ ಶ್ರೀಗುರು ನಿಜಪದ ಸೇವಕನಾಗಿ, ಮರಳಿ ಈ ಭವಕೆ ತೆರಳದಂತೆ ಮರಣರಹಿತನಾಗಿ ನಿಮ್ಮ ಚರಣಕೆ ಎರಗುವೆ ” ಎಂಬ ಮರ್ಮದಂತೆ: “ ನಾನು ಎಂಬುದ ನಿಲಿಸಿ ತಾನು ಬ್ಯಾರೆ ಎಂಬ ಬೈಲು ಬ್ರಹ್ಮ ” ವನ್ನು ಸೇರಲು ಆತುರಗೊಂಡು—“ ಬಿಡೆತೇನೀ ದೇಹಾ ಬಿಡತೇನೀ.......ಕೊಡತೇನಿ ಭೂಮಿಗೆ...” ಎಂದು ತಮ್ಮ ಭೌತಿಕ ದೇಹವನ್ನು ಪಂಚಭೂತಗಳಲ್ಲಿ ಕೂಡಿಸಲು ಯತ್ನಿಸಿದರು, “ ಜವನ ಬಾಧೆಯಗೆದ್ದು ಶಿವಲೋಕದೊಳು ಜೀವಾಬಿಡತೇನೀ ”ಎಂದು ಜೀವನ್ಮುಕ್ತಿಯನ್ನು ಹೊಂದಿದರು.

ಸದ್ಗುರು ಶರೀಫರು ತಮ್ಮ ಜೀವನ ಸಿದ್ಧಿಯಿಂದ, ದೈವೀ ಬೆಂಬಲದಿಂದ ಲೋಕದ ಜನಜೀವನವನ್ನು ಬೆಳಗಿದರು. ಒಂದು ಜಾತಿ, ಮತ, ಪಂಥ, ಭಾವ, ಭಾಷೆಗಳಿಗೆ ಅಂಟಿಕೊಳ್ಳದೆ ತಾವು ಸರ್ವ ಸಮಾಜದವರಾಗಿ ಸಮಾಜವೇ ತಾವಾಗಿ “ ಇಂಬುಳ್ಳ ನಂಬಿಗೆಯ ನಾವೆ ” ಯನ್ನು ಹರಿಬಿಟ್ಟರು. ತ್ರಿಕರಣ ಪೂರ್ವಕವಾಗಿ ತಾವು ಉಂಡನೆಲ, ಕುಡಿದ ಜಲ, ಬೆಳದ ತಾಯನುಡಿಲುಗಳ ಏಳಿಗೆಗಾಗಿ ಜೀವದೇಹಗಳನ್ನು ತೇಯ್ದು ಜೀವನ ಸುಗಂಧ ಬೀರಿ ತಮ್ಮ ಜೀವನದ ೭೦ ವರುಷಗಳ ಸಮಗ್ರಕಾಲದ ಸದುಪಯೋಗ ಮಾಡಿಕೊಂಡು ಪರಂಜ್ಯೋತಿಗಳಾದರು, ಪುಣ್ಯಪುರುಷರಾದರು. ಅವರ ಆತ್ಮ ಅಮರ, ವಾಣಿ ಅಮರ ಗಂಗೆ, ಬಾಳು ಜೀವನ್ಮುಕ್ತಿಯ ದಾರಿ ದೀಪ.

“ ಯಾತರದು ಹೂವೇನು ನಾತರದು ಸಾಲದೇ—” ಎಂಬಂತೆ ತಮ್ಮಲ್ಲಿಯ ವ್ಯಕ್ತಿಗತ ಶಕ್ತಿಯ ಪ್ರಭಾವ ವನ್ನು ಎತ್ತಿತೋರಿದರು, ಜಾತಿ ಮತ ಪಂಥಗಳ ಮೇಲು ಕೀಳುಗಳ ಮೂಲವನ್ನಳಿಯಲು ಯತ್ನಿಸಿದರ. ಹರಿ–ಹರ ಹಜರತ ಮಾರ್ಗಗಳೆಲ್ಲವೂ ಒಂದೇ ಮೂಲಕ್ಕೆ ಕೂಡುವ ಪ್ರವಾಹ ರೂಪಗಳು, ಎಂಬುದನ್ನು ಜಗತ್ತಿಗೆ ಸಾರಿ ಮನವರಿಕೆ ಮಾಡಿಕೊಟ್ಟರು.

ಜೈ ಕನ್ನಡಾಂಬೆ ವರಪುತ್ರದಾಯಿನೀ ನಮೋಸ್ತು ತಾಯೇ ! ನಮೋಸ್ತು !

ಲೇಖಕರು :—ಪ್ರೊ. ಶಿವಪುತ್ರ ಮಹಾದೇವಪ್ಪ ಹರದಗಟ್ಟಿ, ಎಂ. ಎ., ಬೆಳಗಾವಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಯ ಪರೀಕ್ಷೆ

"ಭಾರತೀಯ ಸಾಹಿತ್ಯ ಧರ್ಮ (ಮತ) ದಿಂದ ಬಂಧಿತವಾಗಿದೆ" ಎಂಬ ಹೇಳಿಕೆ ಎಲ್ಲರಿಗೂ ವಿದಿತವಾದುದೇ ಆಗಿದೆ. ಈ ಅಪವಾದದಿಂದ ಕನ್ನಡ ಸಾಹಿತ್ಯ ದೂರಾಗಿಲ್ಲ. ಧರ್ಮದ ಕಟ್ಟಳೆಯಲ್ಲಿ ಸಿಕ್ಕುಬಿದ್ದ ಅಥವಾ ಧರ್ಮಶ್ರದ್ಧೆಯಿಂದ ಕುರುಡರಾದ ಕನ್ನಡ ಕವಿಗಳಿಂದ ಶುದ್ಧ ಸಾಹಿತ್ಯವು ರಚಿತವಾಗಲಿಲ್ಲವೆಂದೂ ಕನ್ನಡ ಸಾಹಿತ್ಯದಲ್ಲಿ ಜನಜೀವನವು ಪ್ರತಿಬಿಂಬಿತವಾಗಲಿಲ್ಲವೆಂದೂ ಹಾಗೂ ರಾಷ್ಟ್ರೀಯ ಸಾಹಿತ್ಯವೆಂದು ಪರಿಗಣಿತವಾಗಲು ಯೋಗ್ಯವಾದ ಸಾಹಿತ್ಯವು ಅಲ್ಲಿ ಕಂಡುಬರಲಿಲ್ಲವೆಂದೂ ಹಳಿಯುವವರಿದ್ದಾರೆ. ಇದಲ್ಲದೆ, ಕನ್ನಡ ಕವಿಗಳು ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಸಾಹಿತ್ಯರಚನೆ ಮಾಡಿದುದರಿಂದ ಅವರ ಕೃತಿಗಳು ಕನ್ನಡ ನಾಡಿನ ಪ್ರಾಚೀನ ಇತಿಹಾಸ, ಜನಜೀವನವನ್ನು ತಿಳಿಯಲು ಯುಕ್ತಸಾಧನಗಳಾಗಲಾರವೆಂದೂ ಹೇಳುವವರಿದ್ದಾರೆ. ಈ ಹೇಳಿಕೆಗಳಲ್ಲಿ ತಥ್ಯವಿದೆಯಾದರೂ ಅವು ಸಂಪೂರ್ಣ ಸತ್ಯವಲ್ಲ. ಏಕೆಂದರೆ ಮೇಲೆ ವಿವರಿಸಿದ ಎಲ್ಲ ಕುಂದುಕೊರತೆಗಳನ್ನು ತುಂಬಿ ಕೊಡುವ ಹಲವಾರು ಉತ್ತಮ ಗ್ರಂಥಗಳು ಕನ್ನಡ ಕವಿಗಳಿಂದ ರಚಿತವಾಗಿವೆ. ಅಂತಹ ಉಪಯುಕ್ತ ಗ್ರಂಥಗಳಲ್ಲಿ ಕವಿ ಬ್ರಹ್ಮಶಿವನಿಂದ ರಚಿತವಾದ 'ಸಮಯ ಪರೀಕ್ಷೆ'ಯೂ ಒಂದಾಗಿದೆ. 'ಸಮಯ ಪರೀಕ್ಷೆಯಲ್ಲಿ' ಕವಿಯು ತನ್ನ ಸಮಕಾಲೀನ ಜೀವನದ ಜೀವಂತ ಚಿತ್ರವನ್ನು ಕೊಟ್ಟಿದ್ದಾನೆ. ಪ್ರಸ್ತುತ ಈ ಚಿತ್ರದ ಸಂಕ್ಷಿಪ್ತ ಪರಿಚಯನ್ನು ಮಾಡಿಕೊಡಲು ಪ್ರಯತ್ನಿಸಲಾಗಿದೆ.[1]

'ಸಮಯ ಪರೀಕ್ಷೆ'ಯನ್ನು ಬರೆದ ಕವಿ ಬ್ರಹ್ಮಶಿವನು ಬಾಳಿದ ಕಾಲ ಕ್ರಿ. ಶ. ಹನ್ನೆರಡನೆಯ ಶತಮಾನದ ಪೂರ್ವಾರ್ಧ. ಕವಿಯು ತನ್ನ ಕಾಲದ ಕರ್ನಾಟಕದ ಚಿತ್ರವನ್ನು ತನ್ನ ಗ್ರಂಥದಲ್ಲಿ ಹೇಗೆ ಪಡಿಮೂಡಿಸಿದ್ದಾನೆಂಬುದನ್ನು ಗ್ರಹಿಸಲು, ನಾವು ಆ ಕಾಲದ ಕರ್ನಾಟಕದ ಪರಿಸ್ಥಿತಿಯು ಹೇಗೆ ಇತ್ತೆಂಬುದನ್ನು ಗಮನಿಸುವುದಗತ್ಯವಾಗಿದೆ. ಕಾರಣ ಆ ಬಗೆಗೆ ಸ್ವಲ್ಪ ವಿವೇಚಿಸುವಾ.

ಕ್ರಿ. ಶ. ೧೧ನೆಯ ಶತಮಾನದ ಅಂತ್ಯದ ವರೆಗೆ ಕರ್ನಾಟಕದಲ್ಲಿದ್ದ ಒಳ್ಳೆಯ ಮಟ್ಟದ ಸುಸಂಸ್ಕೃತ ಜೀವನವು ಹನ್ನೆರಡನೆಯ ಶತಮಾನದ ಆರಂಭದಲ್ಲಿ ಉಳಿದಿರಲಿಲ್ಲ. ಹಿಂದೆ ಇದ್ದ ಕರ್ನಾಟಕದ ಸಂಸ್ಕೃತಿಯ ಹೆಮ್ಮೆಯ ಅಂಶಗಳಾದ ಸೌಹಾರ್ದತೆ, ಅನ್ಯಮತ ಸಹಿಷ್ಣುತೆ ಮೊದಲಾದವು ಮಾಯವಾಗಿ ಮತಮತಗಳಲ್ಲಿ ವೈಷಮ್ಯ ಬೆಳೆದಿತ್ತು. ಹನ್ನೊಂದನೆಯ ಶತಮಾನದ ಆರಂಭದ ವರೆಗೆ ಒಳ್ಳೆ ಪ್ರಬಲವಾಗಿ ಕರ್ನಾಟಕದಲ್ಲಿ ಬಾಳಿಬಂದ ಜೈನಧರ್ಮವು ಈಗ ಇಳಿಮುಖವಾಗತೊಗಿತ್ತು.[2] ಜೈನ ಕವಿಗಳಿಗೆ ರಾಜಾಶ್ರಯ ತಪ್ಪಿ ಅವರು ಆದಿ ಕವಿ ಪಂಪನಂತೆ "ಧರ್ಮವನ್ನೂ, ಕಾವ್ಯವನ್ನೂ" ಬೆಳಗಿಸಲು ಅಸಮರ್ಥರಾದರು. ಜೈನಧರ್ಮವು ಇಳಿಮುಖವಾಗಿ ಸಾಗಿದ್ದರೆ, ಶೈವ, ವೈಷ್ಣವ ಮತಗಳು ಪ್ರಬಲವಾಗುತ್ತ ನಡೆದಿದ್ದವು, ಆಳರಸರೂ ಸಹ ಹೊರಗಿನಿಂದ ಬಂದ ಈ ಧರ್ಮಗಳ ಪ್ರಭಾವಕ್ಕೆ ಒಳಗಾಗಿ ಆ ಧರ್ಮಗಳನ್ನು ಅಂಗೀಕರಿಸಿದ ಸಂಗತಿಗಳು ಗಮನಾರ್ಹವಾಗಿವೆ.[3]

ಕ್ರಿ. ಶ. ೧೨ನೆಯ ಶತಮಾನದ ಪೂರ್ವಾರ್ಧದಲ್ಲಿ ಕಾಳಾಮುಖರು, ಕಾಪಾಲಿಕರು, ಲಾಳುಕ ಶೈವ, ಕಾಶ್ಮೀರ ಶೈವರು, ಆರಾಧ್ಯರು ಮೊದಲಾದ ಶೈವ ಮತಾನುಯಾಯಿಗಳು ಉತ್ತರ, ದಕ್ಷಿಣ ಭಾರತಗಳಿಂದ ಬಂದು ಕರ್ನಾಟಕದಲ್ಲಿ ನೆಲಸಿ, ತಮ್ಮ ತಮ್ಮ ತತ್ವಗಳನ್ನು ಬಿತ್ತರಿಸುತ್ತಿದ್ದರು. ಅದರಂತೆ ಸೂರ್ಯನ ಉಪಾಸಕರು, ಗಣಪತಿ ಪೂಜಕರು ಬಂದು ನೆಲಸಿದ್ದರು. ಹೀಗಾಗಿ ಜನತೆಯು ಈ ಅನೇಕ ಧರ್ಮ, ಪಂಗಡಗಳ ಸೆಳವಿನಲ್ಲಿ ಸಿಕ್ಕು ಬಳಲುತ್ತಿತ್ತು. 'ನೋವಿನ ಮೇಲೆ ಬರೆ ಎಳೆದಂತೆ' ಎನ್ನುವ ಹಾಗೆ ಧಾರ್ಮಿಕ ಗೊಂದಲದಲ್ಲಿ ಸಿಕ್ಕು ಬಿದ್ದ ಜನತೆಯು ರಾಜಕೀಯ ಅಲ್ಲೋಲಕಲ್ಲೋಲಕ್ಕೆ ಸಿಕ್ಕುಬಿದ್ದು ಗೋಳಾಡುವಂತಾಗಿತ್ತು. ದಕ್ಷಿಣದಿಂದ ಚೋಳರ ದಾಳಿಗಳೂ ಸಾಗಿಯೇ ಇದ್ದುವು. ಆಂತರಿಕವಾಗಿಯೂ ಸುರಕ್ಷಿತತೆ ಇದ್ದಿಲ್ಲ. ಆಳರಸರನ್ನು ಕಿತ್ತೊಗೆದು ಮಾಂಡಲಿಕ ಅರಸನು ಸಿಂಹಾಸನ ಕಿತ್ತುಕೊಳ್ಳುವ ಹಂಚಿಕೆ ನಡೆದಿತ್ತು. "ಮುಂದೆ ಬರುವುದರ ಕಣ್ಸನ್ನೆ" ಯ ಪ್ರತೀಕವಾದ ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ನಾಟಕದ ಜನತೆಯು ಕಂಗೆಟ್ಟಿತು. ಧರ್ಮವನ್ನೇ ನಬಿ ನಡೆದ ಜನತೆಗೆ ನಿದುಷ್ಟವಾಗಿ ಅವಲಂಬಿಸಿ ನಡೆಯಲು ಯಾವ ಧರ್ಮವೂ ಇರಲಿಲ್ಲ. ದೇವರ ಮೊರೆಹೊಗಬೇಕೆಂದರೆ ಅನೇಕ ದೇವತೆಗಳ ಹಾವಳಿ! ರಾಜನ ರಕ್ಷಣೆ ತಪ್ಪಿದೆ. ಪರಕೀಯ್ಯ ದಾಳಿಗಳ ಅರ್ಭಟ ಸಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸಾಮಾಜಿಕ ಜೀವನವು ಶಾಂತಿಯುತವಾಗಿ ಸಾಗಲು ಸಾಧ್ಯವೇ? ಸಾಮಾನ್ಯಮಾನವನು ಯಾವುದಕ್ಕೂ ನಿಲುಕದೆ ತ್ರಿಶಂಕುವಿನಂತೆ ತೂಗಾಡುತ್ತಿದ್ದರೆ ಯಾರೂ ಅಚ್ಚರಿ ಪಡಬೇಕಿಲ್ಲ. ಇಂತಹ ಕಾಲದ (ಕ್ರಿ. ಶ. ೧೨ ನೆಯ ಶತಮಾನದ ಪೂರ್ವಾರ್ಧ) ಧಾರ್ಮಿಕ, ಸಾಮಾಜಿಕ ಜೀವನದ ಪ್ರತ್ಯಕ್ಷ ದರ್ಶನ ವನ್ನು ಕೊಡುತ್ತಾನೆ—ಕವಿ ಬ್ರಹ್ಮಶಿವ.

ಈ ಮಾತಿನ ಪ್ರತ್ಯಕ್ಷ ನಿದರ್ಶನಗಳನ್ನು ಕವಿ ಬ್ರಹ್ಮಶಿವನ ಗ್ರಂಥದಿಂದಲೇ ಎತ್ತಿಕೊಂಡು ನೋಡಬಹುದು.

ಮೊದಲು ಧಾರ್ಮಿಕ ಜೀವನದ ಕಲ್ಪನೆ ಮಾಡಿಕೊಳ್ಳಬಹುದು.

ಬ್ರಹ್ಮಶಿವ ಕವಿಯು ಜೈನನು. ಜೈನಮತದ ಹೆಚ್ಚಳವನ್ನು ಕುರಿತು ಕವಿ ಹೇಳಿದ್ದಾನೆಂಬ ಅಂಶವು ಯಾರನ್ನೂ ಅಚ್ಚರಿಗೊಳಿಸಬೇಕಿಲ್ಲ. ಅದು ತೀರ ಸ್ವಾಭಾವಿಕ. ಆದರೆ ಈ ಗ್ರಂಥಲ್ಲಿ ಬರುವ ಅನ್ಯಮತ ವಿಡಂಬನೆಯು ಲಕ್ಷಿಸತಕ್ಕ ಮಾತಾಗಿದೆ. ಕವಿಯು ಮೇಲೆ ಉಲ್ಲೇಖಿಸಿದ ಎಲ್ಲ ಶೈವ ಮತಗಳನ್ನೂ ಹಾಗೂ ವೈಷ್ಣವ ಮತವನ್ನೂ ವಿಡಂಬನೆಗೆ ಗುರಿಪಡಿಸಿದ್ದಾನೆ. ಅವರ ತತ್ತ್ವ, ನಂಬಿಗೆ, ಪುರಾಣ ಮುಂತಾದವುಗಳಲ್ಲಿಯ ಅನೇಕ ಅಂಶಗಳನ್ನು ತರ್ಕದ ಹಿನ್ನೆಲೆಯಲ್ಲಿ ಅಲ್ಲಗಳೆಯಲು ಹವಣಿಸಿದ್ದಾನೆ. ಕವಿ ಬ್ರಹ್ಮಶಿವನ ಕಾಲದಲ್ಲಿ ಮತಮತಗಳಲ್ಲಿ ಸೌದಾರ್ಹತೆ ಉಳಿದಿದ್ದಿಲ್ಲವೆಂದೂ, ಪರಸ್ಪರರು ತಮ್ಮ ತಮ್ಮ ಮತಗಳನ್ನು ಉಳಿಸಿಕೊಳ್ಳಲು, ಬೆಳೆಸಿಕೊಳ್ಳಲು ಪ್ರಯತ್ನಿಸುವ ಕಾಲ ಸನ್ನಿಹಿತವಾಗಿತ್ತೆಂದೂ ಕಂಡುಬರುತ್ತದೆ. (ಕ್ರಿ. ಶ. ೧೨ ನೆಯ ಶತಮಾನದಲ್ಲಿ ಸಾಹಿತ್ಯವು ಮತಪ್ರಚಾರಕ್ಕೆ ಸಾಧನವಾಯಿತೆಂಬುದನ್ನೂ ಹಾಗೂ ಆದರಿಂದ ಇಲ್ಲಿಯವರೆಗೆ ಇಲ್ಲದ ವಾದಸಾಹಿತ್ಯ ನಿರ್ಮಾಣವಾಯಿತೆಂಬುದನ್ನೂ ಲಕ್ಷ್ಯದಲ್ಲಿಡಬೇಕು.) ಸಾಮಾನ್ಯವಾಗಿ ಗ್ರಂಥದುದ್ದಕ್ಕೂ ಅನ್ಯಮತಗಳ ವಿಡಂಬನೆ ಇರುವುದರಿಂದ ಪ್ರತ್ಯೇಕವಾಗಿ ಉದಾಹರಣೆ ಕೊಡುವುದು ಕಠಿಣವೇ ಸರಿ.

ತನ್ನ ಮತದ ಮಂಡನೆಗಾಗಿ ಅನ್ಯಮತಗಳ ಖಂಡನೆ ಮಾಡಿದ ಕವಿ ತನ್ನ ಧರ್ಮವು ಅವನತಿಯತ್ತ ಸಾಗಿದೆಯೆಂಬ, ಮತ್ತು ಜೈನ ಮತಾವಲಂಬಿಗಳಿಗೆ ಕಾಲವು ಸುಖಕರವಾಗಿಲ್ಲವೆಂಬ ಐತಿಹಾಸಿಕ ಸತ್ಯವನ್ನು ಮರೆತಿಲ್ಲ. ಕಾರಣ ಸಮಯಪರೀಕ್ಷೆಯಲ್ಲಿ ಈ ಬಗ್ಗೆ ಕವಿಯು ಕನಿಕರದಿಂದ ಅನೇಕ ಸಂಗತಿಗಳನ್ನು ಬರೆದಿದ್ದಾನೆ.

"ಸಕಳರಕರಪ್ಪ ವೈಶೇಷಿಕ, ವೈದಿಕ, ಬುದ್ಧ, ಸಾಂಖ್ಯ, ಚಾರ್ವಾಕಮತ ಪ್ರಕರಕ್ಕೆರಗದೆ"[4] "ಜಿನತತ್ತ್ವ ದೊಳಗನರಿವ ಮಹಾತ್ಮನ ಸೇವೆ ಮಾಡಬೇಕೆಂದು ಹೇಳಿ, ಜೈನ ಮುನಿಗಳಿಗೂ ಹಾಗೂ ಜೈನ ಶ್ರಾವಕರಿಗೂ ಅನ್ನ, ಔಷಧ ಮೊದಲಾದ ದಾನಗಳನ್ನು ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂದು ಹೇಳಿದ್ದಾನೆ. ಅದರಂತೆ "ಜಂಗುಳಿ ದೇವರನೊಂದರುದಿಂಗಳ್ಕುಳ್ಳಿರ್ದು ಪೂಜಿಸುತ್ತಿರದೆ"[5] ಜೈನ ಬಸದಿಗೆ ಫಲಪುಷ್ಪ ಮೊದಲಾದವುಗಳನ್ನು ಕೊಟ್ಟು "ನೆಗಳ್ದ ಜಿನನ ಪದಂಗಳನರ್ಚಿಪುದು ಸೌಖ್ಯಮುಂ ಬಯಸುವವಂ" ಎಂದೂ ಹೇಳಿದ್ದಾನೆ. ಇದಲ್ಲದೆ "ದೇಗುಲದ ನೆಳಲು ಮನೆಗಳ ಮೇಲಾಗದು ಪರಿಯಲೆಂದು"[6] "ಒಳ್ಪಿಂಗಾಗರಮೆನಿಸಿರ್ದ ಜೈನಗೇಹಮುಂ"[7] ಊರ ಹೊರಗೆ ಇರಿಸುತ್ತಾರೆಂದು ಹೇಳಿದ್ದಾನೆ. ಇದರಿಂದ ಕವಿಯ ಕಾಲದಲ್ಲಿ ಜೈನಧರ್ಮ, ಸಮಾಜ ಎಲ್ಲವೂ ಶಿಥಿಲಾವಸ್ಥೆಗೆ ಬಂದಿದ್ದವೆಂಬುದೂ ಸ್ಪಷ್ಟವಾಗುತ್ತದಲ್ಲವೇ?

ಅನೇಕ ಧರ್ಮಗಳು ದಾಳಿ ಮಾಡುತ್ತಿರುವಾಗ, ಯಾವುದಕ್ಕೆ ಅಂಟಿಕೊಳ್ಳಬೇಕೆಂಬುದು ಸಾಮಾನ್ಯ ಮನುಷ್ಯನಿಗೆ ತಿಳಿಯದಾಗುತ್ತದೆ. ಇಂತಹ ಸಂಕ್ರಮಣಕಾಲದಲ್ಲಿ ಹಳೆಯದನ್ನು ಬಿಡದೆ, ಹೊಸದನ್ನು ಅಪ್ಪಿಕೊಳ್ಳದೆ ಸಾಮಾನ್ಯ ಮನುಷ್ಯನು ಗೋಳಾಡುವಂತಾಗುತ್ತದೆ. ಇಂತಹ ವಿಷಮ ಕಾಲದಲ್ಲಿ ಬಳಲುವ ಜೈನ ಶ್ರಾವಕರ ಚಿತ್ರವನ್ನು ಕವಿ ಚೆನ್ನಾಗಿ ಒಡಮೂಡಿಸಿದ್ದಾನೆ. ಜೈನ ಧರ್ಮದಂತೆ ತೀರ್ಥಂಕರರ ಪೂಜೆ ಮಾಡುತ್ತ ಬಂದ ಶ್ರಾವಕನಿಗೆ ಹೊಸ ದೇವತೆಗಳು ತತ್‌ಕ್ಷಣ ಫಲಕೊಡುತ್ತವೆಂದು ಕೇಳಿದಾಗ ಅವನ ಮನಸ್ಸು ಅತ್ತ ಹರಿದರೆ ಸೋಜಿಗವೇನು? ಸಾಮಾನ್ಯ ರಾದವರು ಪೂಜೆ ಮಾಡುವುದು ಫಲಾಕಾಂಕ್ಷೆಯಿಂದಲ್ಲವೇ? ಅವನಿಗೆ ಯಾವ ಮತದ ದೇವರಾದರೇನು? ಅವನ ಪೂಜೆಗೆ ಫಲಸಿಕ್ಕರೆ ಸಾಕಲ್ಲವೇ? ಈ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕು, ಅನ್ಯ ಮತದ ದೇವತೆಗಳಿಗೆ ಶರಣು ಹೋಗುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರಾವಕರನ್ನು ಬ್ರಹ್ಮಶಿವ ಕವಿಯು ಎಚ್ಚರಿಸಲು ಪ್ರಯತ್ನಿಸಿದ್ದಾನೆ. ‘ನಿಶ್ಯಂಕೆ’ ಯಿಂದ ಇರಲಾರದ ಜೈನನು ಜೈನನಾಗಲಾರನೆಂದು ಹೇಳುತ್ತಾನೆ. ಅಲ್ಲದೆ ಒಂದೇ ಮನೆಯಲ್ಲಿ ಗಂಡ, ಹೆಂಡತಿ, ಮಕ್ಕಳು, ಬೇರೆ ಬೇರೆ ದೇವತೆಯ ಭಕ್ತರಾಗಿಯೂ ಬಾಳುತ್ತಿದ್ದರೆಂದ ಅಂಶವನ್ನು ಎತ್ತಿತೋರಿಸಿದ್ದಾನೆ—ಕವಿ ಬ್ರಹ್ಮಶಿವ ! ಈ ಮಾತುಗಳಿಗೆ ನಿದರ್ಶನಗಳಾಗಿ ಅನೇಕ ಪದ್ಯಗಳಿವೆಯಾದರೂ ಒಂದೆರಡನ್ನು ಮಾತ್ರ ಇಲ್ಲಿ ಉದ್ಧರಿಸಲಾಗಿದೆ.

“ ಒಂದೆಸೆಯೊಳ್ ಜಿನಬಿಂಬಮ | ನೊಂದೆಸೆಯೊಳ್ ಲಿಂಗ ವಿಷ್ಣು ಬಿಂಬಮನವನಂ ||
ತೊಂದೆಡೆಯೊಳ್ಪೂಜಿಸುವಾ | ಸಂದೇಹಿಗೆ ಜೈನನೆಂಬ ಪೆಸರೆಂತೆಸೆಗುಂ ||[8]
“ ಪೆಂಡತಿ ಮಾಹೇಶ್ವರಿಗಡ ! ಗಂಡಂ ಜೈನಂಗಡವನ ಮಕ್ಕಳ್ಗಡ ಮಾರ್ತಂ ||
ಡಂಗೆ ಭಕ್ತರೆನಿಪಾ | ಭಂಡಂಗುತ್ತಮದ ಜೈನವೆಸರೆಂತೆಸೆಗುಂ ||[9]

ಸಮಾಜದಲ್ಲಿ ಎಂತಹ ದುಸ್ಥಿತಿ ಬಂದೊದಗಿದರೂ ತಮ್ಮ ಸ್ಥಾನಮಾನಗಳಿಗೆ, ರೀತಿ ನೀತಿಗಳಿಗೆ ಬಾಧೆಯನ್ನು ತಂದುಕೊಳ್ಳದೆ ಉಚ್ಚಮಟ್ಟದ ಜೀವನವನ್ನು ಬಾಳುವುದು ಭಾರತೀಯ ಹೆಣ್ಣುಮಕ್ಕಳ ಜನ್ಮಕ್ಕೇ ಅಂಟಿಕೊಂಡು ಬಂದ ವಿಷಯವಾಗಿದೆ. ನಮ್ಮ ಹೆಣ್ಣುಮಕ್ಕಳ ಆದರ್ಶ ನಡೆವಳಿಕೆಯಿಂದಾಗಿಯೇ ನಾವು ಗೌರವವನ್ನು ಹೊಂದುವಂತಾಗಿದೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಬ್ರಹ್ಮಶಿವ ಕವಿ ವರ್ಣಿಸುವ “ ನೆರೆಮನೆಯವರೆನ್ನಂ ಜಾತ್ರೆಗೆ ಕರೆದೊಡೆ ಬರಲೀಯನೆನ್ನ ಗಂಡಂ ಪೊಲೆಯಂ, ಕರಮುಬ್ಬಟೆಯಾತಂ ”[10] ಎನ್ನುವ ಹಾಗೂ “ ಕೂಸಿಂಗೆ ಕುತ್ತವಾದಡೆ ದೇಶದ ಬಳರಿಯರ್ಗೆ ಒಳ್ಪರ್ಚನೆ ಕೊಡುವ,”[11] ಮಕ್ಕಳ ವ್ಯಸನಗಳಿಗೆ ಪ್ರೋತ್ಸಾಹ ನೀಡುವ, ಆದರೆ ಧರ್ಮಕಾರ್ಯಗಳಲ್ಲಿ ಅನಾಸಕ್ತಿ ತೋರಿಸುವ “ ಅರಗುಲಿವೆಂಡಿರ”ನ್ನು ನೋಡಿದರೆ ನಿತ್ಯ ಜೀವನದಲ್ಲಿ ತುಂಬಿದ ಪ್ರಕ್ಷುಬ್ಧವಾತಾವರಣದ ಪರಿಣಾಮದಿಂದ ಕರ್ನಾಟಕ ಹೆಣ್ಣುಮಕ್ಕಳೂ ಸಹ ತಮ್ಮ ಆದರ್ಶದಿಂದ ಕೆಳಗಿಳಿದಿದ್ದರೆಂದು ಹೇಳಬಹುದಾಗಿದೆ.

ಕ್ರಿ. ಶ. ೧೨ನೆಯ ಶತಮಾನದ ಪೂರ್ವಾರ್ಧವು ಅನೇಕ ಧರ್ಮಗಳ ಸಂಗಮವಾಗಿತ್ತೆಂದು ಮೇಲೆ ವಿವರಿಸಲಾಗಿದೆಯಲ್ಲವೇ ? ಆದರೆ ಆ ಧರ್ಮಗಳಲ್ಲಿ ಅನೇಕ ಸಂಪ್ರದಾಯಗಳಲ್ಲಿ ಸಾಕಷ್ಟು ಆಚಾರಶುದ್ಧಿ ಇದ್ದಿಲ್ಲವೆಂದು ಕಾಣುತ್ತದೆ. ಧರ್ಮದ ಹೆಸರಿನಲ್ಲಿ ಅನಾಚಾರ ನಡೆಯಿಸುವ ಆ ಕಾಲದ ನಾಥ ಸಂಪ್ರದಾಯದವರು, ಶಾಕ್ತರು, ಕಾಪಾಲಿಕರು ಮೊದಲಾದವರು ಕಟು ಟೀಕೆಗೆ ಗುರಿಯಾಗಿದ್ದುದು ಸಮಕಾಲೀನ ಸಾಹಿತ್ಯದಲ್ಲಿ ಪಡಿಮೂಡಿದುದನ್ನು ನಾವು ಕಾಣಬಹುದು. (ಯಶಸ್ತಿಲಕ ಮೊದಲಾದ ಗ್ರಂಥಗಳನ್ನು ಇಲ್ಲಿ ನೆನೆದುಕೊಳ್ಳ ಬಹುದು.)

ಕವಿ ಬ್ರಹ್ಮಶಿವನ “......ಸೇವಿಸುತಿರ್ದಪರ್ ಮಾಂಸ ಮಧುಗಳನವರ್ ತೊಗಲಿನೊಳಲಸದೆ ನೀರ್ಗುಡಿಯುತಿರ್ಪರಡಗಂ ತಿಂಬರು, ಪೊಲೆಯರ ತೆರದಿಂ ನೆಗಳ್ವರು, ಪೊಲೆಯರ ಪೆಸರ್ಗೊಂಡೊಡುಣ್ಬರಾ ಸಚ್ಚರಿತರ್”[12] ಮೊದಲಾದ ಅನೇಕ ಮಾತುಗಳನ್ನು ನೋಡಿದರೆ ಆಗ ರೂಢಿಯಲ್ಲಿದ್ದ ಸಂಪ್ರದಾಯಗಳ ರೀತಿ ನೀತಿಗಳ ಕಲ್ಪನೆ ಸ್ಪಷ್ಟವಾಗುತ್ತದಲ್ಲವೇ ?

ಇಂತಹ ಅಸಹ್ಯ ಜೀವನಕ್ಕೆ ಅಂಟಿಕೊಂಡ ಸಂಪ್ರದಾಯಗಳನ್ನು ಹಳಿದು, ಅಹಿಂಸೆ, ಸತ್ಯ, ಕರುಣೆ, ವ್ರತಾಚರಣೆಗಳನ್ನು ಉಗ್ರ ನಿರ್ಬಂಧಗಳಿಂದ ಪಾಲಿಸಿಕೊಂಡು ಬರುವ ಜೈನಧರ್ಮವನ್ನು ಅನುಸರಿಸಬೇಕೆಂದು ಕವಿ ಬ್ರಹ್ಮಶಿವನು ಬರೆಯುತ್ತಾನೆ. ಇದೇ ಕಾಲದಲ್ಲಿ ಕರ್ನಾಟಕದಲ್ಲಿ ರೂಢವಾಗಿದ್ದ ಎಲ್ಲ ಧಾರ್ಮಿಕ ಸಂಪ್ರದಾಯಗಳನ್ನು ಹಿಂದಿಕ್ಕಿ, ಭರದಿಂದ ತಲೆಯೆತ್ತಿದ ಸಂಪ್ರದಾಯಗಳು ಎರಡು : ಎಂದು ವೀರಶೈವ ಇನ್ನೊಂದು ಮಾಧ್ವ. ಆಚಾರಶುದ್ಧಿಗೆ ವಿಶೇಷ ಪ್ರಾಧಾನ್ಯತೆ ಇತ್ತ ಸಂಪ್ರದಾಯಗಳು. ಆ ಕಾಲದ ಬಹುಜನ ಸಮಾಜವನ್ನು ತಮ್ಮತ್ತ ಆಕರ್ಷಿಸಿಕೊಂಡ ಪಂಥಗಳಿವು. ತನ್ನ ಹಿಂದೆ ಶೈವಾದಿ ಪಂಥಗಳನ್ನೆಲ್ಲ ಒಳಗೊಂಡು ವೀರಶೈವ ಧರ್ಮವನ್ನು ಸ್ಥಾಪಿಸಿದ ಬಸವಣ್ಣನವರು ಬೇರೆ ಬೇರೆ ಸಂಪ್ರದಾಯಗಳಲ್ಲಿದ್ದ ಗುಣಗಳನ್ನು ಅಳವಡಿಸಿಕೊಂಡಂತೆ, ಅವುಗಳಲ್ಲಿಯ ಲೋಪದೋಷಗಳನ್ನು ಹೊಡೆದುಹಾಕಲು ಪ್ರಯತ್ನಿಸಿದರೆಂದು ಹೇಳಬಹುದು “ ಸತ್ಯ, ಶೌಚ, ನಿತ್ಯ ನೇಮವ ತಪ್ಪದೆ ಮಾಡಬಲ್ಲರೆ ಅದು ಲೇಸು”[1] “ ತನು ಶುಚಿಯಿಲ್ಲದವನ ಬೇಹಾರವೇಕೆ ?”.[14] “ ದಯವೇ ಧರ್ಮದ ಮೂಲವಯ್ಯ ”[15] ಮುಂತಾದ ಅನೇಕ ವಚನಗಳು ಬ್ರಹ್ಮಶಿವನ ಮಾತನ್ನು ಪುಷ್ಟೀಕರಿಸುತ್ತವೆಂದು ತಿಳಿಯಬಹುದಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದಲ್ಲದೆ ಆಗ ರೂಢಿಯಲ್ಲಿದ್ದ ಅನೇಕ ಸಾಮಾಜಿಕ ಪದ್ಧತಿಗಳನ್ನು ಹಾಗೂ ಮೂಢ ನಂಬಿಕೆಗಳನ್ನು ಕವಿಯು ವಿಸ್ತಾರವಾಗಿ ಕೊಟ್ಟಿದ್ದಾನೆ. ಅವುಗಳಲ್ಲಿ ಅನೇಕ ರೂಢಿಗಳು, ಆಗಿನಂತೆ, ಈಗಲೂ ಕೂಡ, ಜೀವಂತ ಇವೆ.

ಈ ರೀತಿಯಾಗಿ ತನ್ನ ಕಾಲದ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಜೀವನಗಳನ್ನು ವಿವರವಾಗಿ, ಐತಿಹಾಸಿಕ ಸತ್ಯತೆಗೆ ಭಂಗಬರದಂತೆ, ಚಿತ್ರಿಸಿದ ಕವಿ ಬ್ರಹ್ಮಶಿವನ ಬಗೆಗೆ ಕನ್ನಡಿಗರು ಹೆಮ್ಮೆಪಡಬಹುದಾಗಿದೆ.

ಮೇಲಿನ ಹಿನ್ನೆಲೆಯಲ್ಲಿ ಸಾಹಿತ್ಯದ ಬಗೆಗಿರುವ ಕೆಳಗಿನ ವ್ಯಾಖ್ಯಾನಗಳನ್ನು ನೋಡಬಹುದು.

1 (1) " ಸಾಹಿತ್ಯವು ಸಮಾಜ ಪ್ರತಿಬಿಂಬ ". (2) " Literature is the golden mirror of the contemporary Society. (3) Literature is the thought of thinking Souls. "

2 Jainism began to loose ground from about cleventh century following the subveasion of the Rashtra ,Kuta Enpire and the Ganga Kingdom which were its principal mainstay "-- (Dr. H. H. Handiui ಅವರ " Yasastilak and Indian Culture. P. P. 347).

3 ಹೊಯ್ಸಳರ ಬಿಟ್ಟಿದೇವನು ಕ್ರಿ. ಶ. ೧೧೦೮-೧೧೪೧) ಜೈನಮತವನ್ನು ಬಿಟ್ಟು ವೈಷ್ಣವಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನಾದುದು ಇತಿಹಾಸ ಪ್ರಸಿದ್ಧ ಮಾತಾಗಿದೆ.

4 ಬ್ರಹ್ಮಶಿವನ ಸಮಯ ಪರೀಕ್ಷೆ ಅಧಿಕಾರ ೪, ಪದ್ಯ ೩೨.

5 ಸಮಯ ಪರೀಕ್ಷೆ ಅಧಿಕಾರ ೧, ಪದ್ಯ ೧೨೭.

6 ,, ,, ೮, ಪದ್ಯ ೩೯.

7 ,, ,, ,,

8 ,, ,, ೪, ಪದ್ಯ ೧೨೧.

9 ,, ,, ೪, ಪದ್ಯ ೧೨೫.

10 ,, ,, ೫, ಪದ್ಯ ೯೯.

11 ,, ,, ೫, ಪದ್ಯ ೧೦೦.

12 ,, ,, ೧೪, ಪದ್ಯ ೯೬,

13 ಬಸವಣ್ಣನವರ ಷಟ್‌ಸ್ಥಲ ವಚನಗಳು—ಶಿ. ಶಿ. ಬಸವನಾಳ ವಚನ ೬೪೫.

14 ,, ,, ,, ,, ,, ೬೪೮,

15 ,, ,, ,, ,, ,, ೨೪೭.

ಲೇಖಕರು.—ಡಾ. ಬಿ. ಎಸ್. ಕುಲಕರ್ಣಿ, ಎಂ. ಎ., ಪಿ. ಎಚ್. ಡಿ.
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಭುದೇವರ ವಚನಗಳಲ್ಲಿ ಕಾವ್ಯಸೌಂದರ್ಯ

ಚಂಪೂ ಕವಿಗಳ ಒಂಟಿತ್ತಿನ ಗಾಣದಲ್ಲಿ ಸಿಕ್ಕ ಭಾಷೆ ತನ್ನ ಅಂತಃಸತ್ವವನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದಿತ್ತು. ಕಾವ್ಯಗಳೆಲ್ಲ ಪಡಿಯಚ್ಚಿನ ಗಣಪತಿಗಳಂತೆ ಹೊರಬೀಳುತ್ತಿದ್ದವು. ಆದ್ದರಿಂದ ಕೃತಕ ಸೃಷ್ಟಿಯಾಗಿ ಕಂಡ, ಅಂದಿನ ಭಾಷೆಯ ಶಬ್ದಗಳಲ್ಲಿ ಹೊಸಲಯ, ಹೊಸ ಅರ್ಥ, ಧ್ವನಿಗಳನ್ನು ತುಂಬಿ ಬೆಳೆಸುವದು ಅನಿವಾರ್ಯವಾಯಿತು.

ಇಂಥ ಸಂಕ್ರಮಣ ಕಾಲದಲ್ಲಿ ಶರಣರು, ವಚನಕಾರರು, ಕರ್ನಾಟಕದ ಧಾರ್ಮಿಕ ರಂಗದಮೇಲೆ ಸುಳಿ ದಾಡಿದರು. ಪದ್ಯವೂ ಆದ ಗದ್ಯವೂ ಆದ "ವಚನ" ರೂಪದಲ್ಲಿ ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಹಿಡಿದಿಡಲು ಪ್ರಯತ್ನಿಸಿದರು.

ಅಲ್ಲಮನೇನು ಸಾಹಿತ್ಯನಿರ್ಮಾಣಕ್ಕಾಗಿ ಪಣತೊಟ್ಟು ನಿಂತವನಲ್ಲ ಶರಣರ ದೃಷ್ಟಿಯೂ ಅದಾಗಿರಲಿಲ್ಲ. ಒಡಲಲ್ಲಿ ಧರ್ಮವನ್ನೂ ತತ್ವವನ್ನೂ ತುಂಬಿಕೊಂಡ ಸಾಹಿತ್ಯದ ಗಂಗೆ, ನಮ್ಮ–ನಿಮ್ಮ ಮನೆಯಮುಂದೆ ಹರಿಯ ಬೇಕೆಂಬುದೇ ಅವರ ಗುರಿಯಾಗಿತ್ತು. ಕಣ್ಣಿದ್ದವರು ನೋಡಿ ಕುಡಿದಾರು ಎನ್ನುವದೇ ಅವರ ಹಂಬಲವಾಗಿತ್ತು. ಇಂತಹ ವಚನಗಳಲ್ಲಿ ಕಾವ್ಯದ ಸೌಂದರ್ಯವೂ ಸೇರಿ ಅದಕ್ಕೆ ಇನ್ನಷ್ಟು ಮೆರಗು ಬಂತು.

ಅಲ್ಲಮನ ಹೃದಯ ಒಂದು ಅಕ್ಷಯಪಾತ್ರೆ, ತುಂಬಿದಷ್ಟೂ ಬರಿದಾಗುತ್ತದೆ, ಬರಿದಾದಷ್ಟೂ ಮತ್ತೆ ತುಂಬು ತ್ತದೆ. ನೂರಾರು ಆಧ್ಯಾತ್ಮಿಕ ಅನುಭವಗಳು ಅಭಿವ್ಯಕ್ತಿಗಾಗಿ ಹಂಬಲಸಿ ಗುದ್ದಾಡುತ್ತಿರಬೇಕು. ಬಿಡುಗಡೆಗಾಗಿ ಅಲ್ಲಮ್ಮ ಬರೆದು ಹಗುರಾಗಬೇಕೆಂದರೆ ಮತ್ತೆ ಎದೆ ತುಂಬಿ ನಿಲ್ಲುತ್ತಿರಬೇಕು. ಇದು ಜೀವಂತ ಕವಿಯ ಜೀವಂತ ಚೇತನದ ಲಕ್ಷಣ.

ಪ್ರಭುವನ್ನೂ, ಅವನ ವಚನಗಳನ್ನೂ ಅರ್ಥೈಸಿಕೊಳ್ಳುವದು ಸಾಮಾನ್ಯ ಕಾರ್ಯವಲ್ಲ. ಅವನ ಅನುಭವದ ಉದ್ದ ಅಗಲ, ಎತ್ತರಗಳಿಗೆ ನಾವೂ ಹರಿದಾಡಬೇಕಾಗುತ್ತದೆ. "ಅವನ ವಚನಗಳು ಅರ್ಥವಾಗುವದೇ ಇಲ್ಲ. ಎನ್ನುವ ಧ್ವನಿಯಲ್ಲಿ ಜನ ಮಾತನಾಡುತ್ತಾರೆ. ಬಹಳ ಜನರಿಗೆ ಹೀಗೆ ಅನಿಸುವದೂ ಸಹಜ. ಇದಕ್ಕೆ ಕಾರಣವಿಲ್ಲದೆ ಇಲ್ಲ. ಚಂಪೂ ಮಾರ್ಗ ದಲ್ಲಿ ತಮ್ಮ ಸತ್ವವನ್ನೂ, ಕಾಂತಿಯನ್ನೂ ಕಳೆದುಕೊಂಡು ಸವಕಳಿಯಾದ ಶಬ್ದಗಳಿಗೆ ಹೊಸ ಬೆಲೆ ಕೊಡಬೇಕಾದ ಕಾರ್ಯಕ್ಕೆ ಪ್ರಭುದೇವರು ನಿಲ್ಲಬೇಕಾಯಿತು. ಮಾನವನ ಮನಸ್ಸು ಆಳಕ್ಕೆ ಇಳಿದಂತೆ ಮಾತು ಮೌನವಾಗುತ್ತದೆ. ಆಗೊಂದು ಈಗೊಂದು ಮಿಂಚಿ ಬಂದ ಮಾತುಗಳು ಸಾಮಾನ್ಯವಾಗಿದ್ದರೂ, ಅವು ಹೊಸ ಅರ್ಥವನ್ನು, ಭಾವಮೂಲ್ಯ ವನ್ನು ಪಡೆದುಕೊಂಡು ಬಂದಂತೆ ಅನಿಸುತ್ತದೆ. ಮಾತೇ ಜ್ಯೋತಿರ್ಲಿಂಗವಾಗಿ ಮೂಡುತ್ತದೆ. ಇದೇ ಪ್ರಭುದೇವರ ವಚನಗಳಲ್ಲಿ ಕಾಣತಕ್ಕ ವೈಶಿಷ್ಟ್ಯ !

ವಚನಗಳನ್ನು ಭಾವಗೀತೆಗಳ ಚೌಕಟ್ಟಿನಲ್ಲಿ ಇಟ್ಟು ಅವುಗಳನ್ನು ಇಂದಿನವರು ತೂಗಿ ನೋಡುತ್ತಾರೆ ಕಾವ್ಯದಲ್ಲಿ ಇರಬೇಕಾದ ಭಾವನಾಂಶ, ಕಲ್ಪನಾಂಶ, ಚಿಂತನಾಂಶ, ರೂಪಾಂಶಗಳನ್ನು ಮೆಲಕು ಹಾಕಿ ಅರಗಿಸಿಕೊಂಡ ಮೇಲೆ, ಆತ್ಮನಿಷ್ಠ ಕಾವ್ಯವಾದ ಭಾವಗೀತದ ಲಕ್ಷಣಗಳನ್ನು ನೋಡಿದರೆ, ವಚನಗಳ ಸೌಂದರ್ಯದ ಅರಿವಾಗುತ್ತದೆ.

ಸೊಗಸಾದ ಅನುಭವ ರಸವತ್ತಾಗಿ ಮನಸ್ಸಿಗೆ ತಟ್ಟಬೇಕು; ಚಿತ್ರವತ್ತಾಗಿ ಪ್ರತಿಮಾ ರೂಪದಲ್ಲಿ ನಿಲ್ಲ ಬೇಕು. ಭಾಷಾ ಸತ್ವವನ್ನು ಪಡೆದಿರಬೇಕು. ಸಂಕ್ಷಿಪ್ತತೆ, ಸ್ವಾಯತ್ತತೆ, ಗೀತಗುಣ, ವಿಶ್ವವ್ಯಾಪಕತೆ, ಒಂದೇ ಭಾವವನ್ನು ಹಿಡಿಯುವ ಕಲೆ, ಕೊನೆಯದಾಗಿ ಅರಿಸಿಕೊಂಡ ವಸ್ತುವಿನ ಬಗ್ಗೆ ಪ್ರಾಮಾಣಿಕತೆ, ಇವು ಅಲ್ಲಿ ಸುಳಿದಾಡಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರೆ ಅಲ್ಲಮನ ವಚನಗಳಲ್ಲಿ ಇವೆಲ್ಲ ಹಾಸು–ಹೊಕ್ಕಾಗಿ ಬಂದಿವೆ, ಎಂದು ಹೇಳಲು ಸಾಧ್ಯವಿಲ್ಲ. ಧಾರ್ಮಿಕ ಸಮಸ್ಯೆಗಳ ಅಸ್ತವ್ಯಸ್ತ ಇರುವಿಕೆಯಲ್ಲಿ ತನ್ನ ಕಾಲದ ಹಾಗೂ ತನ್ನ ಮುಂದಿನ ಕವಿಗಳಿಗೊಂದು ಹೊಸ ಅಧಿಕಾರವನ್ನು, ಹೊಣೆಯನ್ನು ಕಲ್ಪಿಸಿಕೊಟ್ಟ ಪ್ರವಾದಿ ಅಲ್ಲಮ.

ಪ್ರತಿಭಾವಂತ ಕಲೆಗಾರನಂತೆ ದ್ವಂದ್ವ ವ್ಯಕ್ತಿತ್ವವನ್ನು ಪ್ರಭು ಪಡೆದಿದ್ದಾನೆ. ಒಂದೆಡೆಗೆ ಅವನು ಲೋಕಾನುಭವವುಳ್ಳ ಲೋಕವ್ಯಕ್ತಿ. ಇನ್ನೊಂದೆಡೆಗೆ ವಿಶಿಷ್ಟ ಕಲಾಶಕ್ತಿಯನ್ನು ಪಡೆದ ಕಲಾವ್ಯಕ್ತಿ. ಜೀವನದ ತುಮುಲ ಸಮೂಹವನ್ನು ತೃಣೀಕರಿಸುವ ಪ್ರವೃತ್ತಿ, ಸಂವೇದನೆಯ ಪ್ರಾಥಮಿಕ ಅವಸ್ಥೆಯಲ್ಲಿ ಕಂಡು ಬಂದರೆ, ಅದರಲ್ಲೊಂದು ಸಾಂಕೇತಿಕ ಅರ್ಥವನ್ನು ಕಂಡುಕೊಳ್ಳುವ ನಿರ್ಧಾರಕ್ಕೆ ಬರುವದೆ ಮನಸ್ಸಿನ ಪ್ರಬುದ್ಧತೆಗೆ ಸಾಕ್ಷಿ, ತನ್ನ ಲೋಕ ವ್ಯಕ್ತಿತ್ವ ಮತ್ತು ಕಲಾ ವ್ಯಕ್ತಿತ್ವಗಳನ್ನು ಒಂದುಗೂಡಿಸುವ ಕಲೆ ಅವನ ವಚನಗಳಲ್ಲಿ ನಡೆದಿದೆ, ಅಭಿವ್ಯಕ್ತಿಯಲ್ಲಿ ಸಿದ್ಧಿ ಸಾಧಿಸುತ್ತ ಹೋದಂತೆ ಪರಾತ್ಪರವಾದ ಆ ಶಕ್ತಿ ಸೃಷ್ಟಿಶೀಲವಾಗಿರುವದನ್ನು ಪ್ರಾರಂಭಿಕ ಅವಸ್ಥೆಯಲ್ಲಿ ಕಾಣುತ್ತೇವೆ.

“ ನೆಲದ ಮರೆಯಲಡಗಿದ ನಿಧಾನದಂತೆ, ಮುಗಿಲ ಮರೆಯಲಡಗಿದ ಮಿಂಚಿನಂತೆ, ಬಯಲ ಮರೆಯಲಡಗಿದ ಮರೀಚಿಯಂತೆ, ಕಂಗಳ ಮರೆಯಲಡಗಿದ ಬೆಳಗಿನಂತೆ, ಗುಹೇಶ್ವರ ನಿಮ್ಮ ನಿಲವು. ”

—ಎನ್ನುವದನ್ನು ನೆನೆಸಿಕೊಳ್ಳಬೇಕು. ತನ್ನ ಸಾದೃಶ್ಯ ಸಂಪತ್ತನ್ನು ಅಲ್ಲಮ ಇಲ್ಲಿ ಸೂರೆಗೊಂಡಿದ್ದಾನೆ.

ಕವಿಯಲ್ಲಿರಬೇಕಾದ ಅನುಭವ ಸಂಪತ್ತಿ, ಭಾಷೆ, ಶೈಲಿಗಳ ಮೇಲಿನ ಹಿಡಿತ ಮತ್ತು ವೈಯಕ್ತಿಕತೆಗಳ ಬಗ್ಗೆ ಅಲ್ಲಮನನ್ನು ಯಾರೂ ಪ್ರಶ್ನಿಸುವಂತಿಲ್ಲ, ಇವು ಮೂರೂ ಕೂಡಿ ಆತ ಹಾಕಿದ ಹೆದ್ದಾರಿಯ ಸ್ವರೂಪವನ್ನು ತಿಳಿಸುತ್ತವೆ.

ಪ್ರಭುದೇವರು ಆಧ್ಯಾತ್ಮಿಕ ಲೋಕದ ಅಲೌಕಿಕ ವ್ಯಕ್ತಿಯಂತೆ ಕಂಡರೂ, ಅವರ ವಚನಗಳಲ್ಲಿ ಕಾಣತಕ್ಕ ಲೋಕಾನುಭವ ಸಾಕಷ್ಟಿದೆ.

“ ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಭತ್ತವಿಲ್ಲದಿದ್ದರೆ ಆ ಬೆವಸಾಯದ ಘೋರವೇತಕಯ್ಯ, ಕ್ರಯ ವಿಕ್ರಯವ ಮಾಡಿ ಮನೆಯ ಸಂಚು ನಡೆಯದನ್ನಕ್ಕರ, ಆ ಕ್ರಯವಿಕ್ರಯದ ಘೋರವೇತಕಯ್ಯ. ಒಡೆಯನನೋಲೈಸಿ ತನುವಿಗೆ ಅಷ್ಟಭೋಗವ ಪಡೆಯದಿದ್ದರೆ, ಆ ಓಲಗದ ಘೋರವೇತಕಯ್ಯ. ಭಕ್ತನಾಗಿ ಭವಂ ನಾಸ್ತಿಯಾಗದಿದ್ದರೆ ಆ ಉಪದೇಶ ಕೊಟ್ಟ ಗುರು, ಪಡೆದ ಶಿಷ್ಯ ಇವರಿಬ್ಬರ ಮನೆಯಲ್ಲಿ ಮಾರಿ ಹೋಗಲಿ; ಗುಹೇಶ್ವರ ಲಿಂಗ ಅತ್ತಲೈ ಹೋಗಲಿ ”.

ಲೋಕದ ಆಗುಗಳ ಹಂಗನ್ನೇ ಹರಿದು ನಿಂತ ಪ್ರಭುದೇವರಿಗೆ ಸೂಕ್ಷ್ಮ ವ್ಯವಹಾರ ಬುದ್ಧಿ ತೀಕ್ಷ್ಣವಾಗಿದೆ. ನಿಜವಾದ ಭಕ್ತ ಹೇಗಿರಬೇಕೆಂಬುದನ್ನು ತೋರಿಸಲಿಕ್ಕೆ ಲೌಕಿಕ ವ್ಯವಹಾರದ ಉದಾಹರಣೆ ಕೊಡುತ್ತಾನೆ. ತನ್ನ ಸುತ್ತಲಿನ ಸಾಮಾನ್ಯ ಜಗತ್ತನ್ನು ಅಲ್ಲಮ ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದಾನೆ, ಅಲ್ಲಿಯ ಅನೇಕ ಸನ್ನಿವೇಶಗಳಿಗೆ ಆಧ್ಯಾತ್ಮಿಕ ಅರ್ಥಗಳನ್ನಿಟ್ಟು ಬರೆಯುವದೇ ಅಲ್ಲಮನ ಗುಟ್ಟು. ಬೆಡಗಿನ ವಚನಗಳಲ್ಲಿ ನಾವು ಕಾಣತಕ್ಕದ್ದು ಇದನ್ನೇ !

“ ಪ್ರಕೃತಿಗೆ, ಸಮಾಜಕ್ಕೆ, ಸಂಪ್ರದಾಯಕ್ಕೆ ವಿರುದ್ಧವಾದ ಗೌಣ ಅರ್ಥ ಬರುವ ಮಾತುಗಳನ್ನಾಡಿ, ಅದಕ್ಕೆ ಬಳಸಿರುವ ಪದಗಳಿಗೆ ಬೇರೆ ಒಂದು ಅಂತರಾರ್ಥವು ಬರುವಂತಾಗುವದೇ ಇವುಗಳ ಮುಖ್ಯ ತಂತ್ರ.',—ಎಂದು ಶ್ರೀ. ಎಲ್. ಬಸವರಾಜು ಅವರು ವಿವರಣೆ ನೀಡಿದ್ದಾರೆ. ವಿರೋಧಾಭಾಸವೇ ಇವುಗಳ ಜೀವಾಳವೆನ್ನುತ್ತಾರೆ. ಆಧ್ಯಾತ್ಮದ ಗೂಢ ನಿಧಿ ಎಲ್ಲರ ಸೊತ್ತು ಅಲ್ಲ. ಕಾಯಿ ಪಾಡಾದಾಗಲೇ ಅದರ ಮಾಂಸಖಂಡ ರುಚಿಯಾಗುತ್ತದೆ. ತಿಂದವರಿಗೂ ಆನಂದ ಉಂಟಾಗುತ್ತದೆ.

“ ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ ಅಗಿದು ಕಳೆದೆನಯ್ಯ ಭ್ರಾಂತಿಯ ಬೇರೆ; ಬಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮ ಬೀಜವ. ”

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

—ಎನ್ನುವಲ್ಲಿ ಲೋಕಾನುಭವ ಶಿವಾನುಭವ ಕೂಡಿ ನಿಂತಿವೆ. ಅನುಭವವನ್ನು ಇಷ್ಟು ತೀವ್ರವಾಗಿ ಸಂವೇದಿಸಿಕೊಳ್ಳಬಲ್ಲ ಶಕ್ತಿ ಪ್ರಭುದೇವರಲ್ಲಿ ಮನೆಮಾಡಿಕೊಂಡಿದೆ. ನಾವು ನೀವು ಮಾಡುವ ತೋಟದ ಕಲ್ಪನೆಗೂ ಇದಕ್ಕೂ ಇರುವ ಅಂತರವನ್ನು ಅಳೆಯಬೇಕು. ಇದು ದೃಷ್ಟಾಂತದ ನೆರಳಿನಲ್ಲಿ ತತ್ವ ಬೋಧೆ ಮಾಡುವ ಕಲೆಗಾರಿಕೆ !

ಇನ್ನೊಂದು ಕಡೆ—

“ ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ.........ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರ ”—ಎನ್ನುತ್ತಾನೆ.

ಇಂದ್ರಿಯಕ ಅನುಭವಗಳಿಗೆ ಆಧ್ಯಾತ್ಮಿಕ ಚಿತ್ರ ಬರೆದು ಕಟ್ಟಿದ್ದಾನೆ ಅಲ್ಲಮ !

“ ನೆಲದ ಬೊಂಬೆಗೆ ಜಲದ ಬಣ್ಣವನುಡಿಸಿ ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ, ವಾಯ್ವನಲ ಸಂಚಕ್ಕೆ ಅರಳೆಲೆಯ ಶೃಂಗಾರವ ಮಾಡಿ ಆಡಿಸುವ ಯಂತ್ರವಾಹಕನಾರೋ ! ”

ಇದು ಬೆಡಗಿನ ವಚನವಾದರೂ ಅನುಭವ ತೀವ್ರತೆ, ಕಲ್ಪಕತೆ ಅದ್ಭುತ ಪ್ರತಿಮಾ ಸೃಷ್ಟಿಗೆ ಸಾಕ್ಷಿಯಾಗಿ ನಿಂತಿವೆ.

ಈ ದೇಹವೇ ಗೊಂಬೆ. ಈ ನೆಲದ ಗೊಂಬೆಗೆ ಜಲಾಂಶವಾದ ರಕ್ತದ ಬಣ್ಣ ಉಡಿಸಲಾಗಿದೆ. ಸ್ವಭಾವಗಳ ಆಶ್ರಮಗಳು. ಚಿತ್ತ, ಮನಸ್ಸು, ಬುದ್ಧಿ, ಅಹಂಕಾರ ಎನ್ನುವ ಕರಣಗಳೇ ಉಲಿವ ಗೆಜ್ಜೆಗಳು. ಗಾಳಿ ಬೆಂಕಿಗಳೇ ಸೂತ್ರಗಳು. ಪಂಚಭೂತಗಳಿಂದ ಕೂಡಿದ ಈ ಸೂತ್ರದ ಗೊಂಬೆಗೆ ಪ್ರಾರಬ್ಧ ಕರ್ಮದ ಅರಳೆಲೆಯ ಶೃಂಗಾರ ಮಾಡಲಾಗಿದೆ. ಈ ತೊಗಲು ಗೊಂಬೆಯ ಆಟವನ್ನಾಡಿಸುವ ಸೂತ್ರಧಾರಿ ಮಾತ್ರ ಕಣ್ಣಿಗೆ ಕಾಣುತ್ತಿಲ್ಲ. ಗೊಂಬೆ ಮಾತುಮೈ ಕೈ ಹೊರಳಿಸಿ ಕುಣಿದಾಡುತ್ತದೆ.

ಇಂತಹ ಪ್ರತಿಮಾ ಸೃಷ್ಟಿ ಅಲ್ಲಮನ ವಚನಗಳ ತುಂಬ ನಡೆದಿದೆ. ಅನುಭವವನ್ನು ಇಷ್ಟು ತೀವ್ರವಾಗಿ ಸಂವೇದಿಸುವಾಗ ಅಲ್ಲಮ ನಮ್ಮನ್ನು ಮರುಳು ಮಾಡುತ್ತಾನೆ.

ಅಲ್ಲಮನಲ್ಲಿ ಶಬ್ದಕ್ಕೊಂದು ಸಂಕೇತ, ಬಾಯಿತೆರೆದರೊಂದು ರೂಪಕ, ಮಾತಾನಾಡಿದರೊಂದು ಪ್ರತಿಮೆ ಎದ್ದು ನಿಲ್ಲುತ್ತದೆ.

We should always be prepared to judge a poet by the originality of his metaphors. —ಎನ್ನುವ ಹರ್ಬರ್ಟ್ ರೀಡ ಅವರ ಮಾತನ್ನು ಅಲ್ಲಮನನ್ನು ಕಂಡು ಹೇಳಬೇಕು.

“ ಕಾಲುಗಳೆರಡೂ ಗಾಲಿ ಕಂಡಯ್ಯ ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ. ಬಂಡಿಯ ಹೊಡೆವರೈವರು ಮಾನಿಸರು ಒಬ್ಬರಿಗೊಬ್ಬರು ಸಮನಿಲ್ಲವಯ್ಯ. ಅದರಿಚ್ಛೆಯನರಿದು ಹೊಡೆಯದಿದ್ದ ಅದರಚ್ಚು ಮುರಿಯಿತ್ತು, ಗುಹೇಶ್ವರ ”.

ಈ ಪ್ರಪಂಚದ ದಾರುಣ ಚಿತ್ರವನ್ನು ಕೊಡಲು ಇಲ್ಲಿ ಪ್ರಯತ್ನಿಸಿದ್ದಾನೆ ಅಲ್ಲಮ. ರೂಪಕಕ್ಕೆ ರೂಪಕ ಹೆಣೆದು ಇಡೀ ವಚನವೇ ಒಂದು ರೂಪಕ ಶಕ್ತಿಯಿಂದ ಸುತ್ತುವರಿದಿದೆ ಇಲ್ಲಿ! ಕಾಲ್ಪನಿಕ ಅಂಶಗಳಿಗೆ ಆಕಾರಕೊಟ್ಟು ಶಬ್ದ ಚಿತ್ರಗಳನ್ನು ನಿರ್ಮಿಸುವದು ಅಲ್ಲಮನ ಜಾಯಮಾನವೆಂದು ಕಾಣುತ್ತದೆ.

In its origin every metaphor is poetry, on attempt to express an emation within by an image or picture of something external —ಎಂದು ಇದಕ್ಕೆ ಹೇಳುವದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ಅಖಂಡ ರೂಪಕ ಕವಿತೆ ಅನೇಕ ಪ್ರತಿಮೆಗಳಿಂದ ಕೂಡಿರಬಹುದು. ಪ್ರಭುವಿನ ವಚನಗಳಲ್ಲಿ ಜೀವಾನುಭವದ ತೀವ್ರತೆಯೇ ಪ್ರೇರಕಶಕ್ತಿಯಾಗಿ ನಿಲ್ಲುತ್ತದೆ.

" ಸಂಸಾರವೆಂಬ ಹೆಣ ಬಿದ್ದರೆ ತಿನ ಬಂದ ನಾಯ ಜಗಳವ ನೋಡಿರೆ. ನಾಯ ಜಗಳವ ನೋಡಿ ಹೆಣ ನೆದ್ದು ನಗುತ್ತಿದೆ. "

ಅಜ್ಞಾನಿಯಾದ ಜೀವಾತ್ಮ ಹೆಣದಂತೆ ಬಿದ್ದಾಗ, ಇಂದ್ರಿಯಗಳೆಂಬ ನಾಯಿಗಳು ಅದನ್ನು ಹರಿದು ತಿನ್ನಲು ಹರಿದಾಡುತ್ತವೆ; ಮತ್ತೆ ಆ ಜೀವಾತ್ಮನಿಗೆ ಜ್ಞಾನ ಮೂಡಿದಾಗ ಅದೇ ಹೆಣದಂತಿರುವ ಅವನು ಎದ್ದು ಆ ನಾಯ ಜಗಳವನ್ನು ಕಂಡು ನಗುತ್ತಾನೆ.

ಇಷ್ಟು ಸ್ಪಷ್ಟವಾದ ಸಜೀವ ಪ್ರತಿಮೆಯನ್ನು ಕೊಡಬಲ್ಲ ಕವಿಗಳನ್ನು ಕಾಣುವದು ಕಷ್ಟ. ಅಲ್ಲಮನ ಈ ಶಕ್ತಿಯನ್ನು ಕಂಡು ಲೋಕ ಬೆರಗಾಗಬೇಕು.

ಅವರಿವರು ಬಳಸಿದ ತಂತ್ರ ಮಂತ್ರ ರೂಪಗಳನ್ನು ಅಲ್ಲಮ ಬಳಸಲಿಲ್ಲ. ಆದರೆ ಅಲ್ಲಮನಲ್ಲಿ ಕಾಣುವ ಸಂಕೇತಗಳು ವಚನದಿಂದ ವಚನಕ್ಕೆ ಬೇರೆಯಾಗುತ್ತವೆ. ಅವನ ವಚನಗಳಲ್ಲಿ ಬರುವ " ಗಿಳಿ " ಎನ್ನುವ ಸಂಕೇತಕ್ಕೆ ಪರಮಹಂಸ, ಜೀವ, ಪಂಚವಿಂಶತಿ ತತ್ವ, ಎಂಬ ಬೇರೆ ಬೇರೆಯಾದ ಅರ್ಥ ಮೌಲ್ಯಗಳೇ ಬರುತ್ತದೆ. " ಹುಲಿ " ಎಂಬ ಶಬ್ದಕ್ಕೆ ಸಾವು, ಕಾಲವ್ಯಾಘ್ರ, ಎನ್ನುವ ಅರ್ಥಗಳಿವೆ. ಹೀಗೆ ಅನೇಕ ಸಂಕೇತಗಳ ಪಟ್ಟಿಯನ್ನೇ ಇಡಬಹುದು. ಪದ್ಯದಿಂದ ಪದ್ಯಕ್ಕೆ ಬದಲಾಗುವ ಸಂಕೇತಗಳನ್ನು ಗ್ರಹಿಸುವದು ನಮ್ಮಂಥವರಿಗೆ ಕಷ್ಟವಾದರೂ ಅದು ಪ್ರತಿಭಾನ್ವಿತ ಕವಿಯ ಒಂದು ಲಕ್ಷಣವೆಂಬ ಅಭಿಪ್ರಾಯ ಈಗ ಮೂಡಿದೆ. ಕವಿತೆಯಲ್ಲಿ ಈ ರೀತಿಯ ಸಂಕೇತಗಳನ್ನು ಪ್ರತಿಮೆಗಳನ್ನು ಬಳಸಬಹುದೆಂದು ಪ್ರಸಿದ್ಧ ನವ್ಯಕವಿಗಳಾದ ಟಿ. ಎಸ್. ಇಲಿಯಟ್ ಹೇಳುತ್ತಾರೆ.

ಆದರೆ ಎಲ್ಲಾ ಕಡೆಗೂ ಹೀಗೇ ಆಗುವದೆಂದು ಹೇಳಲು ಬರುವದಿಲ್ಲ. ಹೃದಯದಲ್ಲಿ ಮೂಡಿದ ನೂರಾರು ಅನುಭವಗಳನ್ನು ನೂರಾರು ಅಭಿವ್ಯಕ್ತಿಗಳಲ್ಲಿ ನಿಲ್ಲುವಂತೆ ಮಾಡುವದು ಅಲ್ಲಮನ ಅನಿಸಿಕೆ (feelings) ಇರಬಹುದು. ತನ್ನ 'ದರ್ಶನ'ಕ್ಕೆ ಒಂದು ಅಭಿವ್ಯಕ್ತಿ ಬೇಕೆನಿಸಿದಾಗ ಪ್ರತಿಭೆಯ ಕಣ್ಣಿನಿಂದ ಇಣಕಿನೋಡಿ ಹೊಸರೀತಿಯಿಂದ ಸಾವಿರ ಅನುಭವಗಳ ಅಭಿವ್ಯಕ್ತಿಯನ್ನು ನಮ್ಮೆದುರು ಮೂಡಿಸಿದ್ದಾನೆ. ಶಕ್ತಿಯಿದ್ದವರು ಆ ಬೆಡಗಿನ ಬೀಗವನ್ನು ತೆರೆಯಬೇಕು.

ಅಲ್ಲಮನ ವಚನಗಳಲ್ಲಿ ಭಾವಾಂಶಕ್ಕಿಂತ ಕಲ್ಪನಾಂಶ-ಚಿಂತನಾಂಶಗಳೇ ಎತ್ತರಕ್ಕೆ ಏರಿವೆ. ಮಹಾದೇವಿಯಂತೆ, ಬಸವಣ್ಣನಂತೆ ಅಲ್ಲಮನಿಗೆ ಜೀವನದಲ್ಲಿ ಹೋರಾಟ ಇತ್ತೋ ಇಲ್ಲವೋ ಎಂದೆನಿಸುತ್ತದೆ ಕೆಲವು ಸಲ! ಆದರೂ ಒಂದೆರಡು ಕಡೆಗೆ ಅವನ ಹೃದಯದ ತುಮುಲವನ್ನು ಕಾಣಲು ಸಾಧ್ಯವಾಗುತ್ತದೆ.

" ಎಸೆಯದಿರು ಎಸೆಯದಿರು ಕಾಮಾ ನಿನ್ನ ಬಾಣ. ಗುಹೇಶ್ವರ ಲಿಂಗದ ಉರಿಯಲ್ಲಿ ಬೆಂದವರ ಮರಳಿ ಸುಡುಲುಂಟೆ......ಮರುಳ ಕಾಮ. "

ಗುಹೇಶ್ವರ ಲಿಂಗದ ವಿರಹದುರಿಯಲ್ಲಿ ಬೆಂದು ಬೆಂದು ನುಲಿಯಂತೆ ನಿಂತ ಚಿತ್ರ ಹೃದಯಕ್ಕೆ ತಟ್ಟಿ ನಮ್ಮನ್ನು ಮೂಕರನ್ನಾಗಿಸುತ್ತದೆ. ವೈಯಕ್ತಿಕ ಅನಿಸಿಕೆ-ನೆನಸಿಕೆಗಳು ಕಾಲಾತೀತವಾಗಿ ಕಾವ್ಯದಲ್ಲಿ ನಿಲ್ಲುತ್ತವೆ. ಭಾವಗೀತಗಳಲ್ಲಿ ಈ ಗುಣ ಸ್ಪಷ್ಟವಾಗಿ ಒಡೆದು ಕಾಣುತ್ತದೆ. ಏಕೆಂದರೆ ಈ ಲೋಕಾನುಭವಗಳ ಕೂಡ ವೈಯಕ್ತಿಕ ಅನುಭವಗಳು ಬೆರೆತಾಗಲೇ ಕಾವ್ಯಕ್ಕೆ ಸತ್ವ ಮೂಡುತ್ತದೆ.

ಅಲ್ಲಮ ತನ್ನ ವಚನಗಳಲ್ಲಿ ಪಶುಪಕ್ಷಿ, ಪ್ರಾಣಿಗಳನ್ನು, ಸಸ್ಯಾವಳಿಯನ್ನು, ಭೂಗೋಳ ಖಗೋಳಕ್ಕೆ ಸಂಬಂಧಿಸಿದ ಸಂಗತಿಗಳನ್ನು ಅಸಂಖ್ಯಾತವಾಗಿ ಬಳಸಿಕೊಳ್ಳುತ್ತಾನೆ. ಕಾವ್ಯಕ್ಕೆ ಅನುಭವ ತೀವ್ರತೆಯನ್ನು ತರುವಲ್ಲಿ ಉಪಮೆ, ಚಿತ್ರ, ರೂಪಕ, ಪ್ರತಿಮೆಗಳನ್ನು ತರುವಲ್ಲಿ ಅವು ನೆರವು ನೀಡುತ್ತವೆ. ಕವಿ ತನ್ನದಾದ ಅನುಭವಗಳನ್ನು ನಮ್ಮದನ್ನಾಗಿಸುವ ಕಲಾವಂತಿಕೆಗೆ ಅವು ಆಧಾರವಾಗಿ ಸುತ್ತು ಮುತ್ತು ಸುಳಿದಾಡುತ್ತವೆ.

ಲೇಖಕರು :— ಸಿದ್ದಣ್ಣ ಮಸಳಿ, ಎಂ. ಎ. ಗಳತಗಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

' ಸಾಕಾರನಿಷ್ಠೆ ಭೂತಂಗಳೊಳನುಕಂಪೆ ತಾನೆಪರಬೊಮ್ಮ '

ಒಂದು ವಿವೇಚನೆ.

ಮಹಾಕವಿ ರಾಘವಾಂಕನ ಸಿದ್ಧರಾಮ ಚರಿತೆಯಲ್ಲಿ ಸಿದ್ಧರಾಮ ಶಿವಯೋಗಿಯ ವೀರಶೈವತ್ವವನ್ನು ಖಚಿತ ಪಡಿಸುವ ಇನ್ನೊಂದು ಸಬಲವಾದ ಆಧಾರವಿದೆ. ವಿಮರ್ಶಕರ ದೃಷ್ಟಿ ಅದರ ಕಡೆಗೆ ಹರಿದಿದ್ದರೂ ಅದರ ಸರಿಯಾದ ಅರ್ಥವನ್ನು ಗ್ರಹಿಸುವದರಲ್ಲಿ ನಿಷ್ಫಲಗೊಂಡಿದೆ. ಆದ್ದರಿಂದ ಅದರ ಸೂಕ್ಷ್ಮ ವಿವೇಚನೆಯನ್ನು ಇಲ್ಲಿ ಮಾಡುವದು ಅವಶ್ಯಕವೆನ್ನಿಸಿದೆ.

ಅಲ್ಲಮಪ್ರಭು, ಸಿದ್ಧರಾಮರ ಸಂದರ್ಶನದ ಸನ್ನಿವೇಶದಲ್ಲಿ, ಅವರಿಬ್ಬರಲ್ಲಿ ಉನ್ನತಮಟ್ಟದ ತಾತ್ವಿಕ ಚರ್ಚೆ ನಡೆದ ಸಂದರ್ಭದಲ್ಲಿ ಸಿದ್ಧರಾಮ ಶಿವಯೋಗಿಯು ' ಸಾಕಾರ ನಿಷ್ಠೆ ಭೂತಂಗಳೊಳನುಕಂಪೆ ತಾನೆ ಪರಬೊಮ್ಮ 'ವೆಂದು ಆಡಿದ ಮಾತಿನ ಅರ್ಥವೇನು ? ರಾಘವಾಂಕನ ಸಿದ್ಧರಾಮಚರಿತೆಯನ್ನು ಕುರಿತು, ವಿವೇಚನೆ ಮಾಡಿದ ಶ್ರೀಮಾನ್ ಡಿ. ಎಸ್. ನರಸಿಂಹಾಚಾರ್ ಹಾಗೂ ಡಾ. ಆರ್. ಸಿ. ಹಿರೇಮಠ ಅವರು ಮೇಲಣ ಉಕ್ತಿಯ ಅರ್ಥವನ್ನು ಕೆಳಗಿನಂತೆ ಗ್ರಹಿಸಿದ್ದಾರೆ.

" ದೇವಾಲಯ ನಿರ್ಮಾಣ, ಲಿಂಗಪ್ರತಿಷ್ಠೆ, ಕ್ಷೇತ್ರಪರಿಕಲ್ಪನೆ, ಲಿಂಗಾಭಿಷೇಕ, ಯೋಗಮಜ್ಜನ, ತುಪ್ಪದ ಭಿಷೇಕ, ನೈವೇದ್ಯ ಸಮರ್ಪಣೆ, ದಾನವಿನಿಯೋಗ, ಉತ್ಸವ ಹೋಮ— ಇವು ಸಿದ್ಧನ ಸಾಕಾರ ನಿಷ್ಠೆಯ ಫಲಗಳು.... ......ಸಿದ್ಧನಿಗೆ ಸಾಕಾರನಿಷ್ಠೆ ಅಗತ್ಯವಿಲ್ಲದಿದ್ದರೂ ಲೋಕದ ಜನರು ಬದುಕುವದಕ್ಕಾಗಿ ಅವನು ಅದನ್ನು ಆಚರಿಸಿ ತೋರಿ ಸಬೇಕಾಗುವದು. ಈ ದೃಷ್ಟಿಯಿಂದ ನೋಡಿದಾಗ ಸಿದ್ಧರಾಮನ ಜೀವನ ತತ್ವದಲ್ಲಿ ಸಾಕಾರನಿಷ್ಠೆಗಿರುವ ಸ್ಥಾನ ವಿಶದವಾಗುತ್ತದೆ."[1]

" ತಾನು ಭಕ್ತಿಯಿಂದ ಲಿಂಗಾರ್ಚನೆ ಮಾಡಿದರೆ. ಸಾಮಾನ್ಯ ಜನರೂ ತನ್ನನ್ನು ಅನುಸರಿಸಿ ಆತ್ಮೋದ್ಧಾರ ಮಾಡಿಕೊಳ್ಳುವರೆಂಬ ಘನವಾದ ಉದ್ದೇಶ ಸಿದ್ಧರಾಮನಿಗಿದ್ದಂತೆ ಕಂಡುಬರುತ್ತದೆ. ಆದ್ದರಿಂದಲೇ ಆತನು ಚನ್ನಮಲ್ಲಿ ಕಾರ್ಜುನನನ್ನು ಲಿಂಗರೂಪದಲ್ಲಿ ಬರಮಾಡಿಕೊಂಡು ಆ ಲಿಂಗವನ್ನು ನಿತ್ಯ ಪೂಜಿಸುವನು; ಶಿವಾಲಯಗಳನ್ನು ಕಟ್ಟಿಸು ವನು; ಲಿಂಗ ಪ್ರತಿಷ್ಠಾಪನೆ ಮಾಡಿಸುವನು; ಅಭಿಷೇಕ ನಡಿಸುವನು, ದಾನ-ಧರ್ಮ ಮಾಡುವನು...... ......ಹೀಗೆ ಅಡಿಯಿಟ್ಟ ಧರೆಯನ್ನು ಕ್ಷೇತ್ರವನ್ನಾಗಿ ಮಾಡಬಲ್ಲ ಸಿದ್ಧರಾಮನು ಸಾಕಾಂದಲ್ಲಿ ನಿಷ್ಠೆಯಿಟ್ಟುದು ಭೂತಂಗಳ ಮೇಲಿನ ಅನುಕಂಪೆ ತಾನಾಗಿ. "[2]

ಇಬ್ಬರೂ ವಿದ್ವಾಂಸರು ಇಲ್ಲಿ ಸಾಕಾರನಿಷ್ಠೆಯೆಂದರೆ ಸ್ಥಾವರಲಿಂಗದ ಮೇಲಿನ ನಿಷ್ಠೆ ಎಂಬ ಅರ್ಥವನ್ನು ಗ್ರಹಿಸಿದ್ದಾರೆ ಎಂಬದು ಮೇಲಿನ ಅವರ ಅವತರಣಿಕೆಗಳನ್ನು ಓದಿದರೆ ಸ್ಪಷ್ಟವಾಗುತ್ತದೆ. ಹಾಗಾದರೆ ' ಸಾಕಾರ ಅಂದರೆ ಸ್ಥಾವರಲಿಂಗವೆಂದು ಅರ್ಥವೆ ? ಸಿದ್ಧರಾಮ ಶಿವಯೋಗಿಯು ಸ್ಥಾವರಲಿಂಗ ಪ್ರತಿಷ್ಠಾಪನೆ ಗೈದಿದ್ದಾನೆ ಎನ್ನುವ ದನ್ನು ಗಮನದಲ್ಲಿಟ್ಟುಕೊಂಡು ' ಸಾಕಾರ ' ದ ಅರ್ಥವನ್ನು ' ಸ್ಥಾವರಲಿಂಗ ' ವೆಂದು ಗ್ರಹಿಸಬೇಕೆ ? ಎನ್ನುವ ವಿಷಯವು

---

1 ಡಿ. ಎಲ್. ಎನ್. ಸಿದ್ಧರಾಮ ಚರಿತೆಯ ಮುನ್ನುಡಿ xlix.

2 ಡಾ. ಆರ್. ಸಿ. ಹಿರೇಮಠ, ಮಹಾಕವಿ ರಾಘವಾಂಕ ಪು. ೯೬-೯೭.

CC0. In Public Domain. Jangamwadi Math Collection, Varanasi

ವಿವೇಚನಾರ್ಹವಾದುದು. ‘ಆಕಾರ’ ‘ಸಾಕಾರ’ –ಇವು ಅಚ್ಚ ವೀರಶೈವ ಪಾರಿಭಾಷಿಕ ಪದಗಳಾಗಿದ್ದು, ಅವುಗಳ ಅರ್ಥವು ಸ್ಥಾವರಲಿಂಗವಲ್ಲ, ಇಷ್ಟಲಿಂಗ ಪರವಾಗಿದೆಯೆಂದು ಸಮಗ್ರ ವಚನಸಾಹಿತ್ಯವು ಸಾರಿಹೇಳುತ್ತಲಿದೆ. ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳಲ್ಲಿ ಬರುವ ಕೆಳಗಣ ಉದಾಹರಣೆಗಳನ್ನು ಅವಲೋಕಿಸಿದರೆ, ಮೇಲಣ ನಮ್ಮ ಹೇಳಿಕೆಯ ಸತ್ಯತೆಯು ಸ್ಪಷ್ಟವಾಗುವದು.

ಸಾಕಾರ :

“ ಸಾಕಾರ ಹದಿನೆಂಟು ಸ್ಥಲವನಂಗದಲ್ಲಿ ಆಚರಿಸುತ್ತ,
ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಹೇಶ್ವರ, ಅಲ್ಲಲ್ಲಿಗೆ
ಪ್ರಸಾದಿಯಾಗಿಪ್ಪ, ಆ ಸಾಕಾರವನೇನೆಂದುಪಮಿಸುವೆನಯ್ಯ !
ನಿರಾಕಾರ ಹದಿನೆಂಟು ಸ್ಥಲವನಾತ್ಮನಲ್ಲಿ ಆಚರಿಸುತ್ತ,
ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ, ಅಲ್ಲಲ್ಲಿಗೆ ಐಕ್ಯನಾಗಿಪ್ಪ,
ಆ ನಿರಾಕಾರವನೇನೆಂದುಪಮಿಸುವೆನಯ್ಯ !
ಆ ಸಾಕಾರ ಹದಿನೆಂಟು ಸ್ಥಲವನಂಗದಲ್ಲಿ ಆಚರಿಸುವದು ಭಕ್ತಸ್ಥಲ.
ಆ ನಿರಾಕಾರ ಹದಿನೆಂಟು ಸ್ಥಲವನಾತ್ಮನಲ್ಲಿ ಆಚರಿಸುವದು ಜಂಗಮಸ್ಥಲ.
ಇಂತೀ ಉಭಯಸ್ಥಲವೊಂದಾಗಿ ನಿಂದ ನಿಜದ ನಿಲವು,
ನಮ್ಮ ಕೂಡಲಸಂಗಯ್ಯನಲ್ಲಿ ಲಿಂಗೈಕ್ಯವು. ”[1]

“ ಆಕಾರ ನಿರಾಕಾರವೆಂಬೆರಡೂ ನಾನೆ ದಿಟ !
ದಿಟ ತಪ್ಪದು ಕೇಳಾ.
ಆಕಾರಕ್ಕೆ ಭಾವವೆ ಪ್ರಾಣ, ನಿರಾಕಾರಕ್ಕೆ ಮಹಾಜ್ಞಾನವೆ ಪ್ರಾಣ,
ಇಂತೀ ಉಭಯಕ್ಕೆ ಕುಳಕ್ಕೆ ಇದು ಲಕ್ಷಣ ಕೇಳಾ........”[2]

“ ಸಾಕಾರಕ್ಕೆ ಸತ್ಕ್ರಿಯೆಬೇಕು. ”[3]

“ ಸತ್ಕ್ರಿಯೆಯಿಂದಲ್ಲದೆ ಸಾಕಾರದ ಪಟಲ ಹರಿಯದು. ”[4]

“ ಅಂಗದ ಮೇಲೆ ಸಾಕಾರವಿಡಿದು ಮಂತ್ರಾಹ್ವಾನಂಗಳಿಂದ
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಲ್ಲಿ–
ವ್ಯಾಪಿಸಿಕೊಂಡಿಪ್ಪುದೀಗ ಇಷ್ಟಲಿಂಗ. ”[5]

“ ಲೋಕವಿಡಿದು ಲೋಕ ಹಿಂಗದಿಪ್ಪೆನು.
ಆಕಾರವಿಡಿದು ಸಾಕಾರಸಹಿತ ನಹೆವೆನು.
ಹೊರಗೆ ಬಳಸಿ ಒಳಗೆ ಮರೆದಂತಿಪ್ಪೆನು.......”[6]

---

1 ಚನ್ನಬಸವಣ್ಣನವರ ವಚನಗಳು ೧೪೪೩.
2 ಅಲ್ಲಮನ ವಚನ ಚಂದ್ರಿಕೆ ೧೧೩೭.
3 ಚನ್ನಬಸವಣ್ಣನವರ ವಚನಗಳು ೧೧೬೧.
4 ಅಲ್ಲಮನ ವಚನ ಚಂದ್ರಿಕೆ ೧೨೩೭.
5 ವಚನ ಶಾಸ್ತ್ರಸಾರ ೨. ಪು. ೨೪೪.
6 ವಚನ ಧರ್ಮಸಾರ ೨೮೬.

Digitization by eGangotri and Sarayu Trust. Funding by MoE-IKS

" ಹೊದ್ದು ಹೊದ್ದೆಂಬುದು ಇಲ್ಲದದೇವಾ, ನಿಮ್ಮಿಂದ ನೀವೆ
ಶೂನ್ಯದಲ್ಲಿ ನಿಂದು ಸ್ವಯಂಭುವಾದಿರಲ್ಲಾ !
ಬೀಜವೃಕ್ಷದಂತೆ ಸಾಕಾರ ನಿರಾಕಾರ ನೀವೆಯಾದಿರಲ್ಲ !.......[1]

" ಆಕಾಶವ ಮೀರುವ ತರುಗಿರಿಗಳುಂಟೆ ?
ನಿರಾಕಾರವ ಮೀರುವ ಸಾಕಾರವುಂಟೆ ?
ಗುಹೇಶ್ವರಲಿಂಗನ ಮೀರುವ ಒಡೆತನ ಉಂಟೆ ಸಂಗನ ಬಸವಣ್ಣ ?"[2]

ನಿರಾಕಾರ, ನಿಃಶೂನ್ಯ, ನಿರ್ಬಯಲ ಸ್ವರೂಪದ ಪರಬ್ರಹ್ಮವು ವೀರಶೈವ ದರ್ಶನದಲ್ಲಿ ಆತ್ಯಂತಿಕ ಸತ್ಯವೆಂದು **(Etornal Reality)** ಪರಿಗಣಿಸಲ್ಪಡುತ್ತದೆ. ಅದ್ದರಿಂದ ವೀರಶೈವ ದರ್ಶನದಲ್ಲಿ 'ಪರಬೊಮ್ಮ' ಅಥವಾ 'ಪರಬ್ರಹ್ಮ' ಪದಕ್ಕೆ ವಿಶಿಷ್ಟ ಪರಿಭಾಷೆಯಿದೆ ಎನ್ನುವುದನ್ನು ಲಕ್ಷಿಸಬೇಕು. ಶೂನ್ಯ ತತ್ವದ ಸಾಕಾರಸ್ವರೂಪವು ಇಷ್ಟ ಲಿಂಗವಾದರೆ ಅದರ ನಿರಾಕಾರ ಸ್ವರೂಪವು ಬ್ರಹ್ಮವೆಂದು ಕರೆಯಲ್ಪಡುತ್ತದೆ. ಈ ಮಾತು ಕೆಳಗಣ ವಚನಗಳಿಂದ ವೇದ್ಯವಾಗುತ್ತದೆ.

" ಲೀಲೆಯದು ಪರಬೊಮ್ಮದ ಇಚ್ಛೆ,
ಇಚ್ಛೆಯದು ಸಕಲ ಜೀವ ಜಾಲೋತ್ಪತ್ತಿ.
ಸಕಲ ಜೀವ ಜಾಲೋತ್ಪತ್ತ್ಯವದು ಜಗತ್ ರಚನೆ.
ಜಗದ್ರಚನೆಯದು ಜಗತ್ಪ್ರಳಯ ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ. "[3]

" ಪರಬೊಮ್ಮವೆ ಶರಣನ ಶಿರದರಮನೆಯಿಂದ ಕರದರಮನೆಗೆ
ಗುರು ಕೃಪೆಯಿಂದ ಲಿಂಗಮೂರ್ತಿಯಾಗಿ ಬಿಜಯಂಗೈದಿರ್ಪುದು ಕಂಡಾ "[4]

" ಲಯಗಮನ ಶೂನ್ಯವಪ್ಪುದು ಶಿವಲಿಂಗ ತಾನೇ ನೋಡಾ !
ಕೇವಲ ನಿಷ್ಕಲರೂಪವಾಗಿರ್ಪುದು ಪರತರಬ್ರಹ್ಮ ತಾನೆ ನೋಡಾ "[5]

" ಪರಬ್ರಹ್ಮವೆಂಬ ಫಲವ ಸುವಿವೇಕದಿಂದ ಸವಿದು
ಸುಖಿಯಾಗಿರ್ಪನಾಗಿ. "[6]

" ಹೊಲೆ ಹದಿನೆಂಟು ಜಾತಿ ನೂರೊಂದ ಕುಲದಲ್ಲಿ
ಶರಣನು ಹುಟ್ಟಿದಡೆ,
ಆ ಜಾತಿಕುಲಂತರ ಬಲ್ಲನೆ ?
ಸಾಕ್ಷಾತ್ ಪರಬ್ರಹ್ಮವೇ ಇಹಸಂಸಾರಿಯಾಗಿ
ಬಂದನೆಂದರಿವುದು.[7]

---

1 ವಚನಶಾಸ್ತ್ರ ರಹಸ್ಯ ೧೪. ಪು. ೮.
2 ಅಲ್ಲಮನ ವಚನ ಚಂದ್ರಿಕೆ ೧೨೪೦.
3 ವಚನಧರ್ಮಸಾರ ೧೪೧. ಪು. ೨೫.
4 ಚೆನ್ನಬಸವಣ್ಣನವರ ವಚನಗಳು ೧೧೯೬.
5 ,, ,, ೭೩೨.
6 ಚೆ. ಬ. ವಚನಗಳು ೧೦೪೬.
7 ,, ೧೧೧೮.

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8793

CC0. In Public Domain. Jangamwadi Math Collection, Varanasi

"ಶರಣು ಶರಣಾರ್ಥಿ ಪರಬ್ರಹ್ಮ ರೂಪಾ
ಶರಣು ಶರಣಾರ್ಥಿ ನಿರಾಕಾರ ತತ್ವವೇ........"[1]

"ಏನೂ ಎನಲಿಲ್ಲದ ನಿರಾಕಾರ ಬಯಲು,
ನಿಃಶಬ್ದಮಯ ಪರಬೊಮ್ಮನು......"[2]

'ಸಾಕಾರ' ಹಾಗೂ 'ಪರಬ್ರಹ್ಮ' ಎಂಬ ಪದಗಳಿಂದ ರಾಘವಾಂಕನು ಸಿದ್ಧರಾಮನ ವೀರಶೈವತ್ವದ ಸಾಂಕೇತ ಕೊಟ್ಟಿರಬಹುದೆಂದು ನಾವು ಭಾವಿಸಬಹುದೇ ? ಸಿದ್ಧರಾಮ ಶಿವಯೋಗಿಯು ಗೈದ ಸ್ಥಾವರ ಲಿಂಗಸ್ಥಾಪನೆ ಕ್ಷೇತ್ರಪರಿಕಲ್ಪನೆ, ನಾರಕಿಗಳ ಉದ್ಧಾರ, ಕೆರೆಬಾವಿಗಳ ಖನನ ಇವೆಲ್ಲವೂ ಅವನಲ್ಲಿ ಇಲ್ಲ 'ಭೂತಂಗೊಳನುಕಂಪೆ'ಯ ಫಲಗಳು. ಇದಕ್ಕೆ ಪ್ರಬಲವಾದ ಆಧಾರವಿದೆ. ಶ್ರೀ ಪರ್ವತದಲ್ಲಿ ಚೆನ್ನಮಲ್ಲಿಕಾರ್ಜುನನು ಪ್ರತ್ಯಕ್ಷನಾಗಿ ಸಿದ್ಧರಾಮನಿಗೆ ದೀಕ್ಷೆಮಾಡಿ, 'ಕೂಡುತ್ತಮಂಗದಲಿ ಮೂಡಿದ ಗೂಢ ಲಿಂಗಮಂ ತೋರಿಸುತ್ತಾನೆ. ಆಗ ಸಿದ್ಧರಾಮನಿಗೆ "ಕನ್ನಡಿಗೆ ಕನ್ನಡಿ ತೋರಿದಂತೆರಡಳಿದೊಂದು ವಿಡಿದ" ಲಿಂಗಾಂಗ ಸಾಮರಸ್ಯದ ದಿವ್ಯಭಾವ ಮೂಡುತ್ತದೆ. ಇಲ್ಲಿಂದ ಮುಂದೆ ಸಿದ್ಧರಾಮ ಶಿವಯೋಗಿಗೆ ಆತ್ಮಕಲ್ಯಾಣದ ಅಭೀಪ್ಸೆಯಿಲ್ಲ. ಆತ್ಮೋನ್ನತಿಗಾಗಿ ಕರ್ಮಯೋಗವನ್ನು ಕೈಕೊಳ್ಳಬೇಕಾದ ಆವಶ್ಯಕತೆಯಿರಲಿಲ್ಲ. "ಮುಂತೆಧರೆಯುಂಡಡೇನೊಡ ಬಿದ್ದೊಡೇನೀಗ ಕಂತುಹರ ನಿನ್ನನೆಂತಗಲಿ ಹೋಹೆಂ" ಎಂದು ಅಲ್ಪರಿಯುತ್ತಾನೆ ಚೆನ್ನಮಲ್ಲಿಕಾರ್ಜುನನು. "ಧರೆಯು ಬೇಸರವನಳಿದು ದೋಷಮಂ ಹುಡುಗುಟ್ಟಲೆಂದು ಹುಟ್ಟಿದ ನಿನ್ನ ನಾನಿಲ್ಲಿ ಮಡಗುವೆನೆ" ಎಂದು ಹೇಳಿ ಲಿಂಗಪ್ರತಿಷ್ಠೆ, ಕ್ಷೇತ್ರಪರಿಕಲ್ಪನೆ ಮೊದಲಾದ ಭೂತದಯಾ ವಿಚಾರದ ದೀಕ್ಷೆಯನ್ನಿತ್ತು ಕಳಿಸುತ್ತಾನೆ ಸಿದ್ಧರಾಮ ಶಿವಯೋಗಿಯು. ಕರ್ಮಯೋಗದ ಸೂತ್ರವು ಅವನ ಭೂತದಯಾ ವಿಚಾರ ಅಥವಾ ಭೂತಾನುಕಂಪೆಯಲ್ಲಿದೆಯೆಂದು ನಾವು ಭಾಸಿಸುತ್ತೇವೆ. ಆದ್ದರಿಂದ ಸಾಕಾರ ನಿಷ್ಠೆಯೆಂದರೆ ಸ್ಥಾವರಲಿಂಗದ ನಿಷ್ಠೆಯೆಂದು ಅರ್ಥೈಸುವದು ಸರಿಯಲ್ಲ.

ಇನ್ನು 'ಲಿಂಗದೊಳಗೆ ನೆರೆನಟ್ಟ ದೃಷ್ಟಿಯ ಧೀರ'ನಾದ ಅಲ್ಲಮನು ಸಿದ್ಧರಾಮನ ಸಂದರ್ಶನಕ್ಕೆ ಬಂದ ಸನ್ನಿವೇಶವನ್ನು ಇಲ್ಲಿ ಪರಿಶೀಲಿಸಬೇಕು. 'ಕರೆಯೋ ಒಡ್ಡರೆರೆಯನಂ' ಎಂದು ಅಲ್ಲಮನು "ಕುರುಹು ವಿಡಿದಂ ಜರೆವುದಂ" ಕಂಡು ಈ ಅಲ್ಲಮಪ್ರಭುವಿಗೆ ತಿಳಿಸಿಕೊಡುತ್ತಾನೆ. ನನ್ನಲ್ಲಿಯೂ 'ಕುರುಹು' ಇರೆಯೆನ್ನುವದನ್ನು ! ಎಂದು ನಸುನಗುತ್ತ ಏದು ಬಂದು ನಿಲ್ಲುತ್ತಾನೆ. 'ಶೈತ್ಯ ಪ್ರಜ್ವಲಿತ' ಕಾಂತಿಯಿಂದ ಶೋಭಿಸುವ ಮುಕುಟದ ಮರೆಯ ಲಿಂಗವನ್ನೂ, ವಸ್ತ್ರವನ್ನೂ ಓಧರಿಸಿ, 'ಬಾಹ್ಯಕ್ರಿಯೆಯೊಳು ಬಳಕೆದೋರು'ತ್ತಾನೆ. 'ಕುರುಹು' ಎಂಬ ಪದಕ್ಕೆ ಎರಡು ಅರ್ಥಗಳು. 'ಗುರುತು' 'ಲಕ್ಷಣ' ಎನ್ನುವದು ಸಾಮಾನ್ಯವಾದ ಅರ್ಥ. ವೀರಶೈವ ಪರಿಭಾಷೆಯಲ್ಲಿ 'ಕುರುಹು' ಎಂದರೆ 'ಇಷ್ಟಲಿಂಗ'ವೆಂಬ ವಿಶೇಷಾರ್ಥವೂ ಉಂಟೆಂಬುವದನ್ನು ಇಲ್ಲಿ ಲಕ್ಷಿಸಬೇಕು. ಸಿದ್ಧರಾಮ ಶಿವಯೋಗಿಯ ಉತ್ತಮಾಂಗದ ಗುಪ್ತಲಿಂಗದ ದರ್ಶನದಿಂದ ಪ್ರಭುವಿಗೆ ಸಿದ್ಧರಾಮನಲ್ಲಿ ಇಷ್ಟಲಿಂಗದ ರಹಸ್ಯವು ಅಳವಟ್ಟಿದೆ ಎಂಬ ಮಾತಿನ ಸತ್ಯವು ವೇದ್ಯವಾಗುತ್ತದೆ. ಆದ್ದರಿಂದಲೇ ಅವನು ನುಡಿಯುತ್ತಾನೆ. 'ಬೇಹುದೊಂದಳವಟ್ಟ ಬಳಿಕ ಬಿಡಲಾಗದೆ ?...ನೆರೆಯುವಂಗಿತ್ತು ಕಣ್ಣು ಹೋಹಂದ ನಿಮಗೆ?—ನಿನ್ನ ಆತ್ಮ ಕಲ್ಯಾಣಕ್ಕೆ ಬೇಕಾದುದು ಲಿಂಗತತ್ವದ ಅರಿವು, ಅದು ನಿನ್ನಲ್ಲಿ ಅಳವಟ್ಟಿದೆ. ಲೋಕ ಕಲ್ಯಾಣದ ಹೆಸರಿನಲ್ಲಿ ನೆರೆಯುವರಿಗೆ ಕೊಟ್ಟು, ಕಣ್ಣು ಕಳೆದುಕೊಳ್ಳುವ ಈ ಹುಚ್ಚು ಹವ್ಯಾಸವೇಕೆ ?

ಪ್ರಭುವಿನ ಪ್ರಶ್ನೆಗೆ ಸಿದ್ಧರಾಮನಲ್ಲಿ ಉತ್ತರ ಸಿದ್ಧವಿದೆ. ಅವನ ಜೀವನದ ಧ್ಯೇಯವು ಭೂತಾನುಕಂಪೆ ತೋರುವುದರಲ್ಲಿ ಕೇಂದ್ರಿಕೃತವಾಗಿದೆ. ಸಾಕಾರನಿಷ್ಠೆ ಅವನ ಆಂತರಿಕ ಜೀವನಕ್ಕೆ ಪರಿಪೂರ್ಣತೆಯನ್ನು ತಂದುಕೊಟ್ಟಿದೆ. ಭೂತಂಗಳ ಅನುಕಂಪೆ ಅವನ ಲೌಕಿಕ ಜೀವನಕ್ಕೆ ಪರಿಪೂರ್ಣತೆಯನ್ನು ತರಬೇಕಾಗಿದೆ. ಅದಕ್ಕಾಗಿ ಅವನ ಕರ್ಮಯೋಗವು ಅವ್ಯಾಹತವಾಗಿ ಸಾಗಿದೆ. "ದೊಕಿದಾತಂ ಸವಿಯ ಬೇಹ-ದೇ ಮತ್ತಾರ್ಗೆದೊರೆಕೊಳುವುಪಾಯಕ್ಕೆ ಸೋಪೆಯಂ ಕೊಡಲಾಗದೆ ?" "ಈ ಜಗದ ಜೀವರ ಪುಣ್ಯದೊದವಿಂಗೆ ಕೈಕೊಂಡ ಮೂರ್ತಿಯಿದು, ಹ-ಸಿಯ ಮಾಡದೆ

---

1 ಚೆ. ಬ. ವಚನಗಳು ೧೦೮೬.
2 ವಚನ ಶಾಸ್ತ್ರಸಾರ, ಪು. ೩೪೩.

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾದೊಡುಳಿದ ಮಾನವರ ಪರಿಮೈಸಲು ಪ್ರಭುವೇ" ಎಂದು ತಾನು ಮಾಡುವ ಭೂಶಾನು ಕಂಪೆಯ ಧ್ಯೇಯಕ್ಕೆ ಸೂತ್ರ ರೂಪವಾದ ಮಾತುಗಳನ್ನಾಡುತ್ತಾನೆ. ಆದರೆ ಸಿದ್ಧರಾಮನ ಈ ಕೊನೆಯಿಲ್ಲದ ಕರ್ಮಯೋಗ ಹಾಗೂ ಭೂತಾನ ಕಂಪೆಯ ವಿಚಾರಕ್ಕೆ ಪ್ರಭುವಿನ ಸಮ್ಮತಿಯಲ್ಲಿ 'ಮಾನವರ ನಡುವಿರಲು ಬೇಡ ಸಿದ್ಧೇಂದ್ರ' ಎಂದು ಕೊನೆಯ ಎಚ್ಚರಿಕೆಯನ್ನು ಕೊಟ್ಟು ಕದಳಿಯನುಟ್ಟಗೊಳ್ಳುವನು.

ಮೇಲಣ ವಿವೇಚನೆಯಿಂದ ರಾಘವಾಂಕನಿಗೆ ಸಿದ್ಧರಾಮನ ವೀರಶೈವ ತತ್ವದಲ್ಲಿ ಎಳ್ಳಷ್ಟೂ ಸಂದೇಹವಿರಲಿಕ್ಕಿಲ್ಲವೆಂದು ಕಂಡುಬರುತ್ತದೆ. ಹಾಗಾದರೆ ಕಲ್ಯಾಣದಲ್ಲಿ ಚನ್ನಬಸವಣ್ಣನು ಸಿದ್ಧರಾಮನಿಗೆ ದೀಕ್ಷೆಗೈದ ಸನ್ನಿವೇಶವನ್ನು ಏಕೆ ಹೇಳಲಿಲ್ಲವೆನ್ನುವದು ಮತ್ತೆ ಸಮಸ್ಯೆಯಾಗಿಯೆ ಉಳಿಯುತ್ತದೆ. ತನ್ನ ಕಥಾನಾಯಕನಾದ ಸಿದ್ಧರಾಮನ ವ್ಯಕ್ತಿತ್ವದ ಉನ್ನತಿಯನ್ನು ಎತ್ತಿ ಹೇಳುವುದಕ್ಕಾಗಿ, ಅವನಿಗೆ ಚನ್ನಬಸವಣ್ಣನಿಂದ ಲಿಂಗ ದೀಕ್ಷೆಯಾದ ಐತಿಹಾಸಿಕ ಸಂಗತಿಯನ್ನು ಪ್ರಜ್ಞಾಪೂರ್ವಕವಾಗಿ ಮಾರ್ಪಡಿಸಿರಬಹುದೆ ? ಇಲ್ಲವೆ ಸಿದ್ಧರಾಮನ ಉತ್ತರಾರ್ಧ ಜೀವನದ ಪರಿಜ್ಞಾನವಿಲ್ಲದೆಯೂ ಇರಬಹುದು, ಇವೆರಡರಲ್ಲಿ ಎರಡನೆಯದು ಹೆಚ್ಚು ಸಂಭವನೀಯವೆಂದು ಸಧ್ಯದ ಮಟ್ಟಿಗೆ ನಮ್ಮ ಅಭಿಪ್ರಾಯವಾಗಿದೆ.

ಲೇಖಕರು :— ಡಾ. ಎಂ. ಬಿ. ಕೊಟ್ರಶೆಟ್ಟಿ, ಎಂ. ಎ., ಪಿ. ಎಚ್. ಡಿ. ಬೆಳಗಾವಿ.

" ಕಾಯಪ್ರಸಾದವೆನ್ನ , ಜೀವಪ್ರಸಾದವೆನ್ನ , ಪ್ರಾಣಪ್ರಸಾದವೆನ್ನ
ಭಾವಪ್ರಸಾದವೆನ್ನ , ಸುಯಿದಾನ ಪ್ರಸಾದವೆನ್ನ
ಸಮಯ ಪ್ರಸಾದವೆನ್ನ ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಪ್ರಸಾದವ ಹಾಸಿ,
ಹೊದೆದು ಕೊಂಡಿಪ್ಪೆನು !"

" ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ ಬಯಲಾಯಿತ್ತಯ್ಯ.
ಬಯಲು ಜೀವನ, ಬಯಲು ಭಾವನೆ; ಬಯಲು
ಬಯಲಾಗಿ ಬಯಲಾಯಿತಯ್ಯ.
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗೋಹೇಶ್ವರಾ ! "

" ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕ್ಕಂಜಿ,
ಕಳವೆ ಎಲ್ಲ ಹೋಗಿ ಬರಿಯ ಗೋಣಿ ಉಳಿದಿತ್ತು
ಅಳಿಮನದವನ ಭಕ್ತಿ ಇಂತಾಯಿತು ರಾಮನಾಥಾ. "

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಡೇಕಲ್ಲ ಜಂಗಮರು

(ಒಂದು ಜಾನಪದ ಕತೆ)

ಬಿಜಾಪೂರ ಸುಲ್ತಾನ್ ಆದಿಲ್‌ಷಾಹನ ಕೋಟೆಯ ಮುಖ್ಯದ್ವಾರದ ಕಾಪಿನ ಠಾಣದಿಂದ ವೈನವರೇಳು ವಂತೆ ಸನ್ನದ್ಧಭೇರಿಗಳು ಮೊಳಗಿದವು. ಸಾಮಂತರು, ಸರದಾರರು, ಪಾಳೆಯಗಾರರು, ಅಧಿಕಾರಿವರ್ಗದವರು ಅವಸರ ವಸರವಾಗಿ ನವರಂಗದರ್ವಾಜವನ್ನು ದಾಟಿ, ದರ್ಬಾರವನ್ನು ಪ್ರವೇಶಿಸಿದರು.

ಅನಿರೀಕ್ಷಿತವಾದ ಸುಲ್ತಾನನ ಅವಸರದ ಈ ಕರೆ ಎಲ್ಲರಿಗೂ ಆಶ್ಚರ್ಯವನ್ನು ತಂದಿತು. ಭಯ–ಭೀತಿ ಗಳು ಒಂದು ಚಣ ಅವರ ಮುಖದಲ್ಲಿ ಕಾಣಿಸಿಕೊಂಡವು. ಸುಲ್ತಾನ್ ಇಮ್ಮಡಿ ಇಬ್ರಾಹಿಮ್ ಆದಿಲ್‌ಷಾಹನೇ ಈ ಅವಸರದ ದರ್ಬಾರವನ್ನು ಕರೆಸಿದ. ಆತನ ಬರುವಿಕೆಗಾಗಿ ಅವರೆಲ್ಲರೂ ಕುತೂಹಲದಿಂದ ಕಾದುನಿಂತರು.

ಸ್ವಲ್ಪ ಸಮಯದ ತರುವಾಯ ಸುಲ್ತಾನ್ ಸಭೆಗೆ ಬರುವ ಮುನ್ಸೂಚನೆಯ ಪರಾಕುಗಳಿಂದ ದರ್ಬಾರ ನಿಶ್ಶಬ್ದ ವಾಯಿತು. ರಾಜಸನ್ಮಾನದೊಂದಿಗೆ ಸುಲ್ತಾನ್ ಬಂದು ಸಿಂಹಾಸನದಲ್ಲಿ ಆಸೀನನಾದ. ದರ್ಬಾರವೆಲ್ಲ ಆತನಿಗೆ ಮುಜುರೆ ಮಾಡಿ ಕುಳಿತುಕೊಂಡಿತು. ಸುಲ್ತಾನನ ಮುಖ ವ್ಯಗ್ರವಾಗಿತ್ತು. ಬೆಳೆದ ಗಡ್ಡದ ಮಧ್ಯದಲ್ಲಿ ಅಧರಗಳು ಕಂಪಿಸುತ್ತಿದ್ದವು, ದರ್ಬಾರವನ್ನೊಮ್ಮೆ ಆತ ಘನಗಂಭೀರವಾಗಿ ನೋಡಿ—

“ ಇಂದಿನ ದರ್ಬಾರವನ್ನು ನಾವೇಕೆ ಕರೆದಿದ್ದೇವೆಯೆಂಬುದು ಸಭೆಗೆ ತಿಳಿದಿದೆಯೇ, ಜಮಾಹಿತ್‌ಖಾನ್?” ಎಂದು ಪ್ರಶ್ನಿಸಿದ.

ಬದಿಯ ಪೀಠದಲ್ಲಿ ಕುಳಿತ ವಜೀರ ಜಮಾಹಿತ್‌ಖಾನ ಎದ್ದು—

“ ಖಾವಂದರು ಈಗ ಅಪ್ಪಣೆಕೊಡಿಸಿದರೆ ಮಾತ್ರ ಸಭೆಗೆ ವೇದ್ಯವಾಗುತ್ತದೆ ” ಎಂದು ವಿನಯವಾಗಿ ಅರಿಕೆ ಮಾಡಿಕೊಂಡ.

ಆಗ ಸುಲ್ತಾನ್ ಸಭೆಯ ಕಡೆಗೆ ತಿರುಗಿ—

“ ಬಲಾಢ್ಯವಾದ ವಿಜಯನಗರ ಸಾಮ್ರಾಜ್ಯ ರಕ್ಕಸ–ತಂಗಡಗಿ ಕಾಳಗದಲ್ಲಿ ಪೂರ್ತಿಮಣಿದು ಹೋದರೂ ಸ್ವಾಮಿನಿಷ್ಠರಾದ ಅನೇಕರು ಆದಿಲ್‌ಷಾಹಿ ರಾಜ್ಯವನ್ನು ಕಬಳಿಸಲು ಹೊಂಚುಹಾಕುತ್ತಿದ್ದಾರೆಂಬುದು ನಿಮಗೆ ತಿಳಿದ ವಿಷಯವೆ ! ಇದಲ್ಲದೆ ನಮ್ಮ ರಾಜ್ಯದಲ್ಲಿಯೇ ಒಳಸಂಚುಗಳೂ, ಪಿತೂರಿಕಾರ್ಯಗಳೂ ನಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಪುಂಡರಾಜದ್ರೋಹಿಗಳನ್ನು ಶಿಕ್ಷಿಸದೇ ಹೋದರೆ ನಮಗೆ ನೆಮ್ಮದಿಯಿಲ್ಲ. ಇದರಿಂದ ಹಿಂದುಗಳ ಸಾಮ್ರಾಜ್ಯ ಮತ್ತೆ ಸ್ಥಾಪನೆಯಾದರೆ ಇಸ್ಲಾಂ ಧರ್ಮಕ್ಕೆ ಉಳಿಗಾಲವಿಲ್ಲದಂತಾಗುತ್ತದೆ ” ಎಂದು ಆವೇಶ ಪೂರಿತವಾಗಿ ನುಡಿದ.

“ ಅಂತಹ ಘಟನೆಗಳಾದರೂ ಈಗ ಸಂಭವಿಸಿರುವವೇ, ಖಾವಂದ್ ?” ಎಂದು ಚಕಿತಚಿತ್ತನಾಗಿ ಕೇಳಿದ ಜಮಾಹಿತ್‌ಖಾನ್.

“ ಹೌದು ವಜೀರರೇ ! ಸಗರನಾಡಿನ ಸುರಪುರದ ಸನಿಹದ ಒಂದು ಅರಣ್ಯಪ್ರದೇಶದಲ್ಲಿ ಇಂತಹ ಪಿತೂರಿಯ ಕಾರ್ಯ ನಡೆಯುತ್ತಿದೆಯೆಂದು ಗೂಢಚಾರರಿಂದ ನಮಗೆ ತಿಳಿದು ಬಂದಿದೆ. ”

“ ಅಲ್ಲಿ ನಡೆಯುತ್ತಿರುವ ಮುಖ್ಯಘಟನೆ ಏನೆಂಬುದನ್ನು ಪ್ರಭುನಿಷ್ಠರಾದ ದರ್ಬಾರಿನವರು ಕೇಳಲು ಬಯಸು ತ್ತಾರೆ; ವಿಷಯವೇನೆಂಬುದನ್ನು ದಯಮಾಡಿ ಅರುಹಬೇಕು, ಜಹಪನಾ. ”

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

—ತವಕಗೊಂಡು ತದೇಕಚಿತ್ತರಾಗಿ ಕುಳಿತ ಸಭಾಸದರ ಪರವಾಗಿ ಜಮಾಹಿತ್‌ಖಾನನೇ ನಿವೇದಿಸಿಕೊಂಡ. ಸುಲ್ತಾನ್ ಹೇಳಿದ.

"ಆ ಅರಣ್ಯ ಪ್ರದೇಶದಲ್ಲಿ ಯಾವನೋ ಒಬ್ಬ ಜಂಗಮವೇಷ ಹಾಕಿಕೊಂಡು ಸೈನ್ಯ ಜಮಾವಣೆಯ ಕಾರ್ಯದಲ್ಲಿ ತೊಡಗಿದ್ದಾನಂತೆ. ಆತನಲ್ಲಿ ಜನರು ತಂಡೋಪತಂಡವಾಗಿ ಬರುತ್ತಿರುವದು ದಿನದಿನಕ್ಕೂ ಹೆಚ್ಚುತ್ತಿದೆಯೆಂತೆ. ಜನಬಲವನ್ನು ಗಳಿಸಿದ ಆ ಜಂಗಮವೇಷಧಾರಿ ಒಂದಿಲ್ಲ ಒಂದು ದಿನ ನಮ್ಮ ಮೇಲೆ ಕೈಮಾಡದೇ ಬಿಡುತ್ತಾನೆಯೇ, ಜಮಾಹಿತ್‌ಖಾನ್ ?"

—ಮಾತಿನಲ್ಲಿ ರೋಷ ಉಕ್ಕುತ್ತಿತ್ತು.

"ಇದು ಪಿತೂರಿಯ ಕೆಲಸವೇ ಖಾವಂದ್. ಇಂತಹ ಚಟುವಟಿಕೆಗಳಲ್ಲಿ ತೊಡಗಿದ ಯಾರೇ ಆಗಲಿ ಅವರು ಶಿಕ್ಷಾರ್ಹರು. ಆ ಮಾಯಾವಿ ಜಂಗಮನನ್ನು ಬೇಗ ಹಿಡಿದೇ ದಂಡಿಸಲೇಬೇಕು" ಎಂದು ಸ್ವಾಮಿನಿಷ್ಠೆಯಿಂದ ಸಲಹೆನೀಡಿದ ಜಮಾಹಿತ್‌ಖಾನ್.

"ಇಂದೇ ನಮ್ಮ ಸೈನ್ಯ ಅಲ್ಲಿಗೆ ಹೋಗಿ, ಜಂಗಮ ಮತ್ತು ಆತನ ಅನುಚರರ ಚಟುವಟಿಕೆಗಳನ್ನು ಧ್ವಂಸ ಮಾಡಿ, ಅವರನ್ನು ಬಂಧಿಸಿತರಬೇಕು. ಈ ಕಾರ್ಯದಲ್ಲಿ ಏನಾದರೂ ಪ್ರಮಾದವಾದರೆ...ಹುಷಾರ್" ಎಂದು ಎಚ್ಚರಿಕೆ ನೀಡಿ, ಅಲ್ಲಿಂದ ಸುಲ್ತಾನ್ ಜನಾನಕ್ಕೆ ನಡೆದ.

ದರ್ಬಾರ ಎದ್ದು ಮತ್ತೊಮ್ಮೆ ಆತನಿಗೆ ಗೌರವದಿಂದ ಸಲಾಂ ಮಾಡಿತು.

ಆರುಸಾವಿರ ರಾವುತರೂ ಐದುನೂರು ಕುದುರೆ ಸವಾರರ ಸುಸಜ್ಜಿತವಾದ ದೊಡ್ಡ ಸೈನ್ಯ ಆಗಾಖಾನ್ ಮತ್ತು ಅಂಕುಶಖಾನರ ನಾಯಕತ್ವದಲ್ಲಿ ಹೊರಟಿತು. ಕೃಷ್ಣಾನದಿಯನ್ನು ದಾಟಿ, ಜಂಗಮರಿರುವ ಅರಣ್ಯಪ್ರದೇಶಕ್ಕೆ ಬರುವದರೊಳಗಾಗಿ ಅವರಿಗೆ ಸಂಜೆಯಾಯಿತು. ಮಾರ್ಗಾಯಾಸವನ್ನು ಕಳೆದು, ಮರುದಿನ ಉದಯಕ್ಕೆ ಜಂಗಮರ ಪ್ರದೇಶವನ್ನು ಮುತ್ತಬೇಕೆಂದು ಯೋಚಿಸಿ, ದಳವಾಯಿಗಳು ಅಂದಿನ ರಾತ್ರಿ ಅಲ್ಲಿಯೇ ಬೀಡು ಬಿಟ್ಟರು.

ಬಿಡಾರದಲ್ಲಿ ಸಾವಿರಾರು ಪಂಜುಗಳು ಹೊತ್ತಿಕೊಂಡವು. ಬಲವಾದ್ದ ಪಹರೆ ಗಸ್ತಿಹಾಕುತ್ತಿತ್ತು. ನಸುಕು ಹರಿಯುವದನ್ನೇ ಅವರು ಕಾಯುತ್ತಿದ್ದರು.

ಯಾರು ಜಂಗಮರು ? ಯಾರಿಗೂ ತಿಳಿಯದು !

ಸುರಪುರದ ಸಮೀಪದ ಒಂದು ಅರಣ್ಯ ಪ್ರದೇಶದಲ್ಲಿ ಅವರು ಬಂದು ಬಹಳದಿನಗಳಾಗಿಲ್ಲ. ಅವರು ಯಾರು? ಎಲ್ಲಿಂದ ಬಂದರು? ಎಲ್ಲಿಯವರು? ಎಂಬ ವಿಷಯವನ್ನು ಯಾರೂ ಅರಿಯರು.

ಶಿರದಲ್ಲಿ ಜಡೆ; ಹಣೆಯಲ್ಲಿ ವಿಭೂತಿ; ಕೊರಳಲ್ಲಿ ರುದ್ರಾಕ್ಷಿ; ಚರಣದಲ್ಲಿ ಪಾದುಕೆಗಳನ್ನು ಮೆಟ್ಟಿದ ನಿಲುವಾದ ತೆಳುವಾದ ವ್ಯಕ್ತಿಗಳು—ಆ ಜಂಗಮರು. ಕಷಾಯಾಂಬರವನ್ನು ಉಟ್ಟಿದ್ದಾರೆ; ಒಂದು ಹೊದ್ದಿದ್ದಾರೆ. ಕೈಯಲ್ಲಿ ಲಾಕುಳದಂಡವನ್ನು ಹಿಡಿದುಕೊಂಡು ಆ ಪ್ರದೇಶಕ್ಕೆ ಬಂದರು.

ಒಂದು ನರಪಿಳ್ಳೆಯೂ ಇಲ್ಲದ ಆ ಕಾಡಿನಲ್ಲಿ ಮಧ್ಯವಯಸ್ಸಿನ ಹನುಮಪ್ಪನೆಂಬುವನು ಹತ್ತಾರು ದನಗಳನ್ನು ಮೇಯಿಸಿಕೊಂಡು ಅಲ್ಲಿಯೇ ಸುತ್ತು-ಮುತ್ತು ತಿರುಗಾಡಿಕೊಂಡಿದ್ದ. ಕೊಡೆಯಾಕಾರವಾಗಿ ಬಾಗಿದ ಒಂದು ದೊಡ್ಡ ಬಂಡೆಗಲ್ಲು ಕಾಡಿನ ಮಧ್ಯದಲ್ಲಿಯೇ ಇತ್ತು. ಅದು ಆತನಿಗೆ ಮಳೆ-ಬಿಸಿಲ-ಚಳಿಯಿಂದ ಸಂರಕ್ಷಿಸುತ್ತಿತ್ತು. ಹಗಲೆಲ್ಲ ಕಾಡಿನ ಸುತ್ತ ದನಗಳನ್ನು ಮೇಯಿಸುವದು, ರಾತ್ರಿ ಅವುಗಳನ್ನು ಹಟ್ಟಿಯಲ್ಲಿ ಬಿಟ್ಟು, ತಾನು ಕಲ್ಲಿನ ಕೆಳಗೆ ಪವಡಿಸುವದು ಆತನ ನಿತ್ಯ ಬದುಕಾಯಿತು. ಹನುಮಪ್ಪ ಹುಟ್ಟು ಮೂಕ.

ಜಂಗಮರು ಆ ಪ್ರದೇಶಕ್ಕೆ ಆಗಮಿಸಿದಾಗ ಹನುಮಪ್ಪ ದೂರದಲ್ಲಿದ್ದ. ಜಂಗಮರು ಆತನನ್ನು ನೋಡಿ—"ಹನುಮಪ್ಪ" ಎಂದು ಪರಿಚಿತರಂತೆ ಹೆಸರುಗೊಂಡು ಕರೆದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂಕ ಹನುಮಪ್ಪನಿಗೆ ಜಂಗಮರ ಕರೆ ಕೇಳಿಸಿತು. ಆತ ಜಂಗಮರತ್ತ ನೋಡಿದ. ಅವರ ತೇಜಃಪುಂಜಿತ ದಿವ್ಯದರ್ಶನದಿಂದ ಆತನಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಓಡಿಬಂದು ಅವರಿಗೆ ಸಾಷ್ಟಾಂಗ ಎರಗಿ, ಭಕ್ತಿಯಿಂದ,

" ಬುದ್ಧೀ ನನ್ ಕರಿದ್ರ್ಯಾ " ಎಂದ.

—ಮಾತು ನಿರರ್ಗಳವಾಗಿ ಉಕ್ಕಿ ಬಂದಿತು.

" ಹೌದು ಹನುಮಪ್ಪಾ, ಆ ಬಂಡೆಗಲ್ಲಿನ ಕೆಳಗೆ ವಾಸಮಾಡಿಕೊಂಡಿರಲು ನಮಗೆ ಸ್ಥಳ ಕೊಡುತ್ತಿಯಾ ?" ಎಂದು ಮಧುರವಾಗಿ ಕೇಳಿದರು ಜಂಗಮರು.

" ಇದೇನ್ ಬುದ್ಧೀ ? ತಮಗೆ ಜಾಗಾ ಕೊಡ್ಲು ನಾನ್ಯಾರು? ಸಾನೇಟರವ ! "

" ಇಲ್ಲ ಹನುಮಪ್ಪಾ, ಈ ಪ್ರದೇಶ ನಿನಗೆ ಸೇರಿದ್ದು. ನೀನೆ ಇದರ ಒಡೆಯ ಅದಕಂತs ಕೇಳಿದೆವಪ್ಪಾ" ಎಂದು ಮಂದಹಾಸ ಬೀರಿದರು.

ಹನುಮಪ್ಪನಿಗೆ ಆಶ್ಚರ್ಯವಾಯಿತು. ಚಣಕಾಲ ದಿಙ್ಮೂಢನಾದ, ನನ್ನ ಮುಂದಿನ ಭವಿಷ್ಯವನ್ನು ಅರಿತುಕೊಳ್ಳುವಷ್ಟು ವ್ಯವಧಾನ ಆತನಿಗಿರಲಿಲ್ಲ. ಯಾವದೋ ಅವ್ಯಕ್ತ ಭಕ್ತಿಯೊಂದು ಆತನನ್ನು ಜಂಗಮರ ಶ್ರೀಚರಣಗಳಿಗೆ ಮಣಿಸಿತು. ಅವರ ಪಾದಗಳನ್ನು ಬಿಗಿಯಾಗಿ ಹಿಡಿದು—

" ಬುದ್ಧೀ, ನಾನು ಬಡವ. ತಾವು ದೊಡ್ಡೋರು. ನನ್ಮ್ಯಾಲೆ ಈ ಪರಿಯ ಪರಿಕ್ಸೆ ಬ್ಯಾಡ ನನ್‌ತಂದೆ" ಎಂದು ಆರ್ತಭಾವದಿಂದ ಬೇಡಿಕೊಂಡ. ಆಗ ಅವರು ಅಂತಃಕರಣದಿಂದ ಹನುಮಪ್ಪನನ್ನು ಹಿಡಿದೆತ್ತಿ ಅಪ್ಪಿಕೊಂಡು—

" ಏಳು ಹನುಮಪ್ಪಾ, ಏಳು. ನೀನು ಒಂದಿಲ್ಲ ಒಂದು ದಿನ ಈ ಪ್ರದೇಶದ ದೊರೆಯಾಗುವದು ಖಂಡಿತ. ಅದು ಶಿವನಿಚ್ಛೆಪ್ಪಾ." ಎಂದು ಆತನನ್ನು ಕೈಹಿಡಿದು ಕರೆದುಕೊಂಡು ಹೊರಟರು, ಇಬ್ಬರೂ ಬಂಡೆಗಲ್ಲನ್ನು ಸೇರಿದರು.

O O O

ಮೂಕ ಹನುಮಪ್ಪನಿಗೆ ಮಾತು ಬಂದ ಸಮಾಚಾರ ಸುತ್ತು-ಮುತ್ತಲಿನ ಜನರಿಗೆ ಕ್ಷಣಾರ್ಧದಲ್ಲಿ ಹರಡಿತು. ಅದೊಂದು ಪವಾಡವೆಂದು ಭಾವಿಸಿದರು. ಜಂಗಮರ ದರ್ಶನಾರ್ಥಿಗಳಾಗಿ ಕುಲಭೇದವಿಲ್ಲದೆ ಭಕ್ತಜನರು ತಂಡೋಪತಂಡವಾಗಿ ಅಲ್ಲಿಗೆ ಬಂದು ತಮ್ಮ ಕಾಮಿತಾರ್ಥವನ್ನು ನೆರವೇರಿಸಿಕೊಂಡರು. ನಿರ್ಜನವಾಗಿದ್ದ ಆ ಪ್ರದೇಶ ಈಗ ಭಕ್ತಜನರ ನಿಬಿಡಸ್ಥಾನವಾಯಿತು. ಅದೊಂದು ಸುಕ್ಷೇತ್ರವಾಗಿ ಪರಿಣಮಿಸಿತು.

ಕೊಡೆಯಾಕಾರವಾಗಿ ಬಾಗಿದ ಬಂಡೆಗಲ್ಲಿನ ಕೆಳಗೆ ಜಂಗಮರ ನಿವಾಸ. ಅದಕ್ಕಾಗಿಯೆ ಆ ಪ್ರದೇಶಕ್ಕೆ ' ಕೊಡೇಕಲ್ಲು ' ಎಂದು ಹೆಸರಾಯಿತು. ಅವರನ್ನು ಬಸವೇಶ್ವರರ ಅವತಾರವೆಂದು ತಿಳಿದುದರಿಂದ ಅವರು ' ಕೊಡೇಕಲ್ಲ ಬಸವೇಶ್ವರ ' ಎಂದು ಪ್ರಸಿದ್ಧರಾದರು.

ಜಂಗಮರ ಮೇಲಿನ ಅಗಾಧವಾದ ಭಕ್ತಿ-ವಿಶ್ವಾಸಗಳು ಸಕಲ ಜಾತಿಗಳಲ್ಲಿ ಮೂಡಿದವು. ಹಿಂದುಗಳಂತೆ ಅನೇಕ ಮುಸಲ್ಮಾನರು ಅವರ ಸನ್ನಿಧಿಗೆ ಬಂದು ಶಿಷ್ಯರಾದರು. ಭಕ್ತವೃಂದ ದಿನದಿನಕ್ಕೂ ಹೆಚ್ಚಾಯಿತು.

O O O

ಹೊತ್ತು ಏರುತ್ತಿದ್ದಂತೆಯೇ ಭಕ್ತನೊಬ್ಬ ಭಯಚಕಿತಚಿತ್ತನಾಗಿ ಓಡುತ್ತ ಜಂಗಮರ ಸಾನಿಧ್ಯಕ್ಕೆ ಬಂದ. ಆಗ ಅವರು ಶಿಷ್ಯಕೋಟಿಯನ್ನು ಬಳಿಸಿಕೊಂಡು ಉಪದೇಶದಲ್ಲಿ ಮಗ್ನರಾಗಿದ್ದರು. ತೇಕುತ್ತ ಬಂದ ಭಕ್ತನ ಕಡೆಗೆ ಅವರ ಗಮನ ಹರಿಯಿತು. ಅವನೇ ನಿವೇದಿಸಿಕೊಂಡ :

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

" ಬುದ್ಧೀ ! ಬುದ್ಧಿ ! ಬಿಜಾಪೂರ ಸುಲ್ತಾನನ ಸೈನ್ಯ ನಮ್ಮ ಮೇಲೆ ದಂಡೆತ್ತಿ ಬಂದಿದೆ. ಇಲ್ಲಿಗೆ ಕೂಗಳತೆಯ ದೂರದಲ್ಲಿ ಅದು ಸಿದ್ಧವಾಗಿಯೇ ನಿಂತಿದೆ, ಬುದ್ಧಿ. "

—ಮಾತಿನಲ್ಲಿ ಕಂಪನವಿತ್ತು. ದೇಹ ಒಂದೇ ಸವನೆ ನಡುಗುತ್ತಿತ್ತು,

ಆ ಮಾತು ಕಿವಿಗೆ ಬೀಳುತ್ತಲೆ ಅಲ್ಲಿ ನೆರೆದ ಭಕ್ತವೃಂದ ಭಯಭೀತಿಯಿಂದ ಘೋರನೆ ಬೆವತರು. ಆದರೆ ಜಂಗಮರು ಮಾತ್ರ ಯಾವ ವಿಕಾರಕ್ಕೆ ಒಳಗಾಗಲಿಲ್ಲ. ಶಿಷ್ಯಕೋಟಿಯನ್ನು ಕೂಡುವಂತೆ ಸನ್ನೆ ಮಾಡಿದರು. ಎಲ್ಲರು ಬದ್ಧಹಸ್ತರಾಗಿ ಕುಳಿತುಕೊಂಡರು. ಆಗ ಅವರು ಶಾಂತಚಿತ್ತದಿಂದ ನುಡಿದರು.

" ಇಷ್ಟೇಕೆ ಭೀತನಾಗಿರುವೆ. ಗುರುಬಸವಾ ? ಅವರಿಗೆ ಬೆಳಗು ಹರಿದರಲ್ಲವೇ ನಮ್ಮ ಮೇಲೆ ದಂಡೆತ್ತಿಬರುವದು ?" ಆದರೆ ಅವರ ಆ ಮಾತು ಒಗಟಾಗಿಯೇ ಪರಿಣಮಿಸಿತು ಅವನಿಗೆ.

" ಇಲ್ಲಿಗೆ ಸೈನ್ಯ ಬೀಡುಬಿಟ್ಟು ಮೂರು ದಿನಗಳು ಬುದ್ಧೀ. ಹಗಲಿನಲ್ಲಿಯೂ ಅಲ್ಲಿ ಪಂಜು ಹೊತ್ತಿಕೊಂಡೇ ಇರುತ್ತವೆ." ಎಂದು ವಿಸ್ಮಯದಿಂದ ನುಡಿದ ಗುರುಬಸವ.

" ಆಗಲೇ ಹೇಳಿದೆವಲ್ಲಾ, ಗುರುಬಸವಾ ! ಅವರಿಗೆ ಇನ್ನೂ ಬೆಳಗು ಹರಿದಿಲ್ಲವಪ್ಪಾ. ಮುಂದಾದರೂ ಹರಿಯುವದಿಲ್ಲ. ಬಂದದಾರಿಗೆ ಸುಂಕವಿಲ್ಲವೆಂದು ಅವರೇ ಹಿಂತಿರುಗುತ್ತಾರೆ. " ಎಂದು ಮಂದಹಾಸ ಬೀರಿದರು.

ಭಯಗ್ರಸ್ಥರಾದ ಜನತೆಗೆ ಹೋದ ಜೀವ ಮರಳಿಬಂದಂತಾಯಿತು. ತಮ್ಮ ಕಣ್ಮುಂದೆಯೇ ಘಟಿಸಿದ ಈ ಪವಾಡವನ್ನು ಕಂಡು ಆಶ್ಚರ್ಯವಾಯಿತು. ಅವರ ಇಂದ್ರಿಯಾತೀತವಾದ ಮಹಾಮಹಿಮೆಗೆ ತಲೆದೂಗಿದರು. ಭಕ್ತಿಯ ತನ್ಮಯತೆಯಿಂದ ಅವರು ಜಂಗಮಲಿಂಗರ ಪದತಲಕ್ಕೆ ಶರಣರಾದರು.

ಆಗ ಜಂಗಮರು ಅಲ್ಲಿಯೇ ಇದ್ದ ಹನುಮಪ್ಪನನ್ನು ಕರೆದು,

" ನಾಳೆ ಮುಂಜಾವಿನಲ್ಲಿ ಬಿಜಾಪುರಕ್ಕೆ ಹೋಗಿ, ಸುಲ್ತಾನನನ್ನು ಕಂಡು ಬರುತ್ತೇವೆ, ಹನುಮಪ್ಪಾ" ಎಂದರು

ಅವರ ಆ ಮಾತು ಆತನಿಗೆ ಅತಿ ಸೋಜಿಗವೆನಿಸಿತು.

" ಇದೇನ್ ಬುದ್ಧೀ, ತಾವು ಹೇಳುತ್ತಿರುವದು " ಎಂದ ಬೆರಗು ಧ್ವನಿಯಲ್ಲಿ ಹನುಮಪ್ಪ.

" ಸತ್ಯಾಂಶವನ್ನು ಹೇಳುತ್ತಿದ್ದೇನೆ, ಹನುಮಪ್ಪಾ. ಅದು ಶಿವನ ಸಂಕಲ್ಪ. " ಎಂದರು ದೃಢವಾದ ವಾಣಿಯಲ್ಲಿ.

" ಮತಾಂಧನೂ ಮಹಾಗರ್ವಿಷ್ಠನೂ ಗುರುಜನ ವಿನಯ ಹೀನನೂ ಆದ ಸುಲ್ತಾನ್ ತಮ್ಮನ್ನು ಗೌರವಿಸುತ್ತಾನೆಂದು ನಂಬುವದು ಹೇಗೆ, ಗುರುದೇವಾ ? "

—ಉದ್ವೇಗ ತುಂಬಿಬಂದಿತು ಆತನ ಮಾತಿಗೆ.

" ನಂಬು ಹನುಮಪ್ಪಾ, ನಂಬು ! ಅವು ಯಾವೂ ನಮ್ಮನ್ನು ತಿಲಮಾತ್ರ ಬಾಧಿಸವು. ಅಜ್ಞಾನಕ್ಕೆ ವಶನಾದವನು ಮಾತ್ರ ಮತಾಂಧನೂ ಮಹಾಗರ್ವಿಷ್ಠನೂ ಆಗುತ್ತಾನೆ. ಜ್ಞಾನಿಗೆ ಎಲ್ಲಿಯ ಮತ–ಧರ್ಮ ? ನೀವು ನಿಶ್ಚಿಂತರಾಗಿರಿ. " ಎಂದರು ಸಮಾಧಾನದಿಂದ.

o o o

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಂಗಮರು ಬಿಜಾಪುರಕ್ಕೆ ಬಂದಾಗ ಗೋಧೋಳಿಯ ಸಮಯ. ರಾತ್ರಿ ಇಲ್ಲಿಯೆ ತಂಗಿ, ಪ್ರಾತಃಕಾಲ ಸುಲ್ತಾನನನ್ನು ಕಂಡರಾಯಿತೆಂದು ನಗರದ ಮಧ್ಯದ ಭವ್ಯವಾದ ಭೈರವೇಶ್ವರ ದೇವಾಲಯಲ್ಲಿ ಉಳಿದುಕೊಂಡರು. ಅಲ್ಲಿಗೆ ಜನರು ಸುಳಿಯಲು ಅಂಜುತ್ತಿದ್ದರು.

ಆ ದೇವಾಲಯದಲ್ಲೊಂದು ಭೂತವಾಸವಾಗಿತ್ತು. ರಾತ್ರಿ ಅಲ್ಲಿ ವಸತಿಗಾಗಿ ಬಂದವರನ್ನು ತನ್ನ ಭೂತ ಚೇಷ್ಟೆಯಿಂದ ಕೊಂದು ಹಾಕುತ್ತಿತ್ತು. ಅದರಂತೆ ಅಲ್ಲಿ ತಂಗಿದ್ದ ಎಷ್ಟೋ ದುರ್ಭಾಗಿಗಳು ಭೂತದ ಹಿಡಿತಕ್ಕೆ ಸಿಕ್ಕು ದುರ್ಮರಣಕ್ಕೀಡಾದ ಘಟನೆಗಳನ್ನು ಕಂಡ ಜನರು ರಾತ್ರಿ ಅಲ್ಲಿ ಸುಳಿಯುತ್ತಿರಲಿಲ್ಲ; ಆದಕಾರಣ ಅನಾಥನಾಗಿ ಬಂದ ಜಂಗಮರು ವೃಥಾ ಭೂತಾಹುತಿಗೆ ಬಲಿಯಾಗುವರಲ್ಲ ಎಂದು ಪುರಜನರು ಮಮ್ಮಲ ಮರುಗಿದರು.

ಬೆಳಗಾಯಿತು; ದುರ್ದೈವಿಯಾದ ಅನಾಥನ ಸ್ಥಿತಿಯನ್ನು ನೋಡಲು ಪ್ರಜೆಗಳು ಕುತೂಹಲದಿಂದ ಅಲ್ಲಿಗೆ ಬಂದು ನೆರೆದರು. ಆದರೆ ಅವರು ಅಲ್ಲಿ ಕಂಡದ್ದೇನು? ಜಂಗಮರು ಶುಚಿರ್ಭೂತರಾಗಿ, ತ್ರಿಪುಂಢ್ರಧರಿಸಿ, ದಂಡಕಮಂಡಲ ವನ್ನು ಹಿಡಿದು ದೇವಾಲಯದ ರಂಗಮಂಟಪದ ಪೀಠದಲ್ಲಿ ಪದ್ಮಾಸೀನರಾಗಿದ್ದರು. ಅವರ ಆ ದಿವ್ಯರೂಪ ಅವರಿಗೆ ಆಶ್ಚರ್ಯ ದೊಂದಿಗೆ ಭಕ್ತಿಯನ್ನೂ ಅಂಕುರಿಸಿತು.

ಭೂತವನ್ನು ವಶಪಡಿಸಿಕೊಂಡು ಪರಪೀಡೆನಿವಾರಣೆಯನ್ನು ಮಾಡಿದ ಜಂಗಮರ ಪವಾಡವನ್ನು ಭಕ್ತಸ್ತೋಮ ಹಾಡಿಹರಿಸಿತು. ನಗರದಲ್ಲಿ ಈ ದಟ್ಟವಾರ್ತೆ ಬಹುಬೇಗ ಹರಡಿತು. ಅದು ಸುಲ್ತಾನನ ಕಿವಿಗೂ ಬಂದುಮುಟ್ಟಿತು. ಭೂತವನ್ನು ಅಲ್ಲಿಂದ ನಿವಾರಿಸಲು ಸುಲ್ತಾನ್ ಎಷ್ಟೋಸಲ ಪ್ರಯತ್ನಿಸಿ ವಿಫಲನಾಗಿದ್ದ. ಜಂಗಮರ ವಿಚಾರ ತಿಳಿದ. ಸುಲ್ತಾನ್ ತೃಪ್ತಿಯ ನಿಟ್ಟುಸಿರನ್ನೆಳೆದು ಅವರನ್ನು ಸಕಲ ಮರ್ಯಾದೆಯೊಂದಿಗೆ ತನ್ನ ಷಾಹಿಮಹಲಿಗೆ ಕರೆತರಲು ಆಜ್ಞಾಪಿಸಿದ.

ಜಂಗಮರು ಆಗಮಿಸುತ್ತಲೇ ಸುಲ್ತಾನ್ ತನ್ನ ರಾಣಿವಾಸದವರೊಂದಿಗೆ ಅವರನ್ನು ಮರ್ಯಾದೆಯಿಂದ ಕರೆ ತಂದು ಸಕಲೋಪಚಾರದಿಂದ ಸನ್ಮಾನಿಸಿದ. ಮಂದಹಾಸ ಬೀರುತ್ತ ಜಂಗಮರು ಸುಲ್ತಾನನ ಆತಿಥ್ಯವನ್ನು ಸ್ವೀಕರಿಸಿ, ಪೀಠದಲ್ಲಿ ಆಸೀನರಾದರು.

" ಸ್ವಾಮೀಜೀ, ತಾವು ದುಸ್ಸಾಧ್ಯವಾದ ಭೂತವನ್ನು ವಶಪಡಿಸಿಕೊಂಡು ನಮ್ಮ ಜನತೆಗೆ ಮಹದುಪಕಾರ ಮಾಡಿದಿರಿ " ಎಂದು ಸುಲ್ತಾನ್ ಕೃತಜ್ಞತೆಯಿಂದ ನುಡಿದ. ಆ ಮಾತಿಗೆ ಜಂಗಮರು 'ಹೌದು' ಎನ್ನುವಂತೆ ತಲೆಯ ಲ್ಲಾಡಿಸಿ ಮಂದಸ್ಮಿತರಾದರು. ಆದರೆ ಅವರ ಬಗೆಗೆ ಹೆಚ್ಚಿಗೆ ತಿಳಿದುಕೊಳ್ಳಬೇಕೆಂದಿದ್ದ ಸುಲ್ತಾನನಿಗೆ ಕುತೂಹಲ ಕಡಮೆಯಾಗಲಿಲ್ಲ.

" ತಾವು ಯಾರು ? ಎಲ್ಲಿಂದ ಬಂದಿರಿ ? ತಮ್ಮ ವಾಸವಾವುದು ? ತಾವು ಹೀಗೆ ಸಂಚಾರ ಕೈಕೊಂಡ ಉದ್ದೇಶವೇನು ? ಎಂಬುದನ್ನು ಕೇಳಬಹುದೇ, ಸ್ವಾಮಿಜೀ ? " ಎಂದು ಪ್ರಶ್ನಿಸಿದ ಸುಲ್ತಾನ್. ತಾವು ಬಂದ ಉದ್ದೇಶ ತಿಳಿಸಲು ಇದು ಸದವಕಾಶವೆಂದರಿತ್ತ್ಯಜಂಗಮರು ಗಂಭೀರ ವದನರಾಗಿ ಹೇಳಿದರು.

" ಸಗರನಾಡಿನ ಅರಣ್ಯಪ್ರದೇಶದಲ್ಲಿ ಪಿತೂರಿಯ ಕಾರ್ಯದಲ್ಲಿ ತೊಡಗಿರುವನೆಂದು ಭ್ರಾಂತಿಸಿ, ಯಾರನ್ನು ಬಂಧಿಸಿ ತರಲು ನೀನು ದಂಡನ್ನು ಕಳಿಸಿರುವೆಯೋ.........ನಾನೇ......ಆ ಜಂಗಮ, ಸುಲ್ತಾನ್ ! "

ಅವರ ಈ ನಿರ್ಭೀತವಾಣಿ ಬರಸಿಡಿಲಿನಂತೆ ಎರಗಿ ಸುಲ್ತಾನನ ಮನಸ್ಸಿನ ಮೇಲೆ ಆಘಾತವನ್ನುಂಟು ಮಾಡಿತು. ಆತ ಜರ್ಝರಿತನಾಗಿ—

" ಆಂ ! " ಎಂದ ಬೆರಗು ಧ್ವನಿಯಲ್ಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

“ ಹೌದು ! ನಮ್ಮ ಮೇಲೆ ತಳೆದ ನಿನ್ನ ಸಂಶಯವನ್ನು ನಿವಾರಿಸಲು ನಾವು ಇಲ್ಲಿಗೆ ಬರಬೇಕಾಯಿತ್ತು. ದೇವನಿರ್ಮಿಸಿದ ಜೀವಿಗಳಲ್ಲಿ ದೋಷದಿಂದ ಜಾತಿ–ಕುಲವನ್ನು ಅರಸುವದು ಮಹಾ ಪಾಪ. ಜೀವಿಗಳು ಒಬ್ಬ ದೇವನ ಮಕ್ಕಳು. ನಿರ್ಮಲಾಂತಃಕರಣವೊಂದೇ ಮೋಕ್ಷಕ್ಕೆ ತಾರಕ...ಪರರಿಗಾಗಿ ಆತ್ಮಾರ್ಪಣೆ ಮಾಡಿಕೊಳ್ಳುವದೇ ನಾವು ಹಿಡಿದ ಸಾಧನಮಾರ್ಗ. ನೀನು ತಿಳಿದಂತೆ ನಾವು ಮಾಯಾವಿಗಳೂ ಅಲ್ಲ; ಪಿತೂರಿಕಾರ್ಯದಲ್ಲಿ ತೊಡಗಿದವರೂ ಅಲ್ಲ. ಇನ್ನಾದರು ನಮ್ಮ ಮೇಲಿನ ಸಂಶಯವನ್ನು ಬಿಟ್ಟು ನಿಶ್ಚಿಂತನಾಗಿರು, ಸುಲ್ತಾನ್. ನಿನಗೆ ದೇವರು ಒಳಿತು ಮಾಡಲಿ. ”

ಜಂಗಮರ ಈ ದಿವ್ಯವಾಣಿಯಿಂದ ಸುಲ್ತಾನನ ಭ್ರಮನಿರಸನವಾಯಿತು. ಅವನ ಒಳಗಣ್ಣು ತೆರೆಯಿತು. ಪರಿಶುದ್ಧ ಮನಸ್ಸಿನಿಂದ ಸುಲ್ತಾನ್ ಅವರಿಗೆ ಮಣಿದು—

“ ನನ್ನ ಅನಂತ ಅಪರಾಧವನ್ನು ಕ್ಷಮಿಸಿ, ಸ್ವಾಮಿಜೀ, ನನ್ನ ಅನಂತ ಅಪರಾಧವನ್ನು ಕ್ಷಮಿಸಿ. ” ಎಂದ.

ಆತನ ಮಾತಿನಲ್ಲಿ ಪಶ್ಚಾತ್ತಾಪದ ಬೇಗೆ ಇತ್ತು. ಆಗ ಜಂಗಮರು ಹರ್ಷಿತರಾಗಿ ಆತನನ್ನು ಹಿಡಿದೆತ್ತಿ ಮೈದಡವುತ್ತ—

“ ಪಶ್ಚಾತ್ತಾಪಕ್ಕಿಂತ ಬೇರೆ ತೀರ್ಥಸ್ನಾನಗಳಿಲ್ಲ, ಸುಲ್ತಾನ್ ದೇವರು ನಿನಗೆ ಸನ್ಮಂಗಳವನ್ನು ಮಾಡಲಿ.” ಎಂದು ಆಶೀರ್ವದಿಸಿ ಹೊರಡಲುದ್ಯುಕ್ತರಾದರು. ಆಗ ಸುಲ್ತಾನ್—

“ ತಮಗೆ ನನ್ನಿಂದ ಏನಾದರೂ ಅಲ್ಪ ಸೇವೆಯನ್ನು ಸಲ್ಲಿಸಬೇಕೆಂದು ಅಪೇಕ್ಷಿಸಿದ್ದೇನೆ, ಸ್ವಾಮೀಜೀ, ಕೈಂಕರ್ಯಕ್ಕೆ ಅಪ್ಪಣೆಯಾಗಲಿ ” ಎಂದು ಬಿನ್ನವಿಸಿಕೊಂಡ.

“ ನಾವು ವಿರಕ್ತರು. ಹೊನ್ನು–ಮಣ್ಣಿನ ಅವಶ್ಯಕತೆ ನಮಗಿಲ್ಲ........ನಿಮಗಾಗಿ........ಇಚ್ಛಿಸಿದರೆ.. ... ನಮ್ಮ ಹನುಮಪ್ಪನಿಗೆ ಕೊಡೇಕಲ್ಲಿನಿಂದ ಕೊಲ್ಹಾಪುರದ ವರೆಗೆ ಜಾಹಗೀರ ಹಾಕಿಕೊಟ್ಟು, ಆ ಪ್ರದೇಶಕ್ಕೆ ಆತನನ್ನು ಒಡೆಯನನ್ನಾಗಿ ಮಾಡು,” ಎಂದರು.

“ ತಮ್ಮ ಚಿತ್ತ ” ಎಂದು ಸುಲ್ತಾನ್ ಅವರಿಗೆ ನಮಸ್ಕರಿಸಿದ.

O O O

ಕೊಡೇಕಲ್ಲಿಗೆ ಬಂದ ಜಂಗಮರು ಹನುಮಪ್ಪನನ್ನು ಕರೆದು, ‘ನಂದಿ’ ಮುದ್ರೆಯುಂಗರವನ್ನು ಆತನ ಬೆರಳಿಗೆ ತೊಡಿಸುತ್ತ—

“ ಹನುಮಪ್ಪಾ, ಇಂದಿನಿಂದ ನೀನು ಕೊಡೇಕಲ್ಲಿನಿಂದ ಕೊಲ್ಹಾಪುರದ ವರೆಗಿನ ಈ ಪ್ರದೇಶಕ್ಕೆ ಒಡೆಯ. ಈ ನಂದಿಯುಂಗರ ಇರುವವರೆಗೂ ನಿನ್ನ ರಾಜ್ಯ ಪರಂಪರಾಗತವಾಗಿ ನಿರಾಕುಳವಾಗಿರುತ್ತದೆ ” ಎಂದರು. ಆಗ ಹನುಮಪ್ಪ ನಿಗಾದ ಆಶ್ಚರ್ಯದಿಂದ ಆತನ ಬಾಯಿಯಿಂದ ಮಾತುಗಳೇ ಹೊರಬೀಳಲಿಲ್ಲ.

“ ನಾವು ಮೊದಲೇ ಹೇಳಿದೆವಲ್ಲಪ್ಪಾ, ನೀನು ಈ ಪ್ರದೇಶದ ಒಡೆಯನೆಂದು. ಇಂದಿನಿಂದ ನೀನು ಹನುಮಪ್ಪನಲ್ಲ; ಹನುಮಪ್ಪನಾಯಕ. ” ಎಂದು ಆತನ ಮೈದಡವುತ್ತ ನುಡಿದರು ಜಂಗಮರು.

ಅವರ ಪಾದಗಳ ಮೇಲೆ ಶಿರಬಾಗಿದ ಹನುಮಪ್ಪನಾಯಕ—

“ ಬುದ್ಧೀ, ಇದು ತಮ್ಮ ಅನುಗ್ರಹ...” ಇನ್ನೂ ಏನೇನು ಹೇಳುತ್ತಿದ್ದನೋ ಆದರೆ ಋಣಭಾರದಿಂದ ಆತನಿಗೆ ಮಾತುಗಳೇ ಬರಲಿಲ್ಲ. ಆಗ ಜಂಗಮರು ಆತನನ್ನು ಹಿಡಿದೆತ್ತಿಕೊಂಡು ಆಲಂಗಿಸಿಕೊಂಡರು.

ಅಲ್ಲಿ ನೆರೆದ ಭಕ್ತಸ್ತೋಮ ಭಕ್ತ್ಯುತ್ಸಾಹದಿಂದ ಹರ್ಷಿತವಾಗಿ ಉಘೇ ಉಘೇ ಘೋಷ ಮಾಡಿತು. ಆ ಘೋಷಣೆ ದಿಗಂತವನ್ನು ವ್ಯಾಪಿಸಿತು. ಕ್ರಮೇಣ ಬೆಳಗು ಹರಿಯಿತು.

ಲೇಖಕರು:—ಶಾಶ್ವತಸ್ವಾಮಿ ಮುಕ್ಕುಂಡಿಮಠ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ಶಿಕ್ಷಣದ ಮುನ್ನಡೆ

" ಭಾರತದ ಭವಿಷ್ಯತ್ತಿನ ರೂಪರೇಷೆಗಳು ಇಂದಿನ ಶಾಲೆಗಳ ವರ್ಗದ ಕೋಣೆಗಳಲ್ಲಿ ತಯಾರಾಗುತ್ತಿವೆ. ಇದು ಬರಿಯ ಆಡಂಬರದ ಮಾತಲ್ಲ. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳ ಆಧಾರದ ಮೇಲೆ ಮುನ್ನಡೆಯನ್ನು ಬಯಸುವ ಇಂದಿನ ವಿಶ್ವದಲ್ಲಿ ಜನಕೋಟಿಯ ಸುಖ–ಸಮೃದ್ಧಿ–ಸಂತೃಪ್ತಿ–ಸುಭದ್ರತೆಗಳನ್ನು ಅಳೆಯಲು ಶಿಕ್ಷಣವೇ ಒಂದು ಮಾನದಂಡ ನಮ್ಮ ಶಾಲೆ–ಕಾಲೇಜುಗಳಿಂದ ಹೊರಬೀಳುವ ಸುಶಿಕ್ಷಿತರ ಸಂಖ್ಯೆ ಮತ್ತು ಗುಣದ (quality) ಮೇಲೆಯೇ ಜನ ಜೀವನದ ಮಟ್ಟವನ್ನು ಎತ್ತರಿಸುವ ಮಹೋದ್ದೇಶವುಳ್ಳ ನಮ್ಮ ರಾಷ್ಟ್ರೀಯ ಪುನರ್ರಚನಾ ಕಾರ್ಯಕ್ರಮದ ಯಶಸ್ಸು ಅವಲಂಬಿಸಿದೆ. "

ಇತ್ತೀಚೆಗೆ ನಮ್ಮ ಶಿಕ್ಷಣ ಮತ್ತು ರಾಷ್ಟ್ರೀಯ ಅಭಿವೃದ್ಧಿಗಳ ಕುರಿತು, ಅತ್ಯಂತ ವಾಸ್ತವಿಕ ಮುಂಧೋರಣೆಯ ಬೃಹತ್ ಪ್ರಮಾಣದ ವರದಿಯೊಪ್ಪಿಸಿದ ಶಿಕ್ಷಣ ಆಯೋಗದವರು ಹೇಳಿದ ಬೀಜಮಾತು.

ದೇಶದ ಗತಿ–ಪ್ರಗತಿಗಳಿಗೆ ಶಿಕ್ಷಣವೇ ಮೂಲಾಧಾರ. ವೈಜ್ಞಾನಿಕ ಧೋರಣೆ-ತಾಂತ್ರಿಕ ಆಚರಣೆಗಳನ್ನು ಅಳವಡಿಸಿಕೊಂಡು ತ್ವರಿತ ಅಭಿವೃದ್ಧಿ ಸಾಧಿಸಿದ ದೇಶಗಳ ಸುಖ-ಸಮೃದ್ಧಿಗಳನ್ನು ಕಂಡು-ಕೇಳಿ ಬರಿಯ ಚಪ್ಪಾಳೆ ತಟ್ಟಿದರೆ ನಮ್ಮ ಹೊಟ್ಟೆ ತುಂಬುವದಿಲ್ಲ. ಈ ನಮ್ಮ ಕೈಗಳಿಗೆ ವೈಜ್ಞಾನಿಕ ಕರ್ಮಕುಶಲತೆ ಸಾಧಿಸದೆ ತೀವ್ರಗತಿಯ ಕಾರ್ಯಸಿದ್ಧಿ ಲಭಿಸದು. ಈ ಹೊಸ ಜೀವನದೃಷ್ಟಿ ಮೈಗೂಡಬೇಕಾದರೆ ನಮಗೆ, ನಮ್ಮ ಮಕ್ಕಳಿಗೆ ಹೊಸ ಶೈಕ್ಷಣಿಕ ಧೋರಣೆಯ ಸಾಣೆ ಹಿಡಿಯದೆ ಗತ್ಯಂತರವಿಲ್ಲ.

ಹಾಗೆ ನೋಡಿದರೆ, ವೈಜ್ಞಾನಿಕ ಪ್ರಗತಿ, ಭೌತಿಕ ಸಮೃದ್ಧಿ ಮಾತ್ರವೇ ನಮ್ಮ ಮುಖ್ಯ ಗುರಿಯೆಂದು ಭಾವಿಸಲಾಗುವದು. ರಾಷ್ಟ್ರೀಯ ಘಟನೆಯ ಸಾಕ್ಷಿಯಾಗಿ ಕೆಲವೊಂದು ಮಾನವೀಯ ಮೌಲ್ಯಗಳನ್ನೂ ಕಾಪಾಡಿಕೊಂಡಿರಲು, ಅವುಗಳನ್ನು ಬೆಳೆಸಿಕೊಂಡು ಹೋಗಲು ಉದ್ದೇಶಿಸಿದವರು ನಾವು, ವ್ಯಕ್ತಿಯ ಪರಿಪೂರ್ಣ ಜೀವನ-ಸಾಧನೆಗೆ ಅಗತ್ಯವಾದ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ, ಸರ್ವಸಮಾನತೆಗಳು ನಮ್ಮ ರಾಷ್ಟ್ರೀಯ ಜೀವನದ ಮಹತ್ವದ ಮೂಲ ತತ್ವಗಳು, ಈ ತತ್ವಗಳ ಕಾರ್ಯಾಚರಣೆ ಕುರುಡುನಂಬಿಕೆಗಳಿಂದಾಗದು; ಬರಡು ಉಪದೇಶಗಳಿಂದಾಗದು. ಅದಕ್ಕೆ ಮೈ-ಮನಗಳನ್ನು ಹದಗೊಳಿಸಬಲ್ಲ ತಕ್ಕ ಶಿಕ್ಷಣವೇ ಬೇಕು.

ನಮ್ಮದು ಪ್ರಜಾರಾಜ್ಯ ಯೋಜಿತ ಅಭಿವೃದ್ಧಿ ನಮ್ಮ ಗುರಿ. ಪ್ರಜಾಸತ್ತಾತ್ಮಕ ಆಡಳಿತದ ಗೊತ್ತು-ಗುರಿಗಳ ಕಲ್ಪನೆಯಿಲ್ಲದ ಜನ ಯಶಸ್ವೀ ಪ್ರಜಾಸತ್ತೆಯನ್ನು ಕಾಣುವುದು ಕಠಿಣ. ಅವ್ಯವಸ್ಥಿತ ಆಡಳಿತದ ಮೇಲೆಯೇ ಅಕ್ಕರೆಪಡುವ ಜನ ದೇಶದ ಪರಿಪೂರ್ಣ ಅಭಿವೃದ್ಧಿ ಸಾಧಿಸುವುದು ಕನಸಿನ ಮಾತು. ದೇಶದ ಆಡಳಿತ ಮತ್ತು ಅಭಿವೃದ್ಧಿಗಳ ಜೀವಂತ ಪ್ರಜ್ಞೆಯನ್ನು ಸೃಷ್ಟಿಸುವ ಶಿಕ್ಷಣವಿಲ್ಲದೆ ಆಡಳಿತ ಸಾಧಿಸಲಾರದು, ಅಭಿವೃದ್ಧಿ ಸಿದ್ಧಿಸಲಾರದು. ಅದಕ್ಕೆಂದೇ ನಮ್ಮ ಶಿಕ್ಷಣ ಆಯೋಗದವರ ರಾಷ್ಟ್ರೀಯ ಜೀವನದ ಸಮಗ್ರ ಪರಿವರ್ತನೆಗೆ ದಿಕ್ಸೂಚಿಯಾಗಬಲ್ಲ ಶೈಕ್ಷಣಿಕ ಧೋರಣೆಯೊಂದನ್ನು ರೂಪಿಸಿಕೊಟ್ಟಿದ್ದಾರೆ.

ಹಿಂದೆ ಹೊರಳಿ ನೋಡಿದಾಗ :

ಇಂದು ಶಿಕ್ಷಣದ ವಿಷಯಕ್ಕೆ ಎಂದಿಲ್ಲದ ಮಹತ್ವ ಪ್ರಾಪ್ತವಾಗಿದೆ. ನಮ್ಮ ರಾಷ್ಟ್ರೀಯ ಜೀವನದ ರೀತಿ-ನೀತಿಗಳಿಗೆ ಅನುಗುಣವಾದ ನಾಳಿನ ಪೀಳಿಗೆ ರೂಪುಗೊಳ್ಳಬೇಕೆಂಬುದು ಇಂದಿನ ಶಿಕ್ಷಣ ತಜ್ಞರ ನಿರೀಕ್ಷೆಯಾಗಿದೆ. ನಮ್ಮ ಸಾಮರ್ಥ್ಯಗಳನ್ನು ಅಧಿಕಗೊಳಿಸಬಲ್ಲ ಅನೇಕ ಶೈಕ್ಷಣಿಕ ಅವಕಾಶಗಳೂ ಇಂದು ನಮ್ಮ ಪಾಲಿಗಿವೆ. ಈ ಅವಕಾಶಗಳ ಹೊಸತಿಲ ಒಳಗೆ ನಿಂತು, ಹಿಂದೆ ಹೊರಳಿ ನೋಡಿದಾಗ ಮನಸ್ಸು ಸ್ವಾಭಾವಿಕವಾಗಿಯೇ ಜಡವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ನಮ್ಮ ಶಿಕ್ಷಣರಂಗದ ಗತಿ ಏನಿತ್ತು? ವಿಶಾಲವಾದ ದೇಶ, ದೊಡ್ಡ ಜನಸಂಖ್ಯೆ. ಜನತೆಗೆ ಆಗ ದೊರೆತ ಶಿಕ್ಷಣ ಮಾತ್ರ ಅತ್ಯಲ್ಪ. ಅಂದು 'ಇಡಿಯ ದೇಶದ ಜನಸಂಖ್ಯೆಯಲ್ಲಿ ಪ್ರತಿಶತ ಒಟ್ಟು 8.3 ರಷ್ಟು ಜನ ವಿದ್ಯೆ ಪಡೆಯುತ್ತಿದ್ದರು! ಅವರಲ್ಲಿಯ ಶೇಕಡಷ್ಟು ಜನ ಗಂಡುಮಕ್ಕಳು. 6-11 ವಯಸ್ಸಿನಲ್ಲಿ 35%, 11-14 ವಯೋಮಾನದಲ್ಲಿ 9% ಮತ್ತು 14-17 ವಯಸ್ಸಿನವರಲ್ಲಿ ಕೇವಲ 3.8% ರಷ್ಟು ವಿದ್ಯಾರ್ಥಿಗಳು 1947 ರ ಭಾರತದ ಶಾಲೆಗಳಲ್ಲಿ ಓದುತ್ತಿದ್ದರು! ಇದು ಶಾಲೆಗಳ ಹಾಡು, ಇನ್ನು ಕಾಲೇಜುಗಳ ಪಾಡು ಕೇಳಬೇಕೆ? ಅಂದಿನ ಕಲಾ ಮತ್ತು ವಿಜ್ಞಾನ ವಿಭಾಗಗಳಲ್ಲಿ ಓದುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 2,2 000; ಔದ್ಯಮಿಕ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಓದುತ್ತಿದ್ದವರೋ ಕೇವಲ 41,000 ವಿದ್ಯಾರ್ಥಿಗಳು! ನೂರಕ್ಕೆ ಹದಿನೇಳು ಜನ ಮಾತ್ರ ಅಂದಿನ ಅಕ್ಷರಸ್ಥರು! ಗ್ರಾಮಾಂತರ ಜನತೆಗೆ ಅಜ್ಞಾನದ ಪರಿಸರ, ಸ್ತ್ರೀಯರಿಗೆ ಅಂಧಶ್ರದ್ಧೆಯ ಆಸರ, ಹಿಂದುಳಿದ ಜನವರ್ಗಗಳಿಗೆ ಹೊಟ್ಟೆಗೆ ಹಿಟ್ಟುಕಾಣುವ ಅವಸರ-ಇವೇ ಅಂದಿನ ಸಾಮಾನ್ಯ ಜೀವನದಲ್ಲಿ ಒಡೆದು ಕಾಣುವ ಲಕ್ಷಣಗಳಾಗಿದ್ದವು. ಶಿಕ್ಷಣಕ್ರಮಕ್ಕೂ ಜೀವನಕ್ರಮಕ್ಕೂ ಯಾವುದಾದರೊಂದು ಸಂಬಂಧ ಸೂತ್ರವಿರಬೇಕು ಎಂದು ಅರಸುವುದೇ ಒಂದು ಅಕ್ರಮ ವ್ಯವಹಾರವೆನಿಸುವ ಸಂದರ್ಭ ಅಂದಿನದು. ದೇಶದ ಆಡಳಿತದ ಬಗ್ಗೆ ಆಡಳಿತ ನಡೆಸುವವರಲ್ಲದೆ ಇನ್ನಿತರನೇಕರು ತಲೆ ಕೆಡಿಸಿಕೊಳ್ಳಬೇಕೆಂದು ಕೇಳುವ ನೀತಿ ಅಂದಿನದು. "ಕೈ ಕೆಳಗೆ" ದುಡಿಯುವ ಕಾರಕೂನರಿಗೆ "ತಲೆ ಎತ್ತಿ" ಮೆರೆಯಲು ಅನುಕೂಲವಾಗಲಿಲ್ಲ. ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಕೊಡದಿರುವುದೇ ಪರಮ ಉಪಾಯವೆಂಬುದು ನಮ್ಮನ್ನು ದುಡಿಸಿಕೊಳ್ಳುತ್ತಿದ್ದ ಹೊರಗಿನವರ ಧೋರಣೆ ಅಂದಿನದು.

ಮೈಕೊಡವಿ ಮೇಲೆದ್ದಾಗ ...

ಅಂದಿನ ಶಾಲೆ-ಕಾಲೇಜುಗಳ ಕೋಣೆಗಳಲ್ಲಿ ಯಾರು-ಯಾರಿಗೆ-ಏನೇನು ಕಲಿಸಿದರೋ, ಮಹಾತ್ಮಾ ಗಾಂಧೀಜಿಯವರಂಥ ಒಂದು ಮಹಾಶಕ್ತಿ ದೇಶದ ಮೂಲೆ-ಮೂಲೆಯಲ್ಲೂ ಮುದುಡಿಕೊಂಡು ಕುಳಿತ ಜನ-ಜನಾಂಗಗಳಿಗೆ ಸ್ವಾತಂತ್ರ್ಯದ ಮಹಾಪಾಠವೊಂದನ್ನು ಹೇಳಿ ಕೊಟ್ಟಾಗಮಾತ್ರ ಇಡಿಯ ದೇಶವೇ ತನ್ನ ಜಡತನದಿಂದ ಮೈಕೊಡವಿ ಮೇಲೆದ್ದು ಸಾಧಿಸಬೇಕೆಂಬುದನ್ನು ಸಾಧಿಸಿಯೇ ಬಿಟ್ಟಿತು. ನಮಗೆ ಸ್ವಾತಂತ್ರ್ಯ ಬಂತು!

ನಮಗೆ ಸ್ವಾತಂತ್ರ್ಯ ದೊರೆತ ಬಳಿಕ ಎದುರಾದ ಕಷ್ಟ-ನಷ್ಟಗಳ ಪರಾಮರ್ಶೆ ಇಲ್ಲಿ ಅಪ್ರಸ್ತುತ. ಸ್ವತಂತ್ರವಾಗಿ ಉಸಿರಾಡಿಸುವ ಅವಕಾಶ ಸಿಕ್ಕಾಗ ಒಂದು ದೇಶದ ಜನತೆ ಒಂದೊಂದು ರಂಗದಲ್ಲಿ ತೀವ್ರಗತಿಯ ಪ್ರಗತಿ ಸಾಧಿಸಲು ತವಕ ಪಡುತ್ತದೆಂಬುದಕ್ಕೆ ನಮ್ಮ ರಾಷ್ಟ್ರದ ಶೈಕ್ಷಣಿಕ ಸಾಧನೆಯನ್ನು ಒಂದು ದೃಷ್ಟಾಂತದ ರೂಪದಲ್ಲಿ ಅವಲೋಕಿಸ ಬಹುದು ಅಷ್ಟೆ.

ರಾಷ್ಟ್ರ-ರಾಜ್ಯಗಳ ಸಂಯೋಜನೆ :

ಸ್ವಾತಂತ್ರ್ಯ ಬಂತು, ಆ ಬಳಿಕ ರಾಷ್ಟ್ರದ ಪ್ರಜಾಕೋಟಿಗೆ ಸೂಕ್ತವಾದ ಶಿಕ್ಷಣ ಕೊಡುವುದು ರಾಷ್ಟ್ರದ ಕರ್ತವ್ಯ ಹೌದು. ಈ ಕರ್ತವ್ಯವನ್ನು ಯಾರು ನಿರ್ವಹಿಸಬೇಕು?

ಶಿಕ್ಷಣ ಮುಖ್ಯವಾಗಿ ಆಯಾ ರಾಜ್ಯಗಳ ಹೊಣೆ. ಆದರೆ ನಮ್ಮ ರಾಜ್ಯಘಟನೆಯನ್ವಯ ಕೇಂದ್ರ ಸರಕಾರವೂ ಈ ಹೊಣೆಯ ನಿರ್ವಹಣೆಯಲ್ಲಿ ಅಂಶತಃ ಪಾತ್ರವಹಿಸುವುದು. ಕೇಂದ್ರದ ಕರ್ತವ್ಯ ಮುಖ್ಯತಃ ಸಂಯೋಜನೆಯ ರೀತಿಯದು; ಶಿಕ್ಷಣದ ವ್ಯವಸ್ಥೆ ರಾಜ್ಯಗಳ ಹೊಣೆ; ರಾಜ್ಯಗಳ ಕರ್ತವ್ಯ ನಿರ್ವಹಣೆಗೆ ಪೂರಕ ಬಲವನ್ನೊದಗಿಸಿ ಕೊಡುವ ಹೊಣೆ ಕೇಂದ್ರಸರಕಾರದು. ಶಿಕ್ಷಣ ರಂಗದ ವಿವಿಧಮಟ್ಟಗಳಲ್ಲಿಯೂ ರಾಜ್ಯ ಮತ್ತು ಕೇಂದ್ರ ಸಂಸ್ಕಾರಗಳ ಸಂಯೋಜನೆಯಿರಲೇ ಬೇಕು. ದೇಶದ ಸಮಗ್ರ ಜೀವನವನ್ನು ರೂಪಿಸುವ ಪ್ರಧಾನ ಸಾಧನವಾದ ಶಿಕ್ಷಣಕ್ರಮದಲ್ಲಿ ಅಲ್ಲ-ಸಲ್ಲದ ಅಡ್ಡದಾರಿಗಳು ನಮ್ಮ ರಾಷ್ಟ್ರೀಯ ಪುನರುಜ್ಜೀವನಕ್ಕೆ ಮಾರಕವಾಗಿ ಪರಿಣಮಿಸಬಹುದೆಂದೇ ನಮ್ಮ ರಾಜ್ಯಘಟನೆಯಲ್ಲಿ ಕೆಲವು ರಾಷ್ಟ್ರವ್ಯಾಪಕ ಶೈಕ್ಷಣಿಕ ಯೋಜನೆಗಳ ಸುಳುಹು ಹಾಕಿಡಲಾಗಿದೆ. ಉದಾಹರಣೆಗೆ : ಇಡಿಯ ರಾಷ್ಟ್ರದಲ್ಲಿಯ ಹದಿನಾಲ್ಕು ವರುಷದೊಳಗಿನ ಮಕ್ಕಳಿಗೆಲ್ಲ ಉಚಿತವಾದ ಪ್ರಾಥಮಿಕ ಶಿಕ್ಷಣವನ್ನು ಕೊಡಲೇ ಬೇಕು ಎಂಬ ನೀತಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ತಳೆದರೆ ಯಾರಿಗೇನು ಲಾಭ? ಶಿಕ್ಷಣಕ್ಕೆ ಸಂಬಂಧಿಸಿದ ಈ ರಾಷ್ಟ್ರೀಯ ರೀತಿ ನೀತಿಗಳ ಕಾರ್ಯಾಚರಣೆಯಲ್ಲಿ ಪ್ರೇರಣೆ-ಪುರಸ್ಕಾರ, ಸಹಾಯ-ಸಹಕಾರ ನೀಡಲೆಂದೇ ಕೇಂದ್ರ ಸರ್ಕಾರ ಶಿಕ್ಷಣದ ಕೇಂದ್ರಮಂಡಲಿ, ಶಾಲಾಶಿಕ್ಷಣದ ಸ್ಥಾಯೀಸಮಿತಿ, ವಿಶ್ವವಿದ್ಯಾಲಯ ಧನ-ಸಹಾಯ ಆಯೋಗ ಇತ್ಯಾದಿ ಸಂಸ್ಥೆಗಳನ್ನು ರಚಿಸಿದ್ದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಗತಿಯ ಹೆಜ್ಜೆಗಳು :

ಶಿಕ್ಷಣ ರಂಗದಲ್ಲಿ ಅತಿ ಮುಖ್ಯವಾದ ಸ್ತರ ಪ್ರಾಥಮಿಕ ಶಿಕ್ಷಣದ್ದು. ಈ ಸ್ತರ ಅಸ್ಥಿರವಾದರೆ ಮುಂದಿನ ಪ್ರಗತಿದುಸ್ತರ ಆದುದರಿಂದ ಈ ದಿಸೆಯಲ್ಲಿ ರಾಷ್ಟ್ರದಾದ್ಯಂತವೂ ಉಚಿತ ಶಿಕ್ಷಣ ಕ್ರಮಗಳನ್ನು ಕೈಕೊಂಡದ್ದು ಒಂದು ದೊಡ್ಡ ಸಾಹಸವೇ ಹೌದು. ದೇಶ ದೊಡ್ಡದು, ಜನಸಂಖ್ಯೆ ದೊಡ್ಡದು, ಸಮಸ್ಯೆಗಳೂ ದೊಡ್ಡವು. ಅವುಗಳಲ್ಲಿ ನಿರಕ್ಷರತೆಯ ನಿರ್ಮೂಲನವೂ ಒಂದು. ಉಚಿತವಾದ ಒತ್ತಾಯದ ಪ್ರಾಥಮಿಕ ಶಿಕ್ಷಣ ಈ ದೃಷ್ಟಿಯಿಂದ ಒಂದು ಆಂದೋಲನದ ಸ್ವರೂಪವನ್ನೇ ತೊಡಬೇಕಾಯ್ತು. ತತ್ಪರಿಣಾಮವಾಗಿ 1950-51 ರ ಸಮಯದಲ್ಲಿ ಶಾಲೆಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆ 191·5 ಲಕ್ಷಗಳಷ್ಟಿದ್ದುದು 1965-66 ರ ಹೊತ್ತಿಗೆ 512 ಲಕ್ಷಗಳಷ್ಟು ಹೆಚ್ಚಿತು ! ಈ ಸಂಖ್ಯೆ ಕೇವಲ 6-11 ವಯೋಮಾನದ ಮಕ್ಕಳದು. 11-14 ವಯಸ್ಸಿನ ಶಾಲಾ ಮಕ್ಕಳ ಸಂಖ್ಯೆ ಅದೇ ಅವಧಿಯಲ್ಲಿ 31-2 ಲಕ್ಷಗಳಿಂದ 108 ಲಕ್ಷಗಳಿಗೇರಿತು !

ಮಕ್ಕಳ ಸಂಖ್ಯೆ ಹೆಚ್ಚಿದಂತೆ ಹೆಚ್ಚಿಗೆ ಶಾಲೆಗಳು ಬೇಕು; ಹೆಚ್ಚಿಗೆ ಶಿಕ್ಷಕರೂ ಬೇಕು ! ಉಚಿತವಾದ ಒತ್ತಾಯದ ಶಿಕ್ಷಣ ಯೋಜನೆಯ ಪರಿಣಾಮವಾಗಿ ಶಾಲೆಗಳ ಮತ್ತು ಶಿಕ್ಷಕರ ಸಂಖ್ಯೆಯಲ್ಲೂ ಗಣನೀಯವಾದ ಹೆಚ್ಚಳ ಕಂಡು ಬಂತು.

ಪೂರ್ವಪ್ರಾಥಮಿಕ ಶಿಕ್ಷಣದ ಬಗ್ಗೆ ನೋಡಿದಾಗ : 1950-51ರಲ್ಲಿ 303 ಶಾಲೆಗಳಲ್ಲಿ 28,000 ಎಳೆಯ ಮಕ್ಕಳಿಗೆ ಕಲಿಸುವ ಶಿಕ್ಷಕರ ಸಂಖ್ಯೆ 866 ರಷ್ಟಿತ್ತು. ಈ ಶಾಲೆಗಳ ಮೇಲೆ ಶಿಕ್ಷಣ ಕಾರ್ಯಕ್ರಮಗಳ ಒಟ್ಟು ವೆಚ್ಚದ ಕೇವಲ 0·1% ಅಂದರೆ ಸುಮಾರು 1·2 ದಶಲಕ್ಷ ರೂಪಾಯಿ ಮಾತ್ರ ವೆಚ್ಚ ಮಾಡಲಾಗುತ್ತಿತ್ತು. ಅದೇ, 1965-66 ರ ಹೊತ್ತಿಗೆ, ಪೂರ್ವಪ್ರಾಥಮಿಕ ಶಾಲೆಗಳಲ್ಲಿ ಓದುವ ಮಕ್ಕಳ ಸಂಖ್ಯೆ 250,000 ರಷ್ಟಾದ ಪರಿಣಾಮವಾಗಿ ಶಾಲೆಗಳ ಸಂಖ್ಯೆ 3,500 ಕ್ಕೂ, ಶಿಕ್ಷಕರ ಸಂಖ್ಯೆ 6,500 ಕ್ಕೂ ಏರಿತು ! ಅದೇ ಪ್ರಮಾಣದಲ್ಲಿ ಈ ಶಿಕ್ಷಣದ ವೆಚ್ಚವೂ 1965-66 ರಲ್ಲಿ ಶಿಕ್ಷಣದ ಮೇಲಾದ ಒಟ್ಟು ವೆಚ್ಚದ. 0·2% ಅಂದರೆ ಸುಮಾರು 11 ದಶಲಕ್ಷ ರೂಪಾಯಿಗಳಷ್ಟು ಹೆಚ್ಚಾಯಿತು. ಇದೇ ಹೊತ್ತಿಗೆ ಗ್ರಾಮಾಂತರ ಪ್ರದೇಶದಲ್ಲಿ ರಾಷ್ಟ್ರೀಯ ಅಭಿವೃದ್ಧಿ ಯೋಜನೆ ಮತ್ತು ಸಮಾಜ ಕಲ್ಯಾಣ ಯೋಜನೆಯ ಅಂಗವಾಗಿ 600,000 ಮಕ್ಕಳಿಗೆ ಪೂರ್ವಪ್ರಾಥಮಿಕ ಶಿಕ್ಷಣವೀಯುತ್ತಿರುವ 20,000 ಬಾಲವಾಡಿಗಳನ್ನೂ ನಾವು ಗಣನೆಗೆ ತಂದುಕೊಳ್ಳಬೇಕು.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಪ್ರಗತಿಯೂ ಅಷ್ಟೇ ಭರದಿಂದ ನಡೆದಿದೆಯೆಂಬುದನ್ನು ಕೆಳಗಿನ ಅಂಕಿ- ಅಂಶಗಳಿಂದ ಕಂಡುಕೊಳ್ಳಬಹುದು:

ಮಕ್ಕಳ ದಾಖಲಾತಿ (ಸಾವಿರ ಸಂಖ್ಯೆಯಲ್ಲಿ)

	I	II	III	IV	V	VI	VII	VIII
1950-51	6948 (100.0)	4332 (62.3)	3353 (48.3)	2623 (37.8)	1898 (27.3)	1246 (17.9)	1023 (14.7)	851 (1.22)
1955-56	9958 (100.0)	5523 (55.5)	4067 (40.8)	3216 (32.3)	2403 (24.1)	1698 (17.1)	1436 (14.4)	1160 (11.6)
1960-61	13391 (100.0)	7513 (56.1)	5886 (44.0)	4593 (34.3)	3611 (27.0)	2727 (20.4)	2220 (16.6)	1758 (13.1)
1965-66	18843 (100.0)	10973 (58.2)	8875 (47.1)	6924 (36.7)	5522 (29.3)	4453 (23.6)	3680 (19.5)	2900 (15.4)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಣ್ಣುಮಕ್ಕಳೂ ಈ ಯೋಜನೆಗೆ ಹೊರತಾಗಿರಲಿಲ್ಲ. ಅವರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಬೆಳೆಯುತ್ತ ಬಂತು. 1952 ರಲ್ಲಿ ಹಾಯಸ್ಕೂಲುಗಳಲ್ಲಿ 204 ಸಾವಿರದಷ್ಟಿದ್ದ ವಿದ್ಯಾರ್ಥಿನಿಯರ ಬಳಗ 1956ರಲ್ಲಿ 406 ಸಾವಿರದಷ್ಟಾಯಿತು. 1961 ರಲ್ಲಿ 741 ಸಾವಿರ ಮತ್ತು 1966 ರ ಹೊತ್ತಿಗೆಂದರೆ 1420 ಸಾವಿರಕ್ಕೇರಿತು ! ಹನ್ನೊಂದು-ಹನ್ನೆರಡನೆಯ ವರ್ಗಗಳಲ್ಲಿ 1951 ರಲ್ಲಿದ್ದ ಹುಡುಗಿಯರು 37 ಸಾವಿರ, 1966 ರಲ್ಲಿ 71 ಸಾವಿರ; 1961 ರಲ್ಲಿ 132 ಸಾವಿರ; 1966 ರಲ್ಲಿ 226 ಸಾವಿರ.

ಉಚ್ಚ ಶಿಕ್ಷಣದ ವಿಸ್ತಾರ.

ಕೆಳಗಿನ ಮಟ್ಟಗಳಲ್ಲಿ ಮಕ್ಕಳ ಸಂಖ್ಯೆ ದಟ್ಟವಾದಂತೆ ಮೇಲಿನ ಮಟ್ಟಗಳಲ್ಲಿಯೂ ಆ ಹರವು ಬರಲೇಬೇಕಾಗುತ್ತದೆ. ಅಂತೆಯೇ 1950-51 ರಲ್ಲಿ ಆರ್ಟ್ಸ; ಸಾಯನ್ಸ ಮತ್ತು ಕಾಮರ್ಸ ಕಾಲೇಜುಗಳಲ್ಲಿ 1951ರಲ್ಲಿ ಓದುತ್ತಿದ್ದ 191,000 ವಿದ್ಯಾರ್ಥಿಗಳ ಸಂಖ್ಯೆ 1966 ರ ಹೊತ್ತಿಗೆ 759,000 ರಷ್ಟು ಹೆಚ್ಚಾಯಿತು. ಅದೇ ಅವಧಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಖ್ಯೆ 18,000 ದಿಂದ 86,000 ಕ್ಕೇರಿತು. ಉದ್ಯಮಿಕ ಕಾಲೇಜುಗಳಲ್ಲಿದ್ದ ಅಭ್ಯರ್ಥಿಗಳ ಸಂಖ್ಯೆ 54,000 ದಿಂದ 249,000 ದಷ್ಟು ಹೆಚ್ಚಾಯಿತು.

ದೇಶದ ಶೈಕ್ಷಣಿಕ ಪ್ರಗತಿಯ ಸಮಗ್ರ ಚಿತ್ರದ ಸಂಕ್ಷಿಪ್ತ ಆವೃತ್ತಿಯನ್ನುವುದಾದರೆ ಕೆಳಗಿನ ಅಂಕಿ-ಅಂಶಗಳನ್ನು ಅವಲೋಕಿಸಬಹುದು.

ವರ್ಷಗಳು	ಒಟ್ಟುಸಂಸ್ಥೆಗಳು	ವಿದ್ಯಾರ್ಥಿಗಳು (ಲಕ್ಷಗಳಲ್ಲಿ)	ಶಿಕ್ಷಕರು (ಲಕ್ಷಗಳಲ್ಲಿ)	ಒಟ್ಟು ವೆಚ್ಚ (ಕೋಟಿ)
1950-51	286860	25543	8.04	114.38
1955-56	366641	339.24	11.07	189.66
1960-61	472655	479.63	15.08	344.38
1965-66	694181	702.92	18.74	600.00

ಮೇಲಿನ ಅಂಕಿ ಅಂಶಗಳಿಂದ ನಮ್ಮ ಸ್ವಾತಂತ್ರ್ಯೋತ್ತರ ಶಿಕ್ಷಣ ಕ್ರಮಗಳ ವಿಸ್ತಾರದ ಕಲ್ಪನೆ ಉಂಟಾಗದಿರದು.

ತೀಕ್ಷ್ಣಮತಿಗಳಿಗೆ ಈ ಅಂಕಿ ಅಂಶಗಳಿಗಿಂತಲೂ ನಮ್ಮ ಶೈಕ್ಷಣಿಕ ಸಂಸ್ಥೆಗಳ ಕಾರ್ಯದಕ್ಷತೆ, ಸುಶಿಕ್ಷಿತ ಜನರ ಗುಣ ಪ್ರಮಾಣಗಳ ಕಡೆಗೆ ಅಧಿಕ ಗಮನ ಹರಿಯುವುದು ಸ್ವಾಭಾವಿಕ. ಅಂಥ ವಿಮರ್ಶಕ ದೃಷ್ಟಿ ನಮಗೆ ಅತ್ಯಗತ್ಯವೂ ಹೌದು. ಶಿಕ್ಷಣರಂಗದಲ್ಲಿ ನಡೆಯುವ ಪ್ರಯೋಗ-ಪ್ರಗತಿಗಳು ನಮ್ಮ ಯುವಜನಾಂಗದ ಶಕ್ತಿ-ಸಾಮರ್ಥ್ಯಗಳನ್ನು ಹೆಚ್ಚಿಸಲು ಅನುಕೂಲವಾಗುವ ರೀತಿಯಲ್ಲಿ ನಡೆಯಬೇಕೆಂದು ಅಪೇಕ್ಷಿಸುವುದು ಸಮಂಜಸವೂ ಹೌದು; ಸಮಯೋಚಿತವೂ ಹೌದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಕಾರ್ಯರಂಗಗಳಲ್ಲಿ ನಡೆದಿರುವಂತೆ ಶಿಕ್ಷಣರಂಗದಲ್ಲಿಯೂ ತ್ವರಿತವಾದ ಪ್ರಗತಿ ನಡೆದಿದೆಯೆಂಬುದು ನಿರ್ವಿವಾದ. ಸ್ವಾತಂತ್ರ್ಯಪೂರ್ವದಲ್ಲಿದ್ದ 20 ವಿಶ್ವವಿದ್ಯಾಲಯಗಳಲ್ಲಿ ಓದಬಹುದಾಗಿದ್ದ ವಿದ್ಯಾರ್ಥಿಗಳ ವೃಂದವಿಂದು ವಿಸ್ತಾರವಾಗಿ ಬೆಳೆದು 70 ವಿಶ್ವವಿದ್ಯಾಲಯಗಳಲ್ಲಿ ಉಚ್ಚಶಿಕ್ಷಣ ಪಡೆಯುತ್ತಿದೆ. ಎಂಬುದೊಂದು ಸಮಾಧಾನದ ಸಂಗತಿಯಾದರೂ ಈ ಯುವಜನಾಂಗವನ್ನು ನಮ್ಮ ಶಿಕ್ಷಣ ಆಯೋಗದವರು ನೀಡಿದ ರಾಷ್ಟ್ರೀಯ ಶಿಕ್ಷಣಧೋರಣೆಯ ಒರೆಗಲ್ಲಿಗೆ ಉಜ್ಜಿ ನೋಡಿ, ರಾಷ್ಟ್ರೀಯ ಚಾರಿತ್ರ್ಯ ನಿರ್ಮಾಣದ ಎರಕಕ್ಕೆ ಅಣಿಗೊಳಿಸುವ ಮಹತ್ಕಾರ್ಯ ಮಾತ್ರ ಇನ್ನು ಮುಂದೆ ನಡೆಯಬೇಕಾಗಿದೆ; ಇನ್ನೂ ಮುಂದೆ ನಡೆಯಬೇಕಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಮೇಶ ವಚನಗಳು.

[ಹಸ್ತಪ್ರತಿಯಲ್ಲಿಯ ಕೆಲವು ವಚನಗಳು]

ಭಯವಳಿದ ಭಕ್ತ

ಇದು ಭಕ್ತಿಯಲ್ಲ ಇದು ಯುಕ್ತಿಯಲ್ಲ
ಇದು ಸಂಕುಚಿತ ಭಯ ಕಾಣಿರೋ !
ಭಯಗೊಂಡ ಕಲ್ಪನೆಯೊಳಿದ್ದ ಭಗವಂತ
ಭೀಕರ ಸ್ವರೂಪನಾಗಿ ನಿಂತ.
ಕೇಡಿನ ಸಂಶಯದಿ ಪೂಜೆಗೈದು ಹೆದರಿ ಬೇಡುವ
ತನ್ನುದ್ಧಾರ ಮಾಡೆಂದು.
ಹೆದರಿ ಬೇಡಿದವಂಗುದ್ಧಾರಮುಂಟೆ ? ನೀಡುವಶಕ್ತಿ ಹೆದರಿಸುವ ದೇವಗುಂಟೆ ?
ಭಯದಿಂದ ಕಲ್ಪಿಸಿದ ಭಕ್ತ. ಕಲ್ಪನೆಯೊಳಿದ್ದ ಭಗವಂತ
ಇಬ್ಬರೂ ಕೊನೆಗೊಮ್ಮೆ ಸಾಯುವರು ನೋಡಾ !
ಭಯದಿಂದ ಭಕ್ತಿಯಪ್ಪುದೇ ? ಭಕ್ತಿಯಲ್ಲದ ಭಯವು ದೇವತ್ವವಪ್ಪುದೆ ?
ನಿರ್ಭಯ ನಿರಾತಂಕ ಮೃತ್ಯುಂಜಯರು ನಮ್ಮ ರಾಮೇಶನ ಶರಣರ
ದೇವರೆಂದು ನಂಬಿ ಭಯವಳಿದು ಭಕ್ತನಾಗಿ ಬಾಳು ಮರುಳೆ.

ವಂಚಕ ಭಕ್ತ

ಅಯ್ಯಾ ನಿಮ್ಮ ನಡತೆಗೇನೆಂಬೆ ?
ಲಿಂಗವ ತೋರಿ ಪ್ರಸಾದ ನಿಲಯಂಗಳ ಸೇರಿರಿ ?
ಲಿಂಗ ಮುಂದೆ ಮಾಡಿ ವಿದ್ಯಾಲಯಂಗಳ ಹೊಕ್ಕಿರಿ ?
ಲಿಂಗವ ಹಿಡಿದು ಚುನಾವಣೆಯಲಿಗೆದ್ದು ಉನ್ನತಾಧಿಕಾರವೇರಿದಿರಿ.
ನಿಮ್ಮುನ್ನತಿಗಾಗಿ ಕೋಟಿಕೋಟಿ ಧನ ವೆಚ್ಚಗೈದಿತ್ತು ಲಿಂಗ ಸಮಾಜ
ನಿಮ್ಮಿಂದ ಸಮಾಜ ಧರ್ಮದುನ್ನತಿಯ ಬಯಸಿತ್ತು
ನಿಮ್ಮಿಂದಾದುದೇನು ಹೇಳಿರಯ್ಯ !
" ಹೊಳೆದಾಟುವನ್ನಕ್ಕ ಗಂಗಮ್ಮ ಬಳಿಕ ಮಂಗಮ್ಮ " ನೆಂದಂತೆ
ಲಿಂಗವ ಕಿತ್ತೆಸೆದು ಲಿಂಗವಂತರನಣಕಿಸುವ ನಿಮ್ಮ ಧರ್ಮದ್ರೋಹಕಕೆಣೆಯುಂಟೆ ?
ಸಮಾಜ ಘಾತುಕತನಕ್ಕೆ ಕೊನೆಯುಂಟೆ ?
" ಭ್ರಷ್ಟಸ್ಯಕಾವಾಗತಿಃ " ಎಂದಂತೆ ನೀವು ಕೆಟ್ಟು ಸಮಾಜವ ಕೆಡಿಸಿದಿರಿ.
ನಿಮ್ಮಂಥ ಉಭಯ ಭ್ರಷ್ಟರನೆಂದಿಗೂ ಒಲ್ಲನೋಡಾ ನಮ್ಮ ರಾಮೇಶ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾನಂತದಲ್ಲಿ ಅನಂತ.

ಕಂಡರಿತವರೂ, ಕೇಳಿಯರಿತವರೂ, ನಿಜದ ಆಳ ತಿಳಿಯಲೆತ್ನಿಸಿದವರೂ ಒಂದೇ ವಿಚಾರ ಸೀಮಾ ಬಿಂದುವಿನಲ್ಲಿ ನಿಂತು, "ಭೋ ಪ್ರಭೋ ದೀನೋದ್ಧಾರಕಾ ಪ್ರಣಾಮವೀ ನಿನ್ನ ಚರಣಕೆಂದೇ" ಉದ್ಗರಿಸುವರು ಆ ಮಹಾ ಸನ್ನಿಧಿಯಲ್ಲಿ! ಪುಣ್ಯವೈವೆತ್ತಿ ನಿಂತ ಪವಿತ್ರಕ್ಷೇತ್ರದಲ್ಲಿ. ಬಯಸಿದವನ ಬಯಕೆ, ಬೇಡಿದವನ ಬೇಡಿಕೆ ಈಡೇರಿಯೆ ಬಿಟ್ಟಿತು ಅದೇಕ್ಷಣದಲ್ಲಿ. ಈ ಮಹಾಶಕ್ತಿಗೆ ಅಪಾರ ನಿರ್ಮಲ ಚಾರಿತ್ರ್ಯದ ಹಿನ್ನೆಲೆ ಇದೆ.

ಪಾವಿತ್ರ್ಯ ಪಾಪವನ್ನು ತೊಳೆದು ಬಿಡುತ್ತದೆ. ಹೃದಯವನ್ನು ಅನಪೇಕ್ಷಿತವಾಗಿ ನಿರ್ಮಲಗೊಳಿಸುತ್ತದೆ. ನಡೆ–ನುಡಿಗಳಲ್ಲಿ ಏಕರೂಪತೆ ಪ್ರಾಪ್ತಮಾಡಿಕೊಳ್ಳುತ್ತದೆ. ಆತ್ಮ–ಮನಸ್ಸುಗಳೆರಡರಲ್ಲಿ ವಿಕಾರವಶವಾಗುವ ಮನಸ್ಸಿನ ಶುದ್ಧೀಕರಣಕ್ಕಾಗಿ ಆತ್ಮ ಸದೈವ ಹೋರಾಡುತ್ತಿದೆ. ವಿಕಾರ–ವಿಚಾರಗಳ ಹೋರಾಟದಲ್ಲಿ ಪಾವಿತ್ರ್ಯ ಮಧ್ಯಸ್ಥನಂತೆ ವಿಚಾರ ಪಕ್ಷಪಾತಿಯಾಗಿ ವಿಕಾರವನ್ನು ಅದರಲ್ಲಿ ಐಕ್ಯವಾಗಿಸುತ್ತದೆ. ವಿಕಾರದ ಅವಿಚಾರವನ್ನು ನಿರ್ಮೂಲಗೊಳಿಸುತ್ತದೆ.

